ಸಂಪುಟ ೧೩
ಸಂಚಿಕೆ ೩-೪

ಕರ್ನಾಟಕ ಭಾರತಿ

ಸಂಕ್ರಮಣ ಮತ್ತು ಅಕ್ಷಯತೃತೀಯಾ
ಸಂಯುಕ್ತ ಸಂಚಿಕೆ

ತ್ರೈಮಾಸಿಕ ಪತ್ರಿಕೆ
ಜನವರಿ ಮತ್ತು ಮೇ, ೧೯೮೧

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕನಾಟಕ ಭಾರತಿ" ಯು ಸೃಜನ, ವಿಮರ್ಶನ, ಸಂಶೋಧನ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನದ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ	೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ	೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ)

ಹಣವನ್ನು ಡಿಮಾಂಡ ಡ್ರಾಫ್ಟ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಬಾಹುಬಲಿ, ಪಂಪಭಾರತ ವಿಚಾರಸಂಕಿರಣದ ವಿಶೇಷಾಂಕ

ಸಂಪುಟ : ೧೩ ಸಂಚಿಕೆ : ೩ ಮತ್ತು ೪

ಪ್ರಧಾನ ಸಂಪಾದಕರು

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಸಹಾಯಕ ಸಂಪಾದಕರು

ಡಾ. ಎಂ. ಬಿ. ಕೊಟ್ರಶೆಟ್ಟಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೩

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೩ ಸಂಚಿಕೆ : ೩-೪

ಜನವರಿ ಮತ್ತು ಮೇ, ೧೯೮೧

ಸಂಕ್ರಮಣ ಹಾಗೂ ಅಕ್ಷಯತೃತೀಯಾ ಸಂಯುಕ್ತ ಸಂಚಿಕೆ

ಬಾಹುಬಲಿ, ಪಂಪಭಾರತ ವಿಚಾರಸಂಕಿರಣದ ವಿಶೇಷಾಂಕ

ಪ್ರಕಾಶಕರು :

ಎಸ್. ಬಿ. ನಾಯಕ
ಕಾರ್ಯನಿರ್ವಾಹಕ ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

ಮುದ್ರಕರು :

ಸೋಮಶೇಖರ ಆಕಳವಾಡಿ
ಮನೋಹರ ಮುದ್ರಣಾಲಯ, ಮಾರ್ಕೆಟ್, ಧಾರವಾಡ

ಪರಿವಿಡಿ

—

ಸಾಂಸ್ಕೃತಿಕ ಪರಿಸರದಲ್ಲಿ ಕವಿ ರನ್ನ

ಬಿ. ಎಸ್. ಕುಲಕರ್ಣಿ

"ಸತ್ತ್ವೇಷು ಮೈತ್ರಿಂ ಗುಣಿಷು ಪ್ರಮೋದಂ ।
ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ ॥
ಮಾಧ್ಯಸ್ಥ ಭಾವಂ ವಿಪರೀತ ವೃತ್ತೌ ।
ಸದಾಮಮಾತ್ಮಾ ವಿದಧಾತು ದೇವ ॥

ಅಂದರೆ, ದೇವರೆ. ಸಕಲ ಜೀವಿಗಳಲ್ಲಿ ಮಿತ್ರ ಭಾವವನ್ನೂ, ಗುಣವಂತರಲ್ಲಿ ಪ್ರೀತಿಯನ್ನೂ, ದುಃಖದಲ್ಲಿರುವ ಜೀವಿಗಳಲ್ಲಿ ದಯೆ ಅಥವಾ ಅನುಕಂಪೆಯನ್ನೂ, ವಿಪರೀತ ವೃತ್ತಿ ಅಥವಾ ಸ್ವಭಾವವುಳ್ಳವರಲ್ಲಿ ಮಾಧ್ಯಸ್ಥ ಭಾವವನ್ನೂ ಯಾವಾಗಲೂ ನನ್ನ ಆತ್ಮನು ಹೊಂದುವಂತಾಗಲಿ. ಸುಸಂಸ್ಕೃತನೆನ್ನಿಸಿಕೊಳ್ಳಬೇಕಾದ ವ್ಯಕ್ತಿಯು ಹೇಗಿರಬೇಕೆಂಬುದು ಅಮಿತಗತಿ ಆಚಾರ್ಯರ ಈ ಮಾತಿನಲ್ಲಿ ಸ್ಪಷ್ಟವಾಗಿರುವದರಿಂದ, ಸಂಸ್ಕೃತಿ ಎಂದರೇನು ಎಂಬುದನ್ನು ಚರ್ಚಿಸುವ ಗೋಜಿಗೆ ಹೋಗದೆ, ನೇರವಾಗಿ ಲೇಖನವಿಷಯವನ್ನೇ ನಿರೂಪಿಸಬಹುದೆಂದು ಕಾಣುತ್ತದೆ.

ಕ್ರಿ. ಶ. ಆರಂಭದಿಂದ ಕರ್ನಾಟಕ, ಕನ್ನಡ ಭಾಷೆ ಅಸ್ತಿತ್ವದಲ್ಲಿದ್ದು, ಕನ್ನಡ ನಾಡಿನಲ್ಲಿ ಪಂಡಿತರಿಗೇನೂ ಕೊರತೆ ಇರಲಿಲ್ಲವಾದರೂ, ದೇವಭಾಷೆಯ ಮೋಹಿನೀ ಪಾಶದಲ್ಲಿ ಸಿಕ್ಕುಬಿದ್ದ ಅವರಿಗೆ ಕನ್ನಡದಲ್ಲಿ ಸಾಹಿತ್ಯ ರಚಿಸುವ ಅಭಿರುಚಿ ಉಂಟಾಗಲಿಲ್ಲ. ದೇಶಿ ಭಾಷೆಯಲ್ಲಿ ಗ್ರಂಥ ರಚಿಸುವುದು ತಮ್ಮ ಅಂತಸ್ತಿಗೆ ಕುಂದನ್ನುಂಟು ಮಾಡಬಹುದೆಂಬ ಭ್ರಮೆ ಅವರಿಗೆ ಇದ್ದಿರಲೂಬಹುದು. ಆದರೆ ಕನ್ನಡ ನಾಡಿಗೆ ಹೊರಗಿನಿಂದ ಬಂದು ಕನ್ನಡದ ನೆಲದಲ್ಲಿ ನೆಲಿಸಿ ನಿಂತವರೆಂದು ಹೇಳಲಾಗುತ್ತಿರುವ ಜೈನರು, ಕನ್ನಡ ನಾಡಿನ ಮನೆಮಾತು ಕನ್ನಡವೆಂಬುದನ್ನು ತಿಳಿದು, ಅದನ್ನು ತಾವೂ ಕಲಿತು ಕನ್ನಡ ನಾಡಿನ ವಿದ್ವಾಂಸರ ಮಾರ್ಗದಲ್ಲಿ ನಡೆಯು "ಕುರಿತೋದದೆಯುಂ ಪರಿಣತಮತಿ"ಗಳಾದ, ಕನ್ನಡ ನೆಲದ ಸಾಮಾನ್ಯ ಮಕ್ಕಳು ಕನ್ನಡದಲ್ಲೇ ಬರೆಯಲು ಪ್ರಯತ್ನಿಸುತ್ತಿದ್ದುದನ್ನು ಗಮನಿಸಿ, ಅವರೊಟ್ಟಿಗೆ ಜೈನರೂ ಕನ್ನಡದಲ್ಲಿ ಬರೆಯಲು ಪ್ರಯತ್ನಿಸಿದರೆಂದು ಕಾಣುತ್ತದೆ. ಆರಂಭದ ಪ್ರಯತ್ನದಲ್ಲಿ ತೊಂದರೆ ದೋಷ ಕಂಡಿರಬೇಕೆಂಬುದು ಕವಿರಾಜಮಾರ್ಗಕಾರ, "ವಾಸುಗಿಯುಂ ಬೇಸರಿಸುವಷ್ಟು" ದೋಷಗಳು ಆಗ ನಿರ್ಮಾಣಗೊಂಡ ಸಾಹಿತ್ಯದಲ್ಲಿ ಕಂಡು ಬರುತ್ತಿದ್ದವೆಂದು ಹೇಳುವ ಮಾತಿನಿಂದ ಸ್ಪಷ್ಟವಾಗುತ್ತದೆ.

ಆದರೂ ಕನ್ನಡದಲ್ಲಿ ಬರೆಯುವ ಪ್ರಯತ್ನ, ಪ್ರಯೋಗ ಸಾಗಿಯೇ ಸಾಗಿತು. ಪ್ರಾಕೃತ, ಸಂಸ್ಕೃತ ಭಾಷೆಗಳ ಚೆನ್ನಾದ ಜ್ಞಾನವಿದ್ದ ಜೈನ ವಿದ್ವಾಂಸರಿಗೆ ಆ ಭಾಷೆಗಳ ಶಬ್ದಗಳಿಗೆ ಕನ್ನಡ ಮುದ್ರೆಯನ್ನೊತ್ತಿ, ಕನ್ನಡ ಭಾಷೆ ಹಾಗೂ ಶಬ್ದಕೋಶವನ್ನು ಬೆಳೆಯಿಸುವುದು ದುಸ್ತರದ ಕಾರ್ಯವಾಗಲಿಲ್ಲವೆಂದು ಕಾಣುತ್ತದೆ. ಮೇಲ್ಮಟ್ಟದ ಸಾಹಿತ್ಯ ರಚಿಸಲು ಕನ್ನಡ ಭಾಷೆ ಒಂದು ಉತ್ತಮ ಮಟ್ಟವನ್ನು ತಲುಪಿತೆಂದು ಮನವರಿಕೆಯಾಗುವ ಸಮಯಕ್ಕೆ ಕ್ರಿ. ಶ. ೯ನೆಯ ಶತಮಾನ ಕಾಲಿರಿಸಿತ್ತು. ಆಗ ಮಾತೃಭಾಷೆಯು ಮುಖಾಂತರವೇ ಹೇಳಿದ ವಿಷಯ ತಲೆಗೂ ಹಾಗೂ ಹೃದಯಕ್ಕೆ ಮುಟ್ಟಬಲ್ಲದೆಂಬ ತತ್ವವನ್ನು ಮನಗಂಡ ಜೈನ ಕವಿಗಳು, ಕನ್ನಡದಲ್ಲಿ ಸಾಹಿತ್ಯ ರಚಿಸಲಾರಂಭಿಸಿದರು. ಕನ್ನಡ ನಾಡಿನ ವಿದ್ವಾಂಸರು ಮಾಡದ ಕಾರ್ಯವನ್ನು, ಹೊರಗಿನಿಂದ ಬಂದವರೆಂದು ಹೇಳಲಾಗುತ್ತಿರುವ ಜೈನರು ಮಾಡಿದ್ದರಿಂದ, ಜೈನ ಕವಿಗಳಿಂದಲೇ ಕನ್ನಡ ಸಾಹಿತ್ಯ ರಚನೆ ಆರಂಭವಾಯಿತೆಂದು ಹೇಳುವ ಮಾತು ರೂಢಿಯಲ್ಲಿ ಬಂದಿತು. ಅದು ಏನೇ ಇದ್ದರೂ, ಮಾತೃ ಭಾಷೆಯಲ್ಲಿ ಬರೆದ ಗ್ರಂಥಗಳು ಕೇವಲ ರಾಜಸಭಾಲಂಕೃತರಾದ ಪಂಡಿತರಿಗಷ್ಟೇ ಮೀಸಲಾಗಿ ಉಳಿಯದೆ, ಸಾರ್ವಜನಿಕರಿಗೂ ಓದಲು ಲಭ್ಯವಾಗುವಂತಾಯಿತು. ಜೈನ ಕವಿಗಳ ದೃಷ್ಟಿ, ಉದ್ದೇಶ ಕೇವಲ ಪರಹಿತದಿಂದ ಕೂಡಿದ್ದಾಗಿತ್ತೆಂದು ಹೇಳಲು ಬರುವಂತಿಲ್ಲ. ಅವರಿಗೆ ತಾವು ನೆಲಸಿ ನಿಂತ ನೆಲದ ಸಾಮಾನ್ಯರಿಗೆ ಒಳ್ಳೇ ಕಾವ್ಯಗಳನ್ನು ಒದಗಿಸುವದರ ಜೊತೆಗೆ, ತಮ್ಮ ಮತ ಪ್ರಸಾರ, ಪ್ರಚಾರವನ್ನೂ ಮಾಡಬೇಕಾಗಿತ್ತು. ಅಂತಲೇ ಜೈನ ಕವಿಗಳು ಲೌಕಿಕ ಕಾವ್ಯಗಳ ಜೊತೆಗೆ ಧಾರ್ಮಿಕ ಕಾವ್ಯಗಳನ್ನೂ ಬರೆಯುವ ಪದ್ಧತಿಯನ್ನು ಇಟ್ಟುಕೊಂಡರು. ಆದರೆ ತಮ್ಮ ಮತ ಪ್ರಚಾರಕ್ಕಾಗಲೀ ಅಥವಾ ಮತಾಂತರ ಮಾಡುವದಕ್ಕಾಗಲೀ ಜೈನರು ಯಾರ ಮೇಲೂ ಒತ್ತಾಯ ತಂದ ಘಟನೆಗಳು ಇತಿಹಾಸದ ಪುಟಗಳಲ್ಲಿ ದೊರೆಯುತ್ತಿಲ್ಲ. 'ಜೀವದಯೆ' ಅರ್ಥಾತ್ ಅಹಿಂಸಾ ಧರ್ಮದ ಅನುಯಾಯಿಗಳಾಗಿದ್ದ ಜೈನರಲ್ಲಿ ಸಾತ್ವಿಕ ಸಂಸ್ಕಾರ ಸ್ವಾಭಾವಿಕವಾಗಿ ಇದ್ದೇ ಇತ್ತು. ಇದರಿಂದಾಗಿಯೇ ಜೈನರಲ್ಲಿ ತಾವು ನೆಲಸಿ ನಿಂತ ನೆಲ, ಜಲಗಳ ಋಣವನ್ನು ತೀರಿಸುವ ಹಾಗೂ ಅನ್ನವನ್ನಿಕ್ಕಿದವರ ಜೋಳದ ಪಾಳಿಯನ್ನು ಮುಟ್ಟಿಸುವಂತಹ ಸಂಸ್ಕೃತಿ ಮೂಡಿತೆಂದು ಕಾಣುತ್ತದೆ. ಇಂತಹ ಉತ್ತಮ ಸಂಸ್ಕೃತಿಯನ್ನು ಹೊಂದಿ, ಸತ್ಕೃತಿಗಳನ್ನು ಕನ್ನಡದಲ್ಲಿ ಬರೆದು, ಕನ್ನಡದ ಹಾಗೂ ಕನ್ನಡ ನಾಡಿನ ಹಿರಿಮೆಯನ್ನು ಮೇಲೆತ್ತಿ ಹಿಡಿದ ಜೈನ ಕವಿಗಳಲ್ಲಿ ಕವಿ ರನ್ನನೂ ಒಬ್ಬನಾಗಿದ್ದಾನೆ.

ಕವಿ ರನ್ನನು ಕ್ರಿ. ಶ. ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಹಾಗೂ ಹನ್ನೊಂದನೆಯ ಶತಮಾನದ ಮೊದಲ ದಶಕದಲ್ಲಿ ಬಾಳಿ, ಕನ್ನಡಿಗರು ಹೆಮ್ಮೆ ಪಟ್ಟುಕೊಳ್ಳುವಂತಹ ಕಾವ್ಯಗಳನ್ನು ಬರೆದಿದ್ದಾನೆ. ಕವಿ ರನ್ನನು ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆ, ರನ್ನಕಂದ, ಅಜಿತನಾಥ ಪುರಾಣ ಹಾಗೂ ಸಾಹಸಭೀಮ

ವಿಜಯ ಅಥವಾ ಗದಾಯುದ್ಧ ಎಂಬ ಗ್ರಂಥಗಳನ್ನು ಬರೆದಿದ್ದಾನೆಂದು ಹೇಳಲಾಗುತ್ತದೆ. ಆದರೆ ಮೊದಲ ಎರಡು ಗ್ರಂಥಗಳು ದೊರೆತಿಲ್ಲ. ಕೊನೆಯ ಮೂರರಲ್ಲಿ 'ಗದಾಯುದ್ಧ'ವು ಕನ್ನಡಿಗರು ಯಾವ ಕಾಲಕ್ಕೂ ಹೆಮ್ಮೆಪಟ್ಟುಕೊಳ್ಳಬೇಕಾದಂತಹ ಗ್ರಂಥವಾಗಿದೆಯಲ್ಲದೆ, ಕನ್ನಡ ಎಂದರೆ ಇಷ್ಟು ಸತ್ವಶಾಲಿಯಾಗಿದೆ, ಶಕ್ತಿಯುತವಾಗಿದೆ ಎಂದು ಅಭಿಮಾನದಿಂದ ಓದಿ ತೋರಿಸುವಂತಹ ಗ್ರಂಥವಾಗಿದೆಯಲ್ಲದೆ, ಕನ್ನಡಿಗನಾಗಿ ಹುಟ್ಟಿದವನು ಸಾಯುವ ಮೊದಲು ಒಮ್ಮೆಯಾದರೂ ಓದಿ ಸತ್ತರೆ ಜನ್ಮ ಸಾರ್ಥಕವಾಯಿತೆಂಬ ಸಂತೋಷವನ್ನುಂಟು ಮಾಡುವಂತಹ ಗ್ರಂಥವಿದಾಗಿದೆ. ರನ್ನನ ಸಾಹಿತ್ಯ, ಸಾಹಿತ್ಯದ ಹಿನ್ನೆಲೆಯನ್ನು ಕುರಿತು ಇನ್ನೊಬ್ಬರು ಪ್ರಬಂಧ ಮಂಡಿಸುತ್ತಿರುವುದರಿಂದ ರನ್ನನ ಕೃತಿಗಳ ಬಗೆಗೆ ಇಲ್ಲಿ ವಿವೇಚಿಸಲು ತೊಡಗದೆ ಒಂದು ಮಾತನ್ನು ಮಾತ್ರ ಹೇಳಬಯಸುತ್ತೇನೆ. ತನ್ನ ಕೃತಿಗಳನ್ನು ವಿಮರ್ಶಿಸುವವರಿಗೆ 'ಎಂಟೆರ್ದೆ' ಬೇಕೆಂದು ಕವಿ ರನ್ನನು ಹೇಳಿಕೊಂಡಿದ್ದಾನೆ. ಆದರೆ ನನಗೆ ಅನ್ನಿಸುವಂತೆ— ರನ್ನನ ಕೃತಿಗಳನ್ನು ವಿಮರ್ಶಿಸಲು ಎಂಟೆರ್ದೆ ಬೇಕಿಲ್ಲ. ಆದರೆ 'ಗದಾಯುದ್ಧ'ದ ರಸ ಸ್ವಾದನೆಗೆ ಮಾತ್ರ ಎಂಟೆರ್ದೆ ಇದ್ದರೂ ಸಾಲದು.

ಇಂತಹ ಕವಿ ಬಾಳಿದ ಕಾಲ ಕ್ರಿ. ಶ. ೧೦ ನೆಯ ಶತಮಾನವೆಂದು ಮೇಲೆ ಹೇಳಲಾಗಿದೆ. ಕವಿಯ ಸಂಸ್ಕೃತಿಯ ಪರಂಪರೆಯನ್ನು ಅಭ್ಯಸಿಸುವಾಗ, ಆತನು ಬಾಳಿದ ಕಾಲದ ರಾಜಕೀಯ, ಧಾರ್ಮಿಕ, ಸಾಮಾಜಿಕ ಸ್ಥಿತಿಗತಿಗಳನ್ನು ನೋಡುವದು ಸ್ವಲ್ಪ ಅಗತ್ಯವೆಂದು ಕಾಣುತ್ತದೆ. ಏಕೆಂದರೆ ಕಾಲದ ಪರಿಣಾಮ ಕವಿಯ ಮೇಲೆ ಆಗದೆ ಹೋಗುವದಿಲ್ಲ. ಪ್ರತಿಭಾವಂತನಾದ ಕವಿ ಕಾಲಾತೀತನಾಗಿ ನಿಲ್ಲಬಲ್ಲನಾದರೂ. ಆತನ ಕೃತಿಗಳ ಬೇರು, ಆ ಬೇರಿಗೆ ಆಧಾರವಾದ ಪೋಷಕ ದ್ರವ್ಯ ಅರ್ಥಾತ್ 'ಗೊಬ್ಬರ' ಆತನ ಕಾಲ ಪರಿಸರ, ಪ್ರಭಾವಗಳಲ್ಲೇ ಅಡಗಿರುತ್ತದೆ. ಕ್ರಿ. ಶ. ೧೦ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ರಾಷ್ಟ್ರಕೂಟರು, ಗಂಗರು, ಚಾಳುಕ್ಯರು ರಾಜ್ಯವಾಳುತ್ತಿದ್ದು, ರಾಷ್ಟ್ರಕೂಟ ಮನೆತನದವರು ಸಾಮ್ರಾಟರಾಗಿ ರಾಜ್ಯವಾಳುತ್ತಿದ್ದರು. ಆದರೂ ಸಹ ಒಳ್ಳೇ ಪ್ರಭಾವಶಾಲಿ ರಾಜಮನೆತನಗಳಾದ ಚಾಳುಕ್ಯರು, ಗಂಗರು ಬಾಹ್ಯವಾಗಿ, ರಾಷ್ಟ್ರಕೂಟರಿಗೆ ಸಹಾಯ ಮಾಡುತ್ತಿದ್ದರೂ ಆಂತರ್ಯದಲ್ಲಿ ಚಾಲುಕ್ಯರು ತಮ್ಮದೇ ಆದ ರಾಜ್ಯವನ್ನು ಸ್ಥಾಪಿಸುವ ಆಕಾಂಕ್ಷೆಯನ್ನಿಟ್ಟುಕೊಂಡಿದ್ದರು. ಇವರಿಗೆ ಅನುಕೂಲವಾಗಿ ವರ್ತಿಸುವಂತಹ ಶೂರ ಮನೆತನಗಳೂ ಕರ್ನಾಟಕದಲ್ಲಿ ಅಲ್ಲಲ್ಲಿ ಇದ್ದವು. ಇದೂ ಅಲ್ಲದೆ, ಈ ಕಾಲದಲ್ಲಿ ಉತ್ತರದ ಚೇದಿ, ದಕ್ಷಿಣದ ಚೋಳರು, ಕರ್ನಾಟಕದ ಮೇಲೆ ಮೇಲಿಂದ ಮೇಲೆ ದಾಳಿ ಮಾಡುತ್ತಿದ್ದರು. ಒಟ್ಟಿನಲ್ಲಿ ರಾಜಕೀಯ ರಂಗದಲ್ಲಿ ಆಂತರಿಕ ಹಾಗೂ ಬಾಹ್ಯರಂಗಗಳಲ್ಲಿ ಯುದ್ಧದ ವಾತಾವರಣವೇ ತುಂಬಿಕೊಂಡಿತ್ತು. ಈ ಶತಮಾನದ ಕೊನೆಗೆ ಬದಾಮಿ ಚಾಲುಕ್ಯರನ್ನು ಎತ್ತಿಹಾಕಿ, ತಮ್ಮ ರಾಜ್ಯವನ್ನು ಸ್ಥಾಪಿಸಿದ ರಾಷ್ಟ್ರಕೂಟರನ್ನು, ಪುನಃ ಚಾಲುಕ್ಯರು ಎತ್ತಿಹಾಕಿ ಕಲ್ಯಾಣ ಚಾಲುಕ್ಯ ಮನೆತನವನ್ನು ಸ್ಥಾಪಿಸಿದರು.

ಧಾರ್ಮಿಕ ವಿಷಯುಗಳಲ್ಲಿಯೂ ಈ ಕಾಲವು ಕೆಲವು ಸ್ಥಿತ್ಯಂತರಗಳನ್ನು ಕಾಣುತ್ತ ಲಿತ್ತು. ಕರ್ನಾಟಕದಲ್ಲಿ ಯಾವುದೆ ಅಡೆತಡೆಯಿಲ್ಲದೆ ಮುಂದುವರೆದಿದ್ದ ಜೈನ ಧರ್ಮಕ್ಕೆ ೧೦ನೆಯ ಶತಮಾನದಲ್ಲಿ ನಡೆದ ಪರಕೀಯ ದಾಳಿಗಳಿಂದಾಗಿ ಸ್ವಲ್ಪ ನಷ್ಟ ಉಂಟಾಯಿತು. ಆದರೆ ಕರ್ನಾಟಕದಲ್ಲಿ, ಜೈನ ಧರ್ಮಕ್ಕೆ ಒಳ್ಳೇ ಪ್ರೋತ್ಸಾಹ, ಇದ್ದೇ ಇತ್ತು. ಅರಸರು ವೈದಿಕ ಸಂಪ್ರದಾಯದವರಿದ್ದರೂ, ಜೈನ ಧರ್ಮವನ್ನು ಸರಿಯಾಗಿ ಪೋಷಿಸಿಕೊಂಡು ಬಂದರು. ಮತ ಮತಗಳಲ್ಲಿ ವಾದ ವಿವಾದಗಳು ನಡೆಯುತ್ತಿದ್ದರೂ, ಅಸಹ್ಯ, ಅವಹೇಳನ ವಿಡಂಬನೆಗಳು ಇರುತ್ತಿದ್ದಿಲ್ಲ.

ಸಾಮಾಜಿಕವಾಗಿ, ರಾಜಕೀಯ ರಂಗದಲ್ಲಿ ಯುದ್ಧಗಳೇ ಹೆಚ್ಚಾಗಿದ್ದ ಈ ಕಾಲ ದಲ್ಲಿ ಜನರಲ್ಲಿ ರಾಜನಿಗಾಗಿ, ನಾಡಿಗಾಗಿ, ಗ್ರಾಮಕ್ಕಾಗಿ ಜೀವ ಕೊಡುವ ಆಸಕ್ತಿ ಕಂಡು ಬರುತ್ತಿತ್ತು. ಈ ಕಾಲದ ಕವಿಗಳೂ ಸಹ ಕಲಿಗಳೇ ಆಗಿದ್ದರು. ತಮ್ಮ ಕಾವ್ಯಗಳಲ್ಲಿ ವೀರ ರಸವನ್ನೇ ಪ್ರಧಾನವಾಗಿಟ್ಟುಕೊಂಡ ಕವಿಗಳು, ತಮ್ಮ ಪೋಷಕ ರನ್ನು ಪೌರಾಣಿಕ ನಾಯಕರೊಂದಿಗೆ ಹೋಲಿಸಿ, ಕಾವ್ಯದಲ್ಲಿ ಇತಿಹಾಸವೂ ಬೆರೆತು ಕೊಂಡು ಬರುವ ಹೊಸ ಪರಂಪರೆಯನ್ನು ಆರಂಭಿಸಿದರು. ಇವೆಲ್ಲ ಮಾತುಗಳ ನಿದರ್ಶನವಾಗಿ ಕ್ರಿ. ಶ. ೧೦ನೆಯ ಶತಮಾನದ ಕಾವ್ಯಗಳು ಇಂದಿಗೂ ಬಾಳಿವೆ.

ಈ ರೀತಿ ರಾಜಕೀಯ, ಧಾರ್ಮಿಕ, ಸಾಮಾಜಿಕ ಪರಿಸ್ಥಿತಿಗಳಿದ್ದ ೧೦ ನೆಯ ಶತಮಾನವು ಕನ್ನಡ ಜೈನ ಕವಿಗಳ ಮೇಲೆ ಪ್ರಭಾವ ಮುದ್ರೆಯನ್ನು ಒತ್ತದೇ ಬಿಟ್ಟಿಲ್ಲ. ಈ ಪ್ರಭಾವ ಮುದ್ರೆ ಹತ್ತನೆಯ ಶತಮಾನದ ಕವಿಗಳ ಕೃತಿಗಳಲ್ಲಿ ಒಡ ಮೂಡಿ ಮಹತ್ವದ ಪಾತ್ರವಾಡಿರುವದರಿಂದ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ, ಈ ಅಂಶ ವನ್ನು ಗಮನಿಸಿದ್ದು ಅಪ್ರಸಂಗವೆನಿಸುವಂತಿಲ್ಲ. ಇದೇ ಶತಮಾನದ ಕವಿ ರನ್ನನಿಗೂ ಈ ಮಾತು ಅನ್ವಯಿಸುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಈ ರೀತಿ ವಾತಾವರಣ ವಿದ್ದ ಕ್ರಿ. ಶ. ೧೦ ನೇ ಶತಮಾನವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಸುವರ್ಣ ಯುಗ' ವೆಂದು ಪ್ರಸಿದ್ಧವಾಗಿದೆ. ಸುಮಾರು ಸಾವಿರ ವರುಷಗಳ ಕನ್ನಡಿಗರ ಸಾಧ ನೆಯ ಫಲ ಸಾರ್ಥಕತೆ ಪಡೆದ ಕಾಲವಿದು. ಧಾರ್ಮಿಕ, ಲೌಕಿಕ ಕಾವ್ಯಗಳನ್ನು ರಚಿಸಿ ಧರ್ಮವನ್ನು, ಕಾವ್ಯಧರ್ಮವನ್ನು ಬೆಳಗಿದ ರತ್ನತ್ರಯರೆಂದು ಹೆಸರಾದ ಪಂಪ, ಪೊನ್ನ, ರನ್ನರು ಬಾಳಿದ ಕಾಲವಿದು. ಕವಿಯ ಪ್ರತಿಭೆಗೆ ಒರೆಗಲ್ಲು ಅನ್ನಿಸಿಕೊಳ್ಳು ತ್ತಿದ್ದ ಪ್ರೌಢ ಗದ್ಯದಲ್ಲಿಯೂ ಗ್ರಂಥಗಳು ರಚನೆಯಾದ ಕಾಲವಿದು! ಛಂದೋಂಬುಧಿ ಯಂತಹ ಶಾಸ್ತ್ರಗ್ರಂಥ, 'ಕಾದಂಬರಿ' ಯಂತಹ ಶ್ರೇಷ್ಠ ಮಟ್ಟದ ಅನುವಾದಿತ ಚಂಪೂ ಗ್ರಂಥ ಬೆಳಕಿಗೆ ಬಂದ ಕಾಲವಿದು. ಇಂತಹ ಸುವರ್ಣ ಯುಗಕ್ಕೆ, ಕೃತಿಗಳಿಗೆ ಕಳಸವಿಟ್ಟಂತೆ ರನ್ನನ ಕೃತಿಗಳು ಮೆರೆದ ಕಾಲವಿದು. ಇಂತಹ ಶ್ರೇಷ್ಠ ಕವಿಯು ಬೆಳೆದ ಸಾಂಸ್ಕೃತಿಕ ಪರಂಪರೆಯನ್ನು ಮಾತ್ರ ಈಗ ಗಮನಿಸಬಹುದಾಗಿದೆ.

"ನೀನು ಇದ್ದಲ್ಲಿ ರಾಮನಿಲ್ಲ, ರಾಮನಿದ್ದಲ್ಲಿ ನೀನು ಇಲ್ಲ" ಎಂಬ ಸಂತವಾಣಿ, ಬಹುಶಃ, ನಮ್ಮ ಭರತಖಂಡದ ಕವಿಗಳಿಗೆ, ಶಿಲ್ಪಿಗಳಿಗೆ ಒಪ್ಪಿಗೆಯಾಗಿತ್ತೆಂದು ಕಾಣು

ತ್ತದೆ. ಇದಕ್ಕೆ ಕರ್ನಾಟಕದ ಕವಿಗಳು, ಶಿಲ್ಪಿಗಳು ಹೊರತಾಗಿಲ್ಲ. ನಾನು ಎಂಬುದು ಮಾನದ ಪ್ರತೀಕ. ಅಂತಲೇ ಅನೇಕ ಜನ ಕವಿಗಳು, ಶಿಲ್ಪಿಗಳು, ತಮ್ಮ ಹೆಸರು ಗಳನ್ನು, ತಾವು ಬದುಕಿದ ಕಾಲವನ್ನು ಹೇಳದೆ ಕೃತಿಗಳನ್ನು ರಚಿಸಿದ್ದಾರೆ. ಇದಕ್ಕೆ ಅಪವಾದ ಎನ್ನುವಂತೆ ಹಲವು ಜನ ಕವಿಗಳು ತಮ್ಮ ಬಗೆಗೆ ಹಲವಾರು ವಿಷಯ ಗಳನ್ನು ಹೇಳಿಕೊಂಡಿದ್ದಾರೆ. ಕವಿ ರನ್ನನು ಎರಡನೇ ಗುಂಪಿಗೆ ಸೇರಿದ್ದಾನೆ. ಕವಿ ರನ್ನನು ತನ್ನ ಬಗ್ಗೆ ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾನೆ. ಜೈನ ಮತದವನಾದ ಕವಿ ರನ್ನನು ಕ್ರಿ. ಶ. ೯೪೯ ರಲ್ಲಿ ಕನ್ನಡ ನಾಡಿನ ಭಾಗವಾದ ಬೆಳಗುಲಿ ಅಯ್ನೂರರ ಜಂಬುಖಂಡಿ ಅಂದರೆ ಈಗಿನ ಜಮಖಂಡಿಯ ಪ್ರದೇಶದಲ್ಲಿ ಪ್ರಸಿದ್ಧವಾದ ಮುದು ವೊಳಲೊಳ್ ಅಂದರೆ ಈಗಿನ ಮುಧೋಳದಲ್ಲಿ ಹುಟ್ಟಿದನೆಂದು ಹೇಳಿಕೊಂಡಿದ್ದಾನೆ, ಇವನು ಬಳೆಗಾರ ಕುಲದವನು. ಅಂದರೆ ಇವರ ಮನೆತನದವರು ಬಳೆ ಇಡಿಸುವ ವ್ಯವಹಾರ ಮಾಡುತ್ತಿದ್ದರು.

"ಸಂದ ಪತಿವ್ರತಾಗುಣ ವಿಭೂಷಣದಿಂ ನೆಗಟ್ದ ಅಬ್ಬಲಬ್ಬೆ ತಾಯ್ ।
ತಂದೆ ಜಿನೇಂದ್ರ ಪಾದ ಕಮಲ ಭ್ರಮರಂ "ಜಿನವಲ್ಲಭೇಂದ್ರನ್", ಅ- ।
ಣ್ಣಂ 'ದೃಢಬಾಹು', 'ರೇಚಣನ್' ಉದಾರಗುಣಂ.
ಗುಣಿಮಾರಯ್ಯಾನ್ ಎಂ ।
ದಂದೆ ವಣಿಕುಳಾರ್ಕನೆನಿಸಿತ್ತೆಸಕಂ ಕವಿ ಚಕ್ರವರ್ತಿಯಾ" ॥

(ಅಜಿ. ಪು; ಅ. ೧೨; ಪ. ೪೮)

ಈ ಪದ್ಯದಲ್ಲಿದ್ದ ಕವಿ ರನ್ನನ ತಂದೆ-ತಾಯಿ, ಅಣ್ಣಂದಿರ ಗುಣ ವಿಶೇಷಗಳು ಗಮನಿಸತಕ್ಕಂತಹವುಗಳಾಗಿವೆ. ಇದಕ್ಕೂ ಹೆಚ್ಚಾಗಿ ಅವರು ಆರಿಸಿಕೊಂಡ ಕಾಯಕ ಅವರ ಧಾರ್ಮಿಕ ಪ್ರವೃತ್ತಿಗೆ ಕನ್ನಡಿ ಹಿಡಿದಂತಿದೆ. 'ಶ್ರಾವಕ' ಅರ್ಥಾತ್ ಜೈನ ಗೃಹಸ್ಥನು ಯಾವುದಾದರೂ ಒಂದು ಕಾಯಕ ಮಾಡಲೇಬೇಕು. ಭಿಕ್ಷೆಯಿಂದ, ಕೈಗಡ ಪಡೆಯುವದರಿಂದ, ಕಳುವಿನಿಂದ ಸಂಪಾದಿಸುವದಕ್ಕಂತೂ ಆಸ್ಪದ ಇಲ್ಲವೇ ಇಲ್ಲ. ಅಲ್ಲದೆ, ಅವನ ಸಂಪಾದನೆ ಪ್ರಾಮಾಣಿಕತನದಿಂದ, ಆದರಲ್ಲೂ ಆದಷ್ಟು ಹಿಂಸೆ ಕಡಿಮೆ ಇರುವ ಕಾಯಕದಿಂದ ಬಂದುದಾಗಿರಬೇಕು. ಜೈನರು ಭಾಂಡೆ-ವ್ಯಾಪಾರ ಮತ್ತು ಬಳೆ ಇಡಿಸುವ ವ್ಯವಹಾರಗಳನ್ನು ಮಾಡುವುದನ್ನು ಹೆಚ್ಚಾಗಿ ಮೆಚ್ಚಿಕೊಂಡು ದರ ಗುಟ್ಟು ಈ ವ್ಯವಹಾರಗಳಲ್ಲಿ, ಹಿಂಸೆಗೆ ಆಸ್ಪದ ಕಡಿಮೆ ಇರುವುದೇ ಆಗಿತ್ತು. ಬಳೆ ಇಟ್ಟುಕೊಳ್ಳದ, ಬಳೆ ಎಂದರೇನೆಂದು ಕೇಳುವ ಈ ಕಾಲದ ಹಿನ್ನೆಲೆಯಲ್ಲಿ ಬಳೆಗಾರರ ಸ್ಥಾನಮಾನಗಳನ್ನು ಅಳೆಯಬಾರದು. ನಮ್ಮ ನಾಡಿನಲ್ಲಿ ಮದುವೆ, ಜಾತ್ರೆ ಮುಂತಾದ ಶುಭ ಪ್ರಸಂಗಗಳಲ್ಲಿ 'ಬಾಬು' ಗಳನ್ನು ಪಡೆಯುವ ಪ್ರಮುಖ ಹಕ್ಕು ದಾರರಂತೆ ಬಳೆಗಾರನೂ ಒಬ್ಬ ಮರ್ಯಾದಸ್ಥನಾಗಿ ಪರಿಗಣಿಸಲ್ಪಡುತ್ತಿದ್ದುದು ಅಪರಿಚಿತ ವಿಷಯವೇನಲ್ಲ. ಇಂತಹ ಧಾರ್ಮಿಕ ಪ್ರವೃತ್ತಿಯನ್ನು ಹೊಂದಿದ

ಗೌರವಸ್ಥ ಜನರ ಮಧ್ಯದಲ್ಲಿ ಬೆಳೆದವನು ರನ್ನ ! ಬಹುಶಃ ವಿದ್ಯಾಭ್ಯಾಸದಲ್ಲಿ ರನ್ನನು ಚಿಕ್ಕಂದಿನಲ್ಲಿಯೇ ಲವಲವಿಕೆ ತೋರಿಸಿರಬೇಕು. ಹೆಚ್ಚೆಚ್ಚು ಕಲಿಯುಬೇಕೆಂಬ ಆತನ ಇಚ್ಛೆಗೆ ವಿರೋಧವನ್ನುಂಟು ಮಾಡಿ, ತಮ್ಮ ವ್ಯವಹಾರಕ್ಕೇ ಆತನನ್ನು ಎಳೆಯದೆ, ಹೆಚ್ಚಿನ ವಿದ್ಯಾರ್ಜನೆಗೆ ಆತನನ್ನು ಆ ಕಾಲದಲ್ಲಿ ಬಹು ಪ್ರಸಿದ್ಧರಾದ ಅಜಿತಸೇನಾ ಚಾರ್ಯರ ಬಳಿಗೆ ಕಳುಹಿಸಿದ್ದು, ರನ್ನನ ತಂದೆ-ತಾಯಿ, ಅಣ್ಣಂದಿರ ದೊಡ್ಡ ಗುಣ ವನ್ನು ಎತ್ತಿ ತೋರಿಸುತ್ತದೆ. ಪ್ರವಾಸಕ್ಕೆ ಅನುಕೂಲವಿಲ್ಲದ ಹಾಗೂ ಮನೆತನದ ಸ್ಥಿತಿಗತಿಗಳನ್ನು ಲೆಕ್ಕಿಸದೆ, ರನ್ನನ ವಿದ್ಯಾರ್ಜನೆಗೆ ಅನುವು ಮಾಡಿಕೊಡದಿದ್ದರೆ, ರನ್ನ, ಕನ್ನಡ ಸಾಹಿತ್ಯದ ರತ್ನವಾಗಿ ಬೆಳಗದೆ, ಬಹುಶಃ, ತಿಪ್ಪೆಯಲ್ಲಿ ಹೂತು ಹೋದ ಕಾಜಿನ ತುಂಡಾಗುತ್ತಿದ್ದನೆಂದೇ ಊಹಿಸಬಹುದು. ಸುಸಂಸ್ಕೃತ ಕೌಟುಂಬಿಕ ಪರಿಸರ ರನ್ನನನ್ನು ರತ್ನವನ್ನಾಗಿ ಪರಿವರ್ತಿಸುವಲ್ಲಿ ಬಹು ಮಹತ್ವದ ಪಾತ್ರವನ್ನಾಡಿ ತೆಂದೇ ಹೇಳಬೇಕು.

ಯಾವುದೇ ಮನುಷ್ಯ ಮುಂದು ಬರಲು ಆತನ ಮನೆಯವರಿಂದಲೇ ಮೊದಲ ಪ್ರೋತ್ಸಾಹ ದೊರೆಯಬೇಕೆಂಬುದು ಎಲ್ಲರೂ ಅರಿತ ವಿಷಯ. ಹೀಗೆ ಪ್ರೋತ್ಸಾಹ ಗೊಂಡ ರನ್ನನು ತನ್ನ ಮುಂದಿನ ವಿದ್ಯಾಭ್ಯಾಸಕ್ಕಾಗಿ ಹೊರಟವನು ಬಂಕಾಪುರಕ್ಕೆ ಬಂದನು. ಆಗ ಬಂಕಾಪುರದಲ್ಲಿ ಬಹು ದೊಡ್ಡ ವಿದ್ವಾಂಸರೆಂದು ಹೆಸರಾದ ಅಜಿತ ಸೇನಾಚಾರ್ಯರು ಬಂಕಾಪುರದಲ್ಲಿದ್ದರೂ, ಶ್ರವಣಬೆಳ್ಗೊಳಕ್ಕೂ ಹೋಗಿ ಬರುತ್ತಿದ್ದ ರೆಂದು ಕಾಣುತ್ತದೆ. ಶ್ರವಣಬೆಳ್ಗೊಳ ಕ್ರಿ. ಶ. ಪೂರ್ವ ಮೂರು–ನಾಲ್ಕನೆಯ ಶತಮಾನದಿಂದಲೂ ಜೈನ ಆಚಾರ್ಯರ, ದೊಡ್ಡ ದೊಡ್ಡ ಮುನಿಗಳ ವಾಸ್ತವ್ಯದಿಂದ ಪವಿತ್ರ ಕ್ಷೇತ್ರವೆಂದು ಪ್ರಸಿದ್ಧವಾಗಿತ್ತು. ಇಲ್ಲೊಂದು ಮಾತು ಹೇಳಿದರೆ ಅಪ್ರಸ್ತುತ ವಾಗಲಾರದೆಂದು ಕಾಣುತ್ತದೆ. ಭದ್ರಬಾಹುಗಳ ಸಂಗಡ ಬಂದ ಹನ್ನೆರಡು ಸಾವಿರ ಮುನಿಗಳು ಉತ್ತರದಲ್ಲಿಯ ಬರಗಾಲ ಮುಗಿದ ನಂತರ ಅಲ್ಲಿಗೆ ಮರಳಿ ಹೋಗಿ, ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅಲ್ಲಿಯ ಜೈನ ಮುನಿಗಳಲ್ಲಾದ ಬದಲಾವಣೆಗಳನ್ನು ಗಮನಿಸಿ, ಪುನಃ ದಕ್ಷಿಣಕ್ಕೆ ಬಂದರು. ಆಗ ಅವರು ಕರ್ನಾಟಕದ ಎಲ್ಲೆಡೆಗೂ ನೆಲಿ ಸಿದರು. ಆ ವೇಳೆಗಾಗಲೇ, ಮುನಿಗಳಿಗೆ ಆಹಾರ ದಾನ ಮಾಡಲು ಜೈನ ಶ್ರಾವಕರು ಕರ್ನಾಟಕದ ತುಂಬೆಲ್ಲ ಹರಡಿದ್ದರೆಂದು ಕಾಣುತ್ತದೆ. ಉತ್ತರ ಕರ್ನಾಟಕದಲ್ಲಿ ನೆಲಸಿದ ಜೈನ ಮುನಿಗಳು, "ಕೊಪಣನಗರ" ಅಂದರೆ ಈಗಿನ ಕೊಪ್ಪಳದ ಕಲ್ಲು ಗುಡ್ಡ ವನ್ನು ತಮ್ಮ ತಪಸ್ಸಿಗೆ ಆಯ್ದುಕೊಂಡು ಅಲ್ಲಿಯೇ ಸಮಾಧಿ ಮರಣವನ್ನು ಹೊಂದಿರ ಬೇಕು. ಹೊಂದುತ್ತ ಹೋಗಿರಬೇಕು. ಹೀಗಾಗಿ, ಕೊಪ್ಪಳವೂ ಸಹ ಜೈನ ಧರ್ಮದ ಪವಿತ್ರಕ್ಷೇತ್ರವೆಂದು ಪರಿಗಣಿಸಲ್ಪಡಲಾರಂಭಿಸಿತು. ಇದೂ ಅಲ್ಲದೆ, ಉತ್ತರ ಕರ್ನಾಟಕ ದಲ್ಲಿ ನೆಲೆಸಿದ ಜೈನ ಕವಿಗಳು, ದಕ್ಷಿಣದಲ್ಲಿ ನೆಲೆಸಿದ ಜೈನ ಕವಿಗಳಿಗಿಂತ ಹೆಚ್ಚು ವಿಶಾಲ ಮನೋಭಾವನೆಯನ್ನು ತಳೆದು, ಪ್ರಾಕೃತ, ಸಂಸ್ಕೃತ ಭಾಷೆಗಳ ಹಿನ್ನೆಲೆಯಲ್ಲಿದ್ದ ಮಡಿವಂತಿಕೆಯನ್ನು ಕಡಿಮೆ ಮಾಡಿ, ದೇಶಿ ಅರ್ಥಾತ್ ಕನ್ನಡವನ್ನು ಹೆಚ್ಚೆಚ್ಚು

ಬಳಸಲು ಪ್ರಯತ್ನಿಸಿದರೆಂದು ಕಾಣುತ್ತದೆ. ಅದಕ್ಕೆಂದೇ 'ಮಾರ್ಗ'ದಲ್ಲಿ ನಡೆದು 'ದೇಶಿ' ಯಲ್ಲಿ ಒಳಪೊಕ್ಕ ಸುಂದರ ಕಾವ್ಯಗಳು ಜೈನ ಕವಿಗಳಿಂದ ಮೂಡಿ ಬಂದವು. ಇಂತಹ ಉತ್ತಮ ಕಾವ್ಯಗಳನ್ನು ರಚಿಸಿದ ಕವಿಗಳು ಉತ್ತರ ಕರ್ನಾಟಕದಲ್ಲೇ ಕಂಡು ಬರುತ್ತಾರೆಂಬ ಮಾತು ಇದಕ್ಕೆ ಸಾಕ್ಷಿ. ಇದೇ ರೀತಿ ಅಜಿತಸೇನಾಚಾರ್ಯರಂತಹ ವಿದ್ವನ್ಮಣಿಗಳು ಬಂಕಾಪುರದಲ್ಲಿದ್ದು ತಮ್ಮ ಶಿಷ್ಯಂದಿರಿಗೆ ಜೈನ ಧರ್ಮ, ಶಾಸ್ತ್ರಗಳ ಅಭ್ಯಾಸ ಮಾಡಿಸುತ್ತಿದ್ದರು. ಈಗ ಬಂಕಾಪುರದಲ್ಲಿ ಹಾಳು ಬಿದ್ದು, ಯಾರೂ ಗಮನಿಸದ ಸುಂದರ ಬಸದಿ, ಬಂಕಾಪುರವೂ ಆ ಕಾಲದಲ್ಲಿ ಒಂದು ಮಹತ್ವದ ಸ್ಥಾನವಾಗಿತ್ತೆಂಬುದನ್ನು ತಿಳಿಯಪಡಿಸುತ್ತದೆ. ಗಂಗ ಅರಸು ಪೆರ್ಮಾಡಿ ಸಮಾಧಿಮರಣರನ್ನು ಬಂಕಾಪುರದಲ್ಲಿ, ಅಜಿತಸೇನರ ಸನ್ನಿಧಿಯಲ್ಲಿ ಹೊಂದಿದ್ದನ್ನು ಇಲ್ಲಿ ಗಮನಿಸಬಹುದು. ಇಂತಹ ಮಹತ್ವದ ಸ್ಥಾನದಲ್ಲಿದ್ದ, ಖ್ಯಾತ ಪಂಡಿತರಾದ ಗುರುಗಳನ್ನರಸಿ ಬಂದನು ರನ್ನ! ಅಜಿತಸೇನಾಚಾರ್ಯರಲ್ಲಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿದ ರನ್ನ, ಅವರೊಂದಿಗೆ ಶ್ರವಣಬೆಳ್ಗೊಳಕ್ಕೂ ಹೋಗಿ ಬರುತ್ತಿದ್ದನೆಂದು ಕಾಣುತ್ತದೆ. ಅಲ್ಲಿ ಅವನಿಗೆ ಆ ಕಾಲದ ಬಹು ಪ್ರಮುಖ ವ್ಯಕ್ತಿಗಳ ಸಂಪರ್ಕ ಬರುವಂತಾಯಿತು. ಈ ಅಜಿತಸೇನಾಚಾರ್ಯರಿಗೆ ಗಂಗ ವಂಶದ ಪೆರ್ಮಾಡಿ ಹಾಗೂ ಗಂಗರಾಜರಿಗೆ ಮಂತ್ರಿ ಹಾಗೂ ದಂಡನಾಯಕನಾದ ಚಾವುಂಡರಾಯನ ಸಂಗತಿ ದೊರೆಯಿತು. ಮೊದಲನೆಯ ನಾಗವರ್ಮನೂ ಅಜಿತಸೇನರ ಶಿಷ್ಯನೆಂದೇ ಹೇಳಿಕೊಂಡಿರುವದರಿಂದ ನಾಗವರ್ಮನ ಸಂಪರ್ಕವೂ ಸಹ ಕವಿ ರನ್ನನಿಗೆ ಇದ್ದಿರಬೇಕೆಂದೆನಿಸುತ್ತದೆ. "ಸುರಪತಿ ಪೂಜಿತಂ ನೃಪತಿ ಸೇವಿತಂ ಉನ್ನತ ಗಂಗ ಮಂಡಲೇಶ್ವರ ಮಕುಟಾರ್ಚಿತಂ, ಭುವನದಿಂ ತಮಗೆಂಬ ನೆಗಟ್ತೆವೆತ್ತಲಂಕರಿಸಿ, ಜಗತ್ ಪವಿತ್ರಮೆನೆ ಸಂದುದರಿಂ' ಎಮಗೆ ಇಷ್ಟ ಸಿದ್ಧಿಯಂ ದೊರೆಕೊಳಿಸುತ್ತುಂ ಇರ್ಕೆ, ಅಜಿತಸೇನಮುನೀಂದ್ರಪದಾಂಬುಜದ್ವಯಂ" (ಅಜಿ. ಪು: ಅ. ೧; ಪ. ೫೭) ಎಂದು ಕವಿ ರನ್ನನು ತನ್ನ ಗುರುಗಳಾದ ಅಜಿತಸೇನಾಚಾರ್ಯರ ಅಂತಸ್ತು ಆಗಿನ ಸಮಾಜದಲ್ಲಿ ಎಂತಹ ಮೇಲ್ಮಟ್ಟದಲ್ಲಿತ್ತೆಂಬುದನ್ನು ವರ್ಣಿಸಿದ್ದಾನೆ.

ಚಾವುಂಡರಾಯನು ತನ್ನ ಚಾವುಂಡರಾಯ ಪುರಾಣವೆಂದೇ ಪ್ರಸಿದ್ಧವಾಗಿರುವ "ತ್ರಿಷಷ್ಟಿ ಲಕ್ಷಣ ಮಹಾಪುರಾಣ" ದಲ್ಲಿ ಅಜಿತ ಸೇನಾಚಾರ್ಯರು ತನಗೂ ಹಾಗೂ ಪೆರ್ಮಾಡಿ ದೊರೆಗೂ ಗುರುಗಳಾಗಿದ್ದರೆಂಬುದನ್ನು ಗ್ರಂಥದ ಆರಂಭದಲ್ಲಿಯೂ ಹಾಗೂ ಗ್ರಂಥದ ಕೊನೆಗೂ ಹೇಳಿದ್ದಾನೆ. ಚಾವುಂಡರಾಯನು ಅಜಿತಸೇನರನ್ನು "ಪ್ರಿಯದರ್ಶನರೆನೆ, ಧರ್ಮ ಪ್ರಿಯರೆನೆ, ಧರ್ಮಾನುರಾಗಮಂ ಕೂಡೆ", "ಗುಣ ಮಣಿ ವಿಭೂಷಣರುಂ, ಶೀಳಾಳಂಕಾರರುಂ, ಜಗತ್ಪವಿತ್ರ ಚಾರಿತ್ರರುಂ, ವಿಜಿತ ದುರಿತಾರಾತಿಸೇನರುಂ" ಎಂದು ಮೊದಲಾಗಿ ವರ್ಣಿಸಿ, "ಇಂತಯ್ವತ್ತೊಂದು ಜಿನಮುನಿ ಸಂತತಿಯಿಂದ ಶ್ರುತಾವತಾರಂ ಧರೆಗೋ। ರಂತೆ ನಿಮಿರ್ದೆಸೆದುದು ಅವರ್ಗಳ। ಸಂತತಿಯೊಳ್ ನೆಗಟ್ದ ಅಜಿತಸೇನಾಚಾರ್ಯರ ತಪಸ್ಸಂ ಯಮುಂ

ಏನ್ ಎಸೆದವ್ರೋ ಎಂದು ಹೇಳಿ. "ಚಾರಿತ್ರಪಾನಿಗಳ್ ಶ್ರುತಪಾರಗರೆನಿಪ ಅಜಿತ ಸೇನದೇವರ ಗುಡ್ಡಂ, ವೀರ ಶಿಖಾಮಣಿ ವಿಬುಧಾಧಾರಂ ಚಾವುಂಡರಾಜನ್ ಅನುಪಮ ತೇಜಂ" ಎಂದು ತಾನು ಅವರ ಶಿಷ್ಯನಾಗಿದ್ದನೆಂಬುದನ್ನು ವಿವರಿಸಿದ್ದಾನೆ.

"ಅರಸಂ ರಕ್ಕಸಗಂಗಂ। ಗುರುಗಳ್ ನೆಗಟ್ದ ಅಜಿತಸೇನದೇವರ್ ದಯೆಯಿಂ। ಪೊರೆವ ನೃಪನಣ್ಣನೆನೆಮ। ಚ್ಚರಿಸುವರಾರ್ ನಾಕಿಯಿರುಳೊಳೇಂ ಪುಟ್ಟಿದನೇ ॥" ಕವಿ ನಾಗವರ್ಮನು ಈ ಪದ್ಯದಲ್ಲಿ ತನ್ನ ಗುರುಗಳು ಅಜಿತಸೇನರಾಗಿದ್ದನ್ನೂ, ದೊರೆ ರಕ್ಕಸಗಂಗ ಹಾಗೂ ಪೋಷಕ "ಅಣ್ಣ" ಅಂದರೆ ಚಾವುಂಡರಾಯನಾಗಿದ್ದುದನ್ನೂ ಹೇಳಿದ್ದಾನೆ. ಅಜಿತಸೇನಾಚಾರ್ಯರ ಶಿಷ್ಯರ ಈ ಹೇಳಿಕೆಗಳು, ಅಜಿತಸೇನಾಚಾರ್ಯರ ಬಗೆಗೆ ಸ್ಪಷ್ಟವಾದ ಕಲ್ಪನೆ ಕೊಡುತ್ತವೆಯಾದರೂ, ಶಿಷ್ಯರ ಮಾತುಗಳಲ್ಲಿ ಅತಿಶಯೋಕ್ತಿ ಅಡಗಿರಲೂಬಹುದಾಗಿದೆ. ಆದರೆ ಈ ಶಿಷ್ಯೋತ್ತಮರ ಮಾತುಗಳಲ್ಲಿ ಅತಿಶಯೋಕ್ತಿಗೆಡೆಯಿಲ್ಲ ಎಂಬುದಕ್ಕೆ, ಕ್ರಿ. ಶ. ಸು. ೧೦೦೦ ದ ಸುಮಾರಿಗೆ ಶ್ರವಣಬೆಳಗೊಳದಲ್ಲಿದ್ದು, ಚಾವುಂಡರಾಯನಿಗಾಗಿ ಜೈನ ಸಿದ್ಧಾಂತ ಗ್ರಂಥಗಳ ಸಾರವನ್ನೇ "ಗೊಮ್ಮಟಸಾರ" ಎಂಬ ಗ್ರಂಥದಲ್ಲಿ ಬರೆದು, ಸಿದ್ಧಾಂತ ಚಕ್ರವರ್ತಿ ಎಂಬ ಬಿರುದನ್ನು ಹೊಂದಿದ ನೇಮಿಚಂದ್ರಾಚಾರ್ಯರು ತಮ್ಮ ಗ್ರಂಥ ಗೊಮ್ಮಟಸಾರದಲ್ಲಿ "ಯಸ್ಮಿನ್ ಗುಣಾ ವಿಶ್ರಾಂತಾಗಣಧರ ದೇವಾದಿಋದ್ಧಿ ಪ್ರಾಪ್ತಾನಾಂ ॥ ಸಃ ಅಜಿತಸೇನನಾಥೋಯಸ್ಯ ಗುರುರ್ಜಯಂತು ಸರಾಯಃ ॥" (ಗೊ. ಸಾ. ಕರ್ಮಕಾಂಡ, ಪುಟ ೪೩೪) ಅಂದರೆ ಗಣಧರರಂತೆ ಋದ್ಧಿಗಳು ಪ್ರಾಪ್ತವಾಗಿದ್ದ ಅಜಿತಸೇನಾಚಾರ್ಯರು ಗುರುಗಳಾಗಿದ್ದ ರಾಯ ಅರ್ಥಾತ್ ಚಾವುಂಡರಾಯನಿಗೆ ಜಯವಾಗಲಿ ಎಂದು ಹೇಳಿದ್ದಾರೆ. ಇದರಿಂದ ಅಜಿತಸೇನಾಚಾರ್ಯರು ಎಂತಹ ಮೇಲ್ಮಟ್ಟದ ಆಚಾರ್ಯರಾಗಿದ್ದರೆಂಬುವರ ಕಲ್ಪನೆ ಬರುತ್ತದೆ. ಇಂತಹ ಮಹಾನ್ ಆಚಾರ್ಯರ ಶಿಷ್ಯ ಸಂಪ್ರದಾಯದ ವಾತಾವರಣದಲ್ಲಿ ಬೆಳೆದ ರನ್ನನು ಎಂತಹ ಉತ್ತಮ ಸಂಸ್ಕಾರ ಪಡೆದನೆಂಬುದನ್ನು ಬೇರೆ ವಿವರಿಸುವ ಅಗತ್ಯವಿಲ್ಲ. ಇದು ರನ್ನನ ಗುರು ಪರಂಪರೆಯ ಸಾಂಸ್ಕೃತಿಕ ಹಿನ್ನೆಲೆಯಾಗಿದೆ.

ಅಜಿತಸೇನರಿಗೆ ಶಿಷ್ಯರು ಅನೇಕ ಜನರಿದ್ದಿರಬಹುದು. ಆದರೆ ರನ್ನನಿಗೆ ಚಾವುಂಡರಾಯನಲ್ಲಿ ಹೆಚ್ಚು ಸಖ್ಯ ಹಾಗೂ ಒಡನಾಟ ಬೆಳೆದು ಬಂದಿತೆಂದು ಕಾಣುತ್ತದೆ. ಉದಾರಿಯೂ, ವಿದ್ವನ್ಮಣಿಯೂ, ಗುಣಗ್ರಾಹಿಯೂ ಆದ ಚಾವುಂಡರಾಯನು ತಾನು ವಿದ್ಯೆ ಕಲಿಯುತ್ತಿರುವಾಗಲೇ ಅರ್ಹರಾದ ಸಹಪಾಠಿಗಳಿಗೆ ಪೋಷಕನೂ ಆಗಿದ್ದಂತೆ ಕಾಣುತ್ತದೆ. ಈ ಚಾವುಂಡರಾಯನು ಗಂಗ ಅರಸರ ಮಂತ್ರಿಯೂ ದಂಡನಾಯಕನೂ ಆಗಿ ಅನೇಕ ಯುದ್ಧಗಳನ್ನು ಅವರಿಗೆ ಗೆದ್ದುಕೊಟ್ಟ ಕಲಿಯೂ ಆಗಿದ್ದನಲ್ಲದೆ ಕವಿಯೂ ಆಗಿದ್ದಾನೆ. ಮೇಲೆ ಹೇಳಿದಂತೆ ಈತನು ತ್ರಿಷಷ್ಟಿ ಲಕ್ಷಣ ಮಹಾಪುರಾಣವನ್ನು ಗದ್ಯದಲ್ಲಿ ಬರೆದಿದ್ದಾನೆ. ಇದು ಕ್ರಿ. ಶ. ೧೦ನೆಯ ಶತಮಾನದಲ್ಲಿ

ಬರೆದ ಗದ್ಯ ಗ್ರಂಥಗಳಲ್ಲಿ. ವಡ್ಡಾರಾಧನೆ ಗ್ರಂಥದ ಕಾಲ ನಿರ್ದಿಷ್ಟ ಆಗುವ ವರೆಗೆ, ಮೊದಲನೆಯ ಗದ್ಯ ಗ್ರಂಥವೆಂದು ಪ್ರಸಿದ್ಧವಾಗಿತ್ತು. ಶಿಲ್ಪಕಲೆಯೇ ಮೂರ್ತಿವೆತ್ತು ನಿಂತಂತಿರುವ ಜಗತ್ಪ್ರಸಿದ್ಧವಾದ ಶ್ರವಣಬೆಳ್ಗೊಳದ ಬಾಹುಬಲಿ ಯನ್ನು ಕೆತ್ತಿಸಿದವನು ಈ ಚಾವುಂಡರಾಯನು. ಹೀಗೆ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಅಜರಾಮರವಾಗಿ ಉಳಿದಿರುವ, ಮರೆಯಲಾರದ ಮಹಾನ್ ವ್ಯಕ್ತಿ ಯಾಗಿದ್ದಾನೆ- ಈ ಚಾವುಂಡರಾಯ! ಇಂತಹ ಸುಸಂಸ್ಕೃತ ಮಹನೀಯನು ರನ್ನನನ್ನು ಬಹು ಮೆಚ್ಚಿಕೊಂಡಿದ್ದನೆಂಬುದಕ್ಕೂ. ತನ್ನ ಅಂತಸ್ತನ್ನು ಲೆಕ್ಕಿಸದೆ ಆತನ ಸಂಗಡ ವ್ಯವಹರಿಸುತ್ತಿದ್ದನೆಂಬುದಕ್ಕೂ ಇಂದಿಗೂ ಶ್ರವಣಬೆಳ್ಗೊಳದ 'ಚಂದ್ರಗಿರಿ'ಯ ಮೇಲೆ ಬಂಡೆಗಲ್ಲಿನಲ್ಲಿ ಇವರಿಬ್ಬರೂ ತಮ್ಮ ಸ್ವಂತ ಕೈಯಿಂದ ಕೆತ್ತಿದ 'ಚಾವುಂಡರಾಯ', 'ಕವಿರತ್ನ' ಎಂಬ ಅವರ ಹೆಸರುಗಳೇ ಸಾಕ್ಷಿ. ಈ ಹೆಸರುಗಳನ್ನು ಕೆತ್ತುವಾಗ ಇವರಿಬ್ಬರೂ ಎದುರುಬದುರಾಗಿ ಕುಳಿತು ಕೆತ್ತಿರಲೇಬೇಕೆಂಬ ಕಲ್ಪನೆ ಬರುವದಕ್ಕೆ ತೊಂದರೆ ಪಡುವ ಕಾರಣವೇನಿಲ್ಲ. ಚಾವುಂಡರಾಯನಂತಹ ಸಾತ್ವಿಕ ವ್ಯಕ್ತಿಯ ಸಂಗದಲ್ಲಿ ಬೆಳೆದ ರನ್ನನ ಸಂಸ್ಕಾರದ ಬಗೆಗೆ ವಿವರಣೆ ಅನಗತ್ಯ! ಇದು ಕವಿ ರನ್ನನಿಗೆ ದೊರೆತ ಸ್ನೇಹದ ಸಾಂಸ್ಕೃತಿಕ ಹಿನ್ನೆಲೆ.

ಕವಿ ರನ್ನನು ತನ್ನ ವಿದ್ಯಾರ್ಜನೆಯನ್ನು ಮುಗಿಸಿಕೊಂಡು ಬಹುಶಃ ಪುನಃ ತನ್ನೂರಿಗೆ ಮರಳಿ ಬಂದನೆಂದು ಕಾಣುತ್ತದೆ. ಘನ ವಿದ್ವಾಂಸನಾಗಿ ಮರಳಿ ಬಂದ ರನ್ನನಿಗೆ ಬೇಗನೆ ಆತನಿಗೆ ತಕ್ಕ ಸ್ಥಾನ–ಮಾನಗಳು ಸಿಕ್ಕಿಲ್ಲವೆಂದು ಕಾಣುತ್ತದೆ. ಸರಿಯಾದ ಸ್ಥಾನಮಾನಗಳನ್ನು ದೊರಕಿಸಿಕೊಡಲು ಆಗಿನ ಕಾಲದಲ್ಲಿ "God father"ಗಳ ಅವಶ್ಯಕತೆ ಇತ್ತೊ ಏನೋ ? ಅಂತಹ ಸೌಭಾಗ್ಯವಿಲ್ಲದ ರನ್ನ ಆರಂಭಕ್ಕೆ ತನಗೆ ಮರ್ಯಾದೆ ಕೊಟ್ಟು ಕರೆದ ಸಾಮಂತರು, ಮಾಂಡಲಿಕರು ಎನ್ನದೆ ತನ್ನ ಕಾರ್ಯ ಮಾಡಿದನೆಂಬುದು "ಮೊದಲೊಳ್ ಸಾಮಂತರಿಂ ಇನಿಸು ಉದಿತೋದಿತನಾಗಿ ಮಂಡಲೇಶ್ವರನಿಂದ ಅಭ್ಯುದಯಪರನೆನಿಸಿ ಚಕ್ರಿಯಿಂ ಉದಯ ಪರಂಪರೆಯನ್ ಎಯ್ದಿದಂ ಕವಿರನ್ನಂ" (ಗದಾ. ಆ. ೧. ಪ. ೩೪), ಎಂದು ರನ್ನನೇ ಹೇಳುವ ಈ ಪದ್ಯದಿಂದ ಗೊತ್ತಾಗುತ್ತದೆ. ತನ್ನ ಪೋಷಕರಾದ ಚಾಲುಕ್ಯ ತೈಲಪ ಚಕ್ರವರ್ತಿ ಹಾಗೂ ಆತನ ಮಗ ಇರಿವ ಬೆಡಂಗ ಸತ್ಯಾಶ್ರಯ ಇವರ ಆಸ್ಥಾನದಲ್ಲಿದ್ದು ಕವಿ ಚಕ್ರವರ್ತಿ ಎಂಬ ಬಿರುದನ್ನು ಹೊಂದುವ ಪೂರ್ವದಲ್ಲಿ ಕವಿ ರನ್ನನು ಕ್ರಿ. ಶ. ೧೦ ನೆಯ ಶತಮಾನದ ಉತ್ತರಾರ್ಧದಲ್ಲಿ ಕರ್ನಾಟಕದಲ್ಲಿ ಬಾಳಿ ಕವಿವರ ಕಾಮಧೇನು ದಾನ ಚಿಂತಾಮಣಿ, ಗುಣದಕಣಿ, ಕಟಕ ಪವಿತ್ರೆ, ಜೀನಧರ್ಮ ಪತಾಕೆ ಮೊದಲಾದ ಬಿರುದುಗಳಿಂದ ಶೋಭಿತಳಾದ, ಚಾಳುಕ್ಯ ಅರಸರ ಪದೆಪಳನಾಗಿ ಮಾಸವಾಡಿ ೧೪೦ ಕ್ಕೆ ಅಧಿಪತಿಯಾದ ಅಣ್ಣಿಗದೇವನ ತಾಯಿಯಾದ ಅತ್ತಿಮಬ್ಬೆಯ ಆಶ್ರಯದಲ್ಲಿದ್ದು ಆಕೆಯ ಇಚ್ಛೆಯ ಮೇರೆಗೆ ತನ್ನ ಅಜಿತನಾಥ ಪುರಾಣ ಬರೆದನು. ಈ ಅತ್ತಿಮಬ್ಬೆಯು ಈ ಮೊದಲು ಹೇಳಿದಂತೆ, ಚಾಲುಕ್ಯ ಅರಸರಿಗೆ ಅನುಕೂಲರಾಗಿ ಅವರ ಆಧಿಪತ್ಯ ವನ್ನು ಪುನಃ ಸ್ಥಾಪಿಸಲು ನೆರವಾದ ಮನೆತನಗಳಿಗೆ ಸಂಬಂಧಿಸಿದವಳಾಗಿದ್ದಾಳೆ.

ವೆಂಗಿ ವಿಷಯದ ಮುಂಗನೂರಿನ ಧರ್ಮಿಷ್ಟನಾದ ಮಲ್ಲಪಯ್ಯನೇ ಅತ್ತಿಮಬ್ಬೆಯ ತಂದೆ. ಈ ಮಲ್ಲಪಯ್ಯ ಹಾಗೂ ಆತನ ಸಹೋದರ ಪೊನ್ನಮಯ್ಯ ಚಾಲುಕ್ಯ ರಾಜರ ಸಲುವಾಗಿ ತಮ್ಮ ಜೀವವನ್ನೇ ತೆತ್ತ ಮಹನೀಯರಾಗಿದ್ದಾರೆ. ಅಪರಂತೆ ಕವಿ ಪೊನ್ನನಿಂದ ಶಾಂತಿಪುರಾಣವನ್ನು ಬರೆಯಿಸಿದ ಪುಣ್ಯವಂತರಾಗಿದ್ದಾರೆ. ಹೀಗೆ ಜಿನಭಕ್ತರ ಮನೆಗೆ ಮಗಳಾದ ಅತ್ತಿಮಬ್ಬೆಯು, ಚಾಲುಕ್ಯ ಚಕ್ರವರ್ತಿಯ ಮಹಾ ಮಂತ್ರಿಯಾದ ಧಲ್ಲನ ಸೊಸೆಯೂ ಆಗಿದ್ದಳು. ಈ ಧಲ್ಲನ ಮಗನಾದ ನಾಗದೇವನು ಅತ್ತಿಮಬ್ಬೆಯನ್ನು ಹಾಗೂ ಅವಳ ತಂಗಿ ಗುಂಡಮಬ್ಬೆಯನ್ನು ಮದುವೆಯಾಗಿದ್ದನು. ಅತ್ತಿಮಬ್ಬೆಯ ಹೊಟ್ಟೆಯಲ್ಲಿ ಹುಟ್ಟಿದವನೇ ಮೇಲೆ ಉಲ್ಲೇಖಿಸಿದ ಅಣ್ಣಿಗದೇವ ನಾಗಿದ್ದಾನೆ. ಈ ನಾಗದೇವನು 'ಒರಟರ ಮಲ್ಲ'ನೆಂಬ ಬಿರುದಿನಿಂದ ಪ್ರಸಿದ್ಧ ನಾಗಿದ್ದು, ತನ್ನ ಅರಸನಿಗಾಗಿ ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಜಯವನ್ನು ಸಂಪಾದಿಸಿ ಕೊಟ್ಟು ಒಂದು ಯುದ್ಧದಲ್ಲಿ ಮಡಿದನು. ಗಂಡ ಸತ್ತಾಗ ಸತಿ ಹೋಗುವ ಪದ್ಧತಿ ಆ ಕಾಲದಲ್ಲಿಯೂ ರೂಢಿಯಲ್ಲಿತ್ತು. ಆದರೆ ಅತ್ತಿಮಬ್ಬೆಗೆ ಚಿಕ್ಕಮಗುವಿದ್ದು ದರಿಂದ ಆ ಮಗುವಿನ ಸಂರಕ್ಷಣೆಯ ಭಾರವನ್ನು ಆಕೆಯ ಪಾಲಿಗೆ ಒಪ್ಪಿಸಿ ಆಕೆಯ ತಂಗಿ ಗುಂಡಮಬ್ಬೆ ಸಹಗಮನವನ್ನಾಚರಿಸಿ, "ಅಕ್ಕತಂಗಿಯರಿಗಿಂತ ಸವತಿ ಮಕ್ಕಳಿಲ್ಲ" ಎಂಬ ನಾಣ್ಣುಡಿಯನ್ನು ಸುಳ್ಳು ಮಾಡಿ ತನ್ನ ಪತಿಯೊಡನೆ ಮರಣವನ್ನಪ್ಪಿ ಜನ್ಮ ಸಾರ್ಥಕ ಮಾಡಿಕೊಂಡಳು. ಮಗನ ಪೋಷಣೆಗಾಗಿ ಬದುಕಿದ ಅತ್ತಿಮಬ್ಬೆ ಭೋಗ ಜೀವನಕ್ಕೆ ಆಸ್ಪದವಿದ್ದರೂ ಕಠೋರವಾದ ವ್ರತಗಳನ್ನು ಸ್ವೀಕರಿಸಿ ದಾನ-ಧರ್ಮ ಕಾರ್ಯದಲ್ಲಿ ನಿರತಳಾದಳೆಂಬುದನ್ನು "ಒಡಲನುಪವಾಸದಿಂ ತನ್ನೊಡಮೆಯುನ್ ಅನವ ರತ ದಾನದಿಂ ತವಿಸಿ ಜಸಂ ಬಡೆದಳು ನೂರ್ಮಡಿ ತೈಲಪನ ಪಡೆವಳ ತೈಲನ ಜನನಿಗೆಣೆ ಪೆರರೊಳರೆ" ಎಂದು ಕವಿ ಹೇಳುವ ಮಾತಿನಿಂದ ಗೊತ್ತಾಗುತ್ತದೆ. ಈ ಅತ್ತಿಮಬ್ಬೆ ತೊಕ್ಕಿಗುಂಡಿ ಈಗಿನ ಲಕ್ಕುಂಡಿಯಲ್ಲಿ ಒಂದು ಜಿನಾಲಯವನ್ನು ಕಟ್ಟಿಸಿ ದಳಲ್ಲದೆ ಇನ್ನೂ ಸಾವಿರಾರು ಬಸದಿಗಳ ಜೀರ್ಣೋದ್ಧಾರವನ್ನೂ ಅವುಗಳಲ್ಲಿ ನಿರಂತರ ವಾಗಿ ಪೂಜೆ ವಗೈರೆ ನಡೆಯುವಂತೆ ಏರ್ಪಾಡು ಮಾಡಿದಳೆಂದು ಕವಿ ರನ್ನನು ವರ್ಣಿಸಿ ದ್ದಾನೆ. ತ್ಯಾಗ, ಶೀಲ, ದಾನ, ಧರ್ಮದ ಈ ಕಾರ್ಯಗಳಿಂದ ಚಾಲುಕ್ಯ ಚಕ್ರವರ್ತಿಯೂ ಕೂಡ ಅತ್ತಿಮಬ್ಬೆಯನ್ನು ಭಯ- ಭಕ್ತಿಯಿಂದ ಕಾಣುತ್ತಿದ್ದನೆಂಬುದು "ಕವಿ ಚಕ್ರವರ್ತಿ ಪೂಜಿತೆ" ಎಂದು ಕವಿ ರನ್ನನು ಹೇಳುವ ಮಾತಿನಿಂದ ವ್ಯಕ್ತವಾಗುತ್ತದೆ. ಇಂತಹ ಪುಣ್ಯಜೀವಿ ಕನ್ನಡ ಸಾಹಿತ್ಯಕ್ಕೆ ರನ್ನನಿಂದ ಅಜಿತಪುರಾಣ ದೊರೆಯುವಂತೆ ಮಾಡಿದ್ದಲ್ಲದೆ ತನ್ನ ತಂದೆ- ಚಿಕ್ಕರು ಪೊನ್ನನಿಂದ ಬರೆಯಿಸಿದ ಶಾಂತಿನಾಥ ಪುರಾಣದ ಸಾವಿರ ಪ್ರತಿಗಳನ್ನು ಮಾಡಿಸಿ, ಶಾಸ್ತ್ರದಾನ ಮಾಡಿ ಇಂದು ಆ ಗ್ರಂಥದ ಪ್ರತಿ ಸಿಕ್ಕುವಂತಾಗಲು ಕಾರಣಳಾಗಿದ್ದಾಳೆ. ಇಂಥ ಸುಸಂಸ್ಕೃತ ಜೀವಿಗಳ ಮಧ್ಯದಲ್ಲಿ ನಿಂತ ಕವಿ ರನ್ನನಿಗೆ ಎಂತಹ ಉತ್ತಮ ಸಂಸ್ಕಾರ ದೊರೆತಿರಬೇಕೆಂಬುದರ ಕಲ್ಪನೆ ಯನ್ನು ಬೇರೆ ವಿವರಿಸಬೇಕಿಲ್ಲ. ಕವಿ ರನ್ನನಿಗೆ ಅರಸೊತ್ತಿಗೆಯ ಆಸ್ಥಾನದಲ್ಲಿ ದೊರೆತ ಸಾಂಸ್ಕೃತಿಕ ಪರಿಸರದ ದ್ಯೋತಕವಿದಾಗಿದೆ.

ಬಹುಶಃ ಅತ್ತಿಮಬ್ಬೆಯ ಪರಿಸರದಿಂದ ರನ್ನನು ಚಾಳುಕ್ಯ ಚಕ್ರವರ್ತಿಯ ಆಸ್ಥಾನಕ್ಕೆ ಹೋಗಿರಬೇಕು. ಅಲ್ಲಿ ಇರಿವಿಬೆಡಂಗ ಸತ್ಯಾಶ್ರಯನ ಶೌರ್ಯದ ಕಾರ್ಯಗಳನ್ನು ಮೆಚ್ಚಿಕೊಂಡ ಕವಿ ರನ್ನನು ಆತನನ್ನು ಭೀಮನೊಡನೆ ಹೋಲಿಸಿ ತನ್ನ ಸಾಹಸ ಭೀಮ ವಿಜಯ ಗ್ರಂಥವನ್ನು ಬರೆದು "ಪಡೆಯೆಡೆಯ ಕಡೆಯ ಬಡವರ್ ಕುಡೆ ಪಡೆದನೊ ? ಚಕ್ರವರ್ತಿಯೊಳ್ ತೈಲಪನೊಳ್ ಪಡೆದಂ ಮಹಿಮೋನ್ನತಿಯಂ ಪಡೆದಂ ಕವಿ ಚಕ್ರವರ್ತಿವೆಸರಂ ರನ್ನಂ" ಎಂದು ರನ್ನನು ಹೇಳುವ ಈ ಪದ್ಯದಿಂದ ಚಕ್ರವರ್ತಿ ಬಿರುದು ಆತನಿಗೆ ದೊರೆಯಿತೆಂದು ತಿಳಿಯುತ್ತದೆ.

ಕವಿ ಚಕ್ರವರ್ತಿಯಾಗಿ ಚಾಳುಕ್ಯರ ಆಸ್ಥಾನದಲ್ಲಿದ್ದ ಕವಿ ರನ್ನನು ವೈಯಕ್ತಿಕ ಜೀವನದಲ್ಲಿಯೂ ಸುಖವಾಗಿ ಇದ್ದನೆಂದು ಕಾಣುತ್ತದೆ. ಆತನೇ ಹೇಳುವಂತೆ— "ಸಂತತ ದೇವಭಕ್ತಿ ಪತಿಭಕ್ತಿ ಗುಣಂಗಳ ಭೂಷಣಂಗಳಿರ್ಪಂತೆ ಎಸೆದಿರ್ಪಿನಂ ತನಗೆ ಧರ್ಮ ಕುಲೋಚಿತ ಶುದ್ಧ ವೃತ್ತಿಯಿಂ ಕಾಂತೆಯರ್ ಒಳ್ಗುಣಂ ಬಡೆದ ಧರ್ಮದ ಪೆರ್ಮೆಗೆ ನೋಂತ ಜಕ್ಕಿಯುಂ ಶಾಂತಿಯುಂ ಎಂಬಿರ್ವರೆ ಕುಲಾಂಗನೆಯರ್ ಕವಿ ಚಕ್ರವರ್ತಿಯಾ". ರನ್ನನಿಗೆ ಧರ್ಮ ಪರಾಯಣೆಯರು, ದೇವಭಕ್ತಿ ಪತಿಭಕ್ತಿ ಪರಾಯಣರಾದ ಜಕ್ಕಿ ಹಾಗೂ ಶಾಂತಿ ಎಂಬ ಇಬ್ಬರು ಹೆಂಡರಿದ್ದರು. 'ರಾಯ' ನೆಂಬ ಮಗನೂ ಅತ್ತಿಮಬ್ಬೆ ಎಂಬ ಮಗಳೂ ಇದ್ದರೆಂದು ತಿಳಿಯುತ್ತದೆ. "ಹೊತ್ತಿಗಾದವರನ್ನು ಸಂಪತ್ತಿನಲ್ಲಿ ನೆನೆ" ಹಾಗೂ ಅವರ ಉಪಕಾರ "ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ಹೆಸರಿಟ್ಟರೂ ತೀರದು", ಎಂಬ ನಾಣ್ಣುಡಿಗಳ ಹಿನ್ನೆಲೆಯಲ್ಲಿ ಕವಿ ರನ್ನನು ತನ್ನ ಮಕ್ಕಳಿಗೆ 'ರಾಯ' ಅರ್ಥಾತ್ "ಚಾವುಂಡರಾಯ" ನೆಂದೂ, ಮಗಳಿಗೆ "ಅತ್ತಿಮಬ್ಬೆ" ಎಂದೂ ಹೆಸರಿಟ್ಟಿರುವದನ್ನು ಗಮನಿಸಿದಾಗ ರನ್ನನ ಮನಸ್ಸಿನ ಸಂಸ್ಕೃತಿಯ ಮಟ್ಟದ ಅರಿವಾಗದಿರದು.

ಸಾಮಾನ್ಯ ಬಳೆಗಾರರ ಮನೆಯಲ್ಲಿಯೇ ಹುಟ್ಟಿ, ಘನ ವಿದ್ವಾಂಸನಾಗಿ ಕವಿ ಚಕ್ರವರ್ತಿ ಬಿರುದನ್ನು ಪಡೆದು, ಸುಖ ಸಂಸಾರ ನಡೆಸುತ್ತಿದ್ದ ರನ್ನನಿಗೆ, ಅಹಂಕಾರವು ಆವರಿಸಿದ್ದರೆ, ಯಾರೂ ಆಶ್ಚರ್ಯಪಡಬೇಕಾದ ಪ್ರಮೇಯವಿರಬೇಕಾಗಿದ್ದಿಲ್ಲ. ಆದರೆ, ರನ್ನನಿಗೆ ಆ ತರಹದ ಮದಗಳಾವವೂ ಆವರಿಸಿದಂತೆ ಕಂಡು ಬರುವದಿಲ್ಲ. ಆದರೆ ಕವಿ ಬರೆದ "ಆರಾತೀಯ ಕವೀಶ್ವರರಾರುಂ ಮುನ್ನಾರ್ತರಿಲ್ಲ, ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ, ಸಾರಸ್ವತಮೆಸಿಪ ಕವಿತೆಯೊಳ್ ಕವಿ ರತ್ನಂ" ಹಾಗೂ "ರತ್ನ ಪರೀಕ್ಷಕನಾಂ ಕೃತಿ ರತ್ನ ಪರೀಕ್ಷಕನೆನೆಂದು, ಫಣಿಪತಿಯ ಫಣಾರತ್ನಮುಮಂ. ರನ್ನನ ಕೃತಿ ರತ್ನಮುಮಂ ಪೇಳ್ ಪರೀಕ್ಷಿಪಂಗೆಂಟೆರ್ದೆಯೇ" ಎಂದು ಹೇಳಿರುವ ಪದ್ಯಗಳು. ಕವಿಗೆ ವಿದ್ಯಾ ಗರ್ವದ ಬಗೆಗೆ ಇರುವ ದ್ಯೋತಕಗಳಲ್ಲವೇ ಎಂದು ಪ್ರಶ್ನಿಸಬಹುದು. ಆದರೆ ಸಂಸ್ಕೃತ, ಪ್ರಾಕೃತ, ಜೈನ ಹಾಗೂ ಜೈನೇತರ ಮಹಾನ್ ಕವಿಗಳ ಕೃತಿಗಳನ್ನು ಓದಿ, ಅರಗಿಸಿಕೊಂಡು ಕನ್ನಡ ಭಾಷೆಯ ಸತ್ವ ಎಷ್ಟು ಮಹತ್ತರವಾಗಿದೆ ಎಂಬುದನ್ನು ಸಾರಸ್ವತ ಪ್ರಪಂಚಕ್ಕೆ, "ಗದಾಯುದ್ಧ" ಕೃತಿಯ ಮೂಲಕ

ತೋರಿಸಿದ ಕವಿ ರನ್ನನ ಈ ಮಾತುಗಳು, ಆತನ ವಿದ್ವತ್ತಿಗೆ, ಅಭಿಮಾನಕ್ಕೆ ಕುರುಹು ಗಳೇ ಹೊರತು, ಅಹಂಕಾರಕ್ಕಾಗಿ ಅಲ್ಲ. ಒಂದು ವೇಳೆ ಕವಿ ರನ್ನನು ಅಹಂಕಾರಿ ಯಾಗಿದ್ದರೆ ತನ್ನ ಗ್ರಂಥಗಳನ್ನು ಅನ್ಯರಿಗೆ ತೋರಿಸಿ, ತಿದ್ದಿಸಿಕೊಳ್ಳುವ ಹವ್ಯಾಸಕ್ಕೆ ಬೀಳುತ್ತಿರಲಿಲ್ಲ. ಆದರೆ ಕವಿ ರನ್ನನೇ "ವನರುಹಭವನೆನಿಸಿದ ದಂಡನಾಯಕಂ ಕೇಶಿತಿರ್ದೆ ಬೆಟ್ಟಿಂ, ಕವಿ ರನ್ನನ ಪೇಟ್ಟಿ ಕೃತಿ ಯಶಶ್ರೀವನಿತೆಗೆ ಅಲಂಕೃತಿಯೆನಿಪ್ಪದು ಒಂದು ಅಚ್ಚರಿಯೇ" ಎಂದು ಹೇಳುವ ಈ ಪದ್ಯದಿಂದ ಕೇಶಿಯ ವಿದ್ವತ್ತೆಯನ್ನೂ ಹಾಗೂ ಆತನು ತಿದ್ದಿದ, ತನ್ನ ಕೃತಿ ಯಶಸ್ಸನ್ನು ಪಡೆಯುತ್ತದೆಂದೂ ಹೇಳುವದನ್ನು ಗಮನಿಸಿದಾಗ, ಕವಿ ರನ್ನನ ಗುಣಗ್ರಾಹಿತ್ವ ಹಾಗೂ ವಿನಯ ಸಂಪನ್ನತೆ ವ್ಯಕ್ತವಾಗು ತ್ತವಲ್ಲವೇ ? ವಿದ್ಯೆಗೆ ವಿನಯವಿರುವದೇ ಸಂಸ್ಕೃತಿ. ತನ್ನ ತಂದೆ ತಾಯಿ, ಗುರು, ಸ್ನೇಹಿತ, ಪೋಷಕ ಚಾವುಂಡರಾಯ, ಅತ್ತಿಮಬ್ಬೆಯರಂತಹ ಪುಣ್ಯ ಜೀವಿಗಳ ಸಂಪರ್ಕ ಮೊದಲಾದ ಸಾಂಸ್ಕೃತಿಕ ಪರಿಸರಗಳಲ್ಲಿ ಬೆಳೆದ ಆತ್ಮ ಒರೆಗೆ ಹಚ್ಚಿದ ಬಂಗಾರದಂತೆ ಮಿನುಗುತ್ತದೆಯೆ ಹೊರತು. ಮಾಸುವದಿಲ್ಲ. ಇಂತಹ ಉತ್ತಮ ಸಾಂಸ್ಕೃತಿಕ ಪರಿಸರದಲ್ಲಿ ಬೆಳೆದ ರನ್ನನು ಕನ್ನಡ ಸಾಹಿತ್ಯಕ್ಕೆ ಅಮೂಲ್ಯವಾದ ಕೃತಿಗಳನ್ನು ಅರ್ಪಿಸಿ ಕೃತಕೃತ್ಯನಾಗಿದ್ದಾನೆ.

ಸಾಹಿತ್ಯಿಕ ಪರಿಸರದಲ್ಲಿ ರನ್ನ

ಕಮಲಾ ಹಂಪನಾ

(ಕವಿಯ ಕಾಲ, ಜೀವನ ಇತ್ಯಾದಿ ಚರ್ವಿತ ಚರ್ವಣ ಸಂಗತಿಗಳನ್ನು ಇಲ್ಲಿ ಮತ್ತೆ ನಿರೂಪಿಸ ತೊಡಗದೆ ನೇರವಾಗಿ ಸಾಹಿತ್ಯ ಪರಿಸರದಲ್ಲಿ ರನ್ನ ಏಕೆ ಮಹತ್ವದ ಕವಿಯಾಗಿದ್ದನೆಂಬುದನ್ನಷ್ಟೇ ಹರಳು ಗೊಳಿಸಿ ಈ ಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.)

ಸಾಹಿತ್ಯ ಪರಿಸರದಲ್ಲಿ ರನ್ನನನ್ನು ಇಟ್ಟು ತೂರುವಾಗ ಅವನ ಇನ್ನೆರಡು ಕಾವ್ಯಗಳಾದ ಚಕ್ರೇಶ್ವರ ಚರಿತೆ ಮತ್ತು ಪರಶುರಾಮ ಚರಿತೆ ಉಪಲಬ್ಧವಾಗಿಲ್ಲವೆಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅವುಗಳ ಅನುಪಲಬ್ಧ ಸ್ಥಿತಿಯಲ್ಲಿ ಅಲ್ಲಿನ ವಸ್ತು ಏನಿದ್ದಿರಬಹುದೆಂಬ ಊಹೆಯನ್ನು ವಿಸ್ತರಿಸುವುದು ಅಪಾಯ. ಅದರಿಂದ ಈಗ ದೊರೆತಿರುವ ಅವನ ಎರಡು ಕಾವ್ಯಗಳನ್ನು ಅನುಸಂಧಾನ ಮಾಡಿ ಪರಿಶೀಲನೆಗೆ ತೊಡಗ ಬೇಕಾಗುತ್ತದೆ. ಲಕ್ಕುಂಡಿ ಶಾಸನವನ್ನು ಪ್ರತ್ಯೇಕವಾಗಿ ಪರಿಗಣಿಸುವ ಅಗತ್ಯವಿಲ್ಲ; ಕಾರಣ ಅಜಿತ ಪುರಾಣದ ಕಾವ್ಯ ಭಾಗವೇ ಬಹುಮಟ್ಟಿಗೆ ಅಲ್ಲಿ ಶಾಸನವಾಗಿ ಮೂಡಿದೆ.

ಅರೆಬರೆಯಾಗಿ ದೊರೆತಿರುವ ರನ್ನಕಂದ ನಿಘಂಟನ್ನು ಪಕ್ಕಕ್ಕೆ ಸರಿಸಿದರೂ ಅದರಿಂದ ರನ್ನನನ್ನು ಕುರಿತು ಮಾಡುವ ಸಾಹಿತ್ಯ ವಿವೇಚನೆಗೆ ಯಾವ ಬಾಧಕವೂ ಇಲ್ಲ. ಈಗ ತಿಳಿದು ಬಂದಿರುವಂತೆ ರನ್ನ ಮೊದಲು ಅಜಿತ ಪುರಾಣವನ್ನೂ (೯೯೩) ಆ ಮೇಲೆ ಸಾಹಸ ಭೀಮ ವಿಜಯ ಕಾವ್ಯವನ್ನೂ (೧೦೦೫) ರಚಿಸಿದ್ದಾನೆ. ಇದರ ತದ್ವಿರುದ್ಧವೆಂಬಂತೆ ಜನ್ನಕವಿ ಮೊದಲು ಯಶೋಧರ ಚರಿತೆಯನ್ನೂ (೧೨೦೯) ಅನಂತರ ವಾರ್ಧಕ್ಯದಲ್ಲಿ ಅನಂತನಾಥ ಪುರಾಣ ಕಾವ್ಯವನ್ನೂ (೧೨೩೦) ರಚಿಸಿದ್ದಾನೆ. ಆದ್ದರಿಂದ ಕೇವಲ ವಯಸ್ಸೊಂದೇ ಕಾವ್ಯ ವಸ್ತುವಿನ ಆಯ್ಕೆಗೆ ಮತ್ತು ಕಾವ್ಯ ಯಶಸ್ಸಿಗೆ ನಿರ್ಧಾರಕ ಅಂಶ ಅಲ್ಲ. ಕವಿಯ ಒಟ್ಟು ಮನೋಧರ್ಮ, ಕಾವ್ಯ ರಚನೆಯ ಸಂದರ್ಭ ಮತ್ತು ಪರಿಸರ, ಕಾವ್ಯ ರಚನೆಗೆ ಇದ್ದ ಅನಿವಾರ್ಯತೆ—ಇವು ಸಾಹಿತ್ಯ ವಿಮರ್ಶೆಯಲ್ಲಿ ಮುಖ್ಯವಾಗುತ್ತವೆ. ಇದೇ ರೀತಿ ರನ್ನನ ವಂಶದವರ ವೃತ್ತಿ ಉಪಜಾತಿ ಮೊದಲಾದ ಮಾಹಿತಿಗಳನ್ನೂ ಕೇವಲ ಆನುಷಂಗಿಕ ಎಂದು ಪರಿಣಿಸಿ ನನ್ನ ಈ ಪ್ರಬಂಧದಲ್ಲಿ ಕವಿಯ ಪ್ರವೃತ್ತಿ, ಪ್ರತಿಭೆ, ಸ್ಫೂರ್ತಿ, ಕಾಣಿಕೆ ಇವನ್ನು ಮಾತ್ರ ಪ್ರಧಾನವಾಗಿ ಗಣಿಸಿದ್ದೇನೆ.

ಈಗಿನ ವಿಜಾಪುರ ಜಿಲ್ಲೆಯ ಮುಧೋಳವನ್ನಾಗಲಿ, ಜಮಖಂಡಿಯನ್ನಾಗಲಿ ನೋಡಿದರೆ ಕನ್ನಡ ಭಾಷೆ ಒಂದು ಕಾಲಕ್ಕೆ ಅಲ್ಲಿ ಉತ್ತುಂಗ ಶಿಖರ ಮುಟ್ಟಿತ್ತೆ. ರನ್ನನಂತಹ ಹಿರಿಯ ಕವಿ ಅಲ್ಲಿಂದ ಬಂದನೆ ಎಂಬ ಸಂದೇಹ ಸುಳಿಯಬಹುದು. ಆದರೆ ಪ್ರತಿಭಾಶಾಲಿಯಾದ ವ್ಯಕ್ತಿ ಎಲ್ಲಿಂದ ಬಂದನು ಎಂಬುದನ್ನು ಹಿನ್ನೆಲೆಗೆ ಸರಿಸಿ ಅವನು ಮುಂದೆ ಏನಾದ ಎಂಬುದನ್ನು ನೋಡಬೇಕಾಗುತ್ತದೆ. ಅಲ್ಲದೆ ಒಂದು ಸಾವಿರ ವರ್ಷದ ಹಿಂದೆ ಜಮಖಂಡಿಯ ಸುತ್ತಮುತ್ತಲ ಪ್ರದೇಶ ತಿರುಳುಗನ್ನಡದ ಸೀಮೆಯಾಗಿತ್ತು ಎಂಬುದನ್ನು ಕನ್ನಡ ನಾಡಿನ ಚರಿತ್ರೆ ತಿಳಿಸಿಕೊಡುತ್ತದೆ.

ರನ್ನಕವಿ ಮಹಾ ಭಾಗ್ಯಶಾಲಿ. ಮಹಾಕವಿ ಪಂಪನಿಗೆ ಇಲ್ಲದ ಕವಿಚಕ್ರವರ್ತಿ ಪದವಿ ಇವನಿಗೆ ಲಭಿಸಿತ್ತು. ಲೌಕಿಕ ಭಾಗ್ಯ, ಕಾವ್ಯ ಸಂಪತ್ತು ಎರಡೂ ಇವನಿಗೆ ದಕ್ಕಿತ್ತು. ಇವನ ಬೆನ್ನಿಗೆ ಪಂಪ, ಪೊನ್ನರ ಸಾಹಿತ್ಯ ರಕ್ಷೆ ಇತ್ತು. ಅವರಿಬ್ಬರ ಬೆಳಕಿನಲ್ಲಿ ಆತ ಕಾವ್ಯಪಥವನ್ನು ಕಂಡುಕೊಂಡಿದ್ದಾನೆ. ಜೊತೆಗೆ ಅತ್ತಿಮಬ್ಬೆ. ಮಲ್ಲಪ, ದಲ್ಲಪ, ಚಾವುಂಡರಾಯ ಮೊದಲಾದ ಸಮಾಜದ ಪ್ರತಿಷ್ಠಿತರ ವಾತ್ಸಲ್ಯ ರನ್ನನಿಗೆ ದೊರಕಿತ್ತು. ಸಾಮಂತರಿನ್ ಇನಿಸು ಉದಿತೋದಿತನಾಗಿ ತೈಲಪ ಮತ್ತು ಸತ್ಯಾಶ್ರಯರ ರಾಜಾಶ್ರಯ, ಅಜಿತಸೇನಾಚಾರ್ಯರ ಮತ್ತು ನೇಮಿಚಂದ್ರ ಸಿದ್ಧಾಂತಾಚಾರ್ಯರ ಧರ್ಮರಕ್ಷೆ ರನ್ನನ ಮೇಲೆ ಅಭಿಷೇಕವಾಗಿತ್ತು. ಹೀಗೆ ಸಮಕಾಲೀನ ಸುಖ ಸವಲತ್ತುಗಳೆಲ್ಲಾ ರನ್ನನಿಗೆ ನಡೆಮಡಿ ಹಾಸಿತ್ತು.

೧೦ ನೇ ಶತಮಾನ ಜೈನಧರ್ಮದ ಉಚ್ಛ್ರಾಯ ಕಾಲ. ಚಾಲುಕ್ಯ ಚಕ್ರವರ್ತಿಗಳಿಂದ ರನ್ನನಿಗೆ 'ಕವಿ ಚಕ್ರವರ್ತಿ' ಎಂಬ ಬಿರುದು; 'ಶಮದನಾವತಾರ' ಎಂಬ ಮರ್ಯಾದೆ, ಚಿನ್ನದ ಕೋಲುಳ್ಳ ಚಾಮರ, ಆನೆ, ಉತ್ತುಂಗ ಛತ್ರಗಾವೆ—ರನ್ನನಿಗೆ ಸಂದ ಈ ಎಲ್ಲಾ ಪ್ರಶಸ್ತಿಗಳು ಅವನ ಹೆಗ್ಗಳಿಕೆಯನ್ನು ಸಾರಿ ಹೇಳುತ್ತದೆ. ತನಗೆ ಉಪಕಾರ ಮಾಡಿದವರ ಋಣವನ್ನು ರನ್ನ ಸ್ವಲ್ಪವೂ ಮರೆತಿಲ್ಲ. ಕೃತಜ್ಞತೆ ಅವನ ಉಸಿರು. ತನಗೆ ಆಶ್ರಯ ಕೊಟ್ಟು 'ಅಜಿತಪುರಾಣ' ಕಾವ್ಯ ರಚನೆಗೆ ಇಂಬಾದ ದಾನಚಿಂತಾಮಣಿ ಅತ್ತಿಮಬ್ಬೆಯ ಹೆಸರನ್ನು ತನ್ನ ಮಗಳಿಗೆ ಇಟ್ಟಿದ್ದಾನೆ. ತನ್ನ ಎಲ್ಲಾ ಅಭ್ಯುದಯಕ್ಕೂ ನೂಕುವ ಪ್ರೇರಣೆಯಾಗಿ ಸ್ನೇಹಭಾಗ್ಯವನ್ನು ಹಂಚಿಕೊಂಡ ವೀರಮಾರ್ತಾಂಡ ಚಾವುಂಡರಾಯನ ಹೆಸರನ್ನು ತನ್ನ ಮಗನಿಗೆ ಇಟ್ಟಿದ್ದಾನೆ. ರಾಜ ಪುರಸ್ಕಾರ ನೀಡಿ, ಅನೇಕ ಬಿರುದುಬಾವಲಿಗಳನ್ನು ಇತ್ತು ಸನ್ಮಾನಿಸಿದ ಚಾಲುಕ್ಯ ಚಕ್ರವರ್ತಿ ಸತ್ಯಾಶ್ರಯ ಇರಿವ ಬೆಡಂಗನನ್ನು ಮಹಾಭಾರತದ ಭೀಮಸೇನನೊಡನೆ ಅಭೇದ ಕಲ್ಪಿಸಿ 'ಸಾಹಸಭೀಮವಿಜಯ' ಎಂಬ ಕಾವ್ಯವನ್ನು ರಚಿಸಿ ದೊರೆಯನ್ನು ಅಮರಗೊಳಿಸಿದ್ದಾನೆ.

ಆದರೂ ರನ್ನನ ಅಂತರಂಗವನ್ನು ಅತ್ತಿಮಬ್ಬೆಯ ಘನ ವ್ಯಕ್ತಿತ್ವ ಆರ್ದ್ರಗೊಳಿಸಿತ್ತು. ಅವಳ ಬಾಳಿನ ಏಳುಬೀಳುಗಳಿಗೆಲ್ಲಾ ರನ್ನಕವಿ ಸಾಕ್ಷಿಯಾಗಿದ್ದಾನೆ. ಇಡೀ ಮಹಾಭಾರತದ ಘಟನೆಗಳನ್ನು ಸಾಕ್ಷಿಪ್ರಜ್ಞೆಯಾಗಿ ವ್ಯಾಸಮಹರ್ಷಿಗಳು ನಿಂತು

ನೋಡಿದಂತೆ ರನ್ನ ಅತ್ತಿಮಬ್ಬೆಯ ಒಟ್ಟು ಜೀವನವನ್ನು ಕಣ್ಣುಬಿಟ್ಟು ನೋಡಿದ್ದಾನೆ. ಆಕೆಯ ಉತ್ಕರ್ಷ ಅಪಕರ್ಷಗಳನ್ನು ನೋಡಿದಂತೆಲ್ಲಾ ಜೈನಧರ್ಮದ ಸಿದ್ಧಾಂತ ಇವನಿಗೆ ನಿಚ್ಚಳವಾಗತೊಡಗಿದೆ. ತತ್ಪರಿಣಾಮವಾಗಿ ಆಕೆಯ ವೈಧವ್ಯದ ದಾರುಣತೆ ದುಃಖಗೀತೆಯಾಗಿ ಮಿಡಿಯಿತು. ಅತ್ತಿಮಬ್ಬೆಯ ಉನ್ನತ ವ್ಯಕ್ತಿತ್ವ, ಉಜ್ವಲ ಚಾರಿತ್ರ್ಯ, ಉಪಮಾತೀತ ಔದಾರ್ಯ, ಎಣೆಯಿಲ್ಲದ ಭಕ್ತಿ, ಶುದ್ಧಶುಚಿ ಜೀವನದ ಧವಳತೆ— ಇವೆಲ್ಲಾ ಆ ಕಾಲದ ಕನ್ನಡ ನಾಡಿನ ಮನೆಮಾತಾಗಿರಬಹುದು. ರನ್ನನಿಗಂತೂ ಇದಿಷ್ಟೂ ಅಂಗೈಮೇಲಣ ನೆಲ್ಲಿಕಾಯಿ. ಅಜಿತಪುರಾಣದ ಆರಂಭ ಮತ್ತು ಕಡೆಯಲ್ಲಿ ಅತ್ತಿಮಬ್ಬೆಯನ್ನು ಕುರಿತು ಬರುವ ಪದ್ಯಗಳು, ಅಜಿತತೀರ್ಥಂಕರ ಮೂರ್ತಿ ಇರುವ ಕಾವ್ಯ ಚೈತ್ಯಾಲಯದ ಇಕ್ಕೆಲಗಳಲ್ಲಿ ನಂದಾದೀವಿಯನ್ನು ಬೆಳಗಿಸಿದಂತಾಗಿದೆ. ಅಜಿತತೀರ್ಥಂಕರನ ಚರಿತೆಯಲ್ಲಿ ಅಪೂರ್ವವೆಂದೆನಿಸುವ ಮಹತ್ವದ ಭಾಗ ಸ್ವಲ್ಪವೇ. ಎಲ್ಲ ತೀರ್ಥಂಕರರ ಚರಿತೆಯಲ್ಲಿ ಬರುವ ಮಾಮೂಲಿ ಧಾರ್ಮಿಕ ವಸ್ತು ಇಲ್ಲಿಯೂ ಇದೆ. ಆದರೆ ಈ ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು ಕೊಡುವಂತೆ ರನ್ನ ಅತ್ತಿಮಬ್ಬೆಯ ಬಾಳ್ಗಬ್ಬವನ್ನು ಬರೆದಿದ್ದಾನೆ. ವಿದ್ವಾಂಸರೂ ವಿಮರ್ಶಕರೂ ಉದಾಹರಿಸಿದ್ದರೂ ಚಾರಿತ್ರಿಕ ಮಹತ್ವ ಪಡೆದು ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಶಿಖರಸ್ಥಿತಿಗೆ ಕೊಂಡೊಯ್ಯುವ ಈ ಪದ್ಯವನ್ನು ಹೇಳದಿರುವುದು ಹೇಗೆ ?

ಬಿಳಿಯುರಳೆಯಂತೆ ಗಂಗಾ
ಜಳದಂತೆಸೆವಜಿತಸೇನ ಮುನಿಪತಿಯ ಗುಣಾ
ವಳಿಯಂತೆ ನೆಗಟ್ದ ಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ ॥ ೧೨-೬

ಅಲ್ಲದೆ "ಮೊಲೆವೆತ್ತ ತೈಲ ಜನನಿಯ ಕೆಲದೊಳ್ ರಂಜಿಪರೆ ಮಿಸೆವೊತ್ತಣ್ಣಂಗಳ್" ಎಂಬ ಮಾತಿನ ತೇಜಸ್ಸು, ತೀವ್ರತೆ ರನ್ನನಿಗೇ ಸಾಧ್ಯವಾದ ಕಾವ್ಯಶಕ್ತಿ.

ಪಂಪ ಅರಿಕೇಸರಿಯನ್ನು ಕುರಿತು ಬರೆದಿರುವುದು, ಪೊನ್ನ ತನ್ನ ಆರಾಧ್ಯ ಆಚಾರ್ಯರಾದ ಜಿನಚಂದ್ರಾಚಾರ್ಯರನ್ನು ವರ್ಣಿಸಿರುವುದೂ ಹಾಗೆಯೇ ಇನ್ನೂ ಕೆಲವರು ತಮ್ಮ ಆಶ್ರಯದಾತರನ್ನು ಕುರಿತು ಹಾಡಿರುವುದು. ರನ್ನ ಅತ್ತಿಮಬ್ಬೆಯನ್ನು ಕುರಿತು ಬರೆದ ಭಾಗದ ಮುಂದೆ ಪೇಲವವಾಗಿಬಿಟ್ಟಿದೆ. ಇದೇ ಸಂದರ್ಭದಲ್ಲಿ ಅತ್ತಿಮಬ್ಬೆಯ ತಂಗಿ ಗುಂಡಮಬ್ಬೆ ತನ್ನ ಪತಿಯೊಡನೆ ಸಹಗಮನ ಮಾಡಿದ ದಾಖಲೆಯನ್ನು ರನ್ನ ಕೊಡದಿದ್ದರೆ ಇಂದಿಗೂ ಅದು ನಮಗೆ ತಿಳಿಯುತ್ತಿರಲಿಲ್ಲ.

ರನ್ನ ಅಳವಡಿಸಿಕೊಂಡಿರುವ ಸಿಂಹಾವಲೋಕನ ಕ್ರಮದಲ್ಲಿರುವ ಹಿನ್ನಲೆ ತಂತ್ರದ ಸ್ವಾರಸ್ಯ ಕನ್ನಡ ಕಾವ್ಯಾಭ್ಯಾಸಿಗಳ ಮನಸೆಳೆದಿದೆ. ಅದರಂತೆ ಅವನ ಚಿತ್ರಕ ಶಕ್ತಿಗೆ, ನಾಟಕ ಪ್ರತಿಭೆಗೆ ಸಾಕ್ಷಿ ಹೇಳುವ ಒಂದೊಂದು ಪದ್ಯಗಳನ್ನು ಉದಾಹರಿಸಬಹುದು.

೧) ಬೆಳುದಿಂಗಳನ್ನು ಕುರಿತು ಹಾಡದ ಕವಿ ಯಾರುಂಟು ? ಆದರೆ ರನ್ನನ ಈ ಪದ್ಯ ಅವುಗಳಲ್ಲಿ ಮುಡಿಯ ಮಾಣಿಕ್ಯ–

ಬೆಲಗಸೆ ತೀವಿಕೊಂಡು ಕುಡಿಯುಲೆ ಮೊಗೆಯಲೆ
ಕೊಡಗೊಂಡು ತಿರ್ದಿ ಬ
ಜ್ಜಲನೆಲೆದೋಂಟದೊಳ್ ಪರಿಯಿಸಲ್ ಪಟುಗೋಲ್ಗನಿಕ್ಕಿ
ಪಾಯಿಸಲ್
ನೆಲೆಯಿನಿಸೆಂದು ನೋಡಲೊಳಪೊಕ್ಕು ಧುಡಿಮ್ಮಿಲಿದಾಡಲೀಸಲ
ಗ್ಗಲಿಸಿದಲಂಪಿನಿಂ ಬಗೆದುದಂದು ಜನಂ ಘನಚಂದ್ರಿಕಾಂಬುವಂ॥ ೬–೪೫

೨) ಆವನ ನಾಟಕೀಯ ಗುಣವನ್ನು ವ್ಯಂಜಿಸುವ ಪದ್ಯಗಳು ಗದಾಯುದ್ಧದಲ್ಲಿ ಎಲ್ಲಿ ಮುಟ್ಟಿದರಲ್ಲಿ ಸಿಗುತ್ತವೆ. ಅಜಿತಪುರಾಣದಲ್ಲೂ ಇಂಥ ಪದ್ಯಗಳು ಸಾಕಷ್ಟಿವೆ. ಪ್ರಕೃತಿಯ ಚಿರಚಲನೆಯಲ್ಲಿ ಕವಿ ಕಾಣುವ ಆತ್ಮೀಯತೆಯನ್ನೂ ಎತ್ತಿ ಹೇಳುವ ಈ ಪದ್ಯ ರಸಿಕರ ಪರಿಭಾವನೆಗೆ ಅರ್ಹವಾಗಿದೆ–

ಬಂದಿರೆ ಮಾಮರಂಗಳಿರ ಮಲ್ಲಿಗೆ ಬಂದಿರೆ ಕೋಕಿಲಾಳಿನೀ
ವೈಂದಮೆ ಬನ್ನಿ ಮಿತ್ತ ಶುಕನೀಂ ಸೋಕಮೋ
ರಜನೀಂದ್ರಚಂದ್ರ ಸೈ
ಪಿಂಗಮೆ ಬಂದಿರೇ ಕುಶಲವೋ ನಿಮಗೆಂದು
ಮಧುಪ್ರವೇಶದೊಳ್
ಬಂದು ಮನೋಜನೇನ ನಿತುಮುಂ ಪೆಸಗೊಂಡನೊ
ಕೂಡಿಕೊಂಡನೋ ॥ ೬–೧೪

ರನ್ನ ಕಾವ್ಯ ವಸ್ತುಗಳನ್ನು ಆರಿಸಿಕೊಳ್ಳುವುದರಲ್ಲಿ ವಿಸ್ತಾರಕ್ಕಿಂತ ಸಂಕ್ಷಿಪ್ತದಲ್ಲಿ ಆಸಕ್ತ. ಸ್ಥೂಲ ಚಿತ್ರ ಬಿಡಿಸುವುದರಲ್ಲಿ ವಿರಮಿಸದೆ ಸೂಕ್ಷ್ಮ ಕುಸುರಿ ಕೆಲಸದಲ್ಲಿ ಕ್ರಿಯಾಶೀಲನಾಗುತ್ತಾನೆ. ಮನುಷ್ಯ ಸ್ವಭಾವದ ಸಂಕೀರ್ಣತೆಯನ್ನು ವಿಶ್ಲೇಷಿಸುವುದರಲ್ಲಿ, ದ್ವಂದ್ವಗಳನ್ನು ಧ್ವನಿಸುವುದರಲ್ಲಿ ಕೈಚಳಕ ತೋರಿಸುತ್ತಾನೆ. ದುರ್ಯೋಧನನಲ್ಲಿಯ ಮಾನಸಿಕ ತುಮುಲ, ತುಯ್ದಾಟವನ್ನು ಕಾವ್ಯದುದ್ದಕ್ಕೂ ತೋರಿಸಿದ್ದಾನೆ. ಅವನ ಮನಸ್ಸಿನ ಆಳಕ್ಕಿಳಿದು ಕವಿ ಮಾತನಾಡುತ್ತಾನೆ. ದುರ್ಯೋಧನ ಅಶ್ವತ್ಥಾಮನನ್ನು ಒಮ್ಮೆ ಹಂಗಿಸುತ್ತಾನೆ. ಇನ್ನೊಮ್ಮೆ ಹೊಗಳುತ್ತಾನೆ. ಇದೆಲ್ಲಾ ಸೋಲಿನ ಅಂಚಿನಲ್ಲಿರುವಾತನ ಸಹಜ ಚಡಪಡಿಕೆಯೆನಿಸುತ್ತದೆ. ವಿಕ್ಕೇ ತೋಚದ ಹತಾಶ

ಸ್ಥಿತಿಯಲ್ಲಿ ಪ್ರತಿಯೊಬ್ಬನೂ ಸಿಡುಕು, ಉದಾರತೆ, ಅಸಂಬದ್ಧತೆ, ಅಲಾಪ ಮೊದಲಾದ ಸಂಚಾರಿಭಾವಗಳಿಗೆ ವಶನಾಗುವುದು ಸಹಜ. ದೊರೆಯಾಗಲಿ, ದಾಸನಾಗಲಿ, ಯಾರೂ ಇದಕ್ಕೆ ಹೊರತಲ್ಲ. ರನ್ನ ದುರ್ಯೋಧನನಲ್ಲಿ ತೋರಿಸಿರುವುದು ಇದನ್ನೇ. ಇದು ರನ್ನನ ವೈಶಿಷ್ಟ್ಯಗಳಲ್ಲೊಂದು. ವ್ಯಾಸಭಾರತ, ಪಂಪಭಾರತ ಮತ್ತು ಗದಾಯುದ್ಧ ಇಲ್ಲೆಲ್ಲ ಬರುವ ದುರ್ಯೋಧನ ಒಬ್ಬನೇ ಆದರೂ ಸ್ವಭಾವ ಚಿತ್ರಣದ ಸೂಕ್ಷ್ಮ ಗ್ರಹಿಕೆಯಲ್ಲಿ ಕವಿಯಿಂದ ಕವಿಗೆ ವ್ಯತ್ಯಾಸಗಳಿವೆ.

ಇದೇ ಮಾತನ್ನು ಭೀಮನ ವ್ಯಕ್ತಿತ್ವ ದರ್ಶನದಲ್ಲೂ ಹೇಳಬೇಕಾಗುತ್ತದೆ. ಇಲ್ಲಿ ಬರುವ ರನ್ನ ಕಡೆದ ಭೀಮ ರಾಜಸಗುಣಾಧಿಕ್ಯದಿಂದ ಒರಟರ ಮಲ್ಲನಾಗಿ ಪ್ರತೀಕಾರ ತೀರಿಸಿಕೊಳ್ಳುವ ಹವಣಿಕೆಯವನು. ಉದ್ದಾಮ–ಪ್ರೋದ್ದಾಮ ಭೀಮನಾದರೂ ಸೇಡಿನ ಸೆಳೆತಕ್ಕೆ ಒಳಗಾಗಿ ವಿವೇಕವನ್ನು ಕಳೆದುಕೊಂಡವನು ತೊಡೆ ಮುರಿದು ದುರ್ಯೋಧನನನ್ನು ಸೋಲಿಸಿದ್ದು ಅವನ ಅಂತರಂಗದ ಅಳದಾಳದಲ್ಲಿ ಸುಳಿಯುವ ಕಿಚ್ಚಿಗೆ ಸಾಲದು. ದುರ್ಯೋಧನನ ಕಿರೀಟವನ್ನು ಕಾಲಿನಿಂದ ಒದೆದಾಗಲೇ ಸಮಾಧಾನ ಈ ರೂಕ್ಷತೆ ಭೀಮನ ವ್ಯಕ್ತಿತ್ವವನ್ನು ಮ್ಲಾನಗೊಳಿಸುತ್ತದೆ. ಭೀಮ ಈ ಕೆಲಸ ಮಾಡದಿದ್ದರೂ ದುರ್ಯೋಧನನ ಅಪಮಾನವೇನೂ ಕಡಿಮೆಯಾಗುತ್ತಿರಲಿಲ್ಲ. ಸ್ವಾಭಿಮಾನಿಯಾದ ದುರ್ಯೋಧನನಿಗೆ ಯುದ್ಧದ ಸೋಲೆ ಸಾಕಲ್ಲವೆ ? ಆದರೆ ಭೀಮ ದುಡುಕಿದ್ದರಿಂದ ಗದಾಯುದ್ಧದಲ್ಲಿ ಗೆದ್ದೂ ಉನ್ನತ ವ್ಯಕ್ತಿತ್ವಕ್ಕೆ ಪರಾಜಯವಾಗುತ್ತದೆ. ದುರ್ಯೋಧನನಿಗೆ ಸಹಜವಾಗಿ ಸಿಗಬೇಕಾದ ಸೋಲು ಪ್ರಾಪ್ತವಾಗಿಯೂ ಈ ಹಿನ್ನೆಲೆಯಲ್ಲಿ ಆತ ಸಹಾನುಭೂತಿಗೆ ಪಾತ್ರನಾಗುತ್ತಾನೆ. ಕಾವ್ಯ ಪಾತ್ರಗಳ ವ್ಯಕ್ತಿತ್ವದ ಉತ್ಕರ್ಷ ಅಪಕರ್ಷಗಳನ್ನು ರನ್ನ ಹೇಗೆ ಪ್ರಭಾವಶಾಲಿಯಾಗಿ ಧ್ವನಿಸುತ್ತಾನೆಂಬುದಕ್ಕೆ ಈ ಜನಪ್ರಿಯ ಕಥಾ ಭಾಗವನ್ನೇ ಉದಾಹರಿಸಿದ್ದಕ್ಕೆ ಕಾರಣ ಇದು ಮೂಲವನ್ನು ಇಕ್ಕಿಮೆಟ್ಟಿ ರನ್ನ ಸ್ವಂತಿಕೆಯನ್ನು ಛಾಪಿಸಿರುವ ಭಾಗವಾಗಿರುವುದು.

ರನ್ನನಿಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉನ್ನತಸ್ಥಾನವನ್ನು ಸಂಪಾದಿಸಿಕೊಟ್ಟ ಮತ್ತೊಂದು ಸಂದರ್ಭವೆಂದರೆ ಅಶ್ವತ್ಥಾಮನು ಲಕ್ಷ್ಮಿಗೆ ಛೀಮಾರಿ ಹಾಕುವ ಪ್ರಸಂಗ. ಗೆದ್ದವರನ್ನು ಸೇರಲು ತನ್ನ ಸಹಜ ಸ್ವಭಾವದಿಂದ ಧಾವಿಸುವ ಲಕ್ಷ್ಮಿಯನ್ನು ಕುರಿತು ಅಶ್ವತ್ಥಾಮ ಹೇಳುವ ಮಾತುಗಳು ಇಂದಿಗೂ ಪ್ರಸ್ತುತವಾಗಿವೆ. ಕೇವಲ ವ್ಯವಸ್ಥೆಯ ಪರವಾಗಿ, ಪ್ರಭು ಸೇವೆಗೇ ಪರಾಕು ಹೇಳಿಕೊಂಡು ಸೋತು ಸುಣ್ಣವಾದವರನ್ನು ಅಧಿಕಾರ ಹೀನರನ್ನೂ ನಿರ್ಲಕ್ಷಿಸಿ ನಡೆಯುವ ಲಕ್ಷ್ಮಿಗೆ ಅಶ್ವತ್ಥಾಮ ರಘುಂಕಿಸಿ ನುಡಿಯುವ ರೀತಿಯಲ್ಲಿ ರನ್ನಕವಿಯೇ ಪ್ರತಿಧ್ವನಿಸುವಷ್ಟು ತೀವ್ರತೆಯಿದೆ. ರನ್ನನ ಬಂಡಾಯ ಪ್ರವೃತ್ತಿಯನ್ನು ಇಲ್ಲಿ ಕಾಣುತ್ತೇವೆ. ಅಧಿಕಾರಾರೂಢರನ್ನು 'ಓಲೈಸಿ ಅನಾಥನಾಗಿ ಬಿದ್ದವನನ್ನು ನಿರ್ಲಕ್ಷಿಸಿ ಹೊರಟ ಲಕ್ಷ್ಮಿಯನ್ನು ತುರುಬುಹಿಡಿದು ಎಳೆತಂದು, ತಾನು ಹಿಂತಿರುಗಿ ಬರುವರೆಗೆ ಸೇವೆ ಸಲ್ಲಿಸುವಂತೆ

ಆಜ್ಞಾಪಿಸಿದ್ದು ಕ್ರಾಂತಿ ಕಾಣುವ ವರ್ತಮಾನದ ವಿಮರ್ಶೆಗೆ ಹೊಸ ಅರ್ಥ, ಹೊಸ ಧ್ವನಿಗಳನ್ನು ಕೊಡುವ ಸ್ವಾರಸ್ಯಕರ ಸಂದರ್ಭವೆನಿಸುತ್ತದೆ. ಇದರ ಉಜ್ವಲತೆಯೆಲ್ಲ ರನ್ನನ ಪ್ರತಿಭೆಯ ಸ್ವಂತ ಆಸ್ತಿ.

ಪಂಪನಿಗೂ ರನ್ನನಿಗೂ ಕೆಲವು ಅನಿರೀಕ್ಷಿತ ಹೊಂದಾಣಿಕೆಗಳಿವೆ. ಪಂಪನ ತಾಯಿ ಅಬ್ಬಣಬ್ಬೆ, ತಮ್ಮ ಜಿನವಲ್ಲಭ; ರನ್ನನ ತಾಯಿ ಅಬ್ಬಲಬ್ಬೆ, ತಂದೆ ಜಿನವಲ್ಲಭೇಂದ್ರ. ಪಂಪ ರನ್ನರಿಬ್ಬರೂ ರಾಜಾಶ್ರಯ ಪಡೆದವರು, ಒಂದೊಂದು ಲೌಕಿಕ ಮತ್ತು ಆಗಮಿಕ ಕಾವ್ಯಗಳನ್ನು ಬರೆದವರು. ರನ್ನ ಒಂದು ಕಡೆ 'ಪಂಪ ಪೊನ್ನ ಮತ್ತು ತಾನು" ಜಿನಸಮಯದೀಪಕರೆಂದೂ, ರತ್ನತ್ರಯರೆಂದೂ ಕರೆದು ಕೊಂಡಿದ್ದಾನೆ, ನಿಜ. ಆದರೂ ಅವನಿಗೆ ಪಂಪನ ಮೇಲೆ ಕಣ್ಣು. ಮನಸ್ಸು.

ಕವಿಗಳೊಳವರಿರ್ವರೆ ಪು
ಣ್ಯವಂತರಿರ್ವರೆ ಕೃತಾರ್ಥರಿರ್ವರೆ ಸೊಬಗರ
ಕವಿತಾಗುಣಾರ್ಣವಂ ಮೇಣ್
ಕವಿರತ್ನಂ ಮೇಣ್ ಗುಣಕ್ಕೆ ಮಚ್ಚರಮುಂಟೆ ।

ಪಂಪ ಮೊದಲನೆಯ ತೀರ್ಥಂಕರನ ಚರಿತೆ ಬರೆದರೆ ಈ ಎರಡನೆಯ ತೀರ್ಥಂಕರನ ಚರಿತೆ ಬರೆದಿದ್ದಾನೆ. ಪಂಪ ಜಿನಸೇನರ ಪೂರ್ವಪುರಾಣದಲ್ಲಿ ಕ್ರೀಡಿಸಿದರೆ ರನ್ನ ಉತ್ತರ ಪುರಾಣಕ್ಕೆ ಬಂದರೂ ಅಲ್ಲಿ ಮೊದಲು ಬರುವ ತೀರ್ಥಂಕರನನ್ನೇ ಎತ್ತಿಕೊಳ್ಳುತ್ತಾನೆ. ಇದು ಏನೊ ಆಕಸ್ಮಿಕವಾಗಿ ಆಗಿರುವ ಆಯ್ಕೆಯಲ್ಲ, ಉದ್ದೇಶ ಪೂರ್ವಕವಾಗಿ ಆಗಿರುವ ಲೆಕ್ಕಾಚಾರ.

ರನ್ನನಿಗೆ ಪಂಪನನ್ನು ಮೀರಿಸುವ ಆಸೆಯಿದೆ. ಅದು ನನಸಾಗದ ಕನಸೆಂದು ನಮಗಿಂತ ಚೆನ್ನಾಗಿ ಅವನಿಗೇ ಗೊತ್ತಿದೆ. ಗುದ್ದಾಡಿದರೂ ಗಂಧದವನ ಬಳಿಯೇ ಲೇಸೆಂಬುದು ರನ್ನನ ತೀರ್ಮಾನ. ಪಂಪನ ಸಮಗ್ರ ಕಾವ್ಯ ಆರಿಸಿಕೊಳ್ಳದೆ ಒಂದು ಆಶ್ವಾಸಕ್ಕಷ್ಟೇ ತನ್ನ ಚೌಕಟ್ಟನ್ನು ರನ್ನ ಮಿತಗೊಳಿಸಿದ್ದಾನೆ. ಆದರೆ ಅಂಗೈ ಅಗಲದ ದಂತದಲ್ಲೇ ನವಿರುಕೆತ್ತನೆ ಮಾಡುವ ಸೂಕ್ಷ್ಮಕಾವ್ಯಕ್ರಿಯೆಯಿಂದ ರನ್ನ ವಿಜೃಂಭಿಸಿದ್ದಾನೆಂಬುದು ಅವನ ಕಾವ್ಯಸಿದ್ಧಿಗೆ ಬರೆದ ಭಾಷ್ಯವಾಗುತ್ತದೆ.

ಪಂಪನಂಥ ಮಹತ್ವದ ಕವಿಯೊಬ್ಬ ಮಹಾಭಾರತ, ಮಹಾಪುರಾಣಗಳನ್ನು ಮುಟ್ಟಿದ ಮೇಲೆ ಮತ್ತೊಬ್ಬರು ಅವನ್ನು ಮುಟ್ಟಲು ಎಂಟೆದೆಯೇ ಬೇಕು. ಅದಕ್ಕೇ ಪೊನ್ನಕವಿ ಭಾರತಬಿಟ್ಟು ರಾಮಾಯಣಕ್ಕೆ ಹೊರಟಿದ್ದು. ವಡ್ಡಾರಾಧನಕಾರ ಇವೆರಡನ್ನೂ ಬಿಟ್ಟು ಬಿಡಿ ಕಥೆಗಳಿಗೆ ಕೈ ಹಾಕಿದ್ದು. ಆದರೆ ರನ್ನನ ಎದೆಗಾರಿಕೆ ನೋಡಿ! ಅವನು ಮಹಾಭಾರತದ ಕಥೆಗೇ, ಪಂಪನ ಕಾವ್ಯಕ್ಕೇ ಮುಗಿಬಿದ್ದ. ಇದು ಸೋಲಿನ ಕೆಂಡವನ್ನು ಸೆರಗಿಗೇ ಕಟ್ಟಿಕೊಂಡು ಹೊರಟ ಅಪಾಯಕಾರಿ ಸವಾಲು. ಸವಾಲಿನಲ್ಲಿ ಸೈ ಎನಿಸಿಕೊಂಡ ರನ್ನನ ಹಿರಿಮೆ ಆತನ ಮಹತ್ವವನ್ನು ಹೇಳುತ್ತದೆ.

ಕಾಲದ ದೃಷ್ಟಿಯಿಂದ ರನ್ನ ಪಂಪನಿಗೆ ಹೆಗಲುತಾಗುವಷ್ಟು ತೀರ ಹತ್ತಿರದವನು, ಕಾವ್ಯಸಿದ್ಧಿಯ ದೃಷ್ಟಿಯಿಂದಲೂ ಅಷ್ಟೆ. ಪಂಪನನ್ನೂ ಓದಿ ರನ್ನನನ್ನೂ ಓದಿದವರಿಗೆ ಪಂಪ ಅದ್ವಿತೀಯ, ರನ್ನ ದ್ವಿತೀಯ. ಆದರೆ ಪಂಪನ ಕಾವ್ಯಗಳನ್ನು ಬಿಟ್ಟು ಕನ್ನಡದ ಇತರ ಶ್ರೇಷ್ಠ ಕಾವ್ಯಗಳನ್ನು ಓದಿ ರನ್ನನನ್ನು ವ್ಯಾಸಂಗ ಮಾಡುವವರಿಗೆ ರನ್ನ ಅದ್ವಿತೀಯ ಕವಿಯೆನಿಸುತ್ತಾನೆ. ಇದು ಅವನ ಕಾವ್ಯಶಕ್ತಿಗೆ ಕೊಟ್ಟ ಪುರಸ್ಕಾರ. ಕವಿಚಕ್ರವರ್ತಿ ಎಂಬ ಬಿರುದು ಕೊಟ್ಟಿದ್ದಕ್ಕೂ ಸಾರ್ಥಕ. ಎಲ್ಲ ಕವಿಗಳಿಗೂ ಮಿತಿಗಳಿರುತ್ತವೆ. ಇದಕ್ಕೆ ರನ್ನನೇನೂ ಅಪವಾದವಲ್ಲ. ಆದರೆ ತನಗಿರುವ ಇತಿಮಿತಿಗಳಲ್ಲಿ ಆತ ನಡೆಸಿದ ಸಾಧನೆ, ಪಡೆದ ಸಿದ್ಧಿ ಅಸಾಧಾರಣವಾದುದು.

ಧಾರ್ಮಿಕ ಪರಿಸರದಲ್ಲಿ ಕವಿ ರನ್ನ

ಎಸ್. ಪಿ. ಪಾಟೀಲ

ಪ್ರಾಚೀನ ಭಾರತೀಯ ಜನಜೀವನದಲ್ಲಿ ಪ್ರಮುಖ ಪಾತ್ರವನ್ನಾಡಿದುದು ಧರ್ಮ. ಹಲವಾರು ಮತ-ಧರ್ಮಗಳಿಗೆ ನೆಲೆವೀಡಾದ ಈ ನೆಲದಲ್ಲಿ ಒಂದೊಂದು ಧರ್ಮದ ಪ್ರಭಾವ ಕಾಲಮಾನ ಪರಿಸರಗಳ ಹಿನ್ನೆಲೆಯಲ್ಲಿ ಹಿಗ್ಗುತ್ತ ಕುಗ್ಗುತ್ತ ಸಾಗಿದುದನ್ನು ಕಾಣಬಹುದು. ಜನಸಾಮಾನ್ಯವನ್ನು ತನ್ನ ಅದಮ್ಯ ಆಕರ್ಷಣೆಗೆ ಒಳಗುಮಾಡಿಕೊಂಡು ಜನವನ್ನು ತಿದ್ದುವದರೊಂದಿಗೆ ತಾನೂ ಬದಲಾಗುತ್ತ ಸಾಗಿದುದನ್ನು ಕಾಣುತ್ತೇವೆ. 'ಒಟ್ಟಿನಲ್ಲಿ ಸಾಮ್ರಾಜ್ಯವನ್ನವಲಂಬಿಸಿ ಒಂದು ದೇಶದ ಸಾಹಿತ್ಯ, ಧರ್ಮವನ್ನು ಅವಲಂಬಿಸಿ ಒಂದು ಜನಾಂಗದ ಸಾಹಿತ್ಯ ಏರಿ ಇಳಿದು ನಡೆದಿವೆ.'[೧]

ರನ್ನನ ಯುಗವು ರಾಜಕೀಯವಾಗಿ ಹೊಯ್ದಾಟದ ಯುಗವಾಗಿದ್ದಿತು. ಕರ್ನಾಟಕದ ಬಹುಭಾಗವು ಗಂಗರ ಆಧೀನದಲ್ಲಿದ್ದಿತು. ಆದರೂ ಅವರು ರಾಷ್ಟ್ರಕೂಟರ ಸಾಮಂತರಾಗಿ ಗಂಗವಾಡಿಯನ್ನು ಆಳುತ್ತಿದ್ದರು. ಗಂಗ, ರಾಷ್ಟ್ರಕೂಟರು ಜೈನಧರ್ಮ ಅವಲಂಬಿಗಳಾಗಿದ್ದು ಇವರಿಂದ ಜೈನಧರ್ಮ, ಸಾಹಿತ್ಯ, ಕಲೆಗಳಿಗೆ ಸಂದ ಕಾಣಿಕೆ ಅಪೂರ್ವ. ಆದರೆ ರಾಷ್ಟ್ರಕೂಟರನ್ನು ಚಾಲುಕ್ಯರ ಇಮ್ಮಡಿ ತೈಲಪನು ಕ್ರಿ. ಶ. ೯೭೩ ರಲ್ಲಿ ಸೋಲಿಸಿ ಅವರ ಸಾಮ್ರಾಜ್ಯಕ್ಕೆ ಅಧಿಪತಿಯಾದನು. ರಾಷ್ಟ್ರಕೂಟರಿಗೆ ಸಾಮ್ರಾಜ್ಯವನ್ನು ಮರಳಿಕೊಡಿಸುವ ಕಾರ್ಯದಲ್ಲಿ ಗಂಗರು ಚಾಲುಕ್ಯರೊಂದಿಗೆ ಹೋರಾಡಿದರೂ, ಸೋತು ಮರೆಯಾಗಬೇಕಾಯಿತು. ಹೀಗಾಗಿ ಗಂಗ, ರಾಷ್ಟ್ರಕೂಟರಿಂದ ಜೈನಧರ್ಮಕ್ಕೆ ದೊರೆಯುತ್ತಿದ್ದ ಆಶ್ರಯ ಮರೆಯಾಯಿತು.

ಕವಿ ರನ್ನ ಹುಟ್ಟಿ ಬೆಳೆದದ್ದು ಬೆಳುಗಲಿ ದೇಶದ ಶ್ರೇಷ್ಠವಾದ ಮುದುವೊಳಲೆಂಬ ಗ್ರಾಮದಲ್ಲಿ. ಗಟ್ಟಿಗೆ (ಘಟಪ್ರಭ) ಹಾಗೂ ಪೆರ್ದೊರೆ (ಕೃಷ್ಣಾನದಿ) ಯ ಮಧ್ಯದ ಈ ನಾಡು ಪ್ರಸಿದ್ಧವಾದುದು.[೨] ಅಬ್ಬಲಬ್ಬೆ ಹಾಗೂ ಜಿನವಲ್ಲಭ,— ರನ್ನನ ತಾಯಿ-ತಂದೆಯರು ಜಿನೇಂದ್ರ ಪಾದಕಮಲ ಭ್ರಮರರು.[೩] ವೃತ್ತಿಯಿಂದ

೧. ಡಾ. ಎಂ. ಎಂ. ಕಲಬುರ್ಗಿ : ಪಂಪನ ಐತಿಹಾಸಿಕ, ಧಾರ್ಮಿಕ ಹಿನ್ನೆಲೆ (ಪಂಪ : ಒಂದು ಅಧ್ಯಯನ ಬೆ. ವಿ. ವಿ.— ೧೯೭೪. (ಪು. ೧೯)

೨. ಅಜಿತ ತೀರ್ಥಂಕರ ಪುರಾಣತಿಲಕ, ೧೨–೪೭. ೩. ಅದೇ ೧೨–೪೮.

ಬಳೆಗಾರರಾದ ಇವರ ಧಾರ್ಮಿಕ ಸಂಸ್ಕಾರ ಕವಿರನ್ನನನ್ನು ರೂಪಿಸುವಲ್ಲಿ ನೆರವಾಗಿರುವದರಲ್ಲಿ ಸಂದೇಹವಿಲ್ಲ. ಹುಟ್ಟಿ ಬೆಳೆದ ಮನೆಯ ಪರಿಸರದಂತೆಯೇ ರನ್ನನಿಗೆ ಆಶ್ರಯವಿತ್ತ ಚಾವುಂಡರಾಯನ ಪರಿಸರವೂ ಅವನ ಧಾರ್ಮಿಕ ಭಾವನೆಗಳ ಉದ್ದೀಪನೆಗೆ ಸಹಕಾರಿಯಾಗಿ ಪರಿಣಮಿಸಿದೆ. ಚಾವುಂಡರಾಯ ಪ್ರಿಯದರ್ಶನನೂ, ಧರ್ಮಪ್ರಿಯನೂ, ಧರ್ಮಾನುರಾಗಿಯೂ ಆದವ.[೪] ಸಮರ ಧುರಂಧರನಾಗಿಯೂ ಧರ್ಮ, ಸಾಹಿತ್ಯ, ಶಿಲ್ಪಕಲಾ ಕ್ಷೇತ್ರಗಳಲ್ಲಿ ಸಮಾನ ಆಸಕ್ತಿಯುಳ್ಳ ಚಾವುಂಡರಾಯನ ಸಹವಾಸ ರನ್ನನ ವ್ಯಕ್ತಿತ್ವ ರೂಪಗೊಳ್ಳುವದರಲ್ಲಿ ಪ್ರಧಾನ ಪಾತ್ರ ವಹಿಸಿದಂತಿದೆ.

ಚಾವುಂಡರಾಯನಂತೆಯೇ ರನ್ನನ ಮೇಲೆ ಪ್ರಭಾವ ಬೀರಿದ, ಅವನಿಂದ ಪುರಾಣ ತಿಲಕ ನಿರ್ಮಾಣವಾಗುವುದಕ್ಕೆ ಕಾರಣರಾದವರಲ್ಲಿ ಅವನ ಗುರು ಅಜಿತಸೇನರ ಪಾತ್ರ ವಿಶೇಷವಾದುದು. 'ಗುರುಗಳಜಿತಸೇನಾಚಾರ್ಯರಿಂದ್ರಾವಿವಂದ್ಯಾಚಾರಿತರ್'[೫] ಎಂದೂ, ಅತ್ತಿಮಬ್ಬೆಯ ಚರಿತೆಯನ್ನು ವರ್ಣಿಸುವಾಗ 'ಬಿಳಿಯುರಳೆಯಂತೆ ಗಂಗಾಜಳದಂತೆನವಜಿತಸೇನ ಮುನಿಪತಿಯ ಗುಣಾವಳಿಯಂತೆ...'[೬] ಎಂದು ಹೇಳುವಲ್ಲಿ, ಅಜಿತಸೇನರ ಧವಳ ಚಾರಿತ್ರ್ಯವನ್ನು ಪಾವಿತ್ರ್ಯಕ್ಕೆ ಪ್ರತೀಕಗಳಾದ ಗಂಗಾಜಲ, ಬಿಳಿಯುರಳಿಯೊಂದಿಗೆ ಹೋಲಿಸುವನು. ನೇಮಿಚಂದ್ರಾಚಾರ್ಯರಿಂದ 'ಭುವನಗುರು'ಗಳೆಂದು ಗೌರವಿಸಲ್ಪಟ್ಟ ಅಜಿತಸೇನರು ರನ್ನನಿಗೆ ಗುರುಗಳಾಗಿ ಲಭಿಸಿದುದು ಅವನ ಧಾರ್ಮಿಕಶ್ರದ್ಧೆ ನೆಲೆಗೊಳ್ಳಲು ಕಾರಣವಾದಂತಿದೆ. ೧೦ನೇ ಶ.ದ ಪ್ರಸಿದ್ಧ ಜೈನಾಚಾರ್ಯರಾದ ಅಜಿತಸೇನರ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಮಾಡಿದ ಕಾರಣದಿಂದಾಗಿ, ಪುರಾಣದ ಎಲ್ಲ ಸಾಧ್ಯತೆಗಳನ್ನು ತನ್ನ ಕೃತಿಯಲ್ಲಿ ದುಡಿಸಿಕೊಂಡುದರಿಂದಾಗಿ ತನ್ನ ಕೃತಿಯನ್ನು ರನ್ನ 'ಪುರಾಣತಿಲಕ' ವೆಂದು ಹೇಳಿಕೊಂಡಿದ್ದಾನೆ. ಅಲ್ಲದೆ ಗುರುಗಳ ಹೆಸರಿನ ಅಭಿಮಾನದಿಂದಾಗಿಯೂ ಅವನು ಎರಡನೆಯ ತೀರ್ಥಂಕರ ಅಜಿತನಾಥರ ಪುರಾಣರಚನೆಗೆ ಕೈಯಿಕ್ಕಿದಂತಿದೆ.

ಚಾವುಂಡರಾಯ, ಅಜಿತಸೇನರ ಸಹವಾಸದಲ್ಲಿ ಕವಿರನ್ನ ಬಂಕಾಪುರ. ಶ್ರವಣಬೆಳಗೊಳಗಳ ಪವಿತ್ರ ಪರಿಸರದಲ್ಲಿ ವಿಹರಿಸುತ್ತ ಜೈನಧರ್ಮದ ಉದಾತ್ತ ತತ್ವಗಳನ್ನು ಮೆಲ್ಲುತ್ತ. ಅವುಗಳನ್ನು ಕೃತಿರೂಪದಲ್ಲಿ ಕೊಡಬೇಕೆಂದು ತನ್ನ ಭಾವವಿಶ್ವವನ್ನು ತುಂಬಿಕೊಂಡಿರಬೇಕು. ಅಜಿತಸೇನರ ಸಾನಿಧ್ಯದಲ್ಲಿಯೇ ಗಂಗಮಾರಸಿಂಹನು ಒಂದು ವರ್ಷ ರಾಜ್ಯವನ್ನು ತೊರೆದು ನಿಂತು ಸಮಾಧಿ ಮರಣವನು ಹೊಂದಿದ[೭] ಸಂದರ್ಭದಲ್ಲಿಯೂ ಕವಿ ರನ್ನ ಪ್ರತ್ಯಕ್ಷವಿದ್ದು ಸಮಾಧಿಮರಣ ಮಹೋತ್ಸವವನ್ನು ಕಣ್ಣಾರೆ ಕಂಡಿರಬಹುದಾಗಿದೆ.

---

೪. ತ್ರಿಷಷ್ಟಿ ಲಕ್ಷಣ ಮಹಾಪುರಾಣ, ಸಂ : ಬಿ. ಎಸ್. ಕುಲಕರ್ಣಿ, ಕ.ವಿ.ವಿ. –೧೯೭೫. ೧–೨೦.
೫. ಅ. ಪು. ೧೨–೫೦. ೬. ಅದೇ ೧೨–೬. ೭. ಎಪಿ. ಕ. (ದ್ವಿ. ಮು) ನಂ. ೬೪ ಪುಟ ೨೩.

ಅಜಿತಸೇನರಂತೆಯೇ ಆ ಕಾಲದ ಇನ್ನೋರ್ವ ಶ್ರೇಷ್ಠ ಆಚಾರ್ಯರಾದ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಚಾವುಂಡರಾಯನಿಗಾಗಿ ಗೊಮ್ಮಟಸಾರವನ್ನು ರಚಿಸಿದರು. ಚಾವುಂಡರಾಯ, ಕವಿರನ್ನ ಹಾಗೂ ನೇಮಿಚಂದ್ರಾಚಾರ್ಯರು ಸಹ ಪಾಠಿಗಳಾಗಿರಬೇಕೆಂದೂ ಊಹಿಸಲಾಗಿದೆ. ಇದರಿಂದಾಗಿ ಕವಿರನ್ನ ಬೆಳೆದು ವಿದ್ಯಾಭ್ಯಾಸ ಮಾಡಿದ ಕಾಲಕ್ಕೆ ಅವನಿಗೆ ದೊರೆತ ಈ ಮಹಾ ಆಚಾರ್ಯರ ಸಹವಾಸ ಅವನ ಧಾರ್ಮಿಕ ಜ್ಞಾನ ವರ್ಧನೆಗೆ ಬೆನ್ನೆಲುಬಾಗಿ ನಿಂತಿದೆ.

ಇದರೊಂದಿಗೆ ರನ್ನನಿಗೆ ಆಶ್ರಯವಿತ್ತ ಇನ್ನೊಂದು ಹಿರಿಯ ಜೀವಿ ಅತ್ತಿಮಬ್ಬೆ, ಅವಳ ಪವಿತ್ರ ಜೀವನವನ್ನು ಎಷ್ಟು ಬಣ್ಣಿಸಿದರೂ ತೃಪ್ತನಾಗಲಾರದ ರನ್ನ ಅವಳ ದಾನ-ಧರ್ಮ ಸಂಯಮಪೂರ್ಣ ಬಾಳನ್ನು ಸಮರ್ಪಣ ಭಾವದಿಂದ ವರ್ಣಿಸಿದ್ದಾನೆ. ತನ್ನ ಮಕ್ಕಳಿಗೆ, ರಾಯ ಅತ್ತಿಮಬ್ಬೆ. ಎಂದು ಹೆಸರಿಟ್ಟು ಕೃತಾರ್ಥ ಭಾವ ತಾಳಿದ್ದಾನೆ. ಕೇವಲ ಆಶ್ರಯವಿತ್ತ ದಾನಿಯೆಂದು ಮಾತ್ರ ಅವಳನ್ನು ಕಾಣದೆ ಅವಳ ಅಲೌಕಿಕ ತ್ಯಾಗ, ಶ್ರದ್ಧಾಪೂರ್ಣ ಜೀವನವನ್ನು ಸಮೀಪದಿಂದ ಕಂಡು ಅದನ್ನು ಸಾಕಾರಗೊಳಿಸಿದ್ದಾನೆ.

ಚಾವುಂಡರಾಯ, ಅತ್ತಿಮಬ್ಬೆಯಂತಹ ಆದರ್ಶ ವ್ಯಕ್ತಿಗಳೂ ಅಜಿತಸೇನ. ನೇಮಿಚಂದ್ರಾಚಾರ್ಯರಂತಹ ಚಾರಿತ್ರಸಂಪನ್ನ ಜ್ಞಾನಿಮುನಿಗಳಿಗೂ ತಮ್ಮ ಚಾರಿತ್ರ್ಯದಿಂದಾಗಿ ರನ್ನನಲ್ಲಿ ಧರ್ಮದ ಬಗ್ಗೆ ಅಭಿಮಾನವನ್ನೂ, ಆಸಕ್ತಿಯನ್ನೂ ಮೂಡಿಸಿದುದರಲ್ಲಿ ಆಶ್ಚರ್ಯವಿಲ್ಲ.

ರನ್ನನ ಅಜಿತ ತೀರ್ಥಂಕರ ಪುರಾಣ ತಿಲಕವು ಅಂದಿನ ಧಾರ್ಮಿಕ ಪರಿಸರವನ್ನೂ ಧಾರ್ಮಿಕ ಅನುಭವಗಳ ಸಾಂದ್ರತೆಯನ್ನೂ ಅಭಿವ್ಯಕ್ತಗೊಳಿಸುವದು.

ಆದಿಪುರಾಣ, ಶಾಂತಿಪುರಾಣಗಳಿಗೆ ಸಮಾನವಾದ ಕಲ್ಪಾಂತಸ್ಥಾಯಿಯಾದ ಕೃತಿಯನ್ನು ರಚಿಸುವೆನೆಂಬ[೮] ರನ್ನನ ಹೇಳಿಕೆ ಆ ಕಾಲಕ್ಕೆ ಆ ಎರಡು ಕೃತಿಗಳಿಗೆ ಸಂದ ಮನ್ನಣೆಯನ್ನು ಸ್ಪಷ್ಟಪಡಿಸುವದು. ಅವುಗಳ ಜನಪ್ರಿಯತೆ, ಲೋಕಮಾನ್ಯತೆಯನ್ನು ಅಲ್ಲಗಳೆಯದೇ, ಅದೇ ಮಾದರಿಯಲ್ಲಿ ತನ್ನ ಕೃತಿ ರಚಿಸುವೆನೆಂದು ರನ್ನ ಸಾರಿದ್ದಾನೆ. ಆಗಲೇ ಕನ್ನಡದಲ್ಲಿ ಜೈನ ಪುರಾಣ ರಚನೆಯ ಸಂಪ್ರದಾಯವೊಂದು ಆರಂಭಿಸಲ್ಪಟ್ಟಿದ್ದದನ್ನು ಅನುಸರಿಸುವ, ಅದನ್ನು ಗೌರವಿಸುವ ಭಾವ ಇಲ್ಲಿ ಸುಸ್ಪಷ್ಟ. ಇಂಥ ಪುರಾಣರಚನೆಗೆ ಅಗತ್ಯವಾದ ಪ್ರೇರಣೆ, ಪ್ರೋತ್ಸಾಹ ನೆರವು ಅಂದಿನ ಜನತೆಯಿಂದ, ಅಧಿಕಾರಿಗಳಿಂದ ಲಭಿಸುತ್ತಿತ್ತು. ಪೊನ್ನಮಯ್ಯ ಮತ್ತು ಮಲ್ಲಪರು ಪೊನ್ನನಿಂದ 'ಶಾಂತಿಪುರಾಣ'ವನ್ನು ಬರೆಯಿಸಿದಂತೆ ಅತ್ತಿಮಬ್ಬೆ ಕವಿ ರನ್ನನಿಂದ ಪುರಾಣ ಚುಡಾಮಣಿಯನ್ನು ಹೇಳಿಸಿದಳು.[೯] ಅದು ಆಗಮದಲ್ಲಿರುವ ಎಲ್ಲ ವರ್ಣನೆಗಳನ್ನೊಳಗೊಂಡು ಸಕಲ ಭವ್ಯಜನರಿಗೆ ಅನುರಾಗವನ್ನುಂಟು ಮಾಡುವಂಥ

೮. ಅ. ಪು. ೧-೨೬. ೯. ಅದೇ ೧-೨೬.

'ಪುರಾಣತಿಲಕ'ವಾಗಿದೆ[೧೦] ಜಿನತಿಲಕ ಚರಿತೆಯನ್ನು ಜಿನೇಂದ್ರಭಕ್ತೆ ಮಹಾಸತಿ ತಿಲಕೆ ಹೇಳಿಸಲು ಕವಿತಿಲಕನಾದ ರನ್ನನು ಮನಸಾರೆ ಪುರಾಣತಿಲಕವನ್ನು ರಚಿಸಿದನು.[೧೧]

ಜಗದೊಳಗೆ ಮುಂಚೆ ಪಂಪನಿಂದ ಆದಿಪುರಾಣವೂ, ಪೊನ್ನನಿಂದ ಶಾಂತಿ ಪುರಾಣವೂ ಪ್ರಸಿದ್ಧವಾದಂತೆ ಕವಿರನ್ನನಿಂದ 'ಅಜಿತಪುರಾಣ'ವು ಪ್ರಸಿದ್ಧವಾಯಿತು.[೧೨] ಉಪಮಾತೀತವಾದ ಆದಿಪುರಾಣ, ಶಾಂತಿಪುರಾಣ ಹಾಗೂ ಅಜಿತಪುರಾಣದ ಮಟ್ಟಕ್ಕೆ ಬರುವ ಪುರಾಣಗಳು ಬೇರೆ ಇವೆಯೆ ? ಕವಿಜನರಲ್ಲಿ ಪಂಪ ಪೊನ್ನರನ್ನರು 'ರತ್ನತ್ರಯ'ರು, 'ಜಿನಸಮಯದೀಪಕರು' ಎಂದು ಹೇಳುವ ರನ್ನ ಮುಂದೆ ಪೊನ್ನನನ್ನು ಬಿಟ್ಟು ಕೇವಲ ಪಂಪನನ್ನು ತನ್ನೊಂದಿಗೆ ಹೇಳಿಕೊಂಡಿದ್ದಾನೆ.[೧೩] ಅಲ್ಲದೆ—

ಕವಿಗಳೊಳವರಿರ್ವರೆ ಪು । ಣ್ಯ ವಂತರಿರ್ವರೆ ಕೃತಾರ್ಥರಿವರ್ವರೆ ಸೊಬಗರ್
ಕವಿತಾ ಗುಣಾರ್ಣವಂ ಮೇಣ್ । ಕವಿರತ್ನಂ ಮೇಣ್ ಗುಣಕ್ಕೆ
ಮಚ್ಚರಮುಂಟೆ[೧೪].

ಗುಣಕ್ಕೆ ಮಚ್ಚರಮುಂಟೆ ? ಎಂದು ಹೇಳುವ ಈ ಕವಿಯೇ ಪೊನ್ನನನ್ನು ಹೆಸರಿಸದಿರುವದರಲ್ಲಿ ದೌರ್ಬಲ್ಯವನ್ನು ತೋರಿಸಿಕೊಂಡಿದ್ದಾನೆ. ಮೊದಲು ಆದಿಪುರಾಣ, ಶಾಂತಿಪುರಾಣ, ಅಜಿತ ಪುರಾಣಗಳನ್ನು ಹೆಸರಿಸಿದವ ತ್ರಿಜಗದೊಳು ಆದಿಪುರಾಣ, ಅಜಿತಪುರಾಣಗಳು ಪ್ರಸಿದ್ಧವಾಗಲು ದ್ವಿಜವಂಶಧ್ವಜ, ವೈಶ್ಯಧ್ವಜರೆಂದು ಪಂಪ–ರನ್ನರನ್ನು ಜನ ನೆನೆಯುವರು.[೧೫] ಎಂದು ಹೇಳಿದರೂ ರಾಜಾಶ್ರಯ ಕುರಿತು ಹೇಳುವಲ್ಲಿ ಪೊನ್ನನನ್ನೂ ಸೇರಿಸಿಕೊಳ್ಳುವನು. ಇಂಥ ಸಂದರ್ಭಗಳಲ್ಲಿ ಕವಿರನ್ನ ಪಂಪನೊಂದಿಗೆ ಪೊನ್ನನನ್ನು ಕೆಲವೆಡೆ ಹೆಸರಿಸಿದರೂ ಪೊನ್ನನನ್ನು ಬದಿಗೆ ಸರಿಸುವ ಪ್ರಯತ್ನವನ್ನು ಮಾಡಿದುದನ್ನು ಮರೆಯಲಾಗದು.

ರನ್ನನಿಗೆ ತನ್ನ ಕೃತಿಯ ಬಗೆಗೆ ಎಲ್ಲಿಲ್ಲದ ಹೆಮ್ಮೆ. ಅದನ್ನು ಪುರಾಣತಿಲಕವೆಂದು ಹೇಳಿಕೊಂಡಿದ್ದಾನೆ. ಅಷ್ಟೇ ಅಲ್ಲ,

ವಸುಧೆಯೊಳಗೊಂದು ರತ್ನಮಿ
ದೆಸೆದಿರ್ದುದು ಪಲವು ರತ್ನಮಿಲ್ಲೆಂಬೆನಮೇಂ
ಮಸುಳಿಸಿದನೊ ಬಹುರತ್ನಾ
ವಸುಂಧರಾಯೆಂಬ ವಾಕ್ಯಮಂ ಕವಿರತ್ನಂ ॥[೧೬]

ಎಂದು ಹೇಳಿಕೊಂಡಿದ್ದಾನೆ.

ಕತೆಯೊಳಗ ಯುದೆ ಪಿಪರೀ । ತತೆಯಿಂದಂ ಪೀ ಕೃತಿಗಳಿರ್ಕಪುರಾಣ
ಸ್ಥಿತಿಯೊಳೆ ಕವಿರತ್ನನಿನ । ನಿತ್ವ ಮಾದುದು ಸಗರ ಚಕ್ರಿಯ ಚರಿತಂ

೧೦. ಅದೇ ೧–೭೮, ೧೧. ಅದೇ ೧–೭೯, ೧೨. ಅದೇ ೧೨–೩೬,
೧೩. ಅದೇ ೧೨–೩೭, ೧೪. ಅದೇ ೧೨–೪೦, ೧೫. ೧೨–೪೧, ೧೬. ಅದೇ ೧–೮೧,

ಸಗರಸುತರೆಲ್ಲರು ಮೋಕ್ಷಗಾಮಿಗಳು, ಚರಮದೇಹಧಾರಿಗಳು, ಅವರನ್ನು ನಾಗರಾಜ ಕೊಂದನೆಂದು ಅಪಸಿದ್ಧಾಂತ[೧೮] ಜಿನರಿಗೆ ತ್ರಿಕಾಲಯೋಗ, ಸ್ವಾಧ್ಯಾಯ, ಮಹಾಸಮಿತಿಗಳಿವೆ ಎಂಬುದನ್ನು ವಿವೇಕಿಗಳು ಮಹಾಪುರಾಣವನ್ನು ನೋಡಿ ನಂಬಲಿ.[೧೯] ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ ಜಿನರಿಗೆ ಕೂಡದು; ಧ್ಯಾನ ಸ್ವಾಧ್ಯಾಯ ವ್ಯುತ್ಸರ್ಗ ಅವರಿಗಿರುವದರಲ್ಲಿ ಸಂದೇಹವಿಲ್ಲ[೨೦] ಎಂದು ಕವಿ ರನ್ನ ಹೇಳಬೇಕಾದರೆ ಈ ವಿಷಯಗಳ ಬಗೆಗೆ ಇನ್ನಿತರ ಕೃತಿಗಳಲ್ಲಿ ಸಂದೇಹ ಅಥವಾ ತಪ್ಪು ಪ್ರತಿಪಾದನೆಯಿದ್ದಿರಬೇಕು. ಅದಕ್ಕಾಗಿ–

ಎನಿತೊಳವು ಮನದ ಸಂದೇಯ
ಮನಿತುಮಸಂದಿಗ್ಧಮೆನಿಸುಗುಂ ಧರ್ಮದೊಳ
ಪ್ಪನುರಾಗವೊದಗುಂ ರ
ತನ್ನ ಪೇಟ್ದ ಜಿತನ ಪುರಾಣಮಂ ಕೇಳಕೊಂಡ. ೧೨–೩೨

ಎಂದು ಅಜಿತ ಪುರಾಣ ಇಂಥ ಎಲ್ಲ ಸಂದೇಹಗಳನ್ನು ನಿವಾರಿಸುವುದಾಗಿ ಹೇಳಿದ್ದಾನೆ.

ಸಂಸ್ಕೃತ ಮಹಾಪುರಾಣ ಹಾಗೂ ಕನ್ನಡದ ಆ ಮುಂಚಿನ ಪುರಾಣ ಪಂಪರೆಯ ಮಾರ್ಗದಲ್ಲಿಯೇ ಮುನ್ನಡೆದ ರನ್ನ ಈ ಮೇಲಿನ ಮಾತುಗಳನ್ನು ಯಾವ ಕೃತಿಗಳನ್ನು ಕವಿಗಳನ್ನು ಗಮನದಲ್ಲಿಟ್ಟುಕೊಂಡು ಹೇಳಿದನು ಎಂಬುದು ಸ್ಪಷ್ಟವಾಗುವದಿಲ್ಲ. ತನ್ನಂತೆ ವಿಸ್ತಾರ ಕ್ರಮವನ್ನು ಅನುಸರಿಸಿದ ಪಂಪ– ಪೊನ್ನರನ್ನೇ ಉದ್ದೇಶಿಸಿ, ಈ ಮಾತನ್ನು ರನ್ನ ಹೇಳಲು ಸಾಧ್ಯವೇ ? 'ಕೆಲರ್ ಕವಿಗಳಾಡಿದರ್ ತಡಿಪಡಿಯೋಳ್ ಎಂಬಲ್ಲಿ ಆ ಪೂರ್ವದ, ಇಂದು ಉಪಲಬ್ಧವಿರದ ಕೃತಿಗಳನ್ನು ಕುರಿತಿರಬಹುದೇ ಎಂದು ಯೋಚಿಸಬೇಕಾಗುವದು.

ಈ ದೊರೆಯ ಕಥಾಸಯುಕ । ನೀ ದೊರೆಯ ಮಹಾಪ್ರಸಿದ್ಧ
ಕವಿ ಪೋದರೊಳಿ
ಲ್ಲಾದರೊಳಿಲ್ಲಪ್ಪರೊಳಿ । ಲ್ಲೀ ದೊರೆಯದ ಕೃತಿಗಳಿಲ್ಲಿ
ಸದಲಂಕೃತಿಗಳ್– ೧೨–೩೪

ಎಂದೂ–

ಇನಿತುಪಪತಿಯೆಲ್ಲಿನಿತು ಬಿನ್ನಣಮಿಲ್ಲಿನಿತರ್ಥದೃಷ್ಟಿಯು
ಲ್ಲಿನಿತುಚಿತೋಕ್ತಿಯಲ್ಲಿನಿತಳಂ ಕೃತಿಯಿಲ್ಲಿನಿತಾಗಮಾಥಮಿ
ಲ್ಲಿನಿತುಪರಂ ಪ್ರಬೋಧಮಣಮಿಲ್ಲ ಪಜಿರ್ಗಿದು ಕಾವ್ಯರತ್ನಮಂ
ಘನಮೆನೆ ಮೆಚ್ಚಿ ಬಣ್ಣಿಸದರಾಗ ಕವಿರತ್ನನ ಕಾವ್ಯರತ್ನಮಂ[೨೧]

ಎಂದು ಅವನೇ ಸಾರಿಕೊಂಡಿದ್ದಾನೆ. ಪಂಚಕಲ್ಯಾಣಗಳನ್ನು ಸವಿಸ್ತಾರವಾಗಿ ವರ್ಣಿಸಿರುವುದಾಗಿಯೂ[೨೨] ಜನ್ಮಾಭಿಷೇಕವನ್ನು ತನ್ನಂತೆ ವರ್ಣಿಸಲು ಪ್ರಾಚೀನ ಅಥವಾ

೧೮. ಅದೇ ೧೨–೨೮. ೧೯. ಅ. ಪು ೧೨–೨೯. ೧೯. ಅದೇ ೧೨–೩೦.
೨೦. ಅದೇ ೧೨–೩೧. ೨೧. ಅ. ಪು. ೧೧–೩೫. ೨೨. ಅದೇ ೧–೯೫.

ನೂತನ ಕವಿಗಳು ಸಮರ್ಥರೆ ? ಎಂದು ಕವಿ ರನ್ನ ಪ್ರಶ್ನಿಸುತ್ತಾನೆ. ಅಲ್ಲದೆ 'ಪಂಪ ಪೊನ್ನನ ಪೇೞ್ದ ಕಬ್ಬದೊಳ್ ನೆಱೆಯೆ ಪರಿಸ್ಫುಟಂ ನೆಱೆಯದಿರ್ದುದುಮಂ' ಸ್ಪಷ್ಟವಾಗುವಂತೆ ಬರೆದುದಾಗಿ ಹೇಳಿಕೊಂಡಿದ್ದಾನೆ.

ಹೀಗೆ ಪಂಚಕಲ್ಯಾಣಗಳ ಸವಿಸ್ತಾರ ವರ್ಣನೆ ಹಾಗೂ ತಾತ್ವಿಕ ವಿಚಾರಗಳನ್ನು ಪರಿಸ್ಫುಟಗೊಳಿಸುವ ಗುರಿಯೊಂದಿಗೆ ಕಾರ್ಯೋನ್ಮುಖನಾಗಿದ್ದಾನೆ ಕವಿ ರನ್ನ. ಜೈನ ತತ್ವಗಳ ಪರಿಚಯು ಅವನಲ್ಲಿ ಪಂಪನಿಗಿಂತ ಅಧಿಕವಾಗಿಯೇ ತೋರುವದು. ಸಂಸಾರದ ಅನಿತ್ಯತೆಯನ್ನು ಅವನು ನಾನಾಪರಿಯಾಗಿ ವಿವರಿಸುವನು. ಈ ಶರೀರ ವಿಕಾರಗಳಿಂದ ಕೂಡಿದ್ದು, ಸದ್ಗುಣರಹಿತವಾಗಿದೆ. ವಿಷವೃಕ್ಷದಂತೆ ದುರಂತಕ್ಕೆ ಮೂಲವಾಗಿದೆ[೨೩] ಅಲ್ಲದೆ.

ಅಗಲೊಳಗಿಕ್ಕಿ ಡೊಳ್ಳುಣಿಸವೇಧ್ಯಮುಮೆಂಜಲುಮಪ್ಪುದುಟ್ಟ ಪ
ಟ್ಟಿಗೆಗಳು ಮಂತೆ ಮೈಲಗೆಗಳಪ್ಪುವು, ಸೂಡಿದ ಮಾಲೆ ಕಂದು ನಾ
ಱುಗುಮೆದವೀಳೆ ಸಾಂದು ಮೊದಲಾಗಿರೆ ಪೂಸಿದ ಚಂದನಗಂಳು
ಮುಗಮುಗಿಸುತ್ತಮಿರ್ದು ಮಲಮಪ್ಪುವು ಸಂಗತಿಯಿಂ ಶರೀರದಾ[೨೪]

ಶರೀರದ ಸಂಗದಿಂದ ಈ ಎಲ್ಲ ವಸ್ತುಗಳು ಮಲಿನವಾಗುವವು. ಈ ದೇಹದಲ್ಲಿ ಜೀವವಿದ್ದರೂ ಅದು ಈ ದೇಹದ ಕೇಡನ್ನು ನೆನೆಯದೆ ಕಾಣದೆ, ಕೇಳದೆ, ತಿಳಿದೂ ತಿಳಿಯದಂತೆ ಇರುವಾಗ, ಅದನ್ನು ತೊರೆಯಲು ಮನಸ್ಸು ಆಗದಿದ್ದರೆ ವೈರಾಗ್ಯಕ್ಕೆ ಬೇರಿನ್ನಾವ ಕಾರಣಬೇಕು ?

ಎನಿತೆನಿತು ಕಟಿದ ಭವಮಂ
ನೆನೆದವ । ಯೆನಿತೆನಿತು ಭವದ ಬಂಧುಗಳಂ ನೀಂ
ನೆನೆದವ । ಯೆನಿತೆನಿತೊಡಲಂ
ನೆನೆದವ ಯೋಲಿ ಜೀವ । ನೀನೆ ಪೇೞ್ ಪವಣೊಳವೇ[೨೫]

ಎಂದು ದೇಹದ ಅನಿತ್ಯತೆಯನ್ನು ಸಾರಿ,

ಕಡೆಯಿಲ್ಲದ ಸಂಸಾರದ
ಕಡೆಗಾಣಲ್ಬಗೆವೆಯಪ್ಪೊಡೆನ್ನುಕ್ತಿಗೊಡಂ
ಬಡುಜೀವ ನಿನ್ನ ಕಾಲಂ
ಪಿಡಿವೆಂ ಧರ್ಮಮನೆ ಮಗುೞೆ ಬಲ್ವಿಡಿ ವಿಡಿಯೋ,[೨೬]

'ಧರ್ಮಮೆ ತಲೆಗಾಯ್ಗುಂ, ಧರ್ಮಮಾರ್ಗಮುಭಯಭವಕ್ಕುಂ[೨೭] ಉಚಿತವೆಂದು ವಿವರಿಸುವನು.

---

೨೩. ಅದೇ ೨–೫೦, ೨೪. ಅದೇ ೨–೫೧. ೨೫. ಅದೇ ೨–೬೦;
೨೬. ಅದೇ ೨–೬೩; ೨೭. ಅದೇ ೨–೭೬.

ಅಜಿತನ ವೈರಾಗ್ಯವನ್ನು ಪರಿಣಾಮಕಾರಿಯಾಗಿ ವರ್ಣಿಸುವ ಕವಿ ರನ್ನ ರಾಣಿಯರ ಆಕ್ರೋಶವನ್ನು ಕರುಣಾಪೂರ್ಣವಾಗಿ ಚಿತ್ರಿಸುವ ಮೂಲಕ ಸಂಸಾರದ ಅನಿತ್ಯತೆಯನ್ನು ಸಾರಿ ಹೇಳುವನು. ಸಗರ ಚಕ್ರವರ್ತಿಯ ಕಥಾಭಾಗದಲ್ಲಿಯೂ ಭಕ್ತಿ ವೈರಾಗ್ಯಗಳ ಚಿತ್ರಣ ಪರಿಣಾಮಕಾರಿಯಾಗಿ ಬಂದಿದೆ. ಅಜಿತ ತೀರ್ಥಂಕರ, ಸಗರ ಹಾಗೂ ಅತ್ತಿಮಬ್ಬೆ ಈ ಮೂರರೂ ಪಾತ್ರಗಳೂ ಪ್ರತ್ಯೇಕವಾಗಿ ನಿಲ್ಲದೆ ಕೃತಿಯ ಶರೀರಕ್ಕೆ ಸಾವಯುವ ಸಂಬಂಧವನ್ನುಂಟು ಮಾಡುವವು. ಅಜಿತ ತೀರ್ಥಂಕರ ಚರಿತೆಯಲ್ಲಿ ಧರ್ಮದ ಅಸಾಮಾನ್ಯ ನೆಲೆಯನ್ನು ಅಭಿವ್ಯಕ್ತಗೊಳಿಸುವ ಕವಿ ರನ್ನ ಸಗರ ಹಾಗೂ ಅತ್ತಿಮಬ್ಬೆಯರ ಸಂದರ್ಭಗಳಲ್ಲಿ ಸಾಮಾನ್ಯನೆಲೆಯಿಂದ ಅಸಾಮಾನ್ಯ ನೆಲೆಯನ್ನು ತಲುಪುವ ರೀತಿಯನ್ನು ಪ್ರತಿಬಿಂಬಿಸುವನು.

ರನ್ನನ ಅಜಿತನಾಥ ಪುರಾಣ ಕೆಲವು ಧಾರ್ಮಿಕ ರೂಢಿ ಸಂಪ್ರದಾಯಗಳ ಕುರಿತು ಕೆಲವು ದಾಖಲೆಗಳನ್ನೊದಗಿಸುವದು. ನಾಗದೇವನು ಯುದ್ಧದಲ್ಲಿ ಮಡಿಯಲು,

ಎರಡೆವಲಂ ಕುಲವಧುಗಾ
ಚರಿಪಲ್ ಪತಿಯಂ ಪರೋಕ್ಷದೊಳ್ ಜಿನದೀಕ್ಷಾ
ಚರಣಂ ಮೇಣ್ ಶುಭಚರಿತದಿ
ಮರಣಂ ಮೇಣಳಿಪಿನಿಂದೆ ಬಾಬ್ಬುದು ದೊರೆಯೇ[೨೮]

ಎಂದು ಗುಂಡಮಬ್ಬೆ 'ಮಹಾಸತೀ ಸಮುಚಿತಾಚಾರದೊಳಮಾಭರಣದೊಳ್' ಪ್ರಸಿದ್ಧಳಾದಳು. ಇತ್ತ ಅತ್ತಿಮಬ್ಬೆ—

ಪತಿವಿಗಮದೊಳಸಿಧಾರಾ
ವ್ರತಂಗಳಂ ತಾಳ್ದಿ ಧರ್ಮಮಂ ಮಾಡುವ ಸಂ
ತತಿಯಂ ಕಾಯುತೆ ಕಾಯ
ಸ್ಥಿತಿಯಂ ತಾನತ್ತಿಮಬ್ಬೆ ಮಾಣ್ಬಳೆ ಮಾಣಳ್ ॥
ಒಡಲನುಪವಾಸದಿಂ ತ
ನ್ನೊಡಮೆಯುನನವರತದಾನದಿಂ ತವಿಸಿ ಜಸಂ
ಬಡೆದಳ್ ನೂರ್ಮಡಿ ತೈಲನ
ಪಡೆವಳ ತೈಲಪನ ಜನನಿಗೆಣೆ ಪೆಜಿರೊಳರೇ ॥[೨೯]

ಎಂದು ಕಠಿನ ವ್ರತಗಳಿಂದ ದೇಹದಂಡನೆ ಕೈಗೊಂಡ ಅತ್ತಿಮಬ್ಬೆಯಲ್ಲಿ ಪತಿಯ ವಿಯೋಗ ವೈರಾಗ್ಯಕ್ಕೆ ಕಾರಣವಾಗುವದು ಸಹಜ. ನಶ್ವರ ದೇಹವನ್ನು ವ್ರತಗಳಿಗೆ ಒಡ್ಡಿ ಶಾಶ್ವತ ಸುಖಗಳಿಗೆ ಪ್ರಯತ್ನಿಸಬೇಕಾದುದು ಉಚಿತವೆಂಬ ಹಿನ್ನೆಲೆಯಲ್ಲಿ ಅತ್ತಿಮಬ್ಬೆಯ ಕ್ರಮವನ್ನು ಬೆಂಬಲಿಸುವದರಲ್ಲಿ ಆತಂಕವಿಲ್ಲ. ಆದರೆ

೨೮. ಅದೇ ೧–೪೬. ೨೯. ಅದೇ ೧–೫೦, ೫೧.

ನಿನಗೆ ಮಗಂ ಜಗತ್ತಿಲಕನಿರ್ದಪನಕ್ಕ ಮಗಂ ಸಮರ್ಥನ
ಪ್ಪಿನಮಿರು । ನಾಗದೇವನೊಡನಾಂ ಬೆಸಕೇಳ್ದ ಪನಿನೆಂದು ಬೇಡಿಕೊಂ
ಡಿನಿಯನನಪ್ಪಿಕೊಂಡುಚಿತವಾಗೆ ಚಿತಾಗ್ನಿಯೊಳಣ್ಮಿ ಸತ್ತ ಸ
ಜ್ಜನಿಕೆಯ ಪೆಂಪು ಸಜ್ಜನಕೆ ಬಣ್ಣಿಸೆ ಸಂದುದು

ಗುಂಡಮಬ್ಬೆಯಾ ೧-೪೭.

ಎಂದು ಪತಿಯೊಂದಿಗೆ ಮರಣವನ್ನಪ್ಪುವ ಗುಂಡಮಬ್ಬೆಯ ನಿರ್ಣಯ ಜೈನಧರ್ಮದ ಹಿನ್ನೆಲೆಯಲ್ಲಿ ತೊಡಕಿನದಾಗಿ ಪರಿಣಮಿಸುವದು. ಬಹುಶಃ ಸುತ್ತಲಿನ ಸಮಾಜದಲ್ಲಿಯ ಸತಿ, ಸಹಗಮನ ಪದ್ಧತಿಗಳ ಪ್ರಭಾವದಿಂದಾಗಿ ಅದು ಜೈನ ಆಚರಣೆಯಲ್ಲಿಯೂ ಪ್ರವೇಶಪಡೆದಿರುವ ಸಾಧ್ಯತೆ ಇದೆ.

ಚಾವುಂಡರಾಯನಿಂದ ಗೊಮ್ಮಟವಿಗ್ರಹ ಸ್ಥಾಪನೆ ಹಾಗೂ ನೇಮಿಚಂದ್ರಾಚಾರ್ಯರ 'ಪ್ರತಿಷ್ಠಾತಿಲಕ' ಗ್ರಂಥಗಳಿಂದಾಗಿ ಪೂಜಾಪದ್ಧತಿ ರೂಪುಗೊಂಡುದು ತಿಳಿಯುವಂತೆಯೇ ಅಷ್ಟವಿಧಾರ್ಚನೆ ರೂಢಿಯಲ್ಲಿದ್ದುದನ್ನು ಅಜಿತಪುರಾಣ ಬೆಂಬಲಿಸುವದನ್ನು ಕಾಣಬಹುದು.

ಜಲಗಂಧಾಕ್ಷತೆ ಕುಸುಮೋದ್ವಿಲಸಿತ ಚರುದೀಪ ಧೂಪ ಫಲನಿವಹಂಗಳ್
ಪಲವೆಡೆಯೊಳಮತ್ಯುತ್ತಮ । ಫಲದಾಯಿಗಳೆಸೆದುವಷ್ಟ-
ವಿಧದರ್ಚನೆಗಳ್— ೪-೪೨

ವಿವಿಧ ಸ್ತೋತ್ರಂಗಳಿಂದಂ ಸ್ತುತಿಯಿಸಿ ಭುವನಸ್ತುತ್ಯನಂ ಭವ್ಯವೃಂಜೋ
ತ್ಸವ ಪಂಕೇಜಾತದೊಳ್ ದೇವನ ಪದಯುಗದೊಳ್ ಮುಗ್ಗಿ ಗಂಧಾಕ್ಷತಾಧ್ಯ
ಷ್ಟವಿದೋತ್ಕೃಷ್ಟಾರ್ಚನಾ ದ್ರವ್ಯದಿನಭವನನಭ್ಯರ್ಚಿತಂಮಾಡಿ ಬೇಟಿಗ್ಕೊಂ
ಡು ವಿಮಾನಶ್ರೇಣಿ ಸುತ್ತುಂ ಬರೆ ಸುರಪತಿಗಳ್ ತಮ್ಮ ತಾಣಕ್ಕೆ
ಪೋದರ್, ೬-೧೩೧

ದ್ರವ್ಯಪೂಜೆಯ ವ್ಯಾಪಕತೆ ಇಲ್ಲಿ ಸ್ಪಷ್ಟವಾಗುವುದು.

'ಜೈನಧರ್ಮದಲ್ಲಿ ಶಾಸವದೇವತೆಗಳ ಪ್ರವೇಶ ಹಾಗೂ ಯಕ್ಷಿ ಆರಾಧನೆ ಕ್ರಿ. ಶ. ೬ನೆಯ ಶತಮಾನದ ಏಲಾಚಾರ್ಯರಿಂದ ಅಸ್ತಿತ್ವದಲ್ಲಿ ಬಂದುದಾಗಿ ತಿಳಿಯುತ್ತದೆ. ಇಂದ್ರನಂದೀಕೃತ 'ಜ್ವಾಲಾ ಮಾಲಿನಿ ಕಲ್ಪ' ಈ ದೇವತೆಯ ಮಹತ್ವವನ್ನು ಸಾರುವ ಪ್ರಥಮ ಕೃತಿ. ಪಂಪನಿಗೆ ಸಮಕಾಲೀನವಾದ ಈ ಕೃತಿ ಹುಟ್ಟಿದುದು ರಾಜಧಾನಿ ಮಳಖೇಡದಲ್ಲಿ. ಪಂಪನ ಗಂಗಾಧರಂ ಶಾಸನದ ಮೇಲೆ ಕೆತ್ತಲ್ಪಟ್ಟ 'ಚಕ್ರೇಶ್ವರ' ವಿಗ್ರಹ ಬಹುಶಃ ದಕ್ಷಿಣ ಭಾರತದ ಪ್ರಾಚೀನತಮ ಯಕ್ಷಶಿಲ್ಪದಲ್ಲಿ ಒಂದು. ಆತನ ಆದಿಪುರಾಣದಲ್ಲಿ ಬರುವ ಯಕ್ಷ-ಯಕ್ಷಿಯರ ಸ್ತುತಿ ಭಾರತೀಯ ಸಾಹಿತ್ಯದಲ್ಲಿಯೇ ಪ್ರಾಚೀನತಮ ಉಲ್ಲೇಖವೆಂದು ತೋರುತ್ತದೆ.[೩೦]

---

೩೦. ಡಾ. ಎಂ. ಎಂ. ಕಲಬುರ್ಗಿ : ಪಂಪ ಐತಿಹಾಸಿಕ –ಧಾರ್ಮಿಕ ಹಿನ್ನೆಲೆ.
(ಪಂಪ : ಒಂದು ಅಧ್ಯಯನ, ಬೆಂಗಳೂರು ವಿ. ವಿ. ೧೯೭೪). ಪು. ೩೧

ಪಂಪನಿಂದ ಆರಂಭವಾದ ಈ ಯಕ್ಷ-ಯಕ್ಷಿಯರ ಸ್ತುತಿ ಪರಂಪರೆ ರನ್ನನಲ್ಲಿಯು ಮುಂದುವರಿಯುತ್ತಿರುವುದನ್ನು ಕಾಣುತ್ತೇವೆ.

ಜಿನವೃಂದಾರಕರಿರ್ಪ
ತ್ತುನಾಲ್ವರಾತೀರ್ಥನಾಥ ಸಮುದಾಯದ ಶಾ
ಸನದೇವಿಯರ್ಕಳಿರ್ಪ
ತ್ತು ನಾಲ್ವರೀಗೆಮಗೆ ಯಕ್ಷರಕ್ಷಯ ಸುಖಮಂ ೧-೬

ಶ್ರೀಮದಗಣ್ಯ ಪುಣ್ಯನಿಧಿ ಜೈನಪದಾಂಬುಜಭೃಂಗಿ ಜೈನಧ
ರ್ಮಾಮೃತವಾರಿವರ್ಧಿತವಿನೇಯ ಜನೋತ್ಸವಸಸ್ಯಭೂಮಿ ಮ
ದ್ಭೂಮಿಗೆ ತಾನೆ ಬೇಲಿಯೆನಿಪಂಕದ ರೋಹಿಣಿಯಕ್ಷಿ ದಾನಚಿಂ
ತಾಮಣಿ ಮಾಟ್ಕೆ ಚಿಂತಿತಮನೋರಥಮಂ ಕವಿಚಕ್ರವರ್ತಿಯಾ ೧-೧೪

........."ಅಜಿತ ಶ್ರೀ ತೀರ್ಥಕೃತ್ಸಂಹವಿಷ್ಟರಸಂರಕ್ಷಣ ದಕ್ಷನಕ್ಷಯ
ಫಲಾಪೇಕ್ಷಂ
ಮಹಾಯಕ್ಷನಾದರದಿಂ ರಕ್ಷಿಸುತಿರ್ದುಪಾಸಗಣಶ್ರೀ
ಸೇವ್ಯರಂ ಭವ್ಯರಂ"- ೧-೧೫

ಎಂದು ಕವಿ ರನ್ನ ರೋಹಿಣಿ ಯಕ್ಷಿಯನ್ನೂ ಮಹಾಯಕ್ಷಿಯನ್ನೂ ಸ್ತುತಿಸಿದ್ದಾನೆ. ಅಕ್ಷಯ ಸುಖವನ್ನು, ಅಪೇಕ್ಷಿತ ಬಯಕೆಯನ್ನು ಪೂರೈಸುವ ಯಕ್ಷ-ಯಕ್ಷಿಯರು ಮುಂದೆ ಜನಪ್ರಿಯರಾಗುತ್ತ ಸಾಗಿದುದನ್ನು ಕಾಣುತ್ತೇವೆ.

೧೦ನೆಯ ಶತಮಾನದ ಪ್ರಮುಖ ವ್ಯಕ್ತಿಗಳಾದ ಚಾವುಂಡರಾಯ, ಮಲ್ಲಪ, ಪೊನ್ನಮಯ್ಯ, ಅತ್ತಿಮಬ್ಬೆಯರ ಜೀವನವನ್ನು ತೀರ ಸಮೀಪದಿಂದ ಕಂಡ ರನ್ನ ಅದನ್ನು ಅಜಿತ ಪುರಾಣದಲ್ಲಿ ಚಿತ್ರಿಸಿರುವುದರಿಂದ ಆಚರಣೆಯಲ್ಲಿದ್ದ ಅಂದಿನ ಜೈನ ಧರ್ಮದ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಈ ವ್ಯಕ್ತಿಗಳು ರನ್ನನ ಧಾರ್ಮಿಕ ಚಿಂತನೆಗಳ ಸ್ಪಂದನೆಗಳ ಅಭಿವ್ಯಕ್ತಿಗೆ ಕಾರಣರಾಗುತ್ತಾರೆ. ಮಲ್ಲಪ — ಪೊನ್ನಮಯ್ಯರು ರಾಮಲಕ್ಷ್ಮಣರಂತೆ, ಭೀಮಾರ್ಜುನರಂತೆ ಇದ್ದರು.[೩೧] ಅವರ ಮನೆ 'ಪಂಡಿತ ಮಂಡಳಿಗಂ ಕವಿ ಮಂಡಳಿಗಂ ತವರ್ಮನೆ'ಯಾಗಿತ್ತು.[೩೨] ಮಲ್ಲಪನು 'ಶೌರ್ಯಮಂ ಬಲ್ಮೆಯುಮಂ ಮೆಱೆದನಲ್ಲದೆ ಶಾಸ್ತ್ರ, ವಿದ್ಯಾಕುಶಲನೂ ಆಗಿದ್ದನು.[೩೩] ಪೊನ್ನನು ನಯವಿನಯ ಸಂಪನ್ನನೂ, ಧರ್ಮಕ್ಕೆ ಧರ್ಮನಂದನನ್ನಂ[೩೪] ಆಗಿದ್ದನು. ಗುರು ಜಿನಚಂದ್ರರ ಶಿಷ್ಯರಾದ ಇವರು ಪೊನ್ನನಿಂದ ಶಾಂತಿಪುರಾಣವನ್ನು ಬರೆಯಿಸಿಸಿದರು.[೩೫] ಮಂತ್ರಿ ಸೇನಾಪತಿಗಳಾದರೂ ಗುರುಗಳ ಮಾರ್ಗದರ್ಶನದಲ್ಲಿ ಶಾಸ್ತ್ರಾಧ್ಯಯನ ಕೈಕೊಂಡ ಇವರು ತಮ್ಮ ಶಕ್ತಿ, ಸಮಯ— ಸಂಪತ್ತನ್ನು ಧರ್ಮಕಾರ್ಯ

೩೧. ಅ. ಪು. ೧-೩೩. ೩೨. ಅದೇ ೧-೨೮. ೩೩. ಅದೇ ೧-೩೧.
೩೪. ಅದೇ ೧-೩೨. ೩೫. ಅ. ೧-೩೪,೫

ಕ್ಕಾಗಿ ವಿನಿಯೋಗಿಸುತ್ತಿದ್ದುದು ಮಹತ್ವಪೂರ್ಣವಾಗಿದೆ. ಕಲೆ-ಸಾಹಿತ್ಯಗಳಿಗೆ ಉದಾರ ಆಶ್ರಯ ದೊರೆತು ಅವುಗಳ ಬೆಳವಣಿಗೆಗೆ ಅಂದಿನ ಧಾರ್ಮಿಕ ಪರಿಸರ ಪೂರಕವಾಗಿದ್ದಿತು. ಇದರಿಂದಾಗಿ ಮಹತ್ವಪೂರ್ಣ ಸಾಹಿತ್ಯ ಕೃತಿಗಳೂ, ಶಿಲ್ಪಕಲಾ ಕೃತಿಗಳೂ ಮೂಡಿಬಂದವು.

ಇಂಥ ಧಾರ್ಮಿಕ ಪರಿಸರದಲ್ಲಿ ಜನಿಸಿ ಬೆಳೆದು ಬಂದ ಅತ್ತಿಮಬ್ಬೆ ರನ್ನನಿಗೆ ಆಶ್ರಯವಿತ್ತು ಅವನಿಂದ ಅಜಿತಪುರಾಣವನ್ನು ಬರೆಯಿಸಿದಳು. ದಾನಚಿಂತಾ ಮಣಿಯ ಪವಿತ್ರ ಚಾರಿತ್ರ್ಯವನ್ನು ಕವಿ ರನ್ನ ಅವಕಾಶ ಸಿಕ್ಕಾಗಲೆಲ್ಲ ಹೃದಯದುಂಬಿ ವರ್ಣಿಸಿದ್ದಾನೆ. ಪತಿವಿಯೋಗದಿಂದ ಅಸಿಧಾರಾ ವ್ರತಗಳನ್ನು ಸ್ವೀಕರಿಸಿ ಶರೀರ ವನ್ನು ಉಪವಾಸದಿಂದಲೂ ತನ್ನೊಡಮೆಯನು ಅನವರತದಾನದಿಂದ ವ್ಯಯಿಸಿ ಕೀರ್ತಿವಂತಳಾದಳು.[೩೬] ಜಿನಧರ್ಮದ ಯಾವ ಶವರ್ತಿನಿ ದಾನ ಪೂಜೆ, ಶೀಲ ಮುಪವಾಸವನ್ನು ಪ್ರಕಟಿಸಿದಳು.[೩೭] ಶ್ರಾವಕಥ ಧರ್ಮದಲ್ಲಿ ಇವಳಿಗೆ ಸಮಾನ ರಾರೂ ಇಲ್ಲವೆಂದು ಜನ ಹೊಗಳುತ್ತಿದ್ದರಂತೆ.[೩೮]

> ಬುಧಜನವಂದಿತೆ ಧರ್ಮ । ಪ್ರಧಾನ ದರ್ಶನ ವಿಶುದ್ಧೆ, ದಾನಗುಣೈಕಾಂ
> ಬುಧಿಯೆನಿಸಿದ ಕವಿವರಕಾ । ಮಧೇಮುವೆಂದೆಂಬುದತ್ತಿಮಬ್ಬೆಯನೆ ಜಗಂ,
> ಆಸನ್ನಭವ್ಯೆಯುಂ ಜಿನ । ಶಾಸನ ದೀಪಿಕೆಯು ಮೆನಿಸಿ ಮಣಿಕನಕಮಯೋ
> ದ್ಭಾವಿಸಿ ಜಿನಪ್ರತಿಯೆಗಳಂ । ಸಾಸಿರದಯ್ನೂಟ ನರ್ತಿಯಂ
>
> ಮಾಡಿಸಿದಳ್ ೧–೫೭
>
> ಬಿಳಿಯರಳೆಯಂತೆ ಗಂಗಾ । ಜಳದಂತೆಸೆವಜಿತಸೇನ ಮುನಿಪತಿಯ ಗುಣಾ
> ವಳಿಯಂತೆ ನೆಗಟ ಕೊಪಣಾ । ಚಳದಂತೆ ಪವಿತ್ರಮತ್ತಿಮಬ್ಬೆಯ
>
> ಚರಿತಂ— ೧೨–೭

ಎಂದು ವರ್ಣಿಸುವಲ್ಲಿ ಕವಿ ರನ್ನ ತನ್ನ ಆಶ್ರಯದಾತೆಗೆ ಕೃತಜ್ಞತೆಯನ್ನು ಸಲ್ಲಿಸುವು ದೇನೋ ನಿಜ. ಆದರೆ ಅದರೊಂದಿಗೆ ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಸ್ಫುಟಗೊಳಿ ಸುವನು. ಧರ್ಮದ ಅಮೂರ್ತ ತತ್ವಗಳು ಅವನಿಗೆ ಮಾನ್ಯವಾದರೂ, ಅವುಗಳನ್ನು ಆಚರಣೆಯಲ್ಲಿ ತಂದ ವ್ಯಕ್ತಿಗಳು ಆ ತತ್ವಗಳಿಗಿಂತಲೂ ಶ್ರೇಷ್ಠರಾಗಿ ಕಂಡರೆ ಆಶ್ಚರ್ಯ ವಿಲ್ಲ. ಉದಾತ್ತ ತತ್ವಗಳಿಗೆ ಬೆಲೆ ಬರುವದು ಅವು ಆಚರಣೆಯಲ್ಲಿಳಿದಾಗ ಮಾತ್ರ. ಸಮಕಾಲೀನ ಬದುಕಿನಲ್ಲಿ ಈ ತತ್ವಗಳು ಎಷ್ಟರಮಟ್ಟಿಗೆ ಅಭಿವ್ಯಕ್ತಗೊಳ್ಳುತ್ತಿದ್ದ ವೆಂಬುದನ್ನು ಅತ್ತಿಮಬ್ಬೆಯ ಮೂಲಕ ತಿಳಿಸಿದ್ದಾನೆ. ಅವಳ ಆದರ್ಶ ವ್ಯಕ್ತಿತ್ವ ವನ್ನು ಕಂಡಿದ್ದಾನೆ; ಕಾಣಿಸಿದ್ದಾನೆ, ಅಲ್ಲದೆ—

> ಜಿನಪದ ಭಕ್ತೆ ಜಗತ್ರಯ । ಜನವಂದಿತೆ ಚಕ್ರವರ್ತಿಪೂಜಿತೆ ಜಿನಶಾ
> ಸನರುಚಿ ಪಡೆವಳ ತೈಲನ । ಜನನಿಯೆ ತೀರ್ಥಕರಜನನಿಯನ್ನ-
>
> ದರೊಳರೇ— ೧–೫೫

---

೩೬. ಅದೇ ೧–೫೧, ೩೭. ಅದೇ ೧–೫೨, ೩೮. ಅದೇ ೧–೫೩.

'...... ತೈಲನ ಜನನಿಗೆ ಜಿನಜನನಿಗೇಂ ವಿಕಲ್ಪಮುಂಟೆ' — ೧-೫೬

ಎಂದು ಅವಳನ್ನು ಜಿನಜನನಿಯಂದೇ ಕರೆದಿದ್ದಾನೆ. ಪುರಾಣಪುರುಷರಷ್ಟೇ ಅವಳೂ ಶ್ರೇಷ್ಠಳೆಂದು ಹೇಳುವಲ್ಲಿ ಕವಿ ರನ್ನ ಔದಾರ್ಯವನ್ನು, ಸಾಹಸವೃತ್ತಿಯನ್ನೂ ತೋರಿದ್ದಾನೆ.

ಅಂದಿನ ಧಾರ್ಮಿಕ ಪರಿಸರದಲ್ಲಿ ದಾನಕ್ಕೆ ವಿಶೇಷ ಮಹತ್ವವಿದ್ದುದನ್ನು ಕವಿ ರನ್ನನ ಅತ್ತಿಮಬ್ಬೆಯ ದಾನದ ವರ್ಣನೆಗಳಿಂದ ತಿಳಿಯುತ್ತದೆ. ಅದರಲ್ಲಿ ಶಾಸ್ತ್ರ ದಾನವೂ ಮುಖ್ಯವಾದುದು. ಪೊನ್ನನಿಂದ 'ಶಾಂತಿಪುರಾಣವನ್ನು' ಬರೆಯಿಸಿದುದು ಕವಿಗಳಿಗೆ ಆಶ್ರಯವನ್ನಿತ್ತುದು ಅಂದಿನ ಧಾರ್ಮಿಕ ಶ್ರದ್ಧೆಯ ಕುರುಹುಗಳಾಗಿವೆ. ಜಿನಪೂಜೆ, ಜಿನಾಲಯ ಸಂರಕ್ಷಣೆಗೆ ದಾನ-ದತ್ತಿಗಳನ್ನಿತ್ತ ಉದಾಹರಣೆಗಳೊಂದಿಗೆ ಸಾವಿರದೈನೂರು ಜಿನಬಿಂಬಗಳನ್ನು ದಾನಗೈದ ಮಹಿಮೆ ಅತ್ತಿಮಬ್ಬೆಯದು, ಅವಳು ಉನ್ನತ ಕುಕ್ಕುಟದರ್ಶನಕ್ಕೆ ಹೋದುದು– ತೀರ್ಥಯಾತ್ರೆಯ ಮಹತ್ವವನ್ನು ಸಾರುವದು.

೧೧ನೆಯ ಶತಮಾನ ಜೈನ ಧರ್ಮದ ವೈಭವದ ಕಾಲ. ಅದರ ತತ್ವಗಳು ವ್ಯಾಪಕವಾಗಿ ಹರಡಿದ್ದರೂ ಜನಸಾಮಾನ್ಯರ ಮನದಲ್ಲಿ ಅನೇಕ ನಂಬುಗೆ– ಅತಿಶಯ ಗಳು ಮನೆಮಾಡಿಕೊಂಡಿದ್ದು ಸಾಗಿ ಬಂದುದನ್ನು ಕಾಣುತ್ತೇವೆ. ಮತ ತತ್ವಗಳ ಚೌಕಟ್ಟಿಗೆ ಸಿಲುಕದೆ ಅವು ಮುಂದುವರಿದಿವೆ.

ಭಗೀರಥನಿಗೆ ಕೇವಲ ಜ್ಞಾನೋತ್ಪತ್ತಿಯಾಗಲು ದೇವತೆಗಳ ಸಮೂಹ ಬಂದು ಅಭಿಷೇಕ ಮಾಡಲು ಆ ಪವಿತ್ರ ಜಲಪ್ರವಾಹ ಸಂಗಮದಿಂದ ಗಂಗಾಜಲ ಜಗನ್ಮಂಗಳ ಮಾದುದು.[೩೯] 'ಸಕಲ ಜಗನ್ಮಂಗಳಗಂಗಾದಿ ಪುಣ್ಯಸರಿತ್ಸರೋವರಾನ್ವಿತ ಪೂತ ಶೀತ ಜಲಂಗಳಿಂ' (೪-೫೦ ವ) ಎಂದು ತೀರ್ಥವನ್ನು ಪವಿತ್ರ ಜಲವೆಂದು ಬಗೆ ಯುವ ನಂಬಿಗೆ ವ್ಯಕ್ತವಾಗಿದೆ. ಅಜಿತ ತೀರ್ಥಂಕರರ ಪಂಚಕಲ್ಯಾಣಗಳಲ್ಲಿ ರೋಹಿಣಿ ನಕ್ಷತ್ರ ಬಂದುದರಿಂದ ಅದು ಶುಭಕಾರ್ಯಗಳಿಗೆ ಪವಿತ್ರವಾದುದು (೯-೨) ಎಂಬ ನಂಬುಗೆ ಸ್ಥಿರವಾಗಲು ಕಾರಣವಾಯಿತು

ಶ್ರವಣಬೆಳಗೊಳದ ಗೊಮ್ಮಟನ ದರ್ಶನವಾಗುವವರೆಗೆ ಆಹಾರ ಸ್ವೀಕರಿಸೆ ನೆಂದು ವ್ರತದಿಂದ ಬೆಟ್ಟವನ್ನು ಹತ್ತಿದ ಅತ್ತಿಮಬ್ಬೆಯ ಆಯಾಸ ನಿವಾರಣೆಗಾಗಿ ಅಕಾಲವೃಷ್ಟಿಯಾಯಿತು, ದೇವಭಕ್ತಿಗೆ ಪುಷ್ಪವೃಷ್ಟಿಯಾಗುವುದು ಆಶ್ಚರ್ಯವೆ ? ಎಂದು ಅತಿಶಯವನ್ನು ಕವಿ ರನ್ನ ಬೆಂಬಲಿಸುವನು ಅಲ್ಲದೆ—

ಶೀಲಾಲಂಕೃತೆಯಂ ಗುಣ
ಮಾಲಾಲಂಕೃತೆಯನಾ ಮಹಾಸತಿಯಂ ಶ್ರೀ

೩೯. ಅ. ಪು. ೧೨-೪ ವ.

ತೈಲಾಂಬಿಕೆಯು ಪೆಸರ್ಗೊಳೆ
ಬಾಲಿಯರಂ ಖಳಕಲಂಕಮೇಂ ಪೊರ್ದುಗುಮೇ ೧-೭೪

ಅಳುರದು ಕೀರ್ತ್ತಿ, ಮುಟ್ಟದು ವಿಷಾಹಿ, ಮಹಾಸತಿಯಿರ್ದ ಮಂಡಲಂ
ಬೆಳೆವುದು, ಬೇಡಿದಂತೆ ಮುಗಿಲ್ ಕೊಳ್ವುದೆನಿಪ್ಪ. ಜನಕ್ಕೆ ನೋಂತ ಭೂ
ತಿಲಕಪವಿತ್ರೆಯುಂ ಗುಣಪವಿತ್ರೆಯುನಾ ಸತಿಯುಂ ಮಹಾಸತೀ
ತಿಲಕೆಯನತ್ತಿಮಬ್ಬರಸಿಯುಂ ಪೆಸರ್ಗೊಳ್ವುದು ಪುಣ್ಯಕಾರಣಂ ೧-೭೫

ಇಲ್ಲಿನ ನಂಬುಗೆಗಳ ವೈಜ್ಞಾನಿಕ ಸತ್ಯಾಸತ್ಯತೆಗಿಂತ ಅವುಗಳ ಹಿಂದಿರುವ ಭಾವನೆಯ ತೀವ್ರತೆಯನ್ನೇ ಗ್ರಹಿಸಬೇಕಾಗುವದು. ವ್ಯಕ್ತಿಯ ಉದಾತ್ತಚಾರಿತ್ರ್ಯ ಜೀವಿತ ಕಾಲದಲ್ಲಿಯೇ ಹೇಗೆ ಕಲ್ಪನೆಯ ರೆಕ್ಕೆ ಪಕ್ಕಗಳೊಂದಿಗೆ ಗರಿಗೆದರಿ ವಿಹಾರ ಕೈಗೊಳ್ಳ ಬಲ್ಲುದೆಂಬದನ್ನು ಕಾಣಬೇಕಾಗುತ್ತದೆ. ಅಲ್ಲದೆ ಸುಪುತ್ರನಿಲ್ಲದ ಭವನ, ಪೆಂಪಿಲ್ಲದ ಕುಲವಧು, ಘೃತವಿಲ್ಲದ ಊಟ, ಪುಣ್ಯಶ್ರೀಯಿಲ್ಲದ ಪೆರ್ಮೆ, ಛಲವಿಲ್ಲದ ಗಂಡ, ದಯೆಯಿಲ್ಲದ ಧರ್ಮ ಒಪ್ಪುಗುಮೆ ? ಎಂದು ಅಂದಿನ ಜನ ಬಳಕೆಯ ಮಾತಿ ನಲ್ಲಿಯೂ ಕೆಲವು ಆದರ್ಶಗಳನ್ನು ಸೂಚಿಸುವನು.

'ಪಂಪನ ಕಾಲದಲ್ಲಿಯೇ ಶೈವಶಾಖೆಗಳಾದ ನಕುಲೀಶ, ಪಾಶುಪತಗಳಂತಹ ಸದಾಚಾರ ಪಂಥಗಳ ಬೆಳಕು ಕಾಪಾಲಿಕದಂತಹ ವಾಮಾಚಾರ ಪಂಥಗಳ ಬೆಂಕಿ ಬೆಳಗುತಲಿತ್ತು ಎಂಬ ಅಭಿಪ್ರಾಯವಿದೆ. ಪಂಪ ಇವುಗಳನ್ನು ಗಮನಿಸಿದ್ದರೂ ಮತವ್ಯಾಮೋಹದ ಅತಿರೇಕಕ್ಕೆ ಹೋಗದೆ ಮತಾಭಿಮಾನಿಯಾಗಿ ಬೆಳೆದರೂ ಮತ ಮೂಢನಾಗಿ ಬೆಳೆಯಲಿಲ್ಲ. ಅವನಲ್ಲಿ ಇತರ ಮತ-ಧರ್ಮಗಳ ಖಂಡನೆ ಪುರಾಣ ಪರಂಪರೆಯಾಗಿ ಬಂದರೂ "ಮನುಷ್ಯ ಜಾತಿ ತಾನೊಂದೆ ವಲಂ" ಎಂಬ ಉದಾತ್ತ ದೃಷ್ಟಿ ಅವನದು. ಪಂಪನ ಗಾಂಭೀರ್ಯ ಸಂಯಮ ರನ್ನನಲ್ಲಿ ಕಾಣದು.

ಪರಮತಗಳಲ್ಲಿ ಫಲವಿಲ್ಲ. ಅವುಗಳನ್ನು ನಂಬಿ ಕೆಡಬೇಡ ಎಲೆಜೀವನೆ
ಮೇಲೆನಿಸುವ ಜಿನಧರ್ಮಂ
ಪೋಲದು ಪೇೞೆ ಪೆಱರ ಪೇೞ್ವ ಧರ್ಮದ ತೇಱ ನಂ
ತಾತಿಂಬ ತೆಱದೆ ಪಶುವಿನ
ಪಾಲಂ ಪೋಲುವುದೆ ನಾಯಕಳ್ಳಿಯ ಪಾಲ್ಗಳ್. ೨-೭೭

ಪರಮತಗಳು ಅಜ್ಞಾನಂಧಕೂಪಗಳೆ (೧-೪) ಎಂಬ ಹೇಳಿಕೆಗಳು ರನ್ನನ ಕಾಲದ ಧಾರ್ಮಿಕ ಪರಿಸರದಲ್ಲಿಯ ಸೌಹಾರ್ದಭಾವ ಮರೆಯಾಗುತ್ತಿರುವುದನ್ನು ಸೂಚಿಸು ತ್ತಿದೆ. ಜೈನಧರ್ಮದ ಇಳಿಮುಖವೂ ಹತಾಶಭಾವವೂ ಇಂಥ ಕಟುನುಡಿಗಳಿಗೆ ಕಾರಣವಾಗಿರಬಹುದು.

ರನ್ನ ಕವಿಯಾಗಿ ಚಾವುಂಡರಾಯ ಅತ್ತಿಮಬ್ಬೆ, ಅಜಿತಸೇನರ ಸಹವಾಸದಿಂದ ಪಡೆದ ಧಾರ್ಮಿಕ ಜ್ಞಾನವನ್ನು ತನ್ನ ಪುರಾಣತಿಲಕದಲ್ಲಿ ತುಂಬಿರುವನು. ಜೊತೆಗೆ ಅತ್ತಿಮಬ್ಬೆಯಂತಹ ಪವಿತ್ರ ಜೀವನವುಳ್ಳ ಚಾರಿತ್ರಿಕ ವ್ಯಕ್ತಿಯನ್ನು ಪುರಾಣ ಪುರುಷರ ಸಾಲಿನಲ್ಲಿ ನಿಲ್ಲಿಸಿ ಧೈರ್ಯತೋರಿದ್ದಾನೆ. ಅದರಂತೆ ಅಜಿತ ತೀರ್ಥಂಕರ, ಸಗರ ಚಕ್ರವರ್ತಿ, ಅತ್ತಿಮಬ್ಬೆಯ ಕಥೆಯ ಮೂಲಕ ತನ್ನ ಸಮಕಾಲೀನ ಧಾರ್ಮಿಕ ಪರಿಸರದ ಸಿಂಹಾವಲೋಕನವನ್ನು ಮಾಡಿದ್ದಾನೆ ಕವಿ ರನ್ನ.

ಚಾವುಂಡರಾಯನ ಧಾರ್ಮಿಕ ಸಾಧನೆ

ಬಿ. ಬಿ. ಮಹೀಶವಾಡಿ

ಗಂಗವಂಶದ ಅರಸರಲ್ಲಿ ಮಾರಸಿಂಹ (II), ರಾಚಮಲ್ಲ. ರಕ್ಕಸಗಂಗ ಈ ಮೂವರೂ ಅರಸರಿಗೆ ಚಾವುಂಡರಾಯನು ಮಂತ್ರಿಯೂ ಸೇನಾಪತಿಯೂ ಆಗಿದ್ದನು. ಆದರೂ, ಇವರೊಳಗೆ ಚಾವುಂಡರಾಯನಿಗೆ ರಾಚಮಲ್ಲನ ಮೇಲೆ ಪರಮ ಭಕ್ತಿ. ರಾಚಮಲ್ಲನ ಗುರುಗಳಾದ ಅಜಿತಸೇನಾಚಾರ್ಯರೆ ಚಾವುಂಡರಾಯನಿಗೂ ಗುರುಗಳಾಗಿದ್ದರು,

ಚಾವುಂಡರಾಯನು ಜೈನ; ಬ್ರಹ್ಮಕ್ಷತ್ರಿಯನೆಂದು ಒಂದು ಶಾಸನದಲ್ಲಿ (ಶ್ರ. ಬೆ. ಶಾ. ನಂ. ೨೮೧) ಹೇಳಿದೆ. ಅದನ್ನು ಜಿ. ಪಿ. ರಾಜರತ್ನಂ ಅವರು ಹೀಗೆ ಭಾವಿಸಿದ್ದಾರೆ.[೧] 'ಇವನ ಪೂರ್ವಿಕರು ಬ್ರಾಹ್ಮಣವಂಶದಲ್ಲಿ ಹುಟ್ಟಿ ಕ್ರಮೇಣ ತಮ್ಮ ಬ್ರಾಹ್ಮಣ ಯೋಗ್ಯವಾದ ಕರ್ಮಗಳನ್ನು ಬಿಟ್ಟು ಕ್ಷತ್ರಿಯರಿಗೆ ಉಚಿತವಾದ ಕರ್ಮಗಳನ್ನು ನಡೆಸಿದರೆಂದು ಕಾಣುತ್ತದೆ. (ಶ್ರೀ ಗೋಮಟೇಶ್ವರ– ೧೯೩೮, ಪು. ೪೫)' ಇದು ಸರಿಯಲ್ಲ. ಜೈನರಲ್ಲಿ ಜೈನ ಬ್ರಾಹ್ಮಣ (ಅಂದರೆ ಉಪಾಧ್ಯಾಯರು, ಅರ್ಚಕರು, ಇಂದ್ರರು ಎಂಬ ಉಪಜಾತಿ ಇದೆ. ಜೈನ ಕ್ಷತ್ರಿಯನು ಬ್ರಾಹ್ಮಣ (ಜೈನ) ಕನ್ನೆಯನ್ನು ಲಗ್ನವಾಗುವುದಕ್ಕೆ ಶಾಸ್ತ್ರದ ಒಪ್ಪಿಗೆ ಇದೆ. ಹೀಗೆ ಇವನು ಜೈನಕ್ಷತ್ರಿಯ ತಂದೆ ಜೈನ ಬ್ರಾಹ್ಮಣ ತಾಯಿಯಿಂದ ಹುಟ್ಟಿದವನಾಗಿರಬೇಕೆಂದು ನನ್ನ ಭಾವನೆ. ಚಾವುಂಡರಾಯನ ತಂದೆಯ ಹೆಸರು ಮಹಾಬಲ ತಾಯಿಯ ಹೆಸರು ಕಾಳಲಾದೇವಿ ಎಂದಿದೆ. ಮಹಾತಾಯಿಯಾದ ಕಾಳಲಾದೇವಿಯ ಆಶೆಯನ್ನು ಈಡೇರಿಸುವದಕ್ಕಾಗಿಯೇ ಗೊಮ್ಮಟನ ಪ್ರತಿಷ್ಠೆ ನಡೆಯಿತೆಂಬ ವಿಷಯ ಸರ್ವಶ್ರುತ.

ಚಾವುಂಡರಾಯ ಮಹಾಪರಾಕ್ರಮಿ. ಸಮರದುರಂಧರ, ವೀರಮಾರ್ತಾಂಡ, ರಣರಂಗಸಿಂಗ, ವೈರಿಕುಲಕಾಲದಂಡ, ಭುಜವಿಕ್ರಮ, ಸಮರ ಪರಶುರಾಮ, ಪ್ರತಿಪಕ್ಷರಾಕ್ಷಸ, ಭಟಮಾರಿ ಮುಂತಾದ ಬಿರುದುಗಳೇ ಅವನ ಶೌರ್ಯಸಾಹಸಗಳನ್ನು ಸಾರುತ್ತವೆ. ಚಾವುಂಡರಾಯನು ಮಹಾಧಾರ್ಮಿಕನೂ ಹೌದು. ಗುಣವಂತಾವಂ, ಸಮ್ಯಕ್ತ್ವ ರತ್ನಾಕರಂ, ಶೌಚಾಭರಣಂ, ಸತ್ಯಯುಧಿಷ್ಠಿರಂ, ಗುಣರತ್ನ ಭೂಷಣ ಮುಂತಾದ ಬಿರುದುಗಳು ಅವನು ಪರಮಧಾರ್ಮಿಕನೆನ್ನುವುದಕ್ಕೆ ಆಧಾರಗಳಾಗಿವೆ.

೧. ಜಿ. ಪಿ. ರಾಜರತ್ನಂ : ಶ್ರೀ ಗೋಮಟೇಶ್ವರ (೧೯೩೮) ಪು. ೪೫.

ಅವನ 'ಕವಿಜನಶೇಖರ' ಎಂಬ ಬಿರುದು ಅವನ ಸಾಹಿತ್ಯ ಅಭಿರುಚಿಯನ್ನೂ ಕವಿಗಳಿಗೆ ಆಶ್ರಯದಾತನೆಂಬುದನ್ನೂ ಸೂಚಿಸುತ್ತದೆ. ಕವಿಚಕ್ರವರ್ತಿಯಾದ ರನ್ನನಿಗೆ, ನಾಗವರ್ಮನಿಗೆ ಚಾವುಂಡರಾಯನ ಆಶ್ರಯವಿತ್ತು. ಚಾವುಂಡರಾಯ ಸ್ವತಃ ಕವಿಯೂ ಆಗಿದ್ದನೆಂಬುದಕ್ಕೆ ಅವನು ರಚಿಸಿದ ತ್ರಿಷಷ್ಠಿ ಲಕ್ಷಣ ಮಹಾಪುರಾಣ ಅಂದರೆ ಚಾವುಂಡರಾಯ ಪುರಾಣ[೨] ವೆಂಬ ಗ್ರಂಥವನ್ನು ಕನ್ನಡದಲ್ಲಿಯೂ, ಚರಿತ್ರ ಸಾರ[೩] ಎಂಬ ಗ್ರಂಥವನ್ನು ಸಂಸ್ಕೃತದಲ್ಲಿಯೂ, ಗೊಮ್ಮಟಸಾರದ ಕನ್ನಡ ಟೀಕೆಯ ಗ್ರಂಥವಾದ ವೀರಮಾರ್ತಾಂಡೀ[೪]ಯವನ್ನು ಕನ್ನಡದಲ್ಲಿಯೂ ಬರೆದುದೇ ಸಾಕ್ಷಿ.

ಚಾವುಂಡರಾಯನ ಹೆಂಡತಿಯ ಹೆಸರು ಅಜಿತಾದೇವಿಯೆಂದೂ, ಮಗನ ಹೆಸರು ಜಿನದೇವಣನೆಂದೂ ತಿಳಿದುಬರುತ್ತದೆ. ೧೫೦ ನೆಯ ಶ್ರ. ಬೆ. ಶಾ. ಮಗನಾದ ಜಿನದೇವಣನ ವಿಷಯವನ್ನು ತಿಳಿಸುತ್ತದೆ.

೨೭೨, ೨೭೩, ೨೭೬ ನೆಯ ಶಾಸನಗಳು ಚಾವುಂಡರಾಯನು ಶ್ರವಣ ಬೆಳಗೊಳ ದಲ್ಲಿ ಬಾಹುಬಲಿ ಸ್ವಾಮಿಯನ್ನು ಪ್ರತಿಷ್ಠಾಪಿಸಿದನೆಂದು ಸಾರುತ್ತವೆ. ನಂ. ೩೩೬ ನೆಯ ಶಾಸನ ಬೊಪ್ಪಣ ಪಂಡಿತನು ಬರೆದದ್ದು. ಮೂರ್ತಿಯನ್ನು ಚಾವುಂಡ ರಾಯನು ಸ್ಥಾಪಿಸಿದ ವಿಷಯವನ್ನು ಅದಕ್ಕೆ ಸಂಬಂಧಿಸಿದ ಹಲವು ವಿವರಗಳನ್ನೂ ಒದಗಿಸುತ್ತದೆ.— (೧೨ ಶತ) ಚಿಕ್ಕಬೆಟ್ಟದ ಮೇಲೆಯೂ ಚಾವುಂಡರಾಯನು ನೇಮಿನಾಥ ಬಸದಿಯನ್ನು ಕಟ್ಟಿಸಿದನೆಂದು ತಿಳಿಯುತ್ತದೆ (ವಿಷಯ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳನ್ನು ಉಂಟು ಮಾಡಿದೆ.)

ಚಿಕ್ಕಬೆಟ್ಟದ ಮೇಲಿನ 'ಚಾವುಂಡರಾಯ ಬಸದಿ' ಎಂಬ ಹೆಸರಿನ ನೇಮಿನಾಥ ದೇವಾಲಯವನ್ನು ಚಾವುಂಡರಾಯನೆ ಮಾಡಿಸಿದನೆಂದು ಆರ್. ನರಸಿಂಹಾಚಾರ್ಯರು ಹೇಳುತ್ತಾರೆ. ಅದಕ್ಕೆ ಆಧಾರ ೧೨೨ನೆಯ ಶಾಸನ. 'ಚಾವುಂಡರಾಯ ಮಾಡಿಸಿದಂ' ಎಂಬ ಒಕ್ಕಣಿಕೆ ಇದೆ. ಅದರ ಕಾಲ ೯೮೨. ಸದ್ಯ ನೇಮಿನಾಥ ಮೂರ್ತಿಯ ಕೆಳಗಿರುವ ಶಾಸನದಲ್ಲಿ (ನಂ. ೧೨೦) ಗಂಗರಾಜನ ಮಗ ಏಚಣನು ಬೊಪ್ಪಣ ಚೈತ್ಯಾಲಯವೆಂದು ಪ್ರಸಿದ್ಧವಿರುವ ತ್ರೈಲೋಕ್ಯರಂಜನವೆಂಬ ಬಸದಿಯನ್ನು ಮಾಡಿಸಿದನು ಎಂದು ಹೇಳಲಾಗಿದೆ. ಬೇರೊಂದು ಎಡೆಯಲ್ಲಿ ಏಚಣನು ಕಟ್ಟಿಸಿದ ಬಸದಿಯಿಂದ ಬಹುಶಃ ಅದು ಜೀರ್ಣವಾಗಿ ಬಿದ್ದು ಹೋದಮೇಲೆ ನೇಮಿನಾಥನ ಮೂರ್ತಿಯನ್ನು ಚಾವುಂಡರಾಯ ಬಸದಿಗೆ ತಂದು (ಇಲ್ಲಿಯ ವಿಗ್ರಹ ಬಹುಶಃ ಅಷ್ಟರಲ್ಲಿಯೇ ನಷ್ಟವಾಗಿರಬಹುದು) ಪ್ರತಿಷ್ಠಾಪಿಸಿರಬಹುದು ಎಂದು ತೋರುತ್ತದೆ. ಈ ಶಾಸನ ಏಚಣ ಬರೆಸಿದ್ದು (ಕ್ರಿ. ಶ. ೧೧೩೮). 'ಇವೇ ಚಾವುಂಡರಾಯ ಬಸದಿ' ಎಂಬ ಹೆಸರಿನ ಜಿನಾಲಯದಲ್ಲಿ ಮೇಲೆ ಮಹಡಿಯೊಂದಿದೆ. ಅಲ್ಲಿ ಸಣ್ಣ ದೇವಾ ಲಯವಿದ್ದು ಅದರಲ್ಲಿ ಪಾರ್ಶ್ವನಾಥ ಸ್ವಾಮಿಯ ವಿಗ್ರಹವಿದೆ. ಶಾ. ನಂ. ೧೨೧

೨. ಬಿ. ಎಸ್. ಕುಲಕರ್ಣಿಯವರು ಕ. ವಿ. ವಿ. ಯಿಂದ ಇದನ್ನು ಈಗ ಪ್ರಕಟಿಸಿದ್ದಾರೆ.
೩–೪. ಚರಿತ್ರಸಾರ, ವೀರಮಾರ್ತಾಂಡಿಯ ಕೃತಿಗಳು ಇನ್ನೂ ಅಪ್ರಕಟಿತವಾಗಿವೆ.

(೬೭)ರಲ್ಲಿ ಚಾವುಂಡರಾಯನ ಮಗನಾದ ಜಿನದೇವಣ್ಣನು ೯೯೫ ರಲ್ಲಿ ಪಾರ್ಶ್ವನಾಥ ಸ್ವಾಮಿಯನ್ನು ಪ್ರತಿಷ್ಠಾಪಿಸಿದ ವಿಷಯವಿದೆ. ಭಿನ್ನಾಭಿಪ್ರಾಯಕ್ಕೆ ಮೂಲ ಕಾರಣವೆಂದರೆ "ಚಾವುಂಡರಾಯ ಮಾಡಿಸಿದಂ" ಎಂಬ ಅಕ್ಷರಗಳು ದೊಡ್ಡ ಬೆಟ್ಟ ದಲ್ಲಿಯ ಇಂಥದೇ ಶಾಸನದ ಅಕ್ಷರಕ್ಕಿಂತ ಭಿನ್ನವಾಗಿವೆ. ೧೫೧ ನೆಯ ಈ ಪಟ್ಟಿಕೆ ಯನ್ನು ೧೨ ಶತಮಾನದಲ್ಲಿ ಯಾರೋ ಬರೆದಿರಬೇಕೆಂದು ಬಾ. ರ. ಗೋಪಾಲ ಹಾಗೂ ಎಸ್. ಶೆಟ್ಟರ ಅವರು ಅಭಿಪ್ರಾಯ ತಳೆದಿದ್ದಾರೆ. ಚಾವುಂಡರಾಯನ ಹೆಸರು ಹೊತ್ತ ಈ ಬಸದಿ ಚಾವುಂಡರಾಯ ಕಟ್ಟಿಸಿದ್ದಲ್ಲವೆಂದು ಅವರು ಸ್ಪಷ್ಟವಾಗಿ ಹೇಳುತ್ತಾರೆ. ಈ ಅಭಿಪ್ರಾಯ ನನಗೆ ಸರಿ ಎನಿಸುವುದಿಲ್ಲ. ಚಾವುಂಡರಾಯನು ಬಸದಿಯನ್ನು ಕಟ್ಟಿಸಿ ಶಾಸನ ಬರೆಸಿರಲೂ ಬಹುದು. ಜಿನದೇವಣ್ಣನ ಪಾರ್ಶ್ವ ನಾಥಮೂರ್ತಿಯ ಪ್ರತಿಷ್ಠಾಪನೆಯ ಕಾಲದವರೆಗೂ ಅದು ಒಳ್ಳೆಯ ಸ್ಥಿತಿಯಲ್ಲಿಯೂ ಇದ್ದಿರಬಹುದು. ನಂತರ ನೇಮಿನಾಥ ಮೂರ್ತಿ ನಷ್ಟವಾಗಿ ಚಾವುಂಡರಾಯನ ಶಾಸನವೂ ನಷ್ಟವಾಗಿ ಹೋಗಿರಬೇಕು. ಏಚಣನು ಮಾಡಿಸಿದ ಬಸದಿಯಿಂದ ಆ ಬಸದಿ ಬಿದ್ದು ಹಾಳಾದ ಮೇಲೆ ಬಹುಶಃ ಇಲ್ಲಿಗೆ ಬಂದು ಈಗಿದ್ದಂತೆ ಸ್ಥಾಪಿಸಿರ ಬೇಕು. ಮತ್ತು ಚಾವುಂಡರಾಯನ ಬಸದಿಯನ್ನು ಜೀರ್ಣಗೊಳಿಸಿದಾಗ ಶಾಸನ ವನ್ನು ಹೊಸದಾಗಿ ಬರೆಸಿರಬೇಕು. ಆದ್ದರಿಂದ ಅಕ್ಷರ ಭಿನ್ನವಾಗಿವೆ.

ಬಾಹುಬಲಿಮೂರ್ತಿ ಸ್ಥಾಪನೆಗೆ ಚಾವುಂಡರಾಯನ ಕನಸಿನಲ್ಲಿ ಬಂದು ನೇಮಿ ನಾಥನ ಯಕ್ಷಿಯಾದ ಕೂಷ್ಮಾಂಡಿನಿ ಹೇಳಿದುದೇ ಮುಖ್ಯ—ಕಾರಣವೆನ್ನಲಾಗಿದೆ. ಅದಕ್ಕಾಗಿ ಚಾವುಂಡರಾಯ ನೇಮಿನಾಥ ಸ್ವಾಮಿಯ ಬಸದಿಯನ್ನು ಚಿಕ್ಕ ಬೆಟ್ಟದ ಮೇಲೆ ಕಟ್ಟಿಸಿ, ಕೂಷ್ಮಾಂಡಿನಿ ಯಕ್ಷಿಯ ವಿಗ್ರಹವನ್ನೂ ಅಲ್ಲಿ ಮಾಡಿಸಿ ನಿಲ್ಲಿಸಿರು ವುದು ಸಕಾರಣವಾಗಿಯೂ ಇದೆ. ಯೋಗ್ಯಸ್ಮಾರಕವಾಗಿಯೂ ಇದೆ.

ಪಂಚಬಾಣನ ಭುಜಬಲಿ ಚರಿತೆಯಲ್ಲಿ ಬಾಹುಬಲಿಯ ಮೂರ್ತಿಯನ್ನು ಚಾವುಂಡರಾಯನು ಪ್ರತಿಷ್ಠಾಪಿಸಿದ ವಿವರವಿದೆ. ಪೌದನಪುರದ ಬಾಹುಬಲಿ ಮೂರ್ತಿ ಯನ್ನು ನೋಡುವವರೆಗೆ ಚಾವುಂಡರಾಯನ ತಾಯಿ ಕಾಳಲಾದೇವಿ ಹಾಲು ಉಣ್ಣುವು ದಿಲ್ಲವೆಂದು ವ್ರತಕೈಕೊಂಡಳು. ಚಾವುಂಡರಾಯನು ಆ ವಿಷಯವನ್ನು ಹೆಂಡತಿಯಾದ ಅಜಿತಾದೇವಿಯಿಂದ ತಿಳಿದುಕೊಂಡನು. ತಾಯಿಯನ್ನು ಕರೆದುಕೊಂಡು ಪೌದನ ಪುರಕ್ಕೆ ಯಾತ್ರೆಗೆ ಹೊರಟನು. ದಾರಿಯಲ್ಲಿ ಕಳ್ವಪ್ಪುವಿನಲ್ಲಿ (ಚಿಕ್ಕಬೆಟ್ಟದಲ್ಲಿ) ತಂಗಿದಾಗ ಪದ್ಮಾವತಿ ಕನಸಿನಲ್ಲಿ ಕಾಣಿಸಿಕೊಂಡು ಪೌದನಪುರಕ್ಕೆ ಹೋಗದಿರಲು ತಿಳಿಸಿದಳೆಂದೂ, ಬಾಹುಬಲಿ ದೊಡ್ಡ ಬೆಟ್ಟದಲ್ಲಿಯೇ ದರ್ಶನಕೊಡುವನೆಂದೂ. ಹೇಳಿದ ವಿಷಯವಿದೆ. ಪಾತಾಳಕಂಭ, ಯಕ್ಷಕಂಭ, ತ್ಯಾಗದಕಂಭ, ಅಖಂಡ ಬಾಗಿಲು ಮತ್ತು ಅಲ್ಲಲ್ಲಿ ಹಂತಗಳನ್ನು ಚಾವುಂಡರಾಯನು ಬಾಹುಬಲಿ ವಿಗ್ರಹ ವನ್ನು ಸ್ಥಾಪಿಸಿದ ನಂತರ ಕಟ್ಟಿಸಿದನೆಂದು ಹೇಳಿದೆ.

ಚಾವುಂಡರಾಯನು ಎಷ್ಟೇ ಹಾಲನ್ನು ತರಿಸಿ ಬಾಹುಬಲಿಗೆ ಅಭಿಷೇಕ ಮಾಡಿದರೂ ಆ ಹಾಲೂ ಕೆಳತನಕ ಹರಿದು ಬರಲೇ ಇಲ್ಲ. ಗುಳ್ಳಕಾಯಿಯಲ್ಲಿ ಓರ್ವ ಮುದುಕಿ ತಂದ ಹಾಲನ್ನು ಎರೆದಾಗ ಹಾಲು ತುಂಬಿ ಹರಿದು ಕೆಳಗಿಳಿದು ಹರಿಯಿತಂತೆ. ಕೂಷ್ಮಾಂಡಿನಿಯೇ ಗುಳ್ಳಕಾಯಜ್ಜಿಯಾಗಿ ಬಂದು ಚಾವುಂಡರಾಯನ ಗರ್ವ ಹರಣ ಮಾಡಿದಳೆಂದು ಹೇಳುವರು. ಅಂದಿನಿಂದ ಆ ಮುದುಕಿಗೆ ಗುಳ್ಳಕಾಯಜ್ಜಿ ಎಂಬ ಹೆಸರಾಯಿತು. ಅವಳ ಮೂರ್ತಿಯನ್ನು ಮಾಡಿಸಿ ಚಾವುಂಡರಾಯನು ನಿಲ್ಲಿಸಿದನು. ಗುಳ್ಳಕಾಯಜ್ಜಿಯ ಬಿಳಿಯ ಗುಳ್ಳದಿಂದಲೆ "ಬೆಳ್ಗುಳ" ಎಂಬ ಹೆಸರಾಯಿತೆಂದೂ ತಿಳಿಯುವುದು. ಬೆಳುಗೊಳಕ್ಕೆ ಚಾವುಂಡರಾಯನು ಅಭಿನವ ಪೌದನಪುರವೆಂದು ನಾಮಕರಣ ಮಾಡಿದನಂತೆ.

ತ್ಯಾಗದ ಕಂಭವನ್ನೂ ಚಾವುಂಡರಾಯನೇ ನಿರ್ಮಿಸಿದನೆಂದು ಹೇಳಿಕೆ ಇದೆ. ತ್ಯಾಗದ ಕಂಭದ ಮೇಲೆ ಕೆತ್ತಿದ ೧೧೯ (೨೮೧) ಶಾಸನವೂ ಇದನ್ನು ಪುಷ್ಟೀಕರಿಸುತ್ತದೆ. ಈ ಶಾಸನದಲ್ಲಿ ಚಾವುಂಡರಾಯನ ಪ್ರತಾಪದ ವರ್ಣನೆ ಇದೆ. ಆದರೆ ಲೇಖನ ಪೂರ್ಣವಾಗಿ ದೊರೆತಿಲ್ಲ. ಪೆರ್ಗಡೆಕಣ್ಣನು ತನ್ನ ಒಂದು ಲೇಖನ ಬರೆಯಲು (೨೮೨) ಅದರ ಸ್ವಲ್ಪಭಾಗವನ್ನು ಅಳಿಸಿಹಾಕಿದನಂತೆ. ಅದರಿಂದಾಗಿ ಚಾವುಂಡರಾಯನ ಲೇಖನ ಅರ್ಧ ಭಾಗ ಮಾತ್ರ ಉಳಿದಿದೆ. ಪೂರ್ಣದೊರೆತಿದ್ದರೆ ಬಾಹುಬಲಿಮೂರ್ತಿಯ ಪ್ರತಿಷ್ಠಾಕಾಲ ಮುಂತಾದುವು ತಿಳಿಯಬಹುದಾಗಿತ್ತೆಂದು ವಿದ್ವಾಂಸರ ಹೇಳಿಕೆ ಇದೆ.[೨]

ಶ್ರವಣಬೆಳುಗೊಳದ ಗೊಮ್ಮಟೇಶ್ವರ ಮೂರ್ತಿಯನ್ನು ಚಾವುಂಡರಾಯನು ತನ್ನ ಗುರುಗಳಾದ ಅಜಿತ ಸೇನಾಚಾರ್ಯರ ಅಮೃತಹಸ್ತದಿಂದ ಕ್ರಿ. ಶ. ೯೮೧ ಮಾರ್ಚ ತಿಂಗಳ ೧೪ನೇ ತಾರೀಖಿನಂದು ಸೋಮವಾರ ಬೆಳಗಿನ ಜಾವದಲ್ಲಿ ಮಾಡಿಸಿದನೆಂದು ಸಾಮಾನ್ಯವಾಗಿ ಈಗ ಎಲ್ಲ ವಿದ್ವಾಂಸರು ಒಪ್ಪಿಕೊಂಡಿರುವಂತೆ ತೋರುತ್ತದೆ. ಇದೇ ಕಾಲವನ್ನು ನಿರ್ಧಾರವೆಂದು ಹಿಡಿದು ಈಗ ಸಹಸ್ರವರ್ಷಾಬ್ದಿ ಮಹೋತ್ಸವ ನಡೆಯಿತು. (ತಾ ೨೨ ಮಾರ್ಚ ೧೯೮೧) ಗೋಮಟೇಶ್ವರನ ಪ್ರತಿಷ್ಠೆ ಮುಗಿದ ಮೇಲೆ ಅಜಿತ ಸೇನಾಚಾರ್ಯರು ತಮ್ಮ ಊರಾದ ಧಾರವಾಡ ಜಿಲ್ಲೆಯ ಬಂಕಾಪುರಕ್ಕೆ ಮರಳಿ ಹೋದರೆಂದು ಹೇಳುತ್ತಾರೆ.

ಚಾವುಂಡರಾಯನ ಇನ್ನೊಬ್ಬರು ಗುರುಗಳು ನೇಮಿಚಂದ್ರಾಚಾರ್ಯರು ಅವರು ಚಾವುಂಡರಾಯನಿಗೋಸ್ಕರವಾಗಿಯೇ ಗೊಮ್ಮಟಸಾರ ಎಂಬ ಗ್ರಂಥವನ್ನು ಪ್ರಾಕೃತದಲ್ಲಿ ಬರೆದರೆಂದು ತಿಳಿಯುತ್ತದೆ. ನೇಮಿಚಂದ್ರಾಚಾರ್ಯರು (೧) ಗೊಮಟಸಾರ. (೨) ತ್ರಿಲೋಕಸಾರ, (೩) ಲಬ್ಧಸಾರ, (೪) ಕಣ್ಣಾಸಾರ (೫) ದ್ರವ್ಯಸಂಗ್ರಹ (೬) ತ್ರಿಭಂಗಿ (೭) ಪಯಡಿಸುಮುಕ್ಕಿತ್ತಣ (೮) ವಿಸಪರುವಣ—

೨. ಶ್ರವಣಬೆಳುಗೊಳ ಕೈಫಿಯ (ವಿವೇಕಾಭ್ಯುದಯ : ಸಂ : ಡಿ. ಪುಟ್ಟಸ್ವಾಮಿ, ೧೯೫೩)

ಮುಂತಾದ ಗ್ರಂಥಗಳನ್ನು ಬರೆದ ಪ್ರಕಾಂಡ ಪಂಡಿತರು. ದಿಗಂಬರ ಜಿನ ಮುನಿಗಳು.

ಗೋಮಟಸಾರದಲ್ಲಿ ಎರಡು ಭಾಗಗಳಿವೆ. ಒಂದನೆಯದು ಜೀವಕಾಂಡ ವೆಂದೂ, ಎರಡನೆಯದು ಕರ್ಮಕಾಂಡವೆಂದೂ ಕರೆಯಲ್ಪಡುತ್ತದೆ. ಚಾವುಂಡ ರಾಯನು, ಈ ಪ್ರಾಕೃತ ಗ್ರಂಥಕ್ಕೆ ಕನ್ನಡ ವೃತ್ತಿಯನ್ನು ಬರೆದಿದ್ದಾನೆ. ಚಾವುಂಡ ರಾಯನಿಗೆ ವೀರಮಾರ್ತಾಂಡನೆಂಬ ಬಿರುದು ಇದ್ದುದರಿಂದ ತನ್ನ ಕನ್ನಡ ವೃತ್ತಿಗೆ 'ವೀರಮಾರ್ತಾಂಡೀ' ಎಂದು ಹೆಸರಿಸಿದ್ದಾನೆ.

ಈಗ ಗೊಮ್ಮಟಸಾರ ಗ್ರಂಥದ ನಾಲ್ಕು ಟೀಕಾ ಗ್ರಂಥಗಳು ಉಪಲಬ್ಧವಾಗಿವೆ:

(೧) ಚಾವುಂಡರಾಯನ ಕರ್ಣಾಟಕ ವೃತ್ತಿ (ವೀರಮಾರ್ತಾಂಡೀ)

(೨) ಕೇಶವವರ್ಣಿಯ ಸಂಸ್ಕೃತ ಟೀಕೆ

(೩) ಅಭಯಚಂದ್ರ ಸಿದ್ಧಾಂತ ಚಕ್ರವರ್ತಿಯ ಮಂದಪ್ರಬೋಧಿನೀ ಟೀಕೆ

(೪) ಪಂಡಿತರ ತೋಡರಮಲ್ಲನ ಸಮ್ಯಗ್‌ಜ್ಞಾನ ಚಂದ್ರಿಕಾ ಹಿಂದೀ ಟೀಕೆ

ಈ ಹಿಂದೀ ಗ್ರಂಥದ ಕನ್ನಡ ಅನುವಾದ ಸಿದ್ಧವಾಗುತ್ತಿದೆ. ಕೆಲವೇ ದಿನಗಳಲ್ಲಿ ಪ್ರಕಟವಾಗುವ ನಿರೀಕ್ಷೆ ಇದೆ. ಚಾವುಂಡರಾಯರ ಟೀಕೆಯನ್ನೇ ಕೇಶವವರ್ಣಿ ಸಂಸ್ಕೃತಕ್ಕೆ ಪರಿವರ್ತಿಸಿದನೆಂದೂ, ಚಾವುಂಡರಾಯನ ಟೀಕೆ ಉಪಲಬ್ಧವಿಲ್ಲವೆಂದೂ ಹೇಳಲಾಗುತ್ತಿತ್ತು. ಆದರೆ ಈಗ ಅದು ಉಪಲಬ್ಧವಾಗಿದೆ.

ಚಾವುಂಡರಾಯನ ರಾಜಕೀಯ ಸಾಧನೆ ಮತ್ತು ಸಾಹಿತ್ಯಿಕ ಸಾಧನೆಗಳಿ ಗಿಂತಲೂ ಧಾರ್ಮಿಕ ಸಾಧನೆಯೇ ಮಿಗಿಲಾದುದು. ಇಂದಿನವರೆಗೂ ಅದು ಅಮರ ವಾಗಿ ಉಳಿದಿದೆ. ಮುಂದೆಯೂ ಉಳಿಯುವುದು. ಅವನ ಸಾಹಿತ್ಯಿಕ ಸಾಧನೆ ಯಲ್ಲಿಯೂ ಧಾರ್ಮಿಕ ಸಾಧನೆ ಸೇರಿಕೊಂಡು ಅದೇ ಮುಖ್ಯವಾಗಿದೆ.

ಚಾವುಂಡರಾಯನ ಧಾರ್ಮಿಕ ಸಾಧನೆಗಳನ್ನು ಪಟ್ಟೀಮಾಡಿ ಹೇಳುವುದಾದರೆ ಹೀಗೆ ಹೇಳಬಹುದಾಗಿದೆ :

(೧) ಶ್ರವಣಬೆಳುಗೊಳದ ದೊಡ್ಡ ಬೆಟ್ಟದ ಮೇಲೆ ಜಗತ್‌ಪ್ರಸಿದ್ಧವಾದ ಗೊಮ್ಮಟೇಶ್ವರ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದು, ತಾಯಿಯ ಆಶೆ ಯನ್ನು ಈಡೇರಿಸಿದ್ದು.

(೨) ಚಾವುಂಡರಾಯ ಪುರಾಣವನ್ನು ರಚಿಸಿದ್ದು.

(೩) ಚಿಕ್ಕಬೆಟ್ಟದಮೇಲೆ ನೇಮಿನಾಥ ಸ್ವಾಮಿಯ ಬಸದಿಯನ್ನು (ಚಾವುಂಡ ರಾಯ ಬಸದಿಯನ್ನು) ಕಟ್ಟಿಸಿದ್ದು ಕೂಷ್ಮಾಂಡಿನಿಯಕ್ಷಿಯನ್ನು ಸಿಲ್ಪಿಸಿದ್ದು.

(೪) ತ್ಯಾಗದ ಕಂಭ, ಅಖಂಡ ಬಾಗಿಲು, ಗುಳ್ಳಕಾಯಜ್ಜಿಯ ಮೂರ್ತಿ ಮುಂತಾದವುಗಳನ್ನು ಮಾಡಿಸಿದ್ದು.

(೫) ಚಾವುಂಡರಾಯನು ಬಾಹುಬಲಿ ಮೂರ್ತಿಯನ್ನು ನಿರ್ಮಾಣಮಾಡಿದ ಮೇಲೆ ತನ್ನ ಗುರುಗಳಾದ ನೇಮಿಚಂದ್ರ, ಸಿದ್ಧಾಂತ ಚಕ್ರವರ್ತಿಗಳನ್ನು ಶ್ರವಣಬೆಳಗೊಳದ ಮಠಾಧಿಪತಿಗಳನ್ನಾಗಿ ಮಾಡಿದನೆಂದು ಆಧಾರವಿದೆ. ಆದರೆ, ಅದಕ್ಕಿಂತ ಪೂರ್ವದಲ್ಲಿಯೇ ಶ್ರವಣಬೆಳುಗೊಳ ಗುರುಪರಂಪರೆ ನಡೆದು ಬಂದಿತ್ತು ಎಂದು ಬೇರೆ ಕೆಲವು ಆಧಾರಗಳಿಂದ ದಲ್ಲಿ ತಿಳಿದುಬರುತ್ತವೆ.

(೬) ಬೆಟ್ಟದ ಕೆಳಗೆ ಚಾವುಂಡರಾಯನು ಊರು ರಚಿಸಿ ೯೬ ಸಾವಿರ ವರಹಗಳ ಉತ್ಪನ್ನ ಬರುವ ೮೮ ಗ್ರಾಮಗಳನ್ನು ದಾನವಾಗಿ ಕೊಟ್ಟನೆಂದು ಪಂಚಬಾಣಕವಿಯ ಹೇಳಿಕೆ.

(೭) ಚಾವುಂಡರಾಯನು ರನ್ನ–ನಾಗವರ್ಮರಿಗೆ ಆಶ್ರಯ ನೀಡಿದನು. ಅವರು ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಸ್ವತಃ ಚಾವುಂಡರಾಯನು ಮೂರು ಕೃತಿಗಳನ್ನು ಬರೆದಿದ್ದಾನೆ. ನೇಮಿಚಂದ್ರಾಚಾರ್ಯರಿಂದ ಗ್ರಂಥಗಳನ್ನು ಬರೆಸಲು ಕಾರಣೀಭೂತನಾಗಿದ್ದಾನೆ.

ಒಟ್ಟಿನಲ್ಲಿ (೧) ಮೂರ್ತಿಸ್ಥಾಪನೆ, (೨) ಗ್ರಂಥರಚನೆ, (೩) ದಾನ, ಈ ಮೂರು ಪ್ರಮುಖ ಸಾಧನಗಳನ್ನು ಜೈನ ಧರ್ಮಪ್ರಭಾವನೆಗೆ ಚಾವುಂಡರಾಯನು ಬಳಸಿಕೊಂಡಿದ್ದಾನೆ. ಅವು ಇಂದಿಗೂ ಉಳಿದು ಅಜರಾಮರ ಕೀರ್ತಿಯನ್ನು ತಂದಿವೆ.

ಚಾವುಂಡರಾಯನ ರಾಜಕೀಯ ಸಾಧನೆ

ಬಿ. ವ್ಹಿ. ಶಿರೂರ

ಗಂಗವಂಶದ ಮಹಾಮಂತ್ರಿಯಾಗಿದ್ದ ಚಾವುಂಡರಾಯನನ್ನು 'ಚಾವುಂಡ ರಾಯ ಪುರಾಣ'ದ ಸಮಾಪ್ತಿಭಾಗದಲ್ಲಿ ಈ ರೀತಿ ಹೊಗಳಲಾಗಿದೆ : "ಮುನಿಸಿಂ ಮಾಹಾಂತರಾತಿ ಪ್ರಕಾರ ಮನಿಜಿ಼ದೊಟ್ಟಯ್ಸಿ ಲೋಕಕ್ಕೆ ಕಟ್ಬಾಳ್ತನದಿಂದೋ ರೋರ್ವರೋರೊಂದಜಿ಼ಕೆಯ ಯುಗದೊಳ್ ಸಂದರಾರೆಂಬ ಪೇಟಿ಼್ವಂನಿನಗಾವೊಂ ಪೇಳ್ವೊಡಂ ನಾಲ್ವರೆ ಕೃತಯುಗದೊಳ್ ಷಣ್ಮುಖಂ ತ್ರೇತೆದೊಳ್ ರಾಮನೃಪಂ ದ್ವಾಪರದೊಳ್ ಗಾಂಡೀವಿ, ಕಲಿಯುಗದೊಳ್ ವೀರಮಾರ್ತಂಡ ದೇವಂ[೧] ಇಲ್ಲಿ ಪುರಾಣ ಪುರುಷರ ವೀರವ್ಯಕ್ತಿತ್ವದೊಂದಿಗೆ ಚಾವುಂಡರಾಯನನ್ನು ಹೋಲಿಸಲಾಗಿದೆ. ಕೃತಯುಗದಲ್ಲಿ ಷಣ್ಮುಖ, ತ್ರೇತಾಯುಗದಲ್ಲಿ ರಾಮ, ದ್ವಾಪರದಲ್ಲಿ ಅರ್ಜುನರು ತಮ್ಮ ಅತಿಶಯ ಸಾಮರ್ಥ್ಯದಿಂದ ಖ್ಯಾತಿಪಡೆದಂತೆ, ಕಲಿಯುಗದಲ್ಲಿ ವೀರ ಮಾರ್ತಂಡದೇವ ಪ್ರಸಿದ್ಧನಾಗಿರುವನು ಎನ್ನಲಾಗಿದೆ. ಅಲ್ಲಿಯೇ ಮತ್ತೊಂದೆಡೆಗೆ—

"ಸುರಶೈಲಂ ಪಿರಿದಲ್ತು ವಾರ್ಧಿ ಪಿರಿದಲ್ತಾ ಮೇರುಗಂತಾ ವಾರ್ಧಿಗಂ
ಪಿರಿದುರ್ವೀತಳಮಲ್ತು ಮೇರುಗಿರಿಗಂ ವಾರಾದಿಗಂ ಧಾತ್ರಿಗಂ
ಪಿರಿದಾಶಾಂತರಮಲ್ತು ಮಂದರಸಮುದ್ರೋರ್ವೀ ದಿಗಂತಂಗಳಿಂ
ಪಿರಿದುಗ್ರಾರಿ ಜಯೋರ್ಜಿತ ಯಶಂ ಶ್ರೀ ವೀರಮಾರ್ತಂಡನಾ"[೨]

ಎಂದು ಹೊಗಳಲಾಗಿದೆ. ಮೇರು ದೊಡ್ಡದು, ಅಲ್ಲ: ಸಮುದ್ರ ದೊಡ್ಡದು, ಅಲ್ಲ; ಎರಡಕ್ಕೂ ದೊಡ್ಡದು ಪೃಥ್ವಿ, ಅಲ್ಲ; ಈ ಮೂರಕ್ಕೂ ದಿಗಂತಗಳು ದೊಡ್ಡವು, ಅಲ್ಲ; ಈ ಎಲ್ಲಕ್ಕೂ, ದೊಡ್ಡದು ಶ್ರೀವೀರಮಾರ್ತಂಡನ ಶತ್ರುಜಯಾ ರ್ಜಿತ ಕೀರ್ತಿಯ ಏಳಿಗೆ. ಈ ಎರಡು ಪದ್ಯಗಳು ಚಾವುಂಡರಾಯನ ವ್ಯಕ್ತಿತ್ವಕ್ಕೆ ಎತ್ತಿಹಿಡಿದ ಕನ್ನಡಿಗಳಾಗಿವೆ. ಇಂತಹ ಘನವ್ಯಕ್ತಿತ್ವವನ್ನು ಪಡೆದ ಚಾವುಂಡರಾಯ ೧೦ ನೆಯ ಶತಮಾನದಲ್ಲಿ ಬಾಳಿದ ಒಬ್ಬ ಮಹಿಮಾನ್ವಿತ ವ್ಯಕ್ತಿ.

ಕವಿರಾಜ ಮಾರ್ಗಕಾರ ಕನ್ನಡಿಗರನ್ನು "ಸುಭಟರ್ಕಳ್ ಕವಿಗಳ್ ಸು । ಪ್ರಭು ಗಳ್ ಚೆಲ್ವರ್ಕಳ ಭಜನರ್ಕಳ್ ಗುಣಿಗಳ್ ಅಭಿಮಾನಿಗಳತ್ಯುಗ್ರರ್ ಗಂಭೀರಚಿತ್ತರ್

---

೧. ಚಾವುಂಡರಾಯ ಪುರಾಣ, ಸಂ : ಡಾ. ಬಿ. ಎಸ್. ಕುಲಕರ್ಣಿ ಪು. ೪೫೦

೨. ,, ,, ,,

ವಿವೇಕಿಗಳ್......."[೩] ಎಂದು ಬಣ್ಣಿಸಿದ್ದಾನೆ. ಈ ಪರಂಪರೆಯ ಅಗ್ರವಶಾನ್ಯವ್ಯಕ್ತಿ ಚಾವುಂಡರಾಯ, ಅವನಲ್ಲಿ ಧರ್ಮ ಸಾರ್ಥಕತೆಯನ್ನು ಪಡೆದಿದೆ, ಕ್ಷಾತ್ರದೇದಿಪ್ಯಮಾನವಾಗಿದೆ, ಕವಿತ್ವ ಜೊತೆಗೂಡಿದೆ. ಹೀಗಾಗಿ 'ನಿಂದಿರೆ ಮಂತ್ರಿ ಕುಳ್ಳಿರೆ ಕವಿ' ಸಂಪ್ರದಾಯದಲ್ಲಿ ಮೊಟ್ಟಮೊದಲಿಗ ಈತ.

ಟಿ. ನರಸೀಪುರದ ಸಾಧನವೊಂದರಲ್ಲಿ (E. C. III. ೬೯) ಗೋವಿಂದಮ್ಯ ಎಂಬವನಿಗೆ ಮಾಬಲಯ್ಯ ಮತ್ತು ಈಸರಯ್ಯ ಎಂಬ ಇಬ್ಬರು ಮಕ್ಕಳಿದ್ದರೆಂದೂ, ಅವರು ನೊಳಂಬಕುಲಾಂತಕ ದೇವನ ಸೇವೆಯಲ್ಲಿದ್ದರೆಂದೂ, ಮಾಬಲಯ್ಯನ ಮಗ ಪ್ರಸ್ತುತ ಚಾವುಂಡರಾಯನೆಂದೂ. ಅವನು ಬ್ರಹ್ಮಕ್ಷತ್ರಿಯ ಕುಲೋದ್ಭವನೆಂದೂ ಹೇಳಲಾಗಿದೆ. ನೊಳಂಬ-ಕುಲಾಂತಕ ಎಂಬುದು ಇಮ್ಮಡಿ ಮಾರಸಿಂಹನ ಬಿರುದು. ಗೋವಿಂದಮಯ್ಯ ಮತ್ತು ಆತನ ವಂಶಸ್ಥರು ಗಂಗರಾಜರಲ್ಲಿ ಸ್ವಾಮಿಭಕ್ತಿಯುಳ್ಳವರಾಗಿ ಉನ್ನತ ಸೇವೆಯಲ್ಲಿದ್ದಂತೆ ತಿಳಿಯುವುದಕ್ಕೆ ಪೂರ್ವೋಕ್ತ ಶಾಸನದಲ್ಲಿ ಆಸ್ಪದವಿದೆ. ಇದರಿಂದ ಚಾವುಂಡರಾಯ ವಂಶಪಾರಂಪರ್ಯವಾಗಿ ಗಂಗವಂಶದ ಸಂಬಂಧ ಪಡೆದಿದ್ದನೆಂಬುದು ಸ್ಪಷ್ಟವಾಗುತ್ತದೆ.

ಇವನ ಘನವ್ಯಕ್ತಿತ್ವವನ್ನು ರನ್ನ—

"ಪಿರಿಯಂ ಬೂತುಗನಾತ ನಿಮ್ಮರುಳನಾತಂಗಂ ನಾಳಂಬಾಂತಕಂ
ಪಿರಿಯಂ ನೆಟ್ಟನೆ ದಾನಧರ್ಮದೆಡೆಯೊಳ್ ಚಾವುಂಡರಾಯಂ... .."[೪]

ಎಂದೂ, ನಾಗವರ್ಮ (ಕ್ರಿ. ಶ. ೯೯೦).

"ಗಂಡರ ಮೂಕುತಿಯೆನಿಪ। ಮಂಡಳಿಕರ ಮಂತ್ರಿ ಸಂಧಿ ವಿಗ್ರಹಿರಾಯಂ
ಕೊಂಡಾಡಿ ಪೊರೆದನೆನೆ ಧರೆ। ಕೊಂಡಾಡದೆ ಕೊಂಡುಕೊನೆಯದೆ
ನಾಕಿಗನಂ......"[೫]

ಎಂದೂ, ಬ್ರಹ್ಮಶಿವ

"ಅತಿಧವಳ ಕೀರ್ತಿಲಕ್ಷ್ಮೀ। ಪತಿಯಂ ಜಿನಸಮಯವಾರ್ಧಿವರ್ಧನ ತಾರಾ
ಪತಿಯಂ ಕೂರ್ತನಿಪಂ ರಾ। ಜಿತನಂ ರಾಯನನುದಾರಿಯಂ ಪೊಗವಿದರಾರ್"[೬]

ಎಂದೂ, ಬಣ್ಣಿಸಿದ್ದಾರೆ.

ಇಂತಹ ಧವಳೋನ್ನತ ಕೀರ್ತಿಪಡೆದ ಚಾವುಂಡರಾಯ ಸಾಹಸಾತಿಶಯಂಗಳ ಬೀಡು. ಅವನ ಈ ಶೌರ್ಯೋನ್ನತಿ 'ಚಾವುಂಡರಾಯ ಪುರಾಣ'ದ ಆದಿ ಮತ್ತು ಅಂತ್ಯಭಾಗದಲ್ಲಿ ಈ ರೀತಿ ಮಡುಗಟ್ಟಿ ನಿಂತಿದೆ. 'ಚಾವುಂಡರಾಯ, ಚಾರಿತ್ರ

೩. ಕವಿರಾಜಮಾರ್ಗ, ೨-೨೮
೪. ಅಜಿತ ತೀರ್ಥಂಕರ ಪುರಾಣ ಸಂ : ಎಚ್. ದೇವೀರಪ್ಪ: ದೇ ಜವರೇಗೌಡ ಪು. ೯-೨೨
೫. ಛಂದೋಂಬುಧಿ ಸಂ : ಎಚ್. ಶೇಷ ಅಯ್ಯಂಗಾರ, ಪು. ೨೮: ೨-೨೭
೬. ಸಮಯ ಪರೀಕ್ಷೆ ಸಂ : ಡಾ. ಬಿ. ಎಸ್. ಕುಲಕರ್ಣಿ, ೧-೪೧

ಮಾನಿಗಳೂ ಶ್ರುತಪಾರಗರೂ ಎನ್ನಿಸಿದ ಅಜಿತಸೇನದೇವರ ಶಿಷ್ಯ, ವೀರ ಶಿಖಾಮಣಿ, ವಿದ್ವಾಂಸರಿಗೆ ಆಶ್ರಯದಾತ ಹಾಗೂ ಮಹಾತೇಜಸ್ವಿ.[೭] ಆತ ಮುಂದಿರುತ್ತಿದ್ದರೆ ವೀರಭಟರು ಮುನ್ನುಗ್ಗಿ ಹೋರಾಡುತ್ತಾರೆ, (ವೈರಿಗಳನ್ನು) ಹೆದರಿಸಲು ಸಮರ್ಥರಾಗುತ್ತಾರೆ, ಸೂಜಿಯ ಬಳಿಯಲ್ಲಿಯೇ ಸಲ್ಲುವ ದಾರದ ಹಾಗೆ ಅವರು ಯಾವಾಗಲೂ ಅಣ್ಣನ ಬಳಿಯಲ್ಲಿಯೇ ಸಲ್ಲುತ್ತಾರೆ. ಎಂದರೆ ಅವನನ್ನು ಅನುಸರಿಸಿಯೇ ಹೋರಾಡಲು ಹೋಗುತ್ತಾರೆ.[೮] ಅವನು ದಂಡೆತ್ತಿ ಬರಲು ಸಂಕಲ್ಪಿಸಿ ತಾನಿದ್ದ ಸ್ಥಳದಿಂದ ಹೊರಡುತ್ತಲೇ, ಅವನು ಈಗೆಲ್ಲಿ ಮುತ್ತಿದ್ದಾನೆ? ಯಾರ ಮೇಲೆ ಏರಿ ಹೋಗಿದ್ದಾನೆ? ಎಂದು ವೈರಿಗಳು ಬುಟ್ಟಿಯೊಳಗಿನ ಮೊಲದ ಹಾಗೆ, ಸುದ್ದಿಯ ಸುಳಿವು ಹಿಡಿದು ಚಡಪಡಿಸುತ್ತಾರೆ.[೯] ಈ ಅಸಹಾಯ ವಿಕ್ರಮನು ಕೆರಳಿದ್ದಾನೆ, ನಮಗೆ ಆಶ್ರಯ ನೀಡಿ ರಕ್ಷಿಸಬೇಕು ಎಂದು ಶತ್ರುಮಾಂಡಲಿಕರು ಭಯಗ್ರಸ್ತರಾಗಿ ಮನೆಮನೆಗೆ ನುಗ್ಗಿ ತಲೆ ಮರೆಸಿಕೊಳ್ಳುತ್ತಾರೆ.[೧೦] ಮಾರ್ತಂಡ, ಪ್ರಖ್ಯಾತನಾದ ವೀರಮಾರ್ತಂಡ ಇಬ್ಬರೂ ಚಂಡಪ್ರತಾಪರು, ಊರ್ಜಿತ ಮಂಡಲರು, ಅಪ್ರತಿಮ ತೇಜರು ಎನ್ನುತ್ತ ವೈರಿಗಳು ಭಯಗೊಂಡು ಎರಗುತ್ತಾರೆ.[೧೧] ಅವನ ದೇಹದ ಮೇಲಿನ ಗಾಯಗಳು ಜಯಲಕ್ಷ್ಮಿಯ ಸೊಗಸಿನ ಆಭರಣಗಳಂತಿರುವ ಬಗೆಬಗೆಯ ಅಸ್ತ್ರಗಳಿಂದುಂಟಾದವು. ಅವು ತಲೆಯಲ್ಲಿ ಚೂಡಾಮಣಿಯ ಕಾಂತಿಯನ್ನೂ, ವಿಶಾಲವಾದ ಎದೆಯಲ್ಲಿ ಹಾರದೊಳಗಿನ ರತ್ನದ ಕಾಂತಿಯನ್ನೂ, ತೋಳಲ್ಲಿ ಚೊಕ್ಕ ಚಿನ್ನದ ತೋಳಬಂದಿಯ ಕಾಂತಿಯನ್ನೂ ತಿರಸ್ಕರಿಸುವಂತೆ ಶೋಭಿಸುತ್ತವೆ.[೧೨] ಎಂದು ಈತನ ಯುದ್ಧವೀರವ್ಯಕ್ತಿತ್ವದ, ಪದರುಗಳನ್ನು ಬಿಚ್ಚಿ

---

೭. ಚಾರಿತ್ರಮಾನಿಯೊಳ್ ಶ್ರುತ । ಪಾರಗರೆನಿಪ ಜಿತಸೇನದೇವರ ಗುಡ್ಡಂ ವೀರಶಿಖಾಮಣಿ ವಿಬುಧಾ । ಧಾರನೆ ಚಾವುಂಡರಾಜನನುಪಮ ತೇಜಂ ಚಾ. ಪು. ಪು. ೪೫೦

೮. ವೀರಭಟಮುಙ್ಕೊಂಡಿರಿ । ಪೋರಾತನೆ ಮುಂದಿರಂಜಿಸನ್ನೆರೆವರದ ಕರ್ಾರುಂ ಸೂಜಿಯ ಬಟಿಯನೆ । ದಾರಂ ಸಲ್ವಂತೆ ಸಲ್ವರಣ್ಣನ ಬಟಿಯಂ ಚಾ. ಪು. ಪು. ೪೫೦

೯. ನಡೆಯುಲ್ ಬಗೆದಂ ತನ್ನ । ದೆಡೆಯಿಂದ ತಳರ್ದಸಿತ್ತ ಮೊಗಸಿದನಾವಂ ಗಡಿಯಿಟ್ಟನಣ್ಣನೆಂದುಂ । ಪುಡಿಕೆಯ ಮೊಲದಂತೆ ತಬ್ಬುತಿರ್ಪರ್ ಪಗೆವರ್ ಚಾ ಪು. ಪು. ೪

೧೦. ಮುಳಿದನ ಸಾಯಪಿಕ್ರಮ್ಮ । ನೊಳಕೊಳ್ಳುದು ಕಾವುದೆಮ್ಮನೆಂದಂದರಿ ಮಾಂಡಳಿಕರ್ ಭಯುವಶದಿಂದೀ । ವಳಿಗೆಯ ಪರೆಯಂತೆ ಪೊಕ್ಕಪರ್ ಮನೆ ಮನೆಯಂ ಚಾ. ಪು. ಪು. ೪

೧೧. ಚಂಡಪ್ರತಾಪರೂರ್ಜಿತ । ಮಂಡಲರ ಪ್ರತಿಮತೇಜ ರೆಂದೆಂದೆ ಭಯಂ ಗೊಂಡಜಗುಗುಂ ಜನಂ ಮಾರ್ತಾಂಡಂಗಂ ನೆಗಟ್ಟ ಪೀರಮಾರ್ತಂಡಂಗಂ ಚಾ. ಪು. ಪು. ೪೫೧

೧೨. ಶಿರದೊಳ್ ಚೂಡಾಮಣಿ ದ್ಯೋತಿಯ ನಗಲುರದೊಳ್ ಹಾರ ರತ್ನಾಂಶುವಂ ಕಂ ಧರದೊಳ್ ಮಾಣಿಕ್ಯಕಂಠಾಭರಣ ಕಿರಣಮುಂ ತೋಳುಳುತ್ತಪ್ತಕಾರ್ತ ಸ್ವರಕೇಯೂರ ಪ್ರಭಾನೀಳಮನಿಳಿಸೆ ಜಯಶ್ರೀ ವಧೂವಿಭ್ರಮಾಲಂ ಕರಟಾ ನಾನಾಸ್ತ್ರಶಸ್ತ್ರವ್ರಣಗಣಮೆಸೆಗುಂ ವೀರಮಾರ್ತಾಂಡ ನಿನ್ನಾ ॥ ಚಾ. ಪು. ೪೫೧

ತೋರಿಸುತ್ತದೆ. ಚಾವುಂಡರಾಯನು 'ಚಾರಿತ್ರಸಾರ'ದ ಒಂದು ಶ್ಲೋಕದಲ್ಲಿ[೧೩] ಅಂಗಹೀನವಾದ ರಾಜ್ಯವು ಅಂಗರಹಿತವಾದ ಸಮ್ಯಕ್ತ್ವದಂತೆ ಫಲಕಾರಿಯಾದುದಲ್ಲ' ಎಂದು ಹೇಳಿದ್ದಾನೆ. ಇದರಿಂದ ಇವನು ರಾಜ್ಯಭಾರಪಟುತ್ವದಲ್ಲಿ ಪಡೆದಿದ್ದ ಅನುಭವ ವೇದ್ಯವಾಗುತ್ತದೆ.

ಚಾವುಂಡರಾಯನೇ ಒಂದೆಡೆಗೆ "ಗಂಗಕುಲಾಚಲಶಿಖರಶೇಖರನುಂ ಗಂಗಚೂಡಾಮಣಿಯುಂ ಜಗದೇಕವೀರನುಂ ಧರ್ಮಾವತಾರನುಂ ಎನಿಸಿದ ನೋಣಂಬಕುಲಾಂತಕದೇವ (ಮಾರಸಿಂಹ)ನೆ ತನಗೆ ಪರಮಸ್ವಾಮಿಯಾಗೆ" ಎಂದಿದ್ದಾನೆ.[೧೪] ಅಲ್ಲದೆ ಗೊಮ್ಮಟಸಾರಕ್ಕೆ 'ಮಂದಪ್ರಬೋಧಿಕಾಟೀಕೆ' ಬರೆದ ಅಭಯಚಂದ್ರನು 'ಶ್ರೀಮದ್ರಾಚಮಲ್ಲದೇವ ಮಹೀವಲ್ಲಭ ಮಹಾಮಾತ್ಯಪದವೀರಾಜಮಾನ ರಣರಂಗಮಲ್ಲಾಸಹಾಯ ಪರಾಕ್ರಮ ಗುಣರತ್ನಭೂಷಣ ಸಮ್ಯಕ್ತ್ವರತ್ನನಿಲಯಾದಿ ವಿವಿಧ ಗುಣಗ್ರಾಮನಾಮ ಸಮಾಸಾದಿತ ಕೀರ್ತಿ......" ಎಂದೂ ಹೊಗಳಿದ್ದಾನೆ.[೧೫] ಇದರಿಂದ ಚಾವುಂಡರಾಯನು ಗಂಗವಂಶದ ಅರಸನಾದ ಇಮ್ಮಡಿ ಮಾರಸಿಂಹ (ಕ್ರಿ. ಶ. ೯೬೧–೭೪), ಮಗ ರಾಚಮಲ್ಲ (ಕ್ರಿ. ಶ. ೯೭೪–೭೭) ಮತ್ತು ರಾಚಮಲ್ಲನ ತಮ್ಮ ರಕ್ಕಸಗಂಗ (ಕ್ರಿ. ಶ. ೯೭೭–೮೪) ಇವರ ಆಳ್ವಿಕೆಗಳಲ್ಲಿ ಸಂಧಿವಿಗ್ರಹಿ, ಮಂತ್ರಿ, ಮಹಾದಂಡನಾಯಕನಾಗಿದ್ದಂತೆ ತಿಳಿದುಬರುತ್ತದೆ. ಅಲ್ಲದೆ ಇಮ್ಮಡಿ ಮಾರಸಿಂಹ, ಚಾವುಂಡರಾಯ ಮತ್ತು ರನ್ನ ಈ ಮೂವರೂ ಅಜಿತಸೇನಾಚಾರ್ಯರ ಶಿಷ್ಯರಾಗಿ, ಒಂದೇ ಗರಡಿಯಲ್ಲಿ ಬೆಳೆದ ಬಗ್ಗೆ ಆಧಾರಗಳೂ ದೊರೆಯುತ್ತದೆ. (ಚಾವುಂಡರಾಯ ಪುರಾಣ ಮತ್ತು ಅಜಿತತೀರ್ಥಂಕರ ಪುರಾಣ).

೨ನೆಯ ಮಾರಸಿಂಹನ ಕಾಲ ರಾಜಕೀಯ ಹೊಯ್ದಾಟದ ಸಮಯವಾಗಿದ್ದಿತು. ಗಂಗರ ಚಕ್ರವರ್ತಿಗಳಾಗಿದ್ದ ರಾಷ್ಟ್ರಕೂಟರು ದುರ್ಬಲರಾಗುತ್ತ ಬಂದುದರಿಂದ, ಅವರ ಕೈಕೆಳಗಿನ ಅರಸರು ಸ್ವತಂತ್ರರಾಗಲು, ಬೇರೆಕಡೆಗೆ ಸರಿಯಲು ಪ್ರಯತ್ನಿಸುತ್ತಿದ್ದರು. ಅವರಲ್ಲಿ ಶಿಲಾಹಾರವಂಶದ ಒಬ್ಬ ಮಾಂಡಲಿಕನಾದ ಪಾತಾಳಮಲ್ಲನ ತಮ್ಮ ವಜ್ಜಳದೇವ. ನೊಳಂಬವಂಶದ ಪೊಳಲ್ಚೋರ, ಉಚ್ಚಂಗಿಕೋಟೆಯ ಚಾಲುಕ್ಯವಂಶದ ರಾಜಾಯ್ತ ಮೊದಲಾದವರು ಪ್ರಮುಖರು. ಅವರನ್ನು ಬಗ್ಗುಬಡೆಯಲು ಇಮ್ಮಡಿ ಮಾರಸಿಂಹ ನಡೆಸಿದ ಹಲವಾರು ವಿಜಯೋತ್ಸವಗಳಲ್ಲಿ ಚಾವುಂಡರಾಯನೂ ಭಾಗವಹಿಸಿ, ಜಯಗಳಿಸಿ, ಹಲವು ಹತ್ತು ಪ್ರಶಸ್ತಿ ಪಡೆದುಕೊಂಡಿದ್ದಂತೆ ಚಾವುಂಡರಾಯ ಪುರಾಣ ಮತ್ತು ಶ್ರವಣಬೆಳ್ಗೊಳದ ೨೮೧ನೆಯ ಶಾಸನಗಳಿಂದ ತಿಳಿದು ಬರುತ್ತದೆ. ಇದರಿಂದ ಇವನು ಗಂಗಮನೆತನದವರ ರಾಜ್ಯ

೧೩. ಸಮ್ಯಕ್ತ್ವಮಂಗಹೀನಂ ರಾಜ್ಯಮಿವ ಶ್ರೇಯಸೇ ಭವನ್ನೈವ ನ್ಯೂನಾಕ್ಷರೋಹಿ ಮಂತ್ರೋ ನಾಲಂ ವಿಷವೇದನಾಚ್ಛಿತ್ಯೈ ॥

೧೪. ಚಾವುಂಡರಾಯ ಪುರಾಣ ಪು. ೪

೧೫. ಚಾಮುಂಡರಾಯ, ಟಿ. ವಿ. ವೆಂಕಟಾಚಲಶಾಸ್ತ್ರೀ ಪು. ೪೫

ವ್ಯವಸ್ಥೆ ರಾಜ್ಯ ವಿಸ್ತರಣೆ. ಆಕ್ರಮಣಕಾರರ ಉಪಸಮನ, ಅನ್ಯಕ್ರಾಂತ– ದೇಶ ಭಾಗಗಳ ಸ್ವಾಧೀನತೆ ಕಾರ್ಯಗಳಲ್ಲಿ ಪ್ರಮುಖಪಾತ್ರ ವಹಿಸಿದ್ದನೆಂದು ಸ್ಪಷ್ಟ ವಾಗುತ್ತದೆ.

ಚಾವುಂಡರಾಯ ಪುರಾಣದ ಆದಿಭಾಗದಲ್ಲಿ 'ರಾಜಾಯ್ಯನನ್ನು ಛಲದಿಂದ ಹೊಕ್ಕಿರಿದ ಭುಜಬಲ, ರಾಚನನ್ನು ಕೊಂದು ಹಾಕಿದ ವೀರ್ಯ, ತಾನಿದ್ದ ನೆಲೆ ಯಿಂದ ಗೋವಿಂದರನನ್ನು ಬಿಡದೆ ಅಟ್ಟಿ ಓಡಿಸಿದ. ಪರಾಕ್ರಮ, ಮಂಡಲ ರಾಜ್ಯಾ ಸಕ್ತನಾದ, ಮಿತಿಮೀರಿದ ರಾಚಯ್ಯನನ್ನು ಕ್ರಮಾಗತವಾಗಿ ಕೊಂದು ಹಾಕಿದ ಶೌರ್ಯ ಇವು ಹಲವರಿಗೆ ಆಶ್ಚರ್ಯಕರವಾದ ಉನ್ನತ ಸಾಹಸಗಳಾಗಿ ತೋರಲು, ವೀರ ಮಾರ್ತಂಡದೇವನು ಅವನ್ನು ಮಾಡಿ ತೋರಿಸಿದನು' ಎಂದು ಹೇಳಲಾಗಿದೆ.[೧೬]

ಇದೇ ಪುರಾಣದ ಅಂತ್ಯದಲ್ಲಿ ಚಾವುಂಡರಾಯನ ಯುದ್ಧದ ವಿವರವನ್ನೂ, ಅವನು ಪಡೆದುಕೊಂಡ ಹಲವಾರು ಬಿರುದಾವಳಿಗಳನ್ನೂ ಹೀಗೆ ವಿವರಿಸಲಾಗಿದೆ. "ಸ್ವಾಮಿಯ ಅಪ್ಪಣೆಯಂತೆ ಖೇಡಗ ಕಾಳೆಗದಲ್ಲಿ ವಜ್ಜಳದೇವನನ್ನು ಗೆದ್ದ ಸಾಹಸ ದಿಂದಾಗಿ ಸಮರ ಧುರಂಧರನೆಂದೂ, ಗೋನೂರ ಬಯಲಲ್ಲಿ ಎದುರಿಸಿ ನಿಂತ ನೊಳಂಬರ ಕಾಳೆಗದಲ್ಲಿ ಜಗದೇಕವೀರನ ಮುಂದೆ ತನ್ನ ಶಕ್ತಿಯನ್ನು ಪ್ರದರ್ಶಿಸಿದ್ದ ರಿಂದ ವೀರಮಾರ್ತಂಡನೆಂದೂ, ಉಚ್ಚಂಗಿ ಕೋಟೆಯಲ್ಲಿ ರಾಜಾಯ್ಯನೊಡನೆ ಒಬ್ಬನೇ ಕಾಳಗ ಕೊಟ್ಟದ್ದರಿಂದ ರಣರಂಗಸಿಂಗನೆಂದೂ,[೧೭] ಬಾಗೆಯೂರ ಕೋಟೆ ಯಲ್ಲಿ ತ್ರಿಭುವನವೀರನನ್ನು ಕೊಂದು ಗೋವಿಂದರನನ್ನು ಒಳಹೋಗುವಂತೆ ಮಾಡಿದ್ದರಿಂದ ವೈರಿಕುಲಕಾಲದಂಡನೆಂದೂ, ನೃಪಕಾಮನಕೋಟೆಯಲ್ಲಿ ರಾಜ, ಬಾಸ, ಶಿವರ, ಕುಣಾಂಕ ಮೊದಲಾದ ಕಲಿಗಳನ್ನು ಏಕಾಂಗ ಸಾಹಸದಿಂದ ಎದುರಿ ಸಿದ್ದರಿಂದ ಭುಜವಿಕ್ರಮನೆಂದೂ, ತನ್ನ ತಮ್ಮನಾದ ನಾಗವರ್ಮನನ್ನು ಕೊಂದ ಛಲದಂಕ ಗಂಗ ಗಂಗರಭಟ ಎನ್ನಿಸಿದ ಮುದುರಾಚಯ್ಯನನ್ನು ಕೊಂದದ್ದರಿಂದ ಸಮರ ಪರಶುರಾಮನೆಂದೂ, ಜಟ್ಟಿಗರನ್ನು ಅಟ್ಟಿದ ದಂಡಿನಲ್ಲಿಯೇ ಸಂಪೂರ್ಣವಾಗಿ ನಿವಾರಿಸಿದ್ದರಿಂದ ಪ್ರತಿಪಕ್ಷರಾಕ್ಷಸನೆಂದೂ, ವೀರಭಟಕೋಟಿಯನ್ನು ನಿಶ್ಶೇಷವಾಗಿ ಕೊಂದದ್ದರಿಂದ ಭಟಮಾರಿಯೆಂದೂ, ನಿಶ್ಶಂಕಾದಿ ಗುಣಗಳನ್ನು ಕಾಪಾಡಿಕೊಳ್ಳುವುದ ರಲ್ಲಿಯೇ ಆಸಕ್ತನಾಗಿದ್ದುದರಿಂದ ಗುಣವಂ ಕಾವನೆಂದೂ, ಸತ್ಯತ್ಯಾಗಾದಿ ಸಮನ್ವಿತ ನಾದುದರಿಂದ ಸಮ್ಯಕ್ತ್ವರತ್ನಾಕರನೆಂದೂ, ಪರಾಂಗನೆ, ಪರದ್ರವ್ಯಗಳಿಗೆ ವಿಮುಖ ನಾದುದರಿಂದ ಶೌಚಾಭರಣನೆಂದೂ, ಪರಿಹಾಸಕ್ಕಾದರೂ ಸುಳ್ಳಾಡುವವನಲ್ಲವಾದ್ದ

೧೬. ಛಲದಿಂ ರಾಜಾಯ್ಯನಂ ತಳ್ತಿಱಿದ ಭುಜಬಲಂ ರಾಚನಂ ಕೊಂದ ವೀರಂ ನೆಲದಿಂದಂತಾಗೆ ಗೋವಿಂದರನ ಸಿರದೆ ಚಿಂಕೊಂಡ ಬಲ್ಲಾಳ್ತನಂ ಮಂಡಲ ರಾಜಾಸಕ್ತನಂ ರಾಚಯನನಧಿಕನಂ ಪಾಱಿಯೊಳ್‌ಕೊಂದ ಶೌರ್ಯಂ ಪಲಗಾಶ್ಚರ್ಯಪ್ರತಾಪೋನ್ನತಮೆನೆ ನೆಗಟ್ಟಂ ವೀರಮಾರ್ತಂಡದೇವಂ ಚಾ. ಪು. ಪು. ೪

೧೭. 'ರಣರಂಗ ಸಿಂಹ' ಬಿರುದು 'ಚಾರಿತ್ರಸಾರ' ದಲ್ಲಿಯು ಬಂದಿದೆ.

ರಿಂದ ಸತ್ಯಯುಧಿಷ್ಠಿರನೆಂದೂ, ಅತಿ ಪ್ರಚಂಡರಾದ ವೀರಮಾಂಡಲಿಕರ ತಲೆವಣೆಯಾದುದರಿಂದ ಸುಭಟಚೂಡಾಮಣಿಯೆಂದೂ......" ಪ್ರಸಿದ್ಧಿ ಪಡೆದನು,[೧೮]

ಇವುಗಳಲ್ಲಿ ಹಲವನ್ನು ಶ್ರವಣಬೆಳ್ಗೊಳದಶಾಸನ (E. c. II. ೨೮೧) ಇನ್ನಷ್ಟು ವಿವರಿಸುತ್ತದೆ. 'ಇಂದ್ರಕ್ಷಿತೀಂದ್ರನ ಆಜ್ಞೆಯಂತೆ: ಸ್ವಾಮಿಯಾದ ಜಗದೇಕ ವೀರನೃಪತಿ ಪಾತಾಳಮಲ್ಲನ ತಮ್ಮನಾದ ವಜ್ಜಳದೇವನ ಮೇಲೆ ಕೈಯೆತ್ತಿದಾಗ, ಚಾವುಂಡರಾಯನು ಆ ವಜ್ಜಳನ ಸೈನ್ಯವನ್ನು ಆನೆ ಬೆನ್ನಟ್ಟಿದ ಮೃಗ ಸಮೂಹದಂತೆ ಚೆದುರಿಸಿದನು.[೧೯] ಶತ್ರುದ್ವಿಪಗಳ ಕುಂಭಸ್ಥಳವನ್ನು ದಂತವಜ್ರದಿಂದ ಭೇದಿಸುವ ಮಹಾಗಜ, ವೀರೋತ್ತಂಸ, ರಿಪುವ್ಯಾಳಗಜಾಂಕುಶದಂತಿರುವವನು ನನಗೆ ಸಹಾಯನಾಗಿರಬೇಕಾದರೆ, ನನ್ನ ಬಾಣಗಳೆಂಬ ಕೃಷ್ಣಸರ್ಪಗಳಿಗೆ ಗ್ರಾಸವಾಗದವರಾರು ಎಂದು ಚಾವುಂಡರಾಯನು ಆ ನೊಳಂಬ ಯುದ್ಧದಲ್ಲಿ ಸ್ವಾಮಿಯಿಂದ ಶ್ಲಾಘಿತನಾದನು.[೨೦] ಕ್ಷಾರಸಮುದ್ರವೇ ಅಗಳಾಗಲಿ, ತ್ರಿಕೂಟವೇ ಪರಿಧಿಯಾಗಲಿ, ಲಂಕೆಯೇ ಪಟ್ಟಣವಾಗಲಿ, ಎದುರಿಸುವ ಪ್ರತಿನಾಯಕನೇ ಅಸುರ (ರಾವಣ) ನಾಗಿರಲಿ, ಜಗದೇಕ ವೀರನೃಪತಿಯೇ ನಿನ್ನ ತೇಜಸ್ಸಿನಿಂದಾಗಿ ಆತನನ್ನು ನಾನು ಜಯಿಸಬಲ್ಲೆ ಎಂದು ಆಡಿದ ದರ್ಪೋಕ್ತಿಗಳನ್ನು ರಣಸಿಂಗ ರಾಜನೊಡನೆ ನಡೆದ ಕಾಳೆಗದಲ್ಲಿ ಕ್ಷಣದಲ್ಲಿ ನಿಜಮಾಡಿ ತೋರಿದನು.[೨೧] ಅನೇಕ ಕಾಳೆಗದಲ್ಲಿ ನಿನ್ನ ಕಂಠಾಲಿಂಗನವನ್ನು ಪಡೆಯಲು ಉತ್ಕಂಠಿತರಾಗಿದ್ದ ನಾವು ಈಗ ನಿನ್ನ ಖಡ್ಗಧಾರೆಯ ಕೆನ್ನೀರಿನಿಂದ ತೃಪ್ತರಾದೆವು; ರಣರಂಗಸಿಂಗ ವಿಜಯಿಯೇ ಕಲ್ಪಾಂತದವರೆಗೆ ನೀನು ಬಾಳು' ಎಂದು ಸ್ವರ್ಗಾಂಗನೆಯರು ರಾಜನ ಮದ್ದಾನೆಯಾದ ಚಾವುಂಡರಾಯನನ್ನು, ಆತನು ಶತ್ರುರಾಜರನ್ನು ಸ್ವರ್ಗಕ್ಕಟ್ಟಿದ ಉಪಕಾರಕ್ಕಾಗಿ ಹರಸುತ್ತಿದ್ದರು.[೨೨] ತನ್ನ ಭುಜಬಲ

---

೧೮. ಚಾವುಂಡರಾಯ ಪುರಾಣ, ಪು. ೪೫೧

೧೯. ಕಲ್ಪಾನ್ತಕ್ಷುಭಿತಾಬ್ಧಿ ಭೀಷಣಬಲಂ ಪಾತಾಳ ಮಲ್ಲಾನುಜಂ
ಜೇತುಂ ವಜ್ವಿಳದೇವ ಮುದ್ಯತಭುಜಸ್ಯೇನ್ದ್ರಕ್ಷಿತೀಂದ್ರಾಜ್ಞಯಾ ಪತ್ಯುಶ್ರೀ ಜಗದೇಕ ವೀರ ನೃಪತೇರ್ಜೈತ್ರದ್ವಿಪಸ್ಯಾಗ್ರತೋ ಧಾವದ್ಗನ್ಧನಿದನ್ತಯತ್ರ ಭಗ್ನಮಹಿತಾನೀಕಂ ಮೃಗಾನೀಕವತ್ ॥

೨೦. ಅಸ್ಮಿನ್ದನ್ತಿನಿದನ್ತ ವಜ್ರದಳಿತದ್ವಿಟ್ಕುಂಭಿಕುಂಭೋಪಳೇ ವೀರೋತ್ತಂಸ ಪುರೋ ನಿಷಾದಿನಿ ರಿಪುವ್ಯಾಳಾಂಕುಶೇಜ ತ್ವಯಿಸ್ಯಾತ್ಕೋ ನಾಮನಗೋಚರಃ ಪ್ರತಿನೃಪೋಮದ್ಬಾಣ ಕೃಷ್ಣೋರಗ ಗ್ರಾಸಸ್ಯೇತಿ ನೊಳಂಬರಾಜಸಮರೇಯ ಶ್ಲಾಘಿತಃ ಸ್ವಾಮಿನಾ ॥

೨೧. ಖಾತಃ ಕ್ಷಾರಪಯೋಧಿರಸ್ತು ಪರಿಧಿಶ್ಚಾಸ್ತು ತ್ರಿಕೂಟಃ ಪುರೀ ಲಂಕಾಸ್ತು ಪ್ರತಿನಾಯಕೋಸ್ತು ಚ ಸುರಾರಾತಿಸ್ತಥಾಪಿ ಕ್ಷಮೇತಂ ಜೇತುಂ ಜಗದೇಕ ವೀರನೃಪತೇತ್ವತ್ತೇಜಸೇತಿ ಕ್ಷಣಾನ್ನಿಷ್ಪ್ರಾಡಂ ರಣಸಿಂಗ ಪಾರ್ಥಿವರಣೇಯೇ ನೋರ್ಜಿತಂ ಗರ್ಜಿತಂ ॥

೨೨. ವೀರಸ್ಯಾಸ್ಯ ರಣೇಷು ಭೂರಿಷುವಯಂ ಕಂಠಗ್ರಹೋತ್ಕಂಠಯಾ ತಪ್ತಾ ಸಂಪ್ರತಿಲಬ್ಧನಿರ್ವೃತಿರಸಾಸ್ತ್ವತ್ಖಡ್ಗಧಾರಾಂಭಸಾ ಕಲ್ಪಾಂತಂ ರಣರಂಗ ವಿಜಯೀ ಜೀವೇತಿ ನಾಕಾಂಗನಾ ಗೀರ್ವಾಣಃ ಕೃತ ರಾಜಗನ್ಧಕರಿಣೋಯಸ್ಮೈ ವಿತೀರ್ಣಾಶಿಷಃ ॥

ದಿಂದ ಗಂಗಾಧಿರಾಜ್ಯಶ್ರೀಯನ್ನು ಸೆಳೆದುಕೊಳ್ಳಬಯಸಿದ ಚಲದಂಕ ಗಂಗನೃಪತಿಯ ಬಯಕೆಯನ್ನು ಭಗ್ನಗೊಳಿಸಿದ ಮೇಲೆ, ಶತ್ರುವೀರರ ಕಪಾಲಪಾತ್ರೆಯಲ್ಲಿ ರಕ್ತಪಾನಕ್ಕೆ ಅಪೇಕ್ಷಿಸುತ್ತಿದ್ದ ಪಿಶಾಚಗಣದ ಆಶೆಯನ್ನು ಈತನು ಈಡೇರಿಸಿದನು.[೨೩]

ಈ ರೀತಿ ಚಾವುಂಡರಾಯ ಸೋಲಿಸಿದ ಅರಸರಲ್ಲಿ ಹಲವರನ್ನಾದರೂ ಇತಿಹಾಸಕಾರರು ಗುರುತಿಸಲು ಪ್ರಯತ್ನಿಸಿದ್ದಾರೆ. ಪಾತಾಳಮಲ್ಲಿನ ತಮ್ಮ ವಜ್ಜಳದೇವ ಅಥವಾ ವಜ್ಜಿಳ ಶಿಲಾಹಾರವಂಶದ ಒಬ್ಬ ಮಾಂಡಲಿಕ. ಇವನು ಮೊದಲು ರಾಷ್ಟ್ರಕೂಟರ ಅಧೀನನಾಗಿದ್ದನೆಂದೂ, ರಾಷ್ಟ್ರಕೂಟರು ದುರ್ಬಲರಾಗುತ್ತಿದ್ದುದನ್ನು ನೋಡಿ, ಪರಮಾರರ ಪಕ್ಷವನ್ನು ವಹಿಸಿದನೆಂದೂ ಊಹಿಸಲಾಗಿದೆ. ಅಲ್ಲದೆ, ಮಾರಸಿಂಹನಿಂದ ಪರಾಜಿತನಾದ ನೊಳಂಬನು ೨ನೆಯ ಪೊಳಲ್ಚೋರನೋ, ವೀರಮಹೇಂದ್ರನೋ ಇರಬೇಕು. ಇವರಲ್ಲದೆ ದಿಲೀಪನ ೨ನೆಯ ಮಗ ನೊಳಿಪಯ್ಯನೂ, ಅವನ ಮಗ ಅಯ್ಯಪದೇವನೂ ಗಂಗರೊಡನೆ ಕಾದಿ ಸೋತಿರಬಹುದು. 'ಚಾಲುಕ್ಯ ಇಮ್ಮಡಿ ತೈಲಪನ ಒತ್ತಾಸೆಯಾಗಿ ನಿಂತ ಧಲ್ಲ, ಚಾಲುಕ್ಯ ಚೂಡಾಮಣಿ ಎನ್ನಿಸಿದ ರಾಜಾದಿತ್ಯ ಮೊದಲಾದವರನ್ನು ಸೋಲಿಸುವಲ್ಲಿಯೂ ಚಾವುಂಡರಾಯ ತನ್ನ ಸ್ವಾಮಿಯಾದ ೨ನೆಯ ಮಾರಸಿಂಹನಿಗೆ ಸಹಾಯಕನಾಗಿ ನಿಂತಿರಬೇಕು.[೨೪]

ಇವೆಲ್ಲವುಗಳಿಂದ ಚಾವುಂಡರಾಯ ಕುಸಿಯುತ್ತಿದ್ದ ಗಂಗಸಾಮ್ರಾಜ್ಯದ ಬುನಾದಿಯನ್ನು ಭದ್ರಗೊಳಿಸಲು ಪ್ರಯತ್ನಿಸಿದನೆಂಬುದು ಸ್ಪಷ್ಟವಾಗುತ್ತದೆ. ಅವನು ೨ನೆಯ ಮಾರಸಿಂಹನಿಗೆ ಸಾಕಷ್ಟು ಬೆಂಗಾವಲಾಗಿ ನಿಂತಿದ್ದನೆಂದೂ, ಆ ತರುವಾಯ ನಡೆದ ಅಪಾಂತರದಲ್ಲಿ ಅವನ ಮಕ್ಕಳಾದ ರಾಜಮಲ್ಲ, ರಕ್ಕಸಗಂಗರನ್ನು ಕೆಲಕಾಲ ರಹಸ್ಯವಾದ ಸ್ಥಳದಲ್ಲಿ ಸಂರಕ್ಷಿಸಿದನೆಂದೂ, ಆ ಮೇಲೆ ರಾಜಮಲ್ಲನನ್ನು ಸಿಂಹಾಸನಕ್ಕೆ ಕೂಡ್ರಿಸಿ ಅವನನ್ನು ಕಾಪಾಡಿದನೆಂದೂ, ಅವರನ್ನು ವಿರೋಧಿಸಿದ ರಾಜ, ಬಸ, ಶಿವರ, ಕೂಣಾಂಕಯೆಂಬ ವೈರಿಗಳ ಮೇಲೆ ಸ್ವತಃ ಏರಿಹೋಗಿ ಅವರನ್ನೆಲ್ಲ ಸೋಲಿಸಿದ್ದನೆಂದೂ, ತಿಳಿದುಬರುತ್ತದೆ. ಹೀಗೆ ಸುಮಾರು ೩೦ ವರ್ಷಗಳ ಕಾಲ ಗಂಗರಾಜ್ಯವನ್ನು ತನ್ನ ಸಾಮರ್ಥ್ಯವೆಂಬ ಕವಚದಲ್ಲಿಟ್ಟು, ಪರಕೀಯ ಆಕ್ರಮಣದಿಂದ ಕಾಪಾಡಿದ ಶ್ರೇಯ ಈತನದಾಗಿದೆ. ಈ ಗಂಗವಂಶದ ಅರಸರ ಸಂರಕ್ಷಕನಾಗಿ, ಆಸ್ಥಾನದಲ್ಲಿ ಅಪರಿಮಿತ ಅಧಿಕಾರ ಪಡೆದಿದ್ದರೂ ಅವನೆಂದೂ ಸ್ವಾಧಿಕಾರ ಪ್ರಮತ್ತನಾಗಲಿಲ್ಲ. ರಾಜ್ಯ ಕ್ಷೇಮಾಭಿವೃದ್ಧಿಗಾಗಿ ತನ್ನನ್ನು ತಾನು ಅರ್ಪಿಸಿಕೊಂಡ ಮಹಾಮಹಿಮಾನ್ವಿತ ಈತ ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳ ಸಂಗಮವಾಗಿ, ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಜಾಜ್ವಲ್ಯಮಾನವಾಗಿ ಬೆಳಗಿದ

೨೩. ಆಕ್ರಷ್ಟುಂ ಭುಜಪಿಕ್ರಮಾದಭಿಲಷನ್ ಗಂಗಾಧಿರಾಜ್ಯಶ್ರೀಯಂ ಯೋ ನಾದೌ ಚಲದಂಕಗಂಗನೃಪತಿ ವ್ಯರ್ಥಾಭಿಲಾಷೀ ಕೃತಃ ಕೃತ್ವಾ ವೀರಕಪಾಲರತ್ನ ಚಪಕೋ ವೀರದ್ವಿಷಶ್ಚೋಣಿತಂ ಪಾತುಂ ಕೌತುಕಿನಶ್ಚ ಶೋಣಿಪಗಣಾಂ ಪೂರ್ಣಾಭಿಲಾಷಿಕೃತಾಃ ॥

೨೪. E. c. II. ಮೈಸೂರು ವಿಶ್ವವಿದ್ಯಾಲಯ, ಪ್ರಸ್ತಾವನೆ ಪು. liii

ಈತನು ಮುಂದಿನ ಪೀಳಿಗೆಗೆ ಆದರ್ಶಪ್ರಾಯನಾದ. ವಿಷ್ಣುವರ್ಧನನ ಮಂತ್ರಿ ಗಂಗರಾಜ 'ಮುನ್ನಿನ ಗಂಗರಾಯುಗಂ ನೂರ್ಮಡಿ ಧನ್ಯನಲ್ತೆ' (E. c. II. No) ಎನ್ನಿಸಿಕೊಳ್ಳಲು ಪ್ರಯತ್ನಿಸಿದ. ೧ನೆಯ ನಾರಸಿಂಹನ ಮಂತ್ರಿ ಹುಳ್ಳರಾಜ. 'ಸ್ಥಿರ ಜಿನಶಾಸನೋದ್ಧರಣರಾದಿಯೊಳಾರೆನೆ ರಾಚಮಲ್ಲ ಭೂವರವರ ಮಂತ್ರಿ ರಾಯನೆ, ಬಳಿಕ್ಕೆ ಬುಧಸ್ತುತನಪ್ಪ ವಿಷ್ಣುಭೂವರ ಮಂತ್ರಿಗಂಗನೆ, ಮತ್ತೆ ಬಳಿಕ್ಕೆ ನೃಸಿಂಹದೇವಭೂವರ ವರಮಂತ್ರಿ ಹುಳ್ಳನೆ ಪೆಱಂಗಿನಿತುಳ್ಳಡೆ ಪೇಳಲಾಗದೆ' (E. c. II. ೩೪೫). ಎಂದು ಹೊಗಳಿಸಿಕೊಳ್ಳಲ್ಪಟ್ಟ. ತುಳು ನಾಡಿನ ಅರಸು ೧ನೆಯ ಪಾಂಡ್ಯ 'ಅಭಿನವ ಚಾವುಂಡರಾಯ' ಎಂಬ ಅಭಿದಾನವನ್ನು ಧರಿಸಿದ. ಹೀಗೆ ಚಾವುಂಡರಾಯ ಶೌರ್ಯಸಾಹಸೋನ್ನತಿಗಳಿಗೆ, ರಾಜನೀತಿ ನಿಪುಣತೆಗೆ ಒಳ್ಳೆಯ ಆದರ್ಶನಾಗಿ, ಧರ್ಮಶೀಲನಾಗಿ, ವಿದ್ವಾಂಸನಾಗಿ, ಉದಾರ ಹೃದಯನಾಗಿ, ಜಗತ್ಪ್ರಸಿದ್ಧ ಗೊಮ್ಮಟಮೂರ್ತಿ ನಿಲ್ಲಿಸಿ, ಗೊಮ್ಮಟವ್ಯಕ್ತಿತ್ವ ಪಡೆದು, ಕನ್ನಡನಾಡಿನ ಇತಿಹಾಸದಲ್ಲಿ ಚಿರಸ್ಥಾಯಿ ಹೆಸರು ಪಡೆದಿದ್ದಾನೆ.

ಗೊಮ್ಮಟ ಮತ್ತು ದಿಗಂಬರತ್ವ

ಭುಜೇಂದ್ರ ಮಹೀಶವಾಡಿ

೧

ಶಿವ ದಿಗಂಬರನೆಂಬರು, ಸುಳ್ಳು !
ಶಿವಗಜಚರ್ಮಾಂಬರಧಾರಿ
ದತ್ತ ದಿಗಂಬರನೆಂಬರು, ಸುಳ್ಳು
ದತ್ತ ಕೌಪೀನಾಂಬರಧಾರಿ !
ವೇಮನ ದಿಗಂಬರನೆಂಬರು
ಅದು ವೈಯಕ್ತಿಕ ಮಹಾಸಾಧನೆ !
ಹಿಂದು ಮುಂದೆ ಪರಂಪರೆ ಇಲ್ಲ !
ಶಿವಶರಣೆ ಮಹಾದೇವಿಯಕ್ಕ
ಮಹಾದಿಗಂಬರೆ !
ಶಿವಶರಣ ಮಡಿವಾಳೇಶ್ವರ
ಮಹಾದಿಗಂಬರ !
ಆದರೇನು ? ವೀರಶೈವಕ್ಕೆ
ದಿಗಂಬರತ್ವ ಒಪ್ಪಿತವಿಲ್ಲ
ನಡಾವಳಿಯ ರೂಢಿಯೂ ಇಲ್ಲ !

೨

ಜೈನ ದಿಗಂಬರ ತತ್ವಕ್ಕೆ
ಅತಿತ ಅನಾಗತ ವರ್ತಮಾನ
ತೀರ್ಥಂಕರ ಪರಂಪರೆಯುಂಟು !
ಋಗ್ವೇದದಲಿ ಬರುವ ಋಷಭನಾಥನೆ
ವರ್ತಮಾನಕಾಲದ ಪ್ರಥಮ ತೀರ್ಥಂಕರ
ಪಂಪನು ಚಿತ್ರಿಸಿದ ಆದಿನಾಥನು
ಅವನೇ ಅಲ್ಲವೆ ಸ್ವಾಮಿ ?
ಅವನ ಮಗನೆ ಬಾಹುಬಲಿ

ಅಂದರೆ ಗೊಮ್ಮಟೇಶ !
ಈ ತಂದೆ ಮಗ ತೋರಿದ
ದಿಗಂಬರ ಮಾರ್ಗ ಬಲು ಪ್ರಾಚೀನ !
ಅಜಿತ ಶಂಭವ ಅಭಿನಂದನಾದಿಗೆಲ್ಲ
ಈ ಮಾರ್ಗದಲಿ ನಡೆದವರೆ !
ರಾಮಾಯಣದ ವಾಸುಪೂಜ್ಯ
ಮಹಾಭಾರತದ ನೇಮಿನಾಥ
ಬುದ್ಧನ ಸಮಕಾಲೀನ ಮಹಾವೀರ
ಇವರೆಲ್ಲ ಈ ಮಾರ್ಗದಲಿ ನಡೆದವರೆ !
ವೀರ ನಿರ್ವಾಣ ಘಟಿಸಿಯೇ
ಎರಡುವರೆಸಾವಿರ ವರ್ಷ !
ಚಾವುಂಡರಾಯನ ಗೊಮ್ಮಟಮೂರ್ತಿಗೆ
ಸಾವಿರವೆಂದರೆ ಹೆಚ್ಚೇನು ?
ಈ ಭವ್ಯಪರಂಪರೆ ಇಂದಿಗೂ ಇಳಿದು
ನಿತ್ಯ ನೂತನವಾಗಿದೆ !
ಚಾರಿತ್ರ ಚಕ್ರವರ್ತಿ ಶಾಂತಿಸಾಗರರು
ಆಚಾರರತ್ನ ದೇಶಭೂಷಣರು
ಏಲಾಚಾರ್ಯ ವಿದ್ಯಾನಂದರು
ಈ ದಿಗಂಬರ ತತ್ವಕ್ಕೆ ಜೀವಂತ ಸಾಕ್ಷಿ !
ಸೂರ್ಯ-ಚಂದ್ರ ತಾರಾಳಿ ಇರುವವರೆಗೆ
ಮಾನವನಿರುವನೋ ಇಲ್ಲವೊ ಶಂಕೆ !
ಅವನಿರುವವರೆಗೆ ದಿಗಂಬರತ್ವ
ಅಮರ ಅಚಲ ಅಬಾಧಿತ !

೩

ಪಶುಪಕ್ಷಿ ಮೃಗ ಸಂಕುಲ
ನಿತ್ಯ ದಿಗಂಬರ ಕುಲ !
ಮಾನವನಾದರೋ ಅಲ್ಪ
ಶಾಸ್ತ್ರಭೂಷಣಕೆ ದಾಸಾನುದಾಸ !
ಅದಕೆ ನಿಸರ್ಗ ರಕ್ಷಣೆಯೊಂದೇ ಒಂದು
ಕಾರಣವಾಗಿರಲಾರದು !
ಜಗದ ಸಕಲ ಪ್ರಾಣಿಗಳಲಿ

ಮಾನವನೆ ಅತಿ ಕಾಮಿ !
ಪಶುಪಕ್ಷಿ ಕುಲವೋ ಋತುಕಾಮಿ !
ಈ ಕಾಮುಕತೆಯಂ ನಾಚಿಕೆ ಅಂಜಿಕೆ
ಹೇಸಿಕೆ ಮರೆಸಲು ಮುಚ್ಚಲು
ಬಟ್ಟೆಯಮರೆ ಹೊಕ್ಕಿರಬಹುದು !
ತಿಂಗಳ ಮಗುವಿನ ತಲೆ ಮೈ
ಕೈಕಾಲಂಗಳೆಲ್ಲಕೆ
ಬಟ್ಟೆಯ ಬಿಗಿಯುವ ಬಂಟರು ನಾವು !
ಸಿಂಹದ ಸೊಂಟಕೆ ಬೆಲ್ಟನು ಬಿಗಿದು
ಸೂಟನು ತೊಡಿಸಬಲ್ಲವೆ ?
ಹುಲಿಯ ಮೈಗೆ ಪಟಿಪಟಿ ಪಾಯ್‌ಜಾಮ್
ನೆಹರೂ ಶರ್ಟನು ಹಾಕುವೆವೆ ?
ಆಕಳಿಗೊಂದು ವ್ಯಾಕ್ಷಿಯನೇರಿಸಿ
ಎಮ್ಮೆಗೆ ಒಂದು ಇಳಕಲ್ ಸೀರೆ ಸುತ್ತುವೆವೆ ?

೪

ಬೆಟ್ಟಕೆ ಚಳಿಯಾದರೆ
ಹಚ್ಚಡ ಹೊದಿಸಲುಬಹುದೆ ?
ಮಳೆಯಲಿ ನೆನೆಯುವ ಮರಗಳ ತಲೆಗೆ
ಕೊಡೆಯನು ಹಿಡಿದು ಕಾಯುವುದುಂಟೆ ?
ಚಂದಿರ ಮೈಯ್ಯಿಗೆ ಚಳಿಯಹಾಗುವುದೆಂದು
ಸೂರ್ಯನ ತಲೆಗೆ ಬಿಸಿಲೇರುವುದೆಂದು
ಬಟ್ಟೆಯ ಆಸರೆ ಹೊಂದುವುದೆ ?
ಚಳಿಮಳೆ ಗಾಳಿಯ ಬಾಧೆಯನೀಗಿದ
ಕಾಮಕ್ರೋಧ ಮೋಹಾದಿ ಗೆಲಿದ
ವೀತರಾಗನಿಗೇತರ ಅಂಜಿಕೆ ?
ದಿಕ್ಕೆ ಅಂಬರವಲ್ಲವೆ ಅವನಿಗೆ ?
ನೆಲವೇ ಹಾಸಿಗೆ ಮುಗಿಲೇ ಹೊದಿಕೆ
ದಿಕ್ಕೇ ದಿಕ್ಕಲ್ಲವೆ ಅವನಿಗೆ ?

೫

ಪಶುಪಕ್ಷಿಯ ಬತ್ತಲೆ ಮಗುವಿನ ಬತ್ತಲೆ
ಹುಚ್ಚರ-ತಲೆ ತಿರುಕರ ಬತ್ತಲೆ
ಅಜ್ಞಾನ ಜನ್ಯವಲ್ಲವೆ ?

ಜಿನಮುನಿಯು ಬತ್ತಲೆ ಅಂತಹದಲ್ಲ,
ಅದು ಮಹಾಜ್ಞಾನಿಯು ಸಂಕೇತವೇ ಹೌದು !
'ಪುತ್ತುಂ ಬತ್ತಲೆಯುಂ ಬರಿದಿಲ್ಲವೆಂಬರು !'
ಅಜ್ಞಾನದ ಬತ್ತಲೆಯಲಿ ಭಾವೋನ್ಮಾದ
ರತಿ ವಿಕೃತಿಗಳು ಕ್ವಚಿತ್ತಾದರೂ ಗೋಚರ
ಮುನಿಯಲಿ ಅಗೋಚರವದು. ಅವ ವಿರತಿ
ವೀತರಾಗಿ ಮಹಾಯೋಗಿ !

೬

ದಿಗಂಬರ ಗೊಮ್ಮಟನನು
ತದ್ರೂಪದ ಮುನಿಗಣವನು
ಕಂಡರೆ ಕಣ್ಮುಚ್ಚುವ ನಾಚುವ
ಅವಹೇಳನ ಕುತ್ಸಿತ ಬುದ್ಧಿಯು
ಹೀಯಾಳಿಕೆ ನಗೆಚಾಟಿಕೆ
ತಿರಸ್ಕೃತಿಯುನು ತೋರುವಜನ
ಅಲ್ಪಮತಿಗಳೆ ಅಲ್ಲವೆ ?
ಅವರಿಗೆ ಒಂದೇ ಒಂದು ಸೂಚನೆ
ಜಿನಮುನಿಯುನು ಇಲ್ಲವೆ,
ಗೊಮ್ಮಟನನು ಐದೋ ಹತ್ತೋ
ನಿಮಿಷದವರೆಗೆ ನೆಟ್ಟದೃಷ್ಟಿಯಲಿ
ನೋಡಿದರೆ ಸಾಕು, ಅಲ್ಪತೆ ಅಳಿವುದು !
ಅಘತಿಮಿರವು ಕಳೆವುದು
ಸಮಚಿತ್ತದಲಿ ಸುಶಾಂತಿ
ಮೆಲ್ಲಮೆಲ್ಲನೆ ಆವರಿಸುವುದು !
ಮಾನವ ಸತ್ವದ ಇತಿಮಿತಿ
ಥಳ್ಳನೆ ಹೊಳೆಯುವುದು
ಪುರುಷಾಕಾರದ ಪರಮಾದರ್ಶದ
ನೆಲೆಬೆಲೆ ತಿಳಿಯುವುದು !
ಆತ್ಮನಿಗೆ ಪರಮಾತ್ಮನ ಪ್ರತ್ಯಕ್ಷ
ಸಾಕ್ಷಾತ್ಕಾರವೆ ಸಂಭವಿಸುವುದು !

೭

ಎತ್ತರ-ಗಾತ್ರ-ಬಲ-ಛಲ-
ಒಲವು-ಗೆಲುವಿನಲಿ

ಮಾನವನಿಗೆ ಸರಿಸಾಟಿಯಾದುದು
ಇನ್ನಾವುದೂ ಇಲ್ಲಾ
ಎಂಬುದನೆ ಬಿಂಬಿಸುವುದು
ಈ ಬೃಹನ್ಮೂರ್ತಿ !
ಆತ್ಮ ತೇಜದೆದರು ಕೃತ್ರಿಮ
ಒಡವೆ ವಸ್ತ್ರಗಳು ಅಸ್ತ್ರಶಸ್ತ್ರಗಳಂ
ಏತಕೂ ಬಾರವು–
ಎಂಬುದನೆ ಸಾರುವುದು–
ಈ ದಿವ್ಯದಿಗಂಬರ ರೂಪ !
ಧ್ಯಾನ ಚಿಂತನೆಯಲಿ
ಸಕಲ ಬಂಧನ ಹರಿವುದು !
ಸರ್ವಶ್ರೇಷ್ಠ ಸುಖವಾವುದೊ
ಅದು ಬೇಕೆನಿಸಿದ ನರನಿಗೆ
ದಿವ್ಯ ದಿಗಂಬರೋಪಾಸನೆ
ಅನಿವಾರ್ಯವೆ ಹೌದು !
ವಿಷ್ಣುಭಕ್ತಿಗೆ ವೈಕುಂಠ ಶಿವಭಕ್ತಿಗೆ ಕೈಲಾಸ
ಲಿಂಗಭಕ್ತಿಗೆ ಲಿಂಗೈಕ್ಯ ಲಭ್ಯವಹುದು !
ಮೋಕ್ಷಪ್ರಾಪ್ತಿಗೆ ದಿಗಂಬರವೆ ಧಾರಕ
ಪರಮ ಸಿದ್ಧಾಂತ ತತ್ವವೇ ತಾರಕ !

ಎಲ್ಲಿ ಇರುವೆಯೊ ? ಮರುಳ ಎದೆಯಲಿ

ಎಚ್. ಬಾಲರಾಜು

ನಿನ್ನ ಬಂಧನ ಸ್ಮೃತಿಯ ಚುಂಬನ ಅಳಿಸಲಾರದರಿಂಗಣ
ಕತೆಯ ಒಳಗಿನ ಮರ್ಮ ಒಡೆದರೆ ನಿನ್ನದೆಲ್ಲವು ಒಣಬಣ
ಏನಿದೇನಿದು ಅಲ್ಲಿ ಅದ್ಭುತ ಕೂಗು ಕಹಳಿಯ ನಾದವ
ತಮಟೆ ಸದ್ದಿನ ಜಿದ್ದಾ ಜಿದ್ದಿನ ಗಂದ್ದು ಗುದ್ದಿನ ಸುದ್ದಿನ.

ರುಂಡವಾರಿದ 'ರಣ' ವು ಬಿಕ್ಕುತ ನಿನ್ನ ನೆಕ್ಕುತ ನಿಂತಿತೋ
ಅಣ್ಣ ತಮ್ಮರ ವ್ಯಾಜ್ಯದೊಳಗಿನ ಒಡವರೊಡಲ ಬತ್ತಿತೊ
ನಿಮ್ಮ ಛಲದಲಿ ಮೋಡ ಮುಸುಕಿ ಬಿಸಿಯ ಗಾಳಿಯು ಬೀಸಿತೊ
ಎಲ್ಲಿ ನೋಡಿದರಲ್ಲಿ ನಿನ್ನ ತೇಜಃಪುಂಜವು ಹೊಳೆಯಿತೊ.

ಎಂಥ ತ್ಯಾಗವೊ ನಿನ್ನ ಬುದ್ಧಿಯು ಧರ್ಮಯುದ್ಧಕೆ ಮಣೆಯಿತು
ಮರ್ಮಕರ್ಮದ ಕುತ್ತಿನೊಳಗಡೆ ನಿನ್ನ ಮನಸ್ಸು ಕುದಿಯಿತು
ಅತ್ತಣಿತ್ತಣ ಎತ್ತಣದೊ ಆ ದಿವ್ಯ ಚಕ್ರವು ತಿರುಗಿತು
ನಿನ್ನ ರೂಪಕೆ ನಿನ್ನ ಮೋಹಕೆ ಕಾಲಚಕ್ರವು ಸೋತಿತು.

ಎಲ್ಲ ತೊರೆಯುವೆನೆಂದುಕೊಂಡು ಎಲ್ಲಿ ತೊರೆದು ಬಿಟ್ಟಿಯೊ
ನಿಂತ ನಿಂತಲ್ಲಿಂದಲೇ ನೀ ದೂರ ದೂರ ಹೋದೆಯೊ
ಎಂಥ ಬಲಿಯೊ ನಿನ್ನ ತ್ಯಾಗವು ಬಿಳಿಯ ರಕ್ತದ ಕಣವು
ಖಾಲಿಯಾಯಿತು ಶೋಕಗೊಂಡಿತು ರಣರಂಗದ ಮಸಣವು.

ಜನತೆ ಮನದಲಿ ಕನಸಪುಟದಲಿ ನೂರು ರೂಪ ತಾಳಿದೆ
ಸಾವಿರೊರ್ಷದ ಹಿಂದೆ ಸತ್ತ ಸುದ್ದಿ ಮತ್ತೆ ಚಿತ್ತಿದೆ
ಮೊಳೆತು ಚಿಗಿತು ಕುಡಿಯು ಚಾಚಿ ಟೊಂಗೆ ಟೊಂಗೆಗೆ ಚಾಚಿದೆ
ನೂರು ಟೊಂಗೆಗೆ ನೂರು ಭಾಷೆಯು ನೂರು ಕತೆಯ ಹೆಣೆದಿದೆ.

ಎಂಥ ತಪವೋ ನಿನ್ನ ತಪವೂ ಎಲ್ಲ ಮನಕೆ ತಾಪವು
ಜನತೆ ಜನತೆಯ ಎದೆಯ ಎದೆಯಲಿ ಆಯಿತಲ್ಲೊ ಘಾತವು

ನಿನ್ನ ಮನೀಸಿಗೆ ಶಾಂತಿ ದಾಮವು ಮೂಡಿ ನಿಂತಿದೆ ದೂರದಿ
ಶ್ರವಣ ಬೆಳಗೊಳ ಕಾದ ನೆಲದಲಿ ಬೆಂಕಿ ಒಡಲನೆ ಸುರಿದಿದೆ.

ಏನಂ ಎತ್ತರ ಏನು ದಿವ್ಯವು ಅಗ್ನಿಕುಂಡಲ ಮುಂದಿದೆ
ಮುಗಿಲ ಬಿಸಿಲಿಗೆ ಸುಡುವ ದೇಹಕೆ ಸ್ನಾನ ಮಜ್ಜನ ಕಾದಿದೆ
ಧೂಪ ದೀಪ ಗಂಧಗಾಳಿ ವ್ಯೈಯು ಸುತ್ತ ನೆರೆದಿವೆ ನಿನ್ನ ತಬ್ಬಿಕೊಂಡಿವೆ.
ಎಲ್ಲಿ ಇರುವೆಯೊ ಏನು ಕೊಡುವೆಯೊ ಕಾಣಲಾರೆವು ನಿನ್ನನು.

ವಿಗ್ರಹ ವೀರ

ಪಂಚಾಕ್ಷರಿ ಗ. ಹಿರೇಮಠ

ಓ
ವಿಗ್ರಹ ವೀರ ನಿನ್ನ ಕಂಡು,
ಕಣ್ ಮುಚ್ಚುವಂತಾದರೂ,
ಕಣ್ ತೆರೆಸುವ ನಿನ್ನವಹಾಟ ಎಂಥದು !
ಹೊಟ್ಟೆಗೆ ಅನ್ನವಿಲ್ಲದ ಜನರ
ನಡವೆ, ಬಟ್ಟೆ ತೊಡುವದೇಕೆಂದು,
ದಿಗಂಬರನಾದೆಯಾ ?
ನೆಲವೇ ಹಾಸಿಗೆ, ಆಕಾಶ ಹೊದಿಕೆ,
ದಿಕ್ಕುಗಳೇ ಅಂಬರವಾಗಿ ಉಳ್ಳ, ನಿನ್ನ ದರ್ಶನದಿಂದ.
ಮನಶಾಂತಿಯುಲ್ಲದೇ ಬೇರೇನು ಸಿಗದು.
ಕಾರಣ ನೀ ತ್ಯಾಗಮೂರ್ತಿ.
ಉತ್ತರಕ್ಕೆ ಮುಖಮಾಡಿ ನಿಂತ,
ನಿನ್ನ ಶಾಂತ ಮುಖ ಮುಂದ್ರೆ,
ಉತ್ತರಕ್ಕೆ ಶಾಂತಿ ಸಂದೇಶವಿರಬಹುದೇ ?

ಅನಾದಿಯಹಾದ
ಒಳಿತು–ಕೆಡಕು,
ಪಾಪ–ಪುಣ್ಯ,
ಹೌದು–ಅಲ್ಲ.
ಎಷ್ಟೊಂದು ಅರ್ಥಪೂರ್ಣ,
ಈ ಮಣ್ಣಿನ ಮರ್ಮ !
ಈ ಮರ್ಮದ ಒಂದೊಂದೇ
ಸ್ವರಗಳನ್ನು ಓದುತ್ತ ನಿಂತ,
ನಿತ್ಯ ನಿತ್ಯದ;
ರಹಸ್ಯ ವಿದ್ಯೆಗೆ,
ನೀ ಜೀವಂತ ಸಾಕ್ಷಿ.

ನಿನ್ನ 'ಬೆಳ್'ಗೊಳದ ಜೀವನವನರಿಯಂದೇ;
'ಬೋರ್' ಹಾಕಿ, ನೀರು ತಗೆದುಂ;
ಶಾಂತಿವನವ ಸ್ಥಾಪಿಸುವ
ಭಗೀರಥ ಪ್ರಯತ್ನದಿಂದ, ನಿನ್ನ
ಐಸಿರಿಯ ಮಾಡುವೆವು ನಾವು. ॥

ಅಮರಮೂರ್ತಿ ಗೊಮ್ಮಟೇಶ

ಸದಾನಂದ ಸಿ. ಪಾಟೀಲ

ನಿಸ್ಸಾರ ನಿಸ್ಸಾರ ನಿಸ್ಸಾರ ಸಂಸಾರ
ಜಗದಳಿವು ಜಗದಳಿವು ಸ್ವಾರ್ಥಮೂಲ
ಅನುಕಂಪೆ ಕರುಣೆ ಪ್ರೀತಿ ಅನುರಣಿಸಿರಲು
ದಿವ್ಯವಾಯಿತು ಬದುಕು ಹೃತ್ವಿಶಾಲ

ಇದ್ದುದೆಲ್ಲವು ನನಗೆ ಇಲ್ಲುದೆಲ್ಲವು ನನಗೆ
ಭರತ ಚಕ್ರೇಶನ ಆನೆ ಗರ್ವ
ವೈರ ರೋಗಕ್ಕೆ ಪ್ರೇಮ ಮದ್ದಾಗಿ
ನೀನಾದೆ ಬಾಹುಬಲಿ ಸಿಂಹಗರ್ವ

ಭೂತಾಯಿ ಬಸುರಿರಲು ಹೊಳೆ ಹಳ್ಳ ತುಂಬಿರಲು
ಗಿಡಮರಗಳೆಲ್ಲ ಹೂ ಚಿಗುರು
ಒಂದೊಂದೇ ಪಲ್ಲವಿಸಿ ಕಾಯಾಗಿ ಕಾಯ್ಬಲಿತು
ಭರತ ಕೈಯ್ಯಲ್ಲಿರಲು ಡೋರೆ ಒಗರು.

ತೊಟ್ಟುಬಿಚ್ಚಿ ಬಿದ್ದು ಕಾಯೊಡೆಯಲಿಲ್ಲ.
ಬಾಹುಬಲಿ ಹಣ್ಣಾದೆ ಕಾಯ್ ಮಾಗಲಿಲ್ಲ.
ಬೀಜ ಬೀಜಗಳೆಲ್ಲ ಹಾಡುಕಟ್ಟಿ ಸಂ
ಸಾರ ಸಾರವನ್ನೆಲ್ಲ ತೂಗಿ ತೂಗಿ ನೋಡಿ
ನಿಸ್ವಾರ್ಥ ಪ್ರೇಮ ಅನುಕಂಪೆ ಕರುಣೆ
ದಿವ್ಯವೆಂದಾವು ಬದುಕು ಗೊಮ್ಮಟೇಶ
ಉಂಡುದೆಲ್ಲವ ಕಕ್ಕಿ ಸಾಯ್ವ ಮುನ್ನವೆ ಅಣ್ಣ
ಕಟೆಯಿಸಿದ ಪುತ್ಥಳಿ ಗೊಮ್ಮಟೇಶ
ನಿನ್ನ ನಿಲವು ನಿನ್ನ ಎತ್ತರದ ಬಿತ್ತರ
ಚೆಲುವು ಚಿತ್ತಾರ ಈ ಲೋಕಕೆಲ್ಲಿ
ಗೊಮ್ಮಟೇಶ ಈ ಲೋಕದಲ್ಲಿ.

ಗುಳಲ ಕಾಯಜ್ಜಿಯು ಗೊಮ್ಮಟನ ತಾಯಿಯು
ಸಾವಿರದ ವರುಷಗಳ ಇತಿಹಾಸ ಚಕ್ರಗಳ
ಕತೆ ಕತೆಗಳ ಕೇಳಿ ಖುಶಿ ಪಡುವದಲ್ಲ
ಕೆತ್ತಿರುವ ಶಿಲ್ಪಿಗಳ ಮಾಡುವಭಿಷೇಕಗಳ
ಕಲ್ಲ ಮಾಟವ ನೋಡಿ ಸುಖಪಡುವದೂ ಅಲ್ಲ.
ತಾಯಿ ಮಾತಿನ ಸಡಗರದ ರಾಯ ಕೆತ್ತಿಸಿದ ಬಾಹುಬಲಿ
ಪುಟ್ಟಭಕ್ತಿಗೆ ಮಹಿಮೆ ಮೆರೆದ ಬಾಹುಬಲಿ
ಲೋಕೈಕ ವೀರ ಲೋಕೈಕ ಮಾನವ್ಯ ಮೂರ್ತಿ ಬಾಹುಬಲಿ
ಭವ್ಯ ನಿಲುವಿನ ದಿವ್ಯ ವ್ಯಕ್ತಿತ್ವ ಬಾಹುಬಲಿ
ತಮ್ಮನಾದರೂ ಅಣ್ಣನಾದ ಬಾಹುಬಲಿ
ಸಾರುತಿರುವ ನಿನ್ನ ದರ್ಶನವೇ ಅಮರ
ಗೊಮ್ಮಟೇಶ್ವರ ನಿನ್ನ ದರ್ಶನವೇ ಅಮರ.

ಗೊಮ್ಮಟೇಶ

ಸೋಮಶೇಖರ ಇಮ್ರಾಪೂರ

ನಿಂತಾನ ನೆಲದಾಗ । ಭುಜಬಲಿ ।
ಬೆಳದಾನ ಬಯಲಾಗ । ಮೆರದಾನ
ಮುಗಿಯದ ಮುಗಿಲಾಗ । ಗೊಮ್ಮಟ
ತ್ಯಾಗದ ತೆಲಿಮ್ಯಾಗ । ಭೋಗಾ
ಯೋಗದ ನೆಲಿಯಾಗ ।
ಸಿರಿ ಸಿಡಿಲ ಮೀರಿ ಜಗಕೆಲ್ಲ ತೋರಿ ತಾ
ಅರಳ್ಯಾನ ನಿಜದಾಗ । ಬರಿಬರಿ
ಬತ್ತಲ ಜಗದಾಗ । ಬೆಳ್ಳಂ
ಬೆಳಕಿನ ಹೊಳಿಯಾಗ । ‖ ನಿಂತಾನ ‖

ಇಂದ್ರಗಿರಿಯ ಮ್ಯಾಲೆ । ಎಳನಗಿ
ಚಂದ್ರಬೆಳಕ ಹಾಸಿ । ಜಿನಮುನಿ
ಬೆಳದಾನ ಪುರಮಾಸಿ ।
ಭೋಗವೆಲ್ಲ ಬಯಲಾಗಿ ಯೋಗ
ಬೆಳುಗೊಳಕ ಕಂಪಸೂಸಿ । ಲೋಕಾ
ಲೋಕನೆಲ್ಲ ಪೂಸಿ । ಕರ್ಮದ
ಕತ್ತಲೆಲ್ಲಾ ಸೋಸಿ । ಪುದ್ಗಲ
ಶನಿಸಾಗರ ಈಸಿ । ‖ ನಿಂತಾನ ‖

ಪೌದನಪುರದರಸ । ಪ್ರತಾಪಾ
ಕೀರ್ತಿಹೊನ್ನಕಳಸ । ವೈರಾ
ಗ್ಯದ ಸಾಗರ ಹಂಸ ।
ಭರತ ಚಕ್ರಿ ಒಣಗರ್ವಗರಿಕೆ । ಕಿ-
ತ್ತೊಗೆದ ವೀರಪುರುಷ । ಸಕಲ
ಯುದ್ಧವೀರ ಪರುಷ । ‖ ನಿಂತಾನ ‖

ಕಡುಚೆಲುವಿನ ಕಾಮು । ದೇಹವೇ
ಸೌಂದರ್ಯದ ಧಾಮು ।
ಚಕ್ರರತ್ನವನೆ ಪಾದಪದ್ಮದಲಿ
ಪಳಗಿಸಿದಾ ಸೋಮು । ॥ ನಿಂತಾನ ॥

ಕಲ್ಲೊಳಗ ಕೂಡಿ ನಿಂತ । ಒಳಮನ
ದಾಗ ಮೂಡಿ ಕುಂತ ।
ಮುಕ್ತಿ ಮನೆಯು ಶೂಲಗಂಬ । ಚಾವುಂಡ
ರಾಯನ ನಿಜ ಸಂತ । ॥ ನಿಂತಾನ ॥

ನಶ್ವರ ಸುಖ ತೊರೆದ । ನಿರಂತರ
ಶಾಶ್ವತ ಸುಖ ಮೆರೆದ ।
ತಪದಗ್ನಿಯೊಳಗ ಜಿನಸಿದ್ಧಗೆದ್ದ । ಪ್ರತಿ
ಕಾಲಕು ಉದ್ಬುದ್ಧ । ಶತ ಶತ
ಕಾಲಕು ಸಮೃದ್ಧ । ॥ ನಿಂತಾನ ॥

ಗೊಮ್ಮಟ : ವರ್ತಮಾನಕ್ಕೊ ಸವಾಲು

ಬುದ್ದಣ್ಣ ಹಿಂಗಮಿರೆ

ಹಾವಿನ ಹಾಗೆ ಸರಸರ ಕೈಕಾಲು ಸುತ್ತಿ
ಗಾಸಿಗೊಳಿಸುವ
ಸಂಸಾರದ ವ್ಯಾಮೋಹದ ಕೊಂಡಿ
ಗಳ ಕಳಚಿಕೊಂಡು, ಪರಲು ಹರಿದುಕೊಂಡು
ಚಳಿ, ಮಳೆ, ಗಾಳಿ, ಬೆಂಕಿ–ಬಿಸಿಲ ಬರೆಗಳಿಗೆ
ಉಸ್ಸೆನ್ನದೆ,
ಎದೆ, ಸೆಟಿಸಿ ನಿಂತಿರುವನೊಬ್ಬನೇ
ಒಬ್ಬ; ಇಂದ್ರಗಿರಿಯ ದಿಬ್ಬದ ಮೇಲೆ
ಮನುಷ್ಯನ ಮನಸ್ಸನ್ನು ಹೊಕ್ಕು
ಹರಿದು ತಿನ್ನುವ
ಪಂಚಮಹಾಭೂತಗಳ ಹಾವಳಿ
ಇಲ್ಲಿಲ್ಲವೇ ಇಲ್ಲ !
ಕಾಮ–ಕ್ರೋಧ–ಮದ–ಮತ್ಸರಗಳ ಹುಯ್ಲು
ಬಿಸು ಸುಯ್ಲು ಯಾವುದೂ ಇಲ್ಲ;
ಸೋಲು–ಗೆಲುವು–, ರಾಗ–ರಂಗಗಳ ತೆರೆ ತೆರೆ
ಉಕ್ಕುಕ್ಕಿ ಮೊರೆಯುವುದಿಲ್ಲ !
ದಟ್ಟ ಕಾಡಿನ ಕ್ರೂರ ಹುಲಿ–ಚಿರತೆಗಳ
ಗರ್ಜನೆಯೂ ಕೇಳಿಸುವದಿಲ್ಲ ಇಲ್ಲಿ.
ಮನುಷ್ಯ ಭಾವನೆಗಳೆಲ್ಲ ಘನೀಭವಿಸಿ
ಮೂರ್ತಿಯಾಗಿ ತಲೆಯೆತ್ತಿ ನಿಂತ ಗೊಮ್ಮಟ.
ಮಧ್ಯರಾತ್ರಿಯಿರಲಿ ಅಥವಾ ಮಟ ಮಟ ಮಧ್ಯಾಹ್ನವಿರಲಿ,
ಒಂದೇ ಒಂದು ಗಟ್ಟಿ ನಿಲುವು.
ತನ್ನನ್ನು ಯಾವ ದುಷ್ಟ ಶಕ್ತಿಗಳೂ
ಸೋಲಿಸಲಾರವೆಂಬ ಅಹವಾಲಿನೊಂದಿಗೆ
ಅಚಲ ನಿಂತಿರುವ ಗೊಮ್ಮಟ

ಸವಾಲು ವರ್ತಮಾನಕ್ಕೂ ವರ್ಧಮಾನಕ್ಕೂ.
ಅಧಿಕಾರ, ವೈಭವ, ಗದ್ದುಗೆ ಉರುಳುರುಳಿದರೂ
ಸಹಸ್ರ ವರ್ಷಗಳ ತಾಳ್ಮೆ–ನಗೆಗಳುಕ್ಕನ್ನು
ತನ್ನ ಮುಖದಲ್ಲಿ ತುಂಬಿಕೊಂಡು ನಿಂತ
ತೇಜಸ್ವಿ :
ಹುಟ್ಟು–ಸಾವುಗಳ ಚಕ್ರ ಮೆಟ್ಟಿನಿಂತ
ಧೀರ ಪುರುಷ.
ಬಿದ್ದವರಿಗೆ ಎದ್ದು ನಿಲ್ಲಿರೆನ್ನುವಂತೆ
ಸೋತು ಸುಣ್ಣಾದವರ ಮೇಲೆತ್ತುವಂತೆ
ಉಕ್ಕಿನ ಹಾಗೆ ತಟಸ್ಥ ನಿಂತ
ಶಿಲೆಯ ಗೊಮ್ಮಟ.

ಕಾಯುತ್ತಿರುವೆ

ರಾಜೇಂದ್ರ ಅಣ್ಣಾನವರ

ಹಸಿವಿನಲಿ ಬೇಡಿದ ದಿಟದ ಗೊಮ್ಮಟರ
ದೂರ ತಳ್ಳಿ, ಛೀ, ಥೂ ಹಾಕಿ
ಬರುವ ಕಳ್ಳಬೆಕ್ಕಿನ ಭಕ್ತರಿವರು,
ದರಿದ್ರದೇವೋಭವ ಭಿಕ್ಷುಕದೇವೋಭವ
ಮರೆತು ಹೋಯಿತೆ ದೇಶದೇಶಿಗೆಯ ಮಂತ್ರ.

ದಿಗಂಬರವೇ ಬತ್ತಲೆಯ ಮಗವೋ
ಬಾವಿಯೊಳಗಿನ ಕಪ್ಪೆಕಂಡ ಸಮುದ್ರವೋ
ಅದಕಾಗಿ ಸಂಸ್ಕೃತಿಯ ಸಕ್ಕರೆಯ ಮುದ್ದೆ
ಭಾರತಕೆ ಇರುವೆಗಳ ಸಾಲು ಬೊಗರಿ
ತಿರುಗುವಂತೆ, ಎಂದೆಲ್ಲ ಗೀಚುತ್ತ ಹೇಳುತ್ತ
ಕತ್ತರಿಸುವರೋ ಹಾವರಾಣಿಗಳ ಬಾಲ.

ಗತವೈಭವದ ಸಂಸ್ಕೃತಿಯ ಗುಂಗು
ಕರ್ಣನ ತೊಡೆಯ ಕಡಿಯುವಂತೆ
ಶಿಥಿಲಗೊಳ್ಳುವ ಕಾಲವಿದು. ಆದರೂ
ಕಟ್ಟುವರೊ ಎತ್ತರಕೆ ಕಬ್ಬಿಣದ ಕಂಬಿಗಳ
ಮಾಡುವರೊ ಗಟ್ಟಿಗೊಳಲು ಸಹಸ್ರವರ್ಷ ಮಸ್ತಾಭಿಷೇಕ

ಹಾಲುಗಲ್ಲದ ಹಸುಳೆಗಳು ಮುದುಡುವಾಗ
ಜೀವಕಾಗಿ ರೋಗಿಗಳು ಚಡಪಡಿಸುವಾಗ
ಹಸಿವು ದಾಹ ಇಲ್ಲದೆನಗೆ ಮೂಗು ಹಿಡಿದು
ಸುರುವುತಾರೆ ತಲೆಯ ಮೇಲೆ
ಹಾಲು ಮೊಸರು ತುಪ್ಪವ
ಎಲ್ಲಿ ನೋಡಿದರೂ ಭೀಕರದ ಈ ಬರಗಾಲದಲ್ಲಿ.

"ಧನದ ಮದವ ರಾಜ್ಯಮದವ
ವನಿತೆ ಮದವ ಸುತರ ಮದವ"
ತುಂಬಿಕೊಂಡ ತೊಗಲು ಚೀಲಗಳೇ
ಬರುತ್ತವೆ,
ನನ್ನವರನಾರನೂ ಕಾಣದೆ
ಅವರ ಧ್ಯಾನದಲ್ಲಿ
ಇಂದೋ ನಾಳೆಯೋ ಬರುವರೆಂದು
ಕಾಯುತ್ತಿರುವೆ.

ನನಗೆ ಬೇಕು-ಗೊಮ್ಮಟ

ಶ್ರೀಪಾದ ಹೆಗಡೆ, ಕಣ್ಣಿ

೧

ಬೆಟ್ಟದ ಮುಡಿಯ ಮಂದಹಾಸ
ಎದೆ ತುಂಬುತ್ತಾ ತಬ್ಬಬಾರದ ಗಾತ್ರ ದಿಗಿಲು ಬಡಿಸುತ್ತೆ
ಎತ್ತರದಲ್ಲಿ ಅಲ್ಲಾಡದ ಗಾಂಭೀರ್ಯ ಉದ್ದಕ್ಕೆ ಬೆಳೆಯುತ್ತೆ
ಸಾವಿರ ವರ್ಷ ನಮ್ಮ ಮುಕ್ಕುತ್ತೆ

ನಾವೀಗ ನೆನಪಲ್ಲಿ ಕೊಂಚ ಹುಡುಕುತ್ತಾ ಹೋದರೆ...
ಅಲ್ಲೊಂದು ಕರ್‍ರಗಿನ ಕಾಗೆ ಕುಳಿತರೆ
ರಣಹದ್ದು ರೆಕ್ಕೆ ಬಡಿದರೆ, ನೆರಳು ನಿಧಾನ ನಡೆದರೆ
ಅಮಂಗಳ ನಮಗಾಗುವದಿಲ್ಲ... ಆದರೆ
ಹೀಗೆಲ್ಲಾ ಆಗುವದು ಸುಳ್ಳೇನು ?

ಗೊಮ್ಮಟ ನಕ್ಕೇಬಿಟ್ಟಾಗ ಏನೆನಿಸುತ್ತೆ
ಬಟ್ಟೆಯೊಂದೊಂದನ್ನೂ ಕಳೆಯುತ್ತೇವಾ
ದೇವೇಂದ್ರನ ಎದೆಗೆ ಒದೆಯುತ್ತೇವಾ

ಇಲ್ಲ–
ನಮಗದೆಂದೂ ಆಗುವದಿಲ್ಲ
ಗೊಮ್ಮನನ್ನು ಗೌರವಿಸುವ ನಾವು ದೇವೇಂದ್ರನ್ನೂ
ಬಹಳ ಪ್ರೀತಿಸುತ್ತೇವೆ. ಆಕಾಶದಿಂದ
ಇಂದ್ರಭವನದಲ್ಲಿ ತಂಗಿದ ಎಲ್ಲರನ್ನೂ ನಾವು
ಸೂಳೆಯರಂತೇ ತಬ್ಬಿಕೊಳ್ಳುತ್ತೇವೆ.

೨

ಬಾಹುಬಲಿ ಇಂದ್ರಭವನ ಒದ್ದಾಗ
ಹೊಡೆದ ಸಾವಿರ ಪಲ್ಟಿ

ರಾಜರು ನೋಡುತ್ತಾ ನಿಂತಿದ್ದರು, ಕೈಮುಗಿದಿದ್ದರು
ಬಾಹುಬಲಿ ದೂರದಲಿ ಕಲ್ಲಾದಾಗ
ದೂರದಿಂದ ನೋಡಿದ್ದರು.

ಇಂದ್ರಭವನದ ಸಾವಿರ ಚೂರು ಮತ್ತೆ
ಒಂದೆಡೆ ಸೇರಿತ್ತು; ಭಾರತದಲ್ಲಿ ಅನೇಕ ಅರಮನೆಗಳಿದ್ದವು
ಸಾವಿರ–ಸಾವಿರ ಕೂಲಿಗಳು ತಾವು ಕಟ್ಟಿದ
ಅರಮನೆ ಕಣ್ತುಂಬಾ ನೋಡುವಾಗ ಗಾಢ
ಇರುಳು ಕವಿಯುತ್ತಿತ್ತು...

ಬಾಹುಬಲಿ ದೂರದಲ್ಲಿ ಬೆತ್ತಲಾಗಿ
ಬೆಳೆಯುತ್ತಿದ್ದ
......ಈಗ
ರೂವಾರಿ ಕಲ್ಲಿಗೆ ಜೀವ ಬರಿಸಿದಾಗ
ದಿಗಂಬರನಾಗಿ ನಿಂತ ಬಾಹುಬಲಿ
ಆಕಾಶಕ್ಕೆ ಬೆಳೆಯುತ್ತಿರುವದು
ನಿಮಗೆ ಕಂಡಿತು
ಆತ ಬೆಳೆಯುತ್ತಲೇ ಹೋದ.

ಅವನಿಗೆ ಮೊದಲು ಬೆವರಿನಭಿಷೇಕವಾಗುತ್ತಿದ್ದಾಗ
ದಿನರಾತ್ರಿ ಜೇಣಸಪ್ಪಳ ತುಂಬಿತ್ತು; ಸಾವಿರ–ಸಾವಿರ
ಕಿಡಿಯೆದ್ದು ಸಿಡಿದಿತ್ತು; ಶಿಲ್ಪಿಯ ಕನಸು, ಉಸಿರು,
ಆತಂಕ, ನಿರೀಕ್ಷೆ ಫಲಿಸಿದಂದು ಆದ ಆನಂದ
ನನಗೆ ಬೇಕು—

ಜೇಣಸಪ್ಪಳ ಬೇಕು, ಉಸುರುಸುರಿನ ಹೂವು ಬೇಕು
ಅವನೆದೆಯ ಬಾಹುಬಲಿ ನನಗೆ ಬೇಕು.
ಕೋಟಿ ಕೋಟಿ ಮಕ್ಕಳು ಬಿದ್ದ ಹೊಟ್ಟೆಯಲ್ಲಿ,
ಮುಳುಗಿದ ಕಣ್ಣಲ್ಲಿ ಆಕಾಶ ನೋಡುತ್ತಾರೆ
ನನಗೀಗ ಇಂದ್ರಭವನವೂ ಬೇಕು
ಇಂದ್ರ ಭವನವೇ ಬೇಕು.

ಚಲದೊಳ್ ದುರ್ಯೋಧನಂ

ಬುದ್ದಣ್ಣ ಹಿಂಗಮಿರೆ

ಪಂಪ ಭಾರತದ ಸೃಷ್ಟಿಗೆ ಬಹುನುಟ್ಟಿಗೆ ಶಾಸನಗಳಲ್ಲಿ ಪ್ರತಿಪಾದಿತವಾಗಿದ್ದ ಬದುಕಿನ ಮೌಲ್ಯಗಳಿಂದ ಪ್ರೇರಣೆ ದೊರಕಿದ್ದು. ಅನೇಕ ಕಡೆಗೆ ಭಾರತವೀರರ ಗುಣ, ಮೌಲ್ಯಗಳ ಪ್ರಸ್ತಾಪವಿದೆ. ಭಾರತ ಕಥೆ ಜನಜನಿತವಾಗಿದ್ದು ಅದು ಅಂದಿನ (Heroic Age) ವೀರಯುಗದ ಅಖಂಡ ಮೌಲ್ಯಗಳನ್ನು ಎತ್ತಿ ಹಿಡಿದಿರುವ ಕೃತಿ.

'ಬೆಳಗುವೆನಿಲ್ಲಿ ಲೌಕಿಕಮುನ್' ಎಂದು ಕವಿ ಪಂಪ ಹೇಳಿರುವ ಮಾತನ್ನಿಲ್ಲಿ ಗಮನಿಸಬೇಕು. ಈ ಕಾರಣದಿಂದಲೇ 'ಅವನ ಕೃತಿಗಳು ಉಪಾಧ್ಯಾಯರಾದುವು'[೧] ಎನ್ನುವ ಅಭಿಪ್ರಾಯದಲ್ಲಿ ಅರ್ಥವಿದೆ. ಕವಿ ಪಂಪ ತನ್ನ ಕಾಲದ ಜನಜೀವನದಲ್ಲಿ ಹಾಸು ಹೊಕ್ಕಾಗಿದ್ದ ಜೀವಂತ ಮೌಲ್ಯಗಳನ್ನು ಅತ್ಯಂತ ಸಮರ್ಥವಾಗಿ ಅಭಿವ್ಯಕ್ತಗೊಳಿಸಿದ್ದಾನೆ.[೨–೩]

ವ್ಯಾಸಮುನೀಂದ್ರ ವಚನಾಮೃತವ್ಯಾರ್ಥಿಯನೀಸುವೆಂ

ಪ್ರಾಚೀನ ಕಾಲದಿಂದ ಏರ್ಪಟ್ಟ ನಂಬಿಕೆಯನ್ನು ಇದ್ದಕ್ಕಿದ್ದ ಹಾಗೆ ಇರಿಸಿಕೊಂಡು ಹೊಸ ಅರ್ಥವನ್ನು ಹುಟ್ಟಿಸಿ, ಸಂಪ್ರದಾಯದಿಂದ ಪ್ರತ್ಯೇಕಗೊಳ್ಳುವಂತೆ ಪಾತ್ರಗಳನ್ನು ಸೃಷ್ಟಿಸುವುದು ಪಂಪನ ಉದ್ದೇಶಗಳಲ್ಲಿ ಒಂದಾಗಿದೆ. ವ್ಯಾಸ ಮಹಾಭಾರತದಲ್ಲಿ ಧರ್ಮ, ಅರ್ಜುನ, ಭೀಮ, ಹಾಗೂ ಕೃಷ್ಣ ಇವರ ಪಾತ್ರಗಳು ಗಮನ ಸೆಳೆಯುತ್ತವೆ. ಪಂಪ ವ್ಯಾಸ ಮಹಾಭಾರತವನ್ನು ಅನುಸರಿಸಿ, ಕತೆಯ ಮೆಯ್ಗಿಡಲೀಯದೆ ಭಾರತವನ್ನು ಕನ್ನಡಿಸುವ ಉದ್ದೇಶವನ್ನು ಹೊಂದಿದವನು ಭಾರತ ಕಥೆಯನ್ನು ಮುಕ್ತಾಯಗೊಳಿಸಿದ ಮೇಲೆ ಅವನು ಕವಿಯಾಗಿ ಈವರೆಗೆ ಸೃಷ್ಟಿಸಿದ್ದನ್ನು

೧. ಪಂಪಕವಿ ಮತ್ತು ಮೌಲ್ಯ ಪ್ರಸಾರ — ಡಾ. ಎಂ. ಚಿದಾನಂದಮೂರ್ತಿ
ಸಂಶೋಧನ ತರಂಗ, ಸರಸ ಸಾಹಿತ್ಯ ಪ್ರಕಾಶನ : ೧೯೬೬

೨. Heroic Poetry is not only objective but claims to tell that truth and its claims are in general accepted by the public, p. 40

'Heroic Poetry'– C. M. Bowra.

೩. Heroic Poetry sets out to tell stories which contain some element of truth and the poet's credulity reflects that of society in which he lives. p. 41

—Heroic Poetry –C. M. Bowra

ನಿಷ್ಪಕ್ಷಪಾತ ವಿಮರ್ಶನ ದೃಷ್ಟಿಯಿಂದ ಕೊನೆಯಲ್ಲಿ ಒಂದೊಂದು ಮಾತಿನಲ್ಲಿ ಆಯಾ ಪಾತ್ರದ ವೈಶಿಷ್ಟ್ಯವನ್ನು ಸಂಕೇತಿಸುವ ಪ್ರಧಾನ ಗುಣಗಳನ್ನು ಎತ್ತಿ ತೋರಿ, ಆಯಾ ವ್ಯಕ್ತಿ ವಿಶೇಷಗಳನ್ನು ಚಿನ್ನದ ಹಾಗೆ ತೂಗಿ ನೋಡಿದ್ದಾನೆ.

ಅವರವರ ಚರಿತ್ರೆಯ ಬೆಳಕಿನಲ್ಲಿ, ಅವರು ಬೆಳೆದುಬಂದ ಪರಿಸರ, ಗುಣಾವ ಗುಣಗಳು, ಮಾತು, ಕೃತ್ಯಗಳು– ಇವೆಲ್ಲವನ್ನೂ ಸಂಗ್ರಹಿಸಿ ಮಾನವೀಯ ಮೌಲ್ಯ ಗಳನ್ನು ಗಮನದಲ್ಲಿಟ್ಟುಕೊಂಡು ತಾನು ಸೃಷ್ಟಿಸಿದ ಪಾತ್ರಗಳ ಸ್ಥಾನ–ಮಾನಗಳೇ ನೆಂಬುದನ್ನು ನಿರ್ದೇಶಿಸಿದ್ದಾನೆ. ಮಾನವೀಯ ಮೌಲ್ಯಗಳ ಕ್ರೈಟೀರಿಯಾವನ್ನು ಪ್ರಧಾನವಾಗಿರಿಸಿಕೊಂಡು ನೋಡಿದಾಗ, ಪಂಪನ ವಿಮರ್ಶೆಯ ಮಾನದಂಡ ಸಾಂಪ್ರ ದಾಯಿಕ ಕ್ರಮ (order)ದಿಂದ ಭಿನ್ನವಾಗುವುದನ್ನು ಗುರ್ತಿಸಬಹುದು.

ಪಂಪ ಒಬ್ಬ ಮನೋವಿಜ್ಞಾನಿಯಂತೆ ಆಯಾ ಪಾತ್ರಗಳ ಮನೋಲೋಕ ವನ್ನು ಭೇದಿಸಿ ಅವರವರ ಮನಃಪದರುಗಳನ್ನು ಬಿಚ್ಚಿ ನೋಡಿ ಮೌಲ್ಯಗಳನ್ನು ಅಗೆದು ತೆಗೆದಂತಿದೆ. ಭಾರತ ಕಥೆಯ ಉದ್ದಕ್ಕೂ ಅವನ ಮನಸ್ಸಿನಲ್ಲಿ ಸೆಳೆದ ಪಾತ್ರ ಕರ್ಣನದು.

ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನ್ ಒಂದೆ ಚಿತ್ತದಿಂ,
ನೆನೆವೊಡೆ ಕರ್ಣನಂ ನೆನೆಯ,

ಮತ್ತು –ಕರ್ಣರಸಾಯನಮಲ್ತೆ ಭಾರತಂ ಎಂದು ಕರ್ಣನನ್ನು ಕೀರ್ತಿಸಿದ ಪಂಪಕವಿ ಸುಲಭವಾಗಿಯೇ ಕರ್ಣನಿಗೆ ಅಗ್ರಸ್ಥಾನವನ್ನು ಕೊಡಬಹುದಾಗಿತ್ತು. ಆರಂಭದಲ್ಲಿ ಅರ್ಜುನನಿಗೆ ಕಟ್ಟಿದ ನಾಯಕಪಟ್ಟ ಅವನಿಗೆ ಉರುಲಾಗಿ ಪರಿಣಮಿ ಸಿದ್ದನ್ನು ಲಕ್ಷಿಸಬಹುದು.

ಅರ್ಜುನ, ಕರ್ಣ, ಭೀಮಾದಿಗಳನ್ನುಳಿದು ದುರ್ಯೋಧನನಿಗೆ ಅಗ್ರಸ್ಥಾನ ಕೊಟ್ಟಿದ್ದರ ಕಾರಣಗಳೇನೆಂಬುದನ್ನು ನಾವು ಸೂಕ್ಷ್ಮವಾಗಿ ಆಲೋಚಿಸಬಹುದು.

ಜನ್ಮದಾರಭ್ಯದಿಂದಲೇ ದುರ್ಯೋಧನನ ವ್ಯಕ್ತಿತ್ವದ ಬಗ್ಗೆ ಅನುಮಾನಗಳು ಹುಟ್ಟಿಕೊಳ್ಳುವಂತಿದ್ದು, ತಾನು ಹುಟ್ಟಿದ ಕಾಲಕ್ಕೆ ಗಂಡಾಂತರವನ್ನೊಡ್ಡಬಹುದಾದ ಸೂಚನೆಗಳೂ ಅಲ್ಲಿವೆ. ಗ್ರೀಕ್‌ದೊರೆ ಈಡಿಪಸ್‌ನ ಜನ್ಮಸಂದರ್ಭವನ್ನು ಜ್ಞಾಪಿಸಿ ಕೊಳ್ಳಬಹುದು. ಕೆಲವು ಸಂದರ್ಭಗಳಲ್ಲಿ ಪಾಂಡವರೊಂದಿಗಿನ ವರ್ತನೆ, ಅಸಹ ನೀಯ ದ್ವೇಷದಿಂದ ಕೂಡಿದ್ದು, ಮತ್ಸರವೆನ್ನಿಸಲೂಬಹುದು. ಆದರೆ ಅವನೊಬ್ಬ ದೇಶವನ್ನಾಳುವ ಚಕ್ರವರ್ತಿ ರಾಜ್ಯಕೀಯದ ಕಲ್ಪನೆಯುಳ್ಳವನು. ಅವನು ಅರ್ಜುನ ನಂತೆ ದೈವಬಲವನ್ನು ನಂಬಿರದೆ ತೋಳ್ಬಲವನ್ನು ಬಲವಾಗಿ ನಂಬಿಕೊಂಡಿದ್ದನು. ಯುದ್ಧದಲ್ಲಿ ದೊರೆಯಬಹುದಾದ ಜಯಾಪಜಯಗಳ ವಿಷಯಕ್ಕೆ ಆತನ ನಿಲುವು ಒಂದೇ. ದುರ್ಯೋಧನ ವೀರಯುಗದ ಅತ್ಯಂತ ಮಹತ್ವದ ಮೌಲ್ಯವಾಗಿದ್ದ ವೀರವನ್ನು ಸಂಕೇತಿಸುವಂಥವನು. 'ಚಲ' ವೆಂಬುದು ಆತನ ವೀರಕ್ಕೆ ಕಿರೀಟ ವಿಟ್ಟಂತಿದೆ, ಸರಿಸಮಾನ ಬಲವುಳ್ಳವರೊಂದಿಗೆ ಸ್ಪರ್ಧಿಸುವ ಹುರುಡು ಆತನದು.

ಕರ್ಣನ ಅಂತ್ಯದವರೆಗೆ ದುರ್ಯೋಧನ ವ್ಯಕ್ತಿತ್ವ, ಅಹಂಕಾರ, ಛಲ, ದರ್ಪ, ದ್ವೇಷ, ಮಾತ್ಸರ್ಯ ಮುಂತಾದ ಭಾವಗಳಿಂದ ಕೂಡಿದ್ದು, ಯುದ್ಧ ಭೀಕರ ಹಾಗೂ ಕರಾಳ ದೃಶ್ಯಗಳನ್ನು ತೋರಿ ಅವನ ಮನಸ್ಸನ್ನು ಅಲ್ಲಾಡಿಸಿ ಬಿಡುತ್ತದೆ. ಕರ್ಣನ ಶೌರ್ಯ, ಪರಾಕ್ರಮಗಳ ಕುರಿತು ಆತನಿಗೆ ನೆಚ್ಚಿಕೆ. ಕರ್ಣ ಮೃತ್ಯುವಶ ವಾದದ್ದನ್ನ ಕಂಡಾಗ, ತೀವ್ರವಾದ ವ್ಯಥೆ, ನಿರಾಶೆ, ನಿರ್ವಿಣ್ಣ ಭಾವಗಳು ಅವ ನನ್ನು ಕಂಗೆಡಿಸುತ್ತವೆ. ದುಶ್ಶಾಸನ ಹಾಗೂ ಕರ್ಣರ ಸಾವು ಅವನಿಗೆ ಆಘಾತ ವನ್ನುಂಟು ಮಾಡುವುದರಿಂದ ವಜ್ರದಂತೆ ಕಠೋರವಾಗಿದ್ದ ಅವನ ಮನಸ್ಸು ದ್ರವಿಸಿ ಶೋಕತಪ್ತನಾಗಿ ಹಲಬುವುದನ್ನು ನೋಡಬಹುದು. ಅವರಿಬ್ಬರನ್ನು ಕಳೆದು ಕೊಂಡದ್ದರಿಂದ ಅವನ ಆತ್ಮಬಲವೇ ಕರಟಿದಂತೆ, ಪ್ರಪಂಚ ಶೂನ್ಯವಾಗಿ ಕಂಡಿದೆ. A friendship of this kind is founded on deep affection.....His passionate, uncontrolled nature responds with terrible force to the feeling of loss, and indeed something essential to his whole being has been taken from him. (Homer's Iliad.) p. 16-67

ಒಡಲೆರಡೊಂದೆ ಜೀವವಿವರ್ಗೆಂಬುದು ಲೋಕಮೀಗಳಾನುಡಿ ಪುಸಿ ಯಾಯ್ತು.

ಗಿಲ್ಗಮಿಶ್–ಕಾವ್ಯದಲ್ಲಿ ಸ್ನೇಹಿತ ಎಂಕಿಡು ತೀರಿಕೊಂಡಾಗ ಗಿಲ್ಗಮಿಶ್ ಪಡುವ ಪ್ರಲಾಪವನ್ನು ದುರ್ಯೋಧನ ಪ್ರಲಾಪಕ್ಕೆ ಹೋಲಿಸಿ ನೋಡಬಹುದು.

I weep for my Comrade Enkidu
I cry bitterly like a wailing woman.

....

Sorrow assails me and casts me down in affliction[೪]

ಕರ್ಣ–ದುಶ್ಶಾಸನರನ್ನು ಕೊಂದವರನ್ನು ಕೊಂದಲ್ಲದೆ ಅವನ ಮನಸ್ಸಿಗೆ ನೆಮ್ಮದಿಯಿಲ್ಲ. ದುರ್ಯೋಧನನಲ್ಲಿ revenege for revenge's shake ಭಾವನೆ ಪ್ರಬಲವಾಗಿ, ಸೇಡಿನ ಜ್ವಾಲೆ ಹೊತ್ತಿ ಉರಿಯುತ್ತದೆ.[೫] ಪ್ರಲಾಪಿಸುವ ಸಂದರ್ಭದಲ್ಲಿ ಅದು ನಿರ್ಬಲತೆಯೆಂಬಂತೆ ತೋರಿದರೂ, ಮತ್ತೆ ಅವನು ಛಲವಂತ ನಾಗಿ ಕ್ರೋಧತಪ್ತನಾಗುತ್ತಾನೆ. ಸೇಡು ತೀರಿಸಿಕೊಳ್ಳುವ ಛಲದಿಂದ ಸರ್ಪದ ಹಾಗೆ ಸಿಡಿದೇಳುತ್ತಾನೆ.

೪. Gilgamish : VIII, ii. I-8 Quoted : Heroic Poetry-p. 67 (A Babulonian epic)

೫. Ofen enough, honour must be satisfied-and can hardley continue to exist unless he destroys those who have wounded him in the centre of his being p. 65

When honour turns to hatred & violence heroic poetry may develop a Special kind of horror.[೬]

ಚಲದೊಳ್ ದುರ್ಯೋಧನ ಎಂದಿರುವ ಪಂಪನ ಮನಸ್ಸನ್ನು ಈಗ ವಿಶ್ಲೇಷಿಸಬಹುದು : ರಣರಂಗದಲ್ಲಿ ಮೃತ್ಯು ದುರ್ಯೋಧನನಿಗೆ ಭೀಕರ ಅಳಿವಿನ ಹಾಗೂ ಕರಾಳ ದೃಶ್ಯಗಳನ್ನು ತೋರುವ ದುರಂತ ಸನ್ನಿವೇಶಗಳಿರುವುದನ್ನು ಗಮನಿಸಬೇಕು.

ದುರ್ಯೋಧನ ಕರ್ಣ-ದುಶ್ಶಾಸನರಿಲ್ಲದೆ ತಂದೆ-ತಾಯಿಗಳಿಗೆ ಮುಖ ತೋರಿಸುವುದು ತನ್ನ ಪ್ರತಿಷ್ಠೆಗೆ ತಕ್ಕದ್ದಲ್ಲವೆಂದು ಭಾವಿಸಿದಾಗ—

ವೃದ್ಧ-ತಂದೆ-ತಾಯಿಗಳೇ ಅವನಿದ್ದಲ್ಲಿಗೆ ಆಗಮಿಸಿ ಸತ್ತ ಮಕ್ಕಳು "ಸತ್ತು ಹೋದರು". ನೀನೊಬ್ಬ ಜೀವಿಸಿರುವೆ ಸಾಕು. ನೀನಿದ್ದರೆ ಎಲ್ಲ ಮಕ್ಕಳೂ ಇದ್ದರೆಂದು ಭಾವಿಸುವಂತೆ ನುಡಿಯುತ್ತಾರೆ.

ಭಾನುವೆ ಸಾಲದೆ
ಪಗಲೆನಿತಾನುಂ ದೀವಿಗೆಗಳುರಿದೊಡೇಂ
ನಂದಿದೊಡೇಂ !

ತನ್ನನ್ನು ಸೂರ್ಯನಿಗೆ ಉಳಿದ ತಮ್ಮಂದಿರನ್ನು ನಂದಿಹೋಗುವ ದೀವಿಗೆಗಳಿಗೆ ಹೋಲಿಸಿ ನುಡಿದದ್ದನ್ನು ಕೇಳಿ ಸಂತಾಪದಿಂದ ಅವನು ಕಿಡಿ ಕಿಡಿಯಾಗುತ್ತಾನೆ. ಈ ವರೆಗೆ ಸಂಭವಿಸಿದ್ದನ್ನು ಮರೆತು ಸಂಧಿಮಾಡಿಕೊಳ್ಳೆಂದು ವೃದ್ಧ ತಂದೆ-ತಾಯಿಗಳು ನುಡಿದು ತಮ್ಮ ಮಾತನ್ನು ಮನ್ನಿಸಬೇಕೆಂದಾಗ ಅವನು ಕೊಡುವ ಉತ್ತರ ಇದು:

ಕರ್ಣನುಗ್ರರಥಮುಂ ಮುಂ ನುಂಗಿದೀ ದ್ರೋಹಿಯೊಳ್ ಪಂಬಲೆ
ಗೆಲ್ದೊಡಂ ಅದು ಚೀಃ ಮತ್ತಮಾನಾಳ್ವೆನೇ"
'ನರನಂ ಮುಂ ಕೊಲ್ವೆನಾಂ ಕರ್ಣನಳಿದುದರಿಂ
ಕೊಲ್ವೆನಾ ಭೀಮನಂ ಸಂಗರದೊಳ್'

ತನ್ನನ್ನು ಇನ್ನು ಹೆಚ್ಚು ಒತ್ತಾಯಿಸದಿರುವಂತೆ ತಂದೆ-ತಾಯಿಗಳಿಗೆ ವಂದಿಸಿ, ಹೊರಟು ಹೋಗುವಂತೆ ನುಡಿಯುತ್ತಾನೆ.

ಅಲ್ಲಿಂದ ಮುಂದೆ, ತನ್ನ ಆಸ್ಥಾನದ ವೀರರನ್ನು ಆಹ್ವಾನಿಸಿ, ಇನ್ನು ಮುಂದಿನ ಯುದ್ಧದ ಸಿದ್ಧತೆಯ ಕುರಿತು ಆಲೋಚಿಸುತ್ತಾನೆ. ಆ ಸಂದರ್ಭದಲ್ಲಿ ಅಶ್ವತ್ಥಾಮ ತಾನೆಷ್ಟು ಬೇಡವೆಂದರೂ ಕರ್ಣನನ್ನು ಮುಂದೆ ಮಾಡಿಕೊಂಡು ಯುದ್ಧ ಮಾಡಿದ್ದರ ಪರಿಣಾಮವಾಗಿ ಸೋಲನ್ನು ಅನುಭವಿಸಬೇಕಾಯಿತೆಂದು ಟೀಕಿಸಿದಾಗ ದುರ್ಯೋಧನನ ಆವೇಶಯುಕ್ತ ವಾಣಿಯನ್ನು ಕೇಳಬೇಕು.

---

೬. Heroic Poetry- p. 70

ನಿನ್ನಿಂದಂ ತ್ರಿಭುವನ ರಾ
ಜ್ಯೋನ್ನತಿ ಬಂದೆನಗೆ ಸಾರ್ಗುಮಪ್ಪಡಮೊಲ್ಲೆಂ
ನೀನ್ನುಡಿದು ಬರ್ದುಕಿದ್ದೆ ಪೆಱ
ರೆನ್ನಿದಿರೊಳ್ ನುಡಿದು ಕರ್ಣನಂ ಬರ್ದುಕುವರೆ ।

ಹೀಗೆಂದು ತೀಕ್ಷ್ಣವಾಗಿ ಮೂದಲಿಸುತ್ತಾನೆ.

ದುರ್ಯೋಧನ ರಣರಂಗದೊಳಗಿಂದ, ಹೆಣಗಳ ರಾಶಿಯೊಳಗಿಂದ ಹಾಯ್ದು ಹೋಗುವ ದೃಶ್ಯವೊಂದಿದೆ.

'ಬೇಡ ವಿರೋಧಮೆಂತುಮರಿಕೇಸರಿಯೊಳ್
ಸಮಸಂದು ಸಂಧಿಮಾಡು'

ಹೀಗೆಂದು ಪಿಶಾಚವೊಂದೆದ್ದು ಬಂದು, ಏಡಿಸಿ ನುಡಿಯುತ್ತದೆ, ಆ ಮಾತಿನಿಂದ ಆತನೇನೂ ವಿಚಲಿತನಾಗುವುದಿಲ್ಲ. ಎಂಥ ಸನ್ನಿವೇಶದಲ್ಲಿಯೂ ಅವನು ವಿವೇಕ ವನ್ನು ಕಳೆದುಕೊಳ್ಳುವುದಿಲ್ಲ. ಒಮ್ಮೊಮ್ಮೆ ಭಾವೋದ್ರೇಕಿತನಾದರೂ ಮತ್ತೆ ಸಾವರಿಸಿ ಕೊಂಡೇಳುವ ಮಹಾಸತ್ವವನ್ನು ಒಳಗೊಂಡಿರುವವನು.

ಸಂಜಯ ದುರ್ಯೋಧನನನ್ನು ಶರಪಂಜರದ ಮೇಲೊರಗಿದ್ದ ಭೀಷ್ಮರ ಬಳಿ ಕರೆದುಕೊಂಡೊಯ್ಯುವನು. ಬಂದ ಕಾರ್ಯವೇನೆಂದು ಕೇಳಿದ ಭೀಷ್ಮರಿಗೆ.

'ಬಗೆ ಪೆಱತುಂಟೆ ವೈರಿನೃಪರಂ ತರಿದಟ್ಟುವುದಲ್ಲದೆ'

ಎಂದು ತಟ್ಟನೆ ತನ್ನ ನಿಲುವನ್ನು ಸೂಚಿಸುತ್ತಾನೆ. ಇನ್ನೂ ಯುದ್ಧಮಾಡ ಬೇಕೆನ್ನುವ ಆತನ ಅಖಂಡಿತ ಶೌರ್ಯೋತ್ಸಾಹವನ್ನು ನೋಡಿ ಭೀಷ್ಮರಿಗೆ ಆಶ್ಚರ್ಯ ವೆನಿಸಿತು. ದುರ್ಯೋಧನನಿಗೆ ದೈವ ಪ್ರತಿಕೂಲವಾಗಿರವುದನ್ನು ಮೈತ್ರೇಯರು ಕೊಟ್ಟ ಶಾಪ, ಊರುಭಂಗ ತಪ್ಪಲಾರದೆಂದು ಭಾವಿಸಿ, ಸಂಧಿಯ ಮಾತನ್ನು ಪ್ರಸ್ತಾಪಿಸಿದರು. ಅದಕ್ಕೆ ದುರ್ಯೋಧನ ಒಡಂಬಡದೆ—

ನುಡಿಯದಿರಿಂ ಪೆಱತನಜ್ಜ
ಮುಂ ನುಡಿದೆರಡಂ ನುಡಿವೆನೆ
ಚಲಮಂ ಬಲ್ಪಿಡಿವಿಡಿದೆಂ'

ಹೀಗೆಂದು ತನ್ನ ಯುದ್ಧದ ಛಲವನ್ನೆ ಪ್ರಕಟಿಸಲು ಅನ್ಯಮಾರ್ಗವಿಲ್ಲದೆ, ಅವನ ಕಿವಿಯಲ್ಲಿ ಜಲಮಂತ್ರೋಪದೇಶ ಮಾಡಿ, ಬಲರಾಮ ಆಗಮಿಸುವವರೆಗೆ ಕಾಲ ಯಾಪನೆ ಮಾಡುವಂತೆ. ಹಾಗೂ ಉತ್ಸಾಹದಿಂದ ಕಾದಿ ಗೆಲ್ಲುವಂತೆ ಭೀಷ್ಮರ ಆಶೀರ್ವಚನ.

ಭೀಷ್ಮರ ಉಪದೇಶವನ್ನು ಮನ್ನಿಸಿ ದುರ್ಯೋಧನ ವೈಶಂಪಾಯನ ಸರೋ ವರದಲ್ಲಿ ತಲೆ ಮರೆಸಿಕೊಂಡಿರುತ್ತಾನೆ. ಬಲರಾಮ ಬರುವಪಕ್ಕಂತ ಮುಂಚಿತವೇ ದುರ್ಯೋಧನನನ್ನು ತೀರಿಸಿಬಿಡಬೇಕೆಂಬ ಹೊಂಚು ಕೃಷ್ಣನದು. ಸರೋವರದ

ದಂಡೆಗೆ ಬಂದು **'ಕಡಲಂ ಪೊಕ್ಕೊಡೆ ಪೀರ್ದಪೆಂ'** ಎಂದು ಭೀಮ ಹುಂಬ ಗರ್ಜನೆ ಮಾಡುತ್ತಾನೆ. 'ಕರಿಕಳಭಗರ್ಜನೆಗೇಳ್ವ ಮೃಗರಾಜನಂತೆ' ದುರ್ಯೋಧನನ ಚಿತ್ತ ಚಲಿಸುತ್ತದೆ. ಸರೋವರದಿಂದ ಮೇಲೇಳುತ್ತಾನೆ,

ದುರ್ಯೋಧನನ ಅದಮ್ಯ ಯುದ್ಧೋತ್ಸಾಹವನ್ನು ಕಂಡು ಎಲ್ಲರಿಗೂ ದಂಗು. ಅಷ್ಟರಲ್ಲಿ ದುರ್ಯೋಧನನಿಗೆ 'ಆಯುಬರ್ಪಂತೆ' ಬಲರಾಮ ಅಲ್ಲಿಗೆ ಬಂದು ಬಿಡುವನು

ದುರ್ಯೋಧನನಿಗೊದಗಿದ ಅವಸ್ಥೆಯನ್ನು ಅರ್ಥಮಾಡಿಕೊಂಡು ತನ್ನ ಪಾದಕ್ಕೆರಗಿದ ಅವನನ್ನು ಹರಿಸಿ, ಅಪ್ಪಿಕೊಂಡನು. ಕೃಷ್ಣ ಪಾಂಡವರನ್ನು ಹರಸದೇ ತನ್ನ ಮೌನ ಪ್ರತಿಕ್ರಿಯೆ ಸೂಚಿಸಿವನೆನ್ನಬಹುದು. ಐವರಲ್ಲಿ ಯಾರಾದರೊಬ್ಬರು ಧರ್ಮಯುದ್ಧಕ್ಕೆ ಸಿದ್ಧರಾಗಬೇಕೆಂದು ಬಲರಾಮ ಸೂಚಿಸಲು, ಭೀಮ ಸಂಗ್ರಾಮಕ್ಕೆ ಸನ್ನದ್ಧನಾದ. ಅವರಿಬ್ಬರ ಮಧ್ಯೆ ಗದಾಯುದ್ಧ ಶುರುವಾಯ್ತು. ದುರ್ಯೋಧನ ಸಿಡಿಲೆರಗುವಂತೆರಗಿ ಗದಾದಂಡದಿಂದ ಭೀಮನನ್ನು ಹಣಿಯಲು ಭೀಮ ಮೂರ್ಛಿತನಾಗಿ ಭೂಮಿಗೆ ಬಿದ್ದ. ದುರ್ಯೋಧನ ತನ್ನ ಗದಾದಂಡವನ್ನು ಹಾಗೇ ತಿರುವುತ್ತಿದ್ದುದನ್ನು ನೋಡಿ ಕೃಷ್ಣ–ಪಾಂಡವರೆಲ್ಲರೂ ಹೌಹಾರಿ, ಇನ್ನೇನು, ಇನ್ನೊಂದೇಟು ಬಿದ್ದರೆ ಭೀಮ ಸಾಯುವನೆಂದು ಉದ್ವಿಗ್ನರಾಗಿರಬೇಕು. ಧರ್ಮಯುದ್ಧವನ್ನು ಬಲ್ಲ ದುರ್ಯೋಧನನೆಂದಿಗೂ ಗುರುಹಿರಿಯರ ಸಮಕ್ಷಮದಲ್ಲಿ ಅನ್ಯಾಯ ಬಗೆಯುವವನಲ್ಲ. ಬದಲಾಗಿ ಅವನು ತನ್ನ ಗದಾದಂಡದಿಂದ ಗಾಳಿ ಹಾಕುತ್ತಿದ್ದ. ಅದರಿಂದ ಭೀಮ ಎಚ್ಚರಗೊಂಡು, ನೆಲದ ಮೇಲೆ ಬಿದ್ದಿದ್ದ ತನ್ನ ಗದಾದಂಡವನ್ನು ಕೈಯಲ್ಲಿ ಹಿಡಿದು ಮೇಲೆದ್ದು ಮತ್ತೆ ಯುದ್ಧಕ್ಕೆ ನಿಂತ. ಕೃಷ್ಣ ಅವನಿಗೆ ಧೈರ್ಯಕೊಡುವಂತೆ ತೊಡೆಯನ್ನು ತಟ್ಟಿ ಕೂಗಿದಾಗ, ಭೀಮ ಕೃಷ್ಣನ ಸಂಕೇತವನ್ನು ಅರ್ಥೈಸಿಕೊಂಡು ಊರುಭಂಗ ಮಾಡಲು, ದುರ್ಯೋಧನ ಕೆಳಗುರುಳಿದ, ಧರ್ಮದ ಕಟ್ಟಳೆ ಮೀರಿ ಭೀಮ ಊರುಭಂಗ ಮಾಡಿದ್ದು ಅನ್ಯಾಯದ ಪ್ರತೀಕವಾಗಿತ್ತು. ದುರ್ಯೋಧನ ಕೆಳಗುರುಳಿ ಬಿದ್ದರೂ– ಅದೇನೂ ಅವನ ಪ್ರತಿಷ್ಠೆ, ಅಭಿಮಾನ, ಹಾಗೂ ಕೀರ್ತಿಗೆ ಕಳಂಕ ತರುವಂಥಾದ್ದಲ್ಲ.[೭] ಈ ಸಂದರ್ಭದಲ್ಲಿ ಪಂಪನ ಹೃದಯದಿಂದ ಉಕ್ಕಿಬಂದ ಪದ್ಯ ದುರ್ಯೋಧನನ ವ್ಯಕ್ತಿತ್ವವನ್ನು ಬೆಳಸದೆ, ಎತ್ತರಿಸುವುದರಲ್ಲಿ ಸಾರ್ಥಕವಾಗಿದೆ. ಈ ತರಹದ ಬೀಳು, ಸೋಲಾಗಿರದೆ ಅದು ಅವನಿಗೆ ಅಗ್ರಸ್ಥಾನವನ್ನು ಕಲ್ಪಿಸುತ್ತದೆ. ಇಲ್ಲಿಗೆ ದುರ್ಯೋಧನನ ಛಲ ಆತನ ವ್ಯಕ್ತಿತ್ವದ ಶಿಖರದ ತುತ್ತತುದಿ ಮುಟ್ಟಿರುವುದನ್ನು ಸಮರ್ಥಿಸುತ್ತದೆ.[೮]

---

೭. The death of one arouses emotions other than pride & glory – (Homer's Odessey) p. 77

೮. In the Homeric poems as in the Gilgamish man's mortality greatly increases his grandeur.—p. 90

ನುಡಿದುದನೆಯ್ದೆ ತುತ್ತತುದಿಯೆಯ್ದುವಿನಂ ನುಡಿದಂ ವಲಂ ಚಲಂ
ಬಿಡಿದುದನೆಯ್ದೆ ಮುಂಪಿಡಿದುದಂ ಪಿಡಿದಂ ಸಲೆ ಪೂಣ್ದ ಪೂಣ್ಕೆ ನೇ
ರ್ಪಡೆ ನಡೆವನ್ನೆಗಂ ನಡೆದನಳ್ಕದೆ ಬಳ್ಕದೆ ತನ್ನೊಡಲ್
ಪಡಲ್ಪಡುವಿನಮಣ್ಮುಗುಂದದೆದಲೇನಭಿಮಾನಧನಂ ಸುಯೋಧನಂ

—ಹೀಗೆ 'ಸತ್ತುಂ ನೆಲನಂ ಪತ್ತುವಿಡೆನೆಂಬಂತೆ ನೆಲನಂ ಪತ್ತಿ ಮೂರ್ಛಾಗತನಾಗಿರ್ದ ಕುರುಕುಳ ಚೂಡಾಮಣಿ'ಯ ದುರವಸ್ಥೆಯನ್ನು ಕಾಣಲಾಗದೆ, ತನ್ನ ತಮ್ಮನ ಮನಸ್ಸನ್ನು ನೋಯಿಸಲಾರದೆ ಬಲದೇವ ಭಗ್ನಮನೋರಥನಾಗಿ ಅಲ್ಲಿಂದ ಹೊರಟು ಹೋಗುತ್ತಾನೆ.

ಪುರಾತನ ಪುರುಷ ಮುರಾರಿಯ ಎದುರು ಪಾಂಡವರನ್ನು ಗೆಲ್ಲುವುದು ಶಕ್ಯವಿರಲಿಲ್ಲ. ವಿಧಿಯೆದುರು ತನ್ನಾಟ ಸಾಗಲಾರದೆಂದೆನ್ನಿಸಿದರೂ ದುರ್ಯೋಧನ ತನ್ನ ಛಲವನ್ನು ಬಿಟ್ಟುಕೊಡಲಿಲ್ಲ. ಇದು ದುರ್ಯೋಧನನ ಸ್ವಭಾವದ ವೈಶಿಷ್ಟ್ಯ. ಮೃತ್ಯುವಿನ ಭೀತಿಯೇ ಇಲ್ಲದ ವೀರನಾತ. ಮೃತ್ಯುವನ್ನೂ ಮೀರಿ ನಿಲ್ಲಬಲ್ಲ ಛಲ ಆತನದು. ಪ್ರತಿಷ್ಠೆ, ಅಭಿಮಾನ, ಛಲ ಇವು ಅಂದಿನ ವೀರಯುಗದ ಅತ್ಯಂತ ಮಹತ್ವದ ಮೌಲ್ಯಗಳಾಗಿದ್ದುದನ್ನು ಗಮನಿಸಬಹುದು.[೯]

ಊರುಭಂಗ ಸಂಕಟವನ್ನನುಭವಿಸುತ್ತಿದ್ದ ದುರ್ಯೋಧನನ ಬಳಿ ಅಶ್ವತ್ಥಾಮ ಬಂದು ನಿಂತು, 'ಎನಗಿನಿತೊಂದವಸ್ಥೆ ವಿಧಿಯೋಗದಿಂ ಆದುದು'— ಹೀಗೆಂದು ದುರ್ಯೋಧನನ ಆತ್ಮ ಅವನಿಗೆ ಗೊತ್ತಿಲ್ಲದೆಯೆ ನುಡಿಯುವದು ಅತ್ಯಂತ ಅರ್ಥಪೂರ್ಣವಾಗಿದೆ. ಪಾಂಡವರನ್ನು ಸೋಲಿಸುವುದು ಹಾಗೂ ಸಾಯಿಸುವುದು ಶಕ್ಯವಿಲ್ಲವೆಂದು ನುಡಿದ ದುರ್ಯೋಧನನ ನಿರಾಶೆಯ ನುಡಿಕೇಳಿ, ಅಶ್ವತ್ಥಾಮ ರೊಚ್ಚಿಗೆದ್ದು, ಪಾಂಡವರ ನಾಶದ ಸುದ್ದಿಯನ್ನು ಬಿತ್ತರಿಸುತ್ತೇನೆಂಬ ಭರವಸೆ ನೀಡಿ ಅಲ್ಲಿಂದ ಹೊರಡುತ್ತಾನೆ. ಕರ್ಣನ ಮೃತ್ಯುವಿನಿಂದ ದುಃಖಿಸುತ್ತಿದ್ದ ಸೂರ್ಯ. ಕರ್ಣನ ಒಡೆಯ ಸಾಯುವ ಸಂದರ್ಭವನ್ನು ಪರಿಭಾವಿಸಿ ತಾನಿನ್ನು ಅನಾಥನೆಂಬಂತೆ ಭಾವಿಸಿ ಅವನು ಪಶ್ಚಿಮ ಸಮುದ್ರದಲ್ಲಿ ಮುಳುಗಿದನೆಂದಿರುವ ಪಂಪನ ಪದ್ಯ ದುರ್ಯೋಧನನ ವ್ಯಕ್ತಿತ್ವಕ್ಕೆ ಇನ್ನಷ್ಟು ರಂಗು ಹೊಯ್ಯುತ್ತದೆ.

ಕತ್ತಲೆಯನ್ನು ಸೀಳಿಹೋದ ಅಶ್ವತ್ಥಾಮ ನೇಸರು ಮೂಡುವ ಸಮಯಕ್ಕೆ ದುರ್ಯೋಧನದಿದ್ದಲ್ಲಿಗೆ ಮರಳಿ '**ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳನ್**' —ಎಂದು ಮುಂದಿಕ್ಕಿದ. ಆದರೆ ಅವು ಉಪಪಾಂಡವರ ತಲೆಗಳಿದ್ದುದನ್ನು ನೋಡಿ. ದುರ್ಯೋಧನ ಮರುಗಿದ. ಅಶ್ವತ್ಥಾಮನ ನಿರ್ಗಮನದ ತರುವಾಯ ದುರ್ಯೋಧನನ ಪ್ರಾಣೋತ್ಕ್ರಮಣವಾಗುತ್ತದೆ. ದುರ್ಯೋಧನನ ಛಲ ಸ್ವಾಭಿಮಾನದ ಶಿಖರ

೯. The Heroic poet speaks with the authority of tradition and passes on what he himself has heard from his elders. p. 40

ಮುಟ್ಟುವುದರಿಂದ ಸಾರ್ಥಕವಾಗುತ್ತದೆ.[೧೦] ಸೋಲು ಅಥವಾ ಮೃತ್ಯುವಿಗೆ ಭೀತನಾಗಿ ಅವನೆಂದಿಗೂ ತನ್ನ ವ್ಯಕ್ತಿತ್ವದ ಸಂಪತ್ತಾಗಿದ್ದ ಮೌಲ್ಯಗಳನ್ನು ಮಾರಿಕೊಳ್ಳುವುದಿಲ್ಲ. ಹೀಗಾಗಿ ಸತ್ತರೂ ಅವನ ವ್ಯಕ್ತಿತ್ವ ಉಜ್ವಲಗೊಳ್ಳುವಂತಾಗುತ್ತದೆ.

His death is a biginning of a new life —(Savitri, Aurobindo)

ಗತಕಾಲ ಮತ್ತು ಭವಿಷತ್ತುಗಳ ಕುರಿತು ಆಲೋಚಿಸದೆ ವರ್ತಮಾನ ಸಂದರ್ಭದಲ್ಲಿ ಮಾತ್ರ ಅಷ್ಟು ಹೋರಾಟ ನಡೆಯುತ್ತದೆ. ವರ್ತಮಾನ ಎಂಥಾ ಭೀಕರ, ಭೀಭತ್ಸ ಹಾಗೂ ದುರಂತ ದೃಶ್ಯಗಳನ್ನು ತೋರಿದರೂ ಅವುಗಳಿಂದ ಅವನ ಮನಸ್ಸು ವಿಚಲಿತಗೊಳ್ಳದೆ, ವಜ್ರದ ಹಾಗೆ ಕಠೋರವಾಗುವುದು ಗಮನಾರ್ಹ. ಆದ್ದರಿಂದ ದುರ್ಯೋಧನನ ವ್ಯಕ್ತಿತ್ವ ಇತರ ಪಾತ್ರಗಳಿಗಿಂತ ಭಿನ್ನವಾಗಿ ಅದು ವಿಮರ್ಶಕರಿಗೆ ಸವಾಲೊಡ್ಡಿ ನಿಲ್ಲುತ್ತದೆ. ತನ್ನ ಅಖಂಡ ಬಲದಿಂದ ನೆಲವನ್ನು ಬಲ್ವಿಡಿವಿಡಿದ ಪಂಪ ರೇಖಿಸಿದ ದುರ್ಯೋಧನ ವೀರ ಛಲಕ್ಕೆ ಸಂಕೇತವಾಗಿದ್ದು[೧೧] ನಮ್ಮ ಕಾಲದಲ್ಲಿ ಚರ್ಚಿತವಾಗುವ Existentialist ನಾಯಕರ ಸಾಲಿಗೆ ಸೇರುವಂಥವನಾಗುತ್ತಾನೆ.

ಕಾಮೂ, ಕಾಫ್ಕಾ, ಸಾತ್ರ್ರ್, ಸ್ಟೀನ್‌ಬೆಕ್, ಹೆಮ್ಮಿಂಗ್‌ವೇ, ದಾಸ್ತೊವ್ಸ್ಕಿಗಳ ನಾಯಕರು ತೋರುವ ಅಸ್ತಿತ್ವವಾದೀ ಪ್ರಜ್ಞೆಯ ಎಳೆಗಳನ್ನು ಪಂಪನ ದುರ್ಯೋಧನನಲ್ಲಿ ಗುರ್ತಿಸಬಹುದು.

ಮೊದಲೇ ತಾನು ಯೋಚಿಸಿಟ್ಟುಕೊಂಡ ಕರಡಿನ ಮೇರೆಗೆ ಪಂಪ ತನ್ನ ಕೃತಿಯಲ್ಲಿ ಅನ್ಯರನ್ನು ಮನವಾರೆ ಪ್ರಶಂಸಿಸುತ್ತ, ಅಗ್ರಪಂಕ್ತಿಯನ್ನು ಕೊಡಬಹುದಾಗಿತ್ತು. ಪಂಪನ ಮನಸ್ಸು ವ್ಯಾಸ ವಾಲ್ಮೀಕಿ ಪ್ರಣೀತವಾದ ಸಾಂಪ್ರದಾಯಿಕತೆಯನ್ನು ಒಪ್ಪಿಕೊಂಡಿಲ್ಲ. ಪಂಪ ತನ್ನ ಕಾಲದ ಹಾಗೂ ಮುಂಚಿನ ವೀರಯುಗದ ಮೌಲ್ಯಗಳನ್ನು ಗ್ರಹಿಸಿದವನಾದ್ದರಿಂದ, ಪಂಪನಿಗೆ ಭಿನ್ನ ತತ್ವಜ್ಞಾನಗಳ ಪರಿಚಯವಿರುವುದರಿಂದ ಇಲ್ಲಿ ವಿಮರ್ಶಕರಿಗೆ ಆಹ್ವಾನವೊಡ್ಡುವಂತೆ ತನ್ನ ಭಾರತ ಕಥೆಯಲ್ಲಿ ಎಂಟು ಜನ ವೀರರ ಯಾದಿಯನ್ನು ಸಿದ್ಧಪಡಿಸಿದ್ದಾನೆ.

ಚಲದೊಳ್ ದುರ್ಯೋಧನಂ ಎಂದು ಪಂಪನೇ ಘೋಷಿಸಿರುವುದರಿಂದ, ಪಂಪನ ಸಮಾಧಿಯ ಕುರಿತ ಕಾಂಟ್ರೊವರ್ಸಿಗಿಂತ ಪಂಪನ ಕಾವ್ಯದ ಪುನರ್ವಿಮರ್ಶೆ ನಡೆಯುವುದು ಅಗತ್ಯದ್ದು. ಜಾಗತಿಕ ವೀರ ಕಾವ್ಯಗಳಲ್ಲಿನ ವೀರವ್ಯಕ್ತಿಗಳಲ್ಲಿ:

Achilles & Patroculus, Roland & Oliver, Gilgamish & Enkidu, the Uzbek Alpamysh & Karagzan, The Armenian brothers Sanasar & Bagdasar,....

ಈ ಸಾಲಿನಲ್ಲಿ ದುರ್ಯೋಧನ ಮತ್ತು ಕರ್ಣ ಸೇರ್ಪಡೆಯಾಗುವುದನ್ನು ನಮ್ಮ ವಿಮರ್ಶಕರು ಗಮನಿಸಲಿ.

---

೧೦. The Secret of this poetry is that, it seems in heroic death the fitting fulfilment of a heroic life.

೧೧. This is an extreme position and reveals a heroic humanism —84

ನನ್ನಿಯೊಳಿನತನಯಂ

ಎಂ. ಎಂ. ಕಲಬುರ್ಗಿ

" ವರ್ಣಕಂ ಕತೆಯೊಳೊಡಂಬಡಂ ಪಡೆಯೆ " ವಿಕ್ರಮಾರ್ಜುನ ವಿಜಯವನ್ನು ಬರೆಯುವೆನೆನ್ನುವಲ್ಲಿ ಪಂಪ, ತನ್ನ ಕಾವ್ಯದ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ.[೧] ಆ ಮೇರೆಗೆ ಅವನು ಪುರಾಣಕಾಲದ ಕೌರವ–ಪಾಂಡವ ಬದುಕಿನ ಕಥೆಯೊಂದಿಗೆ ಹತ್ತನೆಯ ಶತಮಾನದ ಕನ್ನಡಿಗರ ಜೀವನ ಸ್ಥಿತಿಯನ್ನು ಸಮೀಕರಿಸಿ "ಸಮಸ್ತ ಭಾರತ"ವನ್ನು ರಚಿಸಿರುವನು.

"ಯಾವದೇ ಕಾಲದ ಸಮಾಜವನ್ನು ವಿಶಿಷ್ಟ ಆದರ್ಶ, ಮೌಲ್ಯ, ನಂಬಿಕೆಗಳು ಮುನ್ನಡೆಸುತ್ತವೆ. ಇವುಗಳನ್ನು ಅರ್ಥಪೂರ್ಣವಾಗಿ ಬದುಕುವವರೇ ಆ ಯುಗದ ಪ್ರಾತಿನಿಧಿಕ ವ್ಯಕ್ತಿಗಳು. ವ್ಯಕ್ತಿವಿಶಿಷ್ಟವಾದ ಆದರ್ಶವನ್ನು ಸಮಾಜ ವಿಶಿಷ್ಟವಾದ ವಾಸ್ತವದಲ್ಲಿ ಬದುಕಲು ನಡೆಸಿದ ಹೋರಾಟವೇ ಇವರ ಆತ್ಮಕಥೆ. ಪಂಪ ಹೇಳುವ "ಇವರ್ಗಳಿಂ ಈ ಭಾರತಂ ಲೋಕಪೂಜ್ಯಂ" ಎನಿಸಿದ ಇಂಥ ಎಂಟು ಜನದಲ್ಲಿ ಕರ್ಣನೂ ಒಬ್ಬ. ಪಂಪ, ತನ್ನ ಕಾಲದ ಮೌಲ್ಯಗಳಾದ ತ್ಯಾಗ, ವೀರಗಳನ್ನು ಕರ್ಣನ ಈ ಪಾತ್ರದಲ್ಲಿ ತುಂಬಿ ಅದು ೧೦ನೆಯ ಶತಮಾನದ ಕನ್ನಡ ನಾಡಿನ ಪರಿಸರಕ್ಕೆ ಸ್ಪಂದಿಸುವಂತೆ ಪ್ರಯತ್ನಿಸಿದ್ದಾನೆ. ಆದರೆ ಜಾತಿವಂತನಾಗಿಯೂ ಜಾತಿಹೀನನೆನಿಸಿದ, ಪಾಂಡವನಾಗಿಯೂ ಕೌರವನಲ್ಲಿ ನೆಲೆ ನಿಂತ, ಇದಕ್ಕಿಂತ ಕೌರವನಿಷ್ಠನಾಗಿಯೂ ಪಾಂಡವರನ್ನು ಕೊಲ್ಲದಿರುವ ಅವನ ದುರಂತ ಮತ್ತು ದೌರ್ಬಲ್ಯಗಳು ನಮ್ಮನ್ನು ತುಂಬ ಆಲೋಚನೆಗೆ ಒಳಗುಮಾಡುತ್ತವೆ. ಈ ದೌರ್ಬಲ್ಯ–ದುರಂತಗಳನ್ನು ಅನುಭವಿಸುತ್ತಲೇ ತ್ಯಾಗಗುಣ, ಸ್ವಾಮಿನಿಷ್ಠೆ ಮೌಲ್ಯಗಳನ್ನು ' ನನ್ನಿ ' ಮಾಡಿ ನಡೆದು ತೋರಲು ಹವಣಿಸುತ್ತಾನೆ, ಕರ್ಣ. ಇಂಥ ಹವಣಿಕೆಯನ್ನು ಗಮನಿಸಿಯೇ ಕವಿ " ನನ್ನಿಯೊಳಿನತನಯಂ" ಎಂದು ಕರೆದಿರುವನು.

ಪಂಪಭಾರತದಲ್ಲಿ 'ನನ್ನಿ' ಯೆಂಬ ಪದ ಕರ್ಣನನ್ನೊಳಗೊಂಡು ಅನೇಕರಿಗೆ ಅನ್ವಯಿಸಿ ಬಹಳ ಸಲ ಬಳಕೆಯಾಗಿದೆ. ದ್ರವಿಡಿಯನ್ ಎಟಿಮೊಲಾಜಿಕಲ್ ಡಿಕ್ಸನರಿಯಲ್ಲಿ 'ನನ್ನಿ' ಎಂಬುದಕ್ಕೆ ಅನೇಕ ಅರ್ಥಗಳಿದ್ದರೂ[೨] ತಾನು ನಂಬಿದ ಮೌಲ್ಯವನ್ನು

೧. "ವರ್ಣಕ–ಕತೆ" ಈ ಶಬ್ದಗಳ ವಿವರಣೆಗಾಗಿ "ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ" ಪು. ೫೧. ನೋಡಿರಿ.

೨. T. Burrow, M. B. Emeneau—DED P. 2986

ಅದಕ್ಕಿಂತ ನುಡಿದ ಮಾತನ್ನು ನೂರಕ್ಕೆ ನೂರು ನಡೆದು ತೋರಿಸುವುದು ಎಂಬ ಅರ್ಥದಲ್ಲಿಯೇ ಪಂಪ 'ನನ್ನಿ' ಪದವನ್ನು ಬಳಸಿದ್ದಾನೆ.

ಗುಣವನ್ನು ಜಾತಿಯಿಂದ ಅಳೆಯುತ್ತಲಿದ್ದ ಕಾಲವದು. ಕೀಳು ಜಾತಿಯುವನಾದ ತಾನು ಮೇಲು ಜಾತಿಯುವನೆನಿಸಿಕೊಳ್ಳುವುದು ಈಗ ಸಾಧ್ಯವಿರದ ಕಾರಣ ಆ ಕೊರತೆಯನ್ನು ಉದಾತ್ತ ಮೌಲ್ಯಗಳಿಂದ ತುಂಬಿಕೊಳ್ಳುವ ಪ್ರಯತ್ನವೆನ್ನುವಂತೆ ಅತಿರೇಕದ ತ್ಯಾಗಗುಣ, ವೀರಗುಣಗಳಿಂದ ವಿಜೃಂಭಿಸತೊಡಗಿ ಪ್ರಾರಂಭದಲ್ಲಿಯೇ ವಾಸ್ತವದ ನೆಲಗಟ್ಟನ್ನು ಕಳೆದುಕೊಳ್ಳುತ್ತದೆ; ಈ ಪಾತ್ರ. ಹೀಗೆ ಮೈತುಂಬಿದಂತೆ ವರ್ತಿಸುವವರನ್ನು ವಂಚಿಸುವುದು, ದುರುಪಯೋಗಗೊಳಿಸಿಕೊಳ್ಳುವುದು ಸುಲಭ. ಹೀಗಾಗಿ ಕರ್ಣನ ತ್ಯಾಗ ಗುಣವನ್ನು ದ್ರವ್ಯದಾಹದ ಬ್ರಾಹ್ಮಣರು, ವೀರಗುಣವನ್ನು ಭೂದಾಹದ ಕ್ಷತ್ರಿಯರು ದುರುಪಯೋಗಿಸಿಕೊಂಡರು. ಅಂದರೆ ರಾಜ ಗದ್ದುಗೆಯ ಮೇಲೆ ಕುಳಿತಿದ್ದರೂ ಮನದ ತಳದಲ್ಲಿ ಕೊರೆಯುವ ಕೀಳುಕುಲದವನೆಂಬ ಅಧೀರ ಮನೋಭಾವ (ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ), ಅದನ್ನು ವೀರ–ದಾನಗಳ ಮೂಲಕ ಮರೆಮಾಡಲು ತೋರುವ ಆಡಂಬರ ಮನೋಭಾವ (ಸುಪೀರಿಯಾರಿಟಿ ಕಾಂಪ್ಲೆಕ್ಸ) ಹೀಗೆ ಉಭಯ ಮನಃ ಪ್ರವೃತ್ತಿಯ ತಾಕಲಾಟ ಅವನ ವ್ಯಕ್ತಿತ್ವದ ಮೂಲದ್ರವ್ಯವಾಗಿರುವುದರಿಂದ ಪ್ರಸಂಗ ಬಂದರೆ ಕುಲವೆತ್ತಿ ಹೀಗಳೆದು ಇಲ್ಲವೆ ಗುಣವೆತ್ತಿ ಹೊಗಳಿ ಅವನನ್ನು ಪರಿಸರ ದುರ್ಬಲಗೊಳಿಸುತ್ತಲಿದೆ. ಈ ಎರಡರಿಂದ ಕೊಸರಿಕೊಂಡು ನಿರ್ಲಿಪ್ತನಾಗಿ ನಿಲ್ಲುವುದು ಕರ್ಣನಿಗೆ ಕೊನೆಗೂ ಸಾಧ್ಯವಾಗಲಿಲ್ಲ. ಅವನ ದೌರ್ಬಲ್ಯದ ನೆಲೆ, ದುರಂತದ ಸೆಲೆ ಇದ್ದುದು ಇಲ್ಲಿ.

ಕರ್ಣ, ದಾನವನ್ನು ಕುಡಿದು ನಿಂತ ವೀರ. ಅವನ ವಿಷಯವಾಗಿ ಪಂಪ ಒಂದು ಪ್ರಸಂಗದಲ್ಲಿ ಹೇಳಿದ "ಎಂದುಂ ಪೋಗೆಂದನೆ ಮಾಣೆಂದನೆ ಪೆಱತೊಂದನೀವೆನೆಂದನೆ"[೩] ಎಂಬ ಮಾತನ್ನು ಅವನ ಎಲ್ಲ ದಾನ ಪ್ರಸಂಗಗಳಿಗೂ ಅನ್ವಯಿಸಿ ಹೇಳಬಹುದು. ಒಮ್ಮೆ ವಟುವೇಷದಲ್ಲಿ ಬಂದ ಇಂದ್ರ "ಕವಚಮಂ ಕುಂಡಲಮಂ" ಬೇಡಿದರೆ ಹಿಂದು ಮುಂದು ನೋಡದೆ ತಂದೆ ಸೂರ್ಯ ನೀಡಿದ ಎಚ್ಚರಿಕೆಯನ್ನೂ ಬದಿಗೊತ್ತಿ "ನೆತ್ತರ್ ಪಸಪಸನ ಪನಿಯೆ ತಿದಿಯಾಗಿಯುವಂತುಗಿದು"[೪] ಕೊಟ್ಟುಬಿಡುತ್ತಾನೆ. ಸಕಾರಣವೇ ಇಲ್ಲದ ಈ ಅತಿರೇಕದಾನ ಅಪಾಯ ಆಹ್ವಾನವೇ ಆಗಿದೆ. ಇನ್ನೊಮ್ಮೆ ಇಂದ್ರುಸಟ್ಟಿದ ವಜ್ರಕೀಟಗಳು "ಕರ್ಣನೆರಡುಂ ತೊಡೆಯುಮನುಳಿಯನೂ ಕೊಡಂತಿಯೊಳ್ ಬಿಟ್ಟಿದಂತೆ"[೫] ಕೊರೆದರೂ ತೊಡೆಯ ಮೇಲೆ ತಲೆಯಿಟ್ಟು ಮಲಗಿದ ಗುರು ಪರಶುರಾಮನ ನಿದ್ರೆ ಕೆಡಬಾರದೆಂದು ಆ ಕೊರೆತವನ್ನು ಸಹಿಸುತ್ತಾನೆ. ಗುರುವಿನ ಅಷ್ಟು ಸಣ್ಣ ನಿದ್ರೆಗೋಸ್ಕರ ಶಿಷ್ಯನಿಂದ ಇಷ್ಟು ದೊಡ್ಡ ತ್ಯಾಗವೆ ? ಎಂದು ಪ್ರಶ್ನಿಸುವಂತಿದೆ ಈ ಔದಾರ್ಯ. ಹೀಗೆ ಹಸ್ತಿನಾವತಿಗೆ ಬರುವ ಪೂರ್ವದಲ್ಲಿಯೇ ವಿದ್ಯಾರ್ಥಿ ಕರ್ಣ ಯುಕ್ತಾಯುಕ್ತತೆಯ ನೆಲೆಗಟ್ಟು ಇಲ್ಲದ ತ್ಯಾಗ ಬುದ್ಧಿಯನ್ನು ನನ್ನಿಗೊಳಿಸಲು ತೊಡಗಿದುದನ್ನು ಇಲ್ಲಿ ಕಾಣಬಹುದು.

೩. ಪಂ. ಭಾ. ೧–೧೦೨ ೪. ಪಂ. ಭಾ. ೧–೧೦೨ ಗ ೫. ಪಂ. ಭಾ. ೧–೧೦೪ ಗ.

ಕಾಲಾಂತರದಲ್ಲಿ ದ್ರೋಣಾಚಾರ್ಯರ ಶಿಷ್ಯತ್ವವಹಿಸಿ ಅರಸು ಮಕ್ಕಳೊಡನೆ ಅರ್ಜುನನ ಕೂಡ ವಿದ್ಯಾವೈರ ಬೆಳೆಸಿಕೊಳ್ಳುತ್ತ–ಶಸ್ತ್ರವಿದ್ಯೆ ಕಲಿತು, ರಾಜಕುಮಾರರಿಗಾಗಿ ಮಾತ್ರ ಏರ್ಪಡಿಸಿದ್ದ ಬಿಲ್ಲು ವಿದ್ಯೆಯ ಪ್ರದರ್ಶನ ಪ್ರಸಂಗದಲ್ಲಿ ಅಧಿಕ ಪ್ರಸಂಗಿಯಂತೆ ಸುಪಿರಿಯಾರಿಟಿ ಕಾಂಪ್ಲೆಕ್ಸದ ಈ ಕರ್ಣ ಹೋಗಿ, ಜಾತಿ ಕಾರಣ ಅಪಮಾನಿತನಾಗಿ, ಕೌರವನ ಪಕ್ಷವನ್ನು ಸೇರಿಕೊಳ್ಳುತ್ತಾನೆ, ಅಲ್ಲ ಕೌರವ ತನ್ನ ಪಕ್ಷಕ್ಕೆ ಅವನನ್ನು ಎಳೆದುಕೊಳ್ಳುತ್ತಾನೆ. ಆದಕ್ಕೆ ಸಹಿಹಾಕಿದನೆಂಬಂತೆ ಈಗ ಕರ್ಣ ಕೌರವನಿಗೆ ಸ್ವಾಮಿಭಕ್ತ, ಜೋಳವಾಳಿ ಇನ್ನು ಮೇಲೆ ಅರ್ಜುನನ ವೈರಕ್ಕೋ ಯಾಪಾವುದಕ್ಕೋ ಬಳಸಬೇಕಾಗಿದ್ದ ತನ್ನ ಶೌರ್ಯವನ್ನು ಒಡೆಯನಿಗಾಗಿ ಮಾತ್ರ ಮೀಸಲು ಹಿಡಿಯಬೇಕಾದುದು ಜೋಳವಾಳಿಯ ಕರ್ತವ್ಯ. ಅಂದಿನಿಂದ ಅಂಗದೇಶದ ಅಧಿರಾಜನಾಗಿ ನಿತ್ಯದಾನಕ್ಕೆ ದೇವಸಬಳದ ಪದಿನೆಂಟು ಕೋಟಿ ಪೊನ್ನುಗಳನ್ನು, ದಾನುಮೀಯುತ್ತ ಹೋಗುತ್ತಾನೆ. ವೀರಮರಣವನ್ನಪ್ಪುವ ದಿನವಂತೂ "ರಥ ತುರಗಣ ದಿವ್ಯಾಸ್ತ್ರಂಗಳು ಯೆ ಪಸುರ್ಮನಾಗಿಯನಪ್ಪೊಡ ಮುಳಿಯದಂತು"[೬] ನೀಡಿ ತನ್ನ ದಾನಗುಣವನ್ನು ನನ್ನಿ ಮಾಡಿ ತೋರಿಸುತ್ತಾನೆ.

ಇವುಗಳಿಗಿಂತ ತುಂಬ ತೊಡಕಿನದಾದ ಅಗ್ನಿಪರೀಕ್ಷೆಯ ಘಟನೆಯೊಂದು ಕರ್ಣನ ಜೀವನದಲ್ಲಿ, ಕುರುಕ್ಷೇತ್ರದ ಯುದ್ಧ ವ್ಯವಸ್ಥೆಯಲ್ಲಿ ನಡೆದು ಹೋಗುತ್ತದೆ. ಕರ್ಣನಿಂದ ವಚನ ಪಡೆಯಲು ಕುಂತಿ ಅವನಿದ್ದ ಗಂಗಾತೀರಕ್ಕೆ ಬರುತ್ತಾಳೆ. ಆಗ ತಂದೆ ಸೂರ್ಯದೇವ ಅವಸರವಸರವಾಗಿ ಬಂದು "ನಾನು ಬೇಡವೆಂದರೂ ಇಂದ್ರನಿಗೆ ಕವಚ ಕೊಟ್ಟ ಹಾಗೆ ಕುಂತಿಗೆ ಪುರಿಗಣೆಯನ್ನು ಕೊಡಬೇಡ" ಎಂದು ಎಚ್ಚರಿಸಿದರೂ "ಅರ್ಜುನ ಎದುರಾದರೂ ಪುರಿಗಣೆಯನ್ನು ಹಿಡಿಯುವುದಿಲ್ಲ. ಉಳಿದ ನಾಲ್ವರನ್ನು ಕೊಲ್ಲುವುದಿಲ್ಲ" ಎಂದು ಭಾಷೆ ಕೊಟ್ಟು, ಮಾಡಿದ ತಪ್ಪನ್ನೇ ಅದಕ್ಕಿಂತ ದೊಡ್ಡ ತಪ್ಪನ್ನೇ ಮಾಡುತ್ತಾನೆ. ಈ ಹಿಂದೆ ಕುಲವೆತ್ತಿ ಮಾತನಾಡಿದರೆ "ಪುದೆಯುಂ ಪಾವಡರ್ದಂತೆ" ನಿರುತ್ತರನಾಗುತ್ತಿದ್ದ ಕರ್ಣ ಇನ್ನು ಮುಂದೆ ಹಾಗೆ ಆಡಿದ ದ್ರೋಣ, ಅಶ್ವತ್ಥಾಮರನ್ನು ಉಗ್ರವಾಗಿ ಪ್ರತಿಭಟಿಸುವುದನ್ನು ನೋಡಿದರೆ ನಿನ್ನಿನ ಕೃಷ್ಣಸಂದರ್ಶನದಲ್ಲಿ ಕುಲದ ಬಗೆಗೆ ಇದ್ದ ಅವನ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ ಕರಗಿ ಹೋಗಿದ್ದುದು ಸ್ಪಷ್ಟವಾಗುತ್ತದೆ. ಆದರೆ "ಅಜಿದೆಂ ಸೋದರರೆಂದು ಪಾಂಡವರನಿನ್ನೆಂತೆನ್ನರಂ, ಕೊಲ್ವೆಂ ಅಳ್ಕರೊಳೆನ್ನಂ ಪೊರೆದೆಯ್ದೆ ನಂಬಿದ ನೃಪಂಗೆಂತಾಜಿಯೊಳ್ ತಪ್ಪುವೆಂ"[೭] ಎಂಬ ಬಿರುಕು ಭಾವ ತಲೆಯೆತ್ತಿ ಎನ್ನೊಡಲ ನಾಂತಪಂ ರಣರಂಗಭೂಮಿಯೊಳ್ ಎಂದು ಹತಾಶಕ್ಕೆ ತಿರುಗುತ್ತದೆ. ಮರುದಿನದ ಕುಂತಿ ಸಂದರ್ಶನದಲ್ಲಿ "ಎನ್ನನೆ ರಣದೊಳ ವೆಂ"[೮] ಎಂದು ಮತ್ತೂ ಹತಾಶಕ್ಕೆ ತಿರುಗಿ ಜೋಳದ ಪಾಳಿಯನ್ನೇ ಮರೆತು ಕೈಮೇಲೆ ಕೈಹಾಕುವಲ್ಲಿ ಆತನ ಮನಸ್ಸು ಪಾಂಡವರಿಗೆ, ಮೈ ದುರ್ಯೋಧನನಿಗೆ ಹಂಚಿಹೋಯಿತು. ಈಗ ದುರ್ಯೋಧನ ಪರವಾಗಿಯೇ

೬. ಪಂ. ಭಾ. ೧೨–೧೦೮ ಗ ೭. ಪಂ. ಭಾ. ೯–೩೧ ೮. ಪಂ. ಭಾ. ೯–೮೭

ನಿಂತಿದ್ದರೆ ಅವನ ನಡತೆಯನ್ನು ಯಾರೂ ಪ್ರಶ್ನಿಸುತ್ತಿರಲಿಲ್ಲ. ಕುಂತಿಯ ಪರವಾಗಿ ನಿಂತು ಎಲ್ಲರೂ ಪ್ರಶ್ನಿಸುವಂತೆ ಮಾಡಿಕೊಂಡ. ಹೀಗಾಗಿ ದುರ್ಯೋಧನನ 'ಸತ್ಯಂತ ಪರ ಏಕಾಂತ' ಸಂದರ್ಭಕ್ಕಿಂತ ಕರ್ಣನ ಈ 'ಕುಂತಿ ಏಕಾಂತ' ಸಂದರ್ಭ ತುಂಬ ವಿಶ್ವಾಸಘಾತಕವೆನಿಸುತ್ತದೆ. ಏಕೆಂದರೆ social ethics ಬೇರೆ domestic ethics ಬೇರೆ. ಅದಕ್ಕಾಗಿಯೇ "ದಂಡಿನಲ್ಲಿ ಸೋದರವಾವನೇ?"– ಎಂಬ ಗಾದೆ ಹುಟ್ಟಿದುದು. ಹೀಗಿರುವಾಗ "ಅಱಿದೆಂ ಸೋದರರೆಂದು ಪಾಂಡವರನಿನ್ನೆಂತೆನ್ನರಂ ಕೊಲ್ವೆಂ" ಎಂಬ ಭಾವ ಅಂಕುರಿಸಿದುದೇ ಕರ್ಣನ ದೌರ್ಬಲ್ಯ. ಈವರೆಗೆ ಕೌರವ ಮುಖಿಯಾಗಿದ್ದ ಪಾತ್ರ ಕೃಷ್ಣ ಸಂದರ್ಶನದಲ್ಲಿ ಸ್ವಲ್ಪ ಹೊತ್ತು ಕೌರವ- ಪಾಂಡವ ಮುಖಿಯಾಗಿ ಕುಂತಿ ಸಂದರ್ಶನದಿಂದ ಪಾಂಡವಮುಖಿಯಾಗಿಯೇ ಬೆಳವಣಿಗೆ ಪಡೆಯುತ್ತ ನಡೆಯಿತು. ಆದುದರಿಂದಲೇ ರಣರಂಗದಲ್ಲಿ ತನ್ನ ಏಟಿಗೆ "ಮೂರ್ಛಾಗತನಾದ ಭೀಮನ ಕೊರಲೊಳ್ ಬಿಲ್ಲಂ ಕೋದು ಮೇಗಿಲ್ಲದೆ ತೆಗೆದು... ಅಂಬಿಕೆ ನುಡಿದ ನುಡಿ ನಿತಿ ಮನದೊಳ್"[೯] ಕೊಲ್ಲದೆ ಬಿಟ್ಟುಕೊಡುತ್ತಾನೆ. ಮತ್ತೊಮ್ಮೆ ಧರ್ಮರಾಜನಿಗೆ ಮರಣಾಂತಿಕ ಪೆಟ್ಟು ಕೊಟ್ಟು "ನಸುನೊಂದು ನಂದಿಸದೆ ತನ್ನನೆ ನಿಂದಿಸಿಕೊಂಡು, "ಕೊಂತಿಗೆ ನಾಲ್ವರೊಳಾರುಮಂ ಕೊಲ್ಲೆನೆಂದು ನುಡಿದು ತನ್ನ ನನ್ನಿಗೆ ಬನ್ನಂಬಂದಪ್ಪುದೆಂದು"[೧೦] ಮತ್ತೆ ಕೈಯೆತ್ತದೆ ಚಿಂತಿಸತೊಡಗುತ್ತಾನೆ. ಅಷ್ಟರಲ್ಲಿ 'ನಕುಳಸಹದೇವರಿರ್ವರುಂ ಬಂದಾಂತೊಡವರನೇಗೆಯ್ವುದೆಂದು ಕರುಣಿಸಿ–[೧೧] ಬಿಡುತ್ತಾನೆ, ಹೀಗೆ ನಾಲ್ವರನ್ನೂ ಕೊಲ್ಲದೆ' ಕ್ಷಮಿಸಿ ಮಾತೃವಚನವನ್ನು ಪಾಲಿಸಿದ. ಇನ್ನು "ಪುರಿಗಣೆ"ಯನ್ನು ಹಿಡಿಯದೇ ಅರ್ಜುನನೊಂದಿಗೆ ಹೋರಾಡಬೇಕು. ಇದನ್ನು ನಡೆಸಿಕೊಡುವುದಕ್ಕೋಸುಗ "ರೌದ್ರಶರ" ವನ್ನು ಅರ್ಜುನನ ಹಣೆಗೆ ಹೂಡುತ್ತಾನೆ. ಆಗ ಹಣೆಗೆ ಇಟ್ಟ ಗುರಿಯನ್ನು ಕಿತ್ತಿ "ಉರದೆಡೆಗೆ ತುಡೆ ಜಯಶ್ರೀಗಿರಿಲೆಡೆ ನಿನಗಪ್ಪುದು ಆ ಸುಯೋಧನನೊಳ್ ಶ್ರೀಗಿರಿಲೆಡೆಯಪ್ಪುದು"[೧೨] ಎಂಬ ಶಲ್ಯನ ಸೂಚನೆ ಯೋಗ್ಯವೆಂದು ಮನವರಿಕೆಯಾದರೂ ಅರ್ಜುನ ಸತ್ತರೆ ತಮ್ಮಂದಿರಿಗೆ ಪೇಳೆವಾಳಿಯಾಗಿರುವ "ಧರ್ಮಪುತ್ರನಟಿಗುಂ".[೧೩] ಆಗ 'ಉಳಿದ ನನ್ನ ಮಕ್ಕಳ ನಿನ್ನೇದೊರ್ಡಮಳಿಯೆಂ"[೧೪] ಎಂಬ ತನ್ನ ವಚನಕ್ಕೆ ತಪ್ಪಿದಂತಾಗುತ್ತದೆಯೆಂಬ "ಧರ್ಮಸೂಕ್ಷ್ಮತೆ"ಗೆ ಕಟ್ಟುಬಿದ್ದು "ಗುರಿಯನ್ನು ಕಿತ್ತಿ ಇಟ್ಟರೆ ತನ್ನ ಶೌರ್ಯಕ್ಕೆ ಅಪಮಾನ"ವೆಂದು ಜ್ಞಾಪಿಕೊಂಡು ಆತ ರೌದ್ರಶರವನ್ನು ಹಣೆಗೇ ಪ್ರಯೋಗಿಸುತ್ತಾನೆ. ಆಗ ಕೃಷ್ಣ ರಥವನ್ನು ಎಂಟು ಬೆರಳಿನಷ್ಟು ನೆಲದಲ್ಲಿ ಒತ್ತಿದುದರಿಂದ ಅರ್ಜುನನ ಕಿರೀಟ ಮಾತ್ರ ಉರುಳುತ್ತದೆ. ಹಾವಿನ ರೂಪದಲ್ಲಿ ತಿರುಗಿ ಬಂದ ಆ ಬಾಣ ತನ್ನ ಸೇಡಿನ ಕಥೆಯನ್ನು ಹೇಳಿ ತನ್ನನ್ನು ಇನ್ನೊಮ್ಮೆ ಪ್ರಯೋಗಿಸು ಎಂದು

---

೯. ಪಂಭಾ ೧೨–೧೪೩ ಗ
೧೦. ಪಂಭಾ ೧೨–೧೧೭ ಮತ್ತು ೧೧೭ ಗ.
೧೧. ಪಂಭಾ ೧೨–೧೧೭ ಗ.
೧೨. ಪಂಭಾ ೧೨–೧೯೫.
೧೩. ಪಂಭಾ ೧೩–೧೫
೧೪. ಪಂಭಾ ೯–೮೭

ಅಂಗಲಾಚಿ ಬೇಡಿಕೊಂಡರೂ "ಅಸಹಾಯ ಶೂರನಾದ ನಾನು ನಿನ್ನ ಸಹಾಯದಿಂದ ವೈರಿಯನ್ನು ಕೊಂದೆನೆಂಬ ನಿಂದೆಯನ್ನು ಹೊರಲಾರೆ" ಎಂದು ಹೇಳಿ ಮತ್ತೂ ಜಾರಿಕೊಳ್ಳುತಾನೆ. ಹೀಗೆ ವಚನಕ್ಕೆ ಕಟ್ಟುಬಿದ್ದು ನಾಲ್ವರನ್ನೂ ಎರಡೂ ಅವಕಾಶ ಗಳಲ್ಲಿ "ಧರ್ಮಸೂಕ್ಷ್ಮತೆ"ಗೆ ಕಟ್ಟುಬಿದ್ದು ಅರ್ಜುನನ್ನೂ ಕೊಲ್ಲದಿದ್ದುದನ್ನು ಪ್ರಧಾನ ವಾಗಿ ಗಮನಿಸಿಯೇ "ನನ್ನಿಯೊಳಿನತನಯಂ" ಎಂದು ಹೇಳಿದಂತಿದೆ. ಪಂಪ-ಮೊದಲುಕೊಟ್ಟ ವಿಶ್ವಾಸದ್ರೋಹದ ವಚನವನ್ನು ಕೊನೆಯವರೆಗೆ ಸಮರ್ಥ ವಾಗಿಯೇ ನಡೆಸಿದನೆಂಬ ಅರ್ಥದ ಈ ಸ್ವಾಮಿದ್ರೋಹ ವರ್ತನೆಗೆ ಇಂಥ ಕೀರ್ತಿ ಕಿರೀಟ ತಲೆಭಾರವೇ ಸರಿ.[೧೫] ನಿಜ ಹೇಳುವುದಾದರೆ ದುರ್ಯೋಧನ ಒಳಗೊಳಗೆ ತೋರುವ ಮಿತ್ರದ್ರೋಹಕ್ಕಿಂತ ಕರ್ಣ ಒಳಗೊಳಗೆ ತೋರುವ ಈ ಸ್ವಾಮಿದ್ರೋಹ ತುಂಬ ಅಪಾಯಕಾರಿಯಾಗಿದೆ, 'ಮರೆಯ ಪಾಂಡವ' ರೂಪದ್ದಾಗಿದೆ, ಪಾಪ ರೂಪದ್ದಾಗಿದೆ. ಇದು 'ಜೋಳವಾಳಿ' ತನವಲ್ಲ 'ಜೋಳಗಳ್ಳ' ತನವೆಂದು ಹತ್ತನೆಯ ಶತಮಾನದ ಶಾಸನಸ್ಥ 'ಜೋಳವಾಳಿ'ಗಳನ್ನು ಅಭ್ಯಸಿಸಿದವರಿಗೆ ಸ್ಪಷ್ಟ ವಾಗುತ್ತದೆ. ಹೀಗಿದ್ದೂ ಕರ್ಣನ ಹೆಜ್ಜೆ ಹೆಜ್ಜೆಗೆ 'ಜೋಳಕ್ಕೆ ತಪ್ಪಿಯು ಬಾಳ್ವುದೇ?' ಎನ್ನುವುದು ಒಳ ಹೃದಯದ 'ವಚನ'ವಲ್ಲ; ತುದಿ ನಾಲಿಗೆಯ ನುಡಿಯೆನಿಸುತ್ತದೆ. 'ಜೋಳದ ಪಾಟಿನಿಜಾಧಿನಾಥನಾಹವದೊಳರಾತಿ ನಾಯಕರ ಪಟ್ಟನೆ ಪಾಱಿಸಿದ'[೧೬] ಸ್ವತಃ ಜೋಳವಾಳಿ ಪಂಪ ಇದನ್ನು ಹೇಗೆ ಸಮರ್ಥಿಸಿಕೊಳ್ಳುವನೋ ದೇವರೇ ಬಲ್ಲ.

ಕರ್ಣನಲ್ಲಿ ತ್ಯಾಗದಂತೆ ಎದ್ದುಕಾಣುವ ಇನ್ನೊಂದು ಗುಣ ಸ್ವಾಮಿನಿಷ್ಠೆ. ಆದರೆ ಭಾರತಯುದ್ಧ ಬಾಗಿಲಿಗೆ ಬರುವ ಮೊದಲು ದುರ್ಯೋಧನ ಕೈಕೊಂಡ ದ್ಯೂತ-ಪ್ರಸಂಗದಲ್ಲಿ ಶಕುನಿಯದೇ ಪಾತ್ರ. ಕರ್ಣ ಮೌನ ಆಟಗಾರ: ದ್ರೌಪದಿ ಯನ್ನು ಸಭೆಗೆ ಎಳೆದು ತರುವಲ್ಲಿ ದುಶ್ಯಾಸನ ಉತ್ಸಾಹಿ, ಕರ್ಣ ಮೌನ ಪ್ರೇಕ್ಷಕ. ಚಿತ್ರಾಂಗದನ ಯುದ್ಧಪ್ರಸಂಗದಲ್ಲಿ ಎಲ್ಲರಂತೆ ಈತನೂ ಅಸಹಾಯಕ. ದೂತ ಪ್ರಸಂಗದಲ್ಲಿ ದುರ್ಯೋಧನನೇ ಕೃಷ್ಣನ ಸವಾಲು ಎದುರಿಸುವವ. ಕರ್ಣ ದುರ್ಯೋ-ಧನನ ತೊಡೆಸೋಂಕಿ ಕುಳಿತ ಪ್ರೇಕ್ಷಕ. ದ್ರೌಪದಿ ಸ್ವಯಂವರ, ಗೋಗ್ರಹಣ

---

೧೫. "ದುಃಖದ ಕಾಲದಲ್ಲಿ ಆಡುವ ಮಾತು ವಿಮರ್ಶೆಯ, ತೂಕದ ಮಾತುಗಳಲ್ಲ. ಕಷ್ಟಿಯಿದ್ದು ದನ್ನೂ ಗುಡ್ಡವಾಗಿ ಮಾಡಿ ಹೇಳಿಕೊಳ್ಳುವ ಹೊತ್ತು ಅದು. ಆಗ ತೀರ ತೂಗಿ ಮಾತನಾಡು ವುದು ಯೋಗ್ಯವೆನಿಸುವುದಿಲ್ಲ. ಅವರಿಗೆ ಮಡಿದವರ ಬಗೆಗೆ ದುಃಖ ಕಡಿಮೆಯೆಂಬುದರ ಸೂಚಕವಾಗಿ ಅವರು ಸಹಾನುಭೂತಿ, ಅಂತಃಕರಣ ಕಡಿಮೆಯೆಂಬ ಆರೋಪಕ್ಕೆ ಈಡಾಗ ಬೇಕಾಗುತ್ತದೆ. ಆದುದರಿಂದ ಮಡಿದ ಕಾಲಕ್ಕೆ ಆಡಿದ ಮಾತುಗಳು ಯಾವನಾದರೊಬ್ಬನ ನಿಜವಾದ ಗುಣ ವರ್ಣನೆಯೆಂದು ಗ್ರಹಿಸುವುದು ಸಮರ್ಪಕವಾಗಲಾರದು. ಪಂಪ ಮತ್ತು ಕುಮಾರವ್ಯಾಸರ ಕರ್ಣನ ಮರಣಾ ನಂತರದ ವರ್ಣನೆಗಳೂ ಇವೇ ಬಗೆಯಾಗಿವೆ."
(ಡಾ. ಶಂ. ಬಾ. ಜೋಶಿ, ಕರ್ಣನ ಮೂರು ಚಿತ್ರಗಳು ಪು. ೩೩–೩೪)

೧೬. ಪಂಭಾ ೧೪–೫೦

ಪ್ರಸಂಗಗಳಲ್ಲಿ ಹೋರಾಡಿದ್ದರೂ ಅದು ಹತ್ತರಕೂಡ ಹನ್ನೊಂದು ಅಂದರೆ ಕುರುಕ್ಷೇತ್ರ ಯುದ್ಧಪೂರ್ವದ ದಿನಗಳಲ್ಲಿ ದುರ್ಯೋಧನ ಕೈಗೆತ್ತಿಕೊಂಡ ಕಾರ್ಯಚಟುವಟಿಕೆಗಳಲ್ಲಿ ಕರ್ಣ ಕ್ರಿಯಾತ್ಮಕವಾಗಿ ಭಾಗವಹಿಸುವುದು ಹೋಗಲಿ, ಹಿತೈಷಿಯಾಗಿ ನಿಂತು ಸರಿಯೆಂದೂ ಹೇಳದೆ, ತಪ್ಪು ಎಂದೂ ಹೇಳದೆ ಮೌನ ತಾಳುತ್ತಾನೆ. ಈ ವಾಚಿ ಮೌನಕ್ಕೆ. ನಿಷ್ಕ್ರಿಯತೆಗೆ ಎರಡು ಕಾರಣಗಳನ್ನು ಊಹಿಸಬಹುದು :

೧) ತಾನು ಸಿಂಹಾಸನದ ಮೇಲೆ ಕುಳಿತಿದ್ದರೂ ಶೂದ್ರತ್ವಕಾರಣವಾಗಿ ತನ್ನ ಮಾತಿಗೆ ಕೃತಿಗೆ ಈ ಬ್ರಾಹ್ಮಣ–ಕ್ಷತ್ರಿಯ ಪರಿವಾರದಲ್ಲಿ ಬೆಲೆಬಾರದೆಂಬ ಆತಂಕ

೨) ಕೌರವನ ಕುಟಿಲ ಚಟುವಟಿಕೆಗಳು ಬಹುಶಃ ಅವನ ಅಂತರಂಗದ ಅಂತರಂಗಕ್ಕೆ ಒಪ್ಪಿತವಿಲ್ಲ.

ಹೀಗಾಗಿ ಕುಲಹೀನ ಸೂತನಿಗೆ ಮಗನೆನಿಸಿಬಿಟ್ಟುದು ಒಂದು ದುರಂತವಾದರೆ ಗುಣಹೀನ ಕೌರವನಿಗೆ ಸೇವಕನಾಗಿ ಬಿಟ್ಟುದು ಇನ್ನೊಂದು ದುರಂತವೆನಿಸಿದೆಯೇನೋ ಅವನಿಗೆ. ಆದುದರಿಂದ ಯುದ್ಧದವರೆಗೆ ದುರ್ಯೋಧನನಿಗೆ ಮೂಕ ಅನುಯಾಯಿಯಂತೆ ವರ್ತಿಸಿದರೆ ಯುದ್ಧ ಸಂದರ್ಭದಲ್ಲಿ ವಿಶ್ವಾಸದ್ರೋಹಿ ಅನುಯಾಯಿಯಂತೆ ವರ್ತಿಸಿದನೆಂದು ಅವನ ನಡತೆಯನ್ನು ಹಂಚಿ ಹೇಳಬೇಕಾಗುತ್ತದೆ. ದುರ್ಯೋಧನನ ದುಷ್ಟ ಕಾರ್ಯಗಳಲ್ಲಿ ಭಾಗವಹಿಸುವ ಕರ್ಣನನ್ನು ಚಿತ್ರಿಸಿ ಕುಂದು ತರಬಾರದೆಂದು ಪಂಪ ಹೀಗೆ ಮಾಡಿರುವನೆಂದು ಹೇಳಬೇಕೆಂದರೆ "ದುಶ್ಶಾಸನ ಕರ್ಣ ಶಕುನಿ ಸೈಂಧವರೆಂಬ ದುಷ್ಟ ಚತುಷ್ಟಯದೊಳ್"[೧೭] ಎಂಬ ಆತನ ಮಾತು ಅಡ್ಡಬರುತ್ತದೆ. ಹೀಗಿರುವ ದುರ್ಯೋಧನನ ಆಸ್ಥಾನದ ಈ ಮೂಕಪಾತ್ರಕ್ಕೆ ಮಾತು ಬಂದುದು ಕೃಷ್ಣನ ಗಾರುಡಿಯಿಂದ. ಅಂದಿನಿಂದ ಅವನ ಅಂತರಂಗದಲ್ಲಿ ಕೊರೆಯುತ್ತಲಿದ್ದ 'ಕುಲಹೀನ' ಭಾವನಾ ವೈಯಕ್ತಿಕವಾಗಿ ದೂರವಾಯಿತು, ನಿಜ. ಆದರೆ ಒಂದು ಕಡೆಯಿಂದ ದುರ್ಯೋಧನನಿಗೆ ವಂಚಿಸಿದ ಉರುಲು. ಇನ್ನೊಂದು ಕಡೆಯಿಂದ ಕುಂತಿಗೆ ಕೊಟ್ಟಿದ್ದ ವಚನದ ಉರುಲು ಬಿಗಿಯಾಗತೊಡಗಿತು. ಆಗ ಈ ಪಾತ್ರದಲ್ಲಿ ಸಹಜವಾಗಿಯೇ ಹತಾಶಾಭಾವದ ಚಟುವಟಿಕೆ ಪ್ರಾರಂಭವಾಗುತ್ತದೆ; ಆಡಿದ ಮಾತುಗಳು ಆವೇಶದ ಪ್ರತೀಕವೆನಿಸಿ ಹಾಗೂ ಹೀಗೂ ವ್ಯಕ್ತವಾಗುತ್ತ ಹೋಗುತ್ತವೆ. ಕೌರವನಿಗೆ ಅನ್ಯಾಯ ಬಗೆಯಲಾರೆನೆಂದೂ ಕೃಷ್ಣನಿಗೆ ಹೇಳುತ್ತಾನೆ, ಪಾಂಡವರನ್ನು ಕೊಲ್ಲಲಾರೆನೆಂದೂ ಕುಂತಿಗೆ ಹೇಳುತ್ತಾನೆ. "ಪಗೆವರ ನಿಟ್ಟೆಲ್ವಂ ಮುರಿವೊಡೆನಗೆ ಪಟ್ಟಂಗಟ್ಟಾ"[೧೮] ಎಂದು ಭೀಷ್ಮ ಪಟ್ಟಬಂಧ ಸಂದರ್ಭದಲ್ಲಿ ತವಕಿಸುತ್ತಾನೆ. ತರುವಾಯ ಪಟ್ಟಕಟ್ಟಲು ಬಂದರೆ "ಸುರಸಿಂಧೂದ್ಭವನಿಂ ಬಳಿಕ್ಕೆ ಪೆಜಿರಾರ್ ಸೇನಾಧಿಪತ್ಯಕ್ಕೆ ತಕ್ಕರ್, ಲೋಕೈಕಧನುರ್ಧರಂ ಕಳಶಜಂ ತಕ್ಕಂ"[೧೯] ಎಂದು ಹೇಳಿ ದೊಡ್ಡಸ್ತಿಕೆ ಮೆರೆಯುತ್ತಾನೆ. "ಗಂಗಾಸುತಂ ಪೃಥಾಸುತರಂ ಗೆಲ್ದೊಡೆ ತಪಕೆ ಪೋಪೆಂ"[೨೦] ಎಂದು ಭೀಷ್ಮರ

೧೭. ಪಂಭಾ ೬–೬೭ ಗ
೧೮. ಪಂಭಾ ೧೦–೧೭
೧೯. ಪಂಭಾ ೧೧–೫೩
೨೦. ಪಂಭಾ ೧೦–೨೨

ಶೌರ್ಯವನ್ನು ಪ್ರಶ್ನಿಸುತ್ತಾನೆ, “ನಿಮ್ಮಡಿಯುಂ ಗೆಲಲರಿಯುಮಾ ಪಾಂಡುಸುತರ ನೆಮ್ಮಂದಿಗರಚ್ಚರಿಯತ್ತಿ ಗೆಲ್ವರೆಂಬುದು”[೨೧] ಎಂದೂ ಭೀಷ್ಮರ ಶೌರ್ಯವನ್ನು ಒಪ್ಪಿಕೊಳ್ಳುತ್ತಾನೆ. ಈ ತಾಳಮೇಳವಿಲ್ಲದ ಮಾತುಗಳು ಅವನ ಗೊಂದಲ ಮನ ಸ್ಥಿತಿಯನ್ನೋ ಹತಾಶಮನೋಭಾವವನ್ನೋ ತೆರೆದು ತೋರಿಸುತ್ತವೆ. ಇದಲ್ಲದೆ ನನ್ನನ್ನು ಬಿಟ್ಟು ಭೀಷ್ಮನಿಗೆ ಪಟ್ಟಕಟ್ಟಿದ ಕಾರಣ ಅವನು ಬದುಕಿರುವ “ಅನ್ನೆಗಂ ಬಿಲ್ವಿಡಿಯೆಂ”[೨೨] ಎಂದು ದುಡುಕಿ ಬಿಟ್ಟು ೧೮ ದಿನದ ಯುದ್ಧದಲ್ಲಿ ೧೦ ದಿನ ನಿಷ್ಕ್ರಿಯನಾಗಿ ಉಳಿದುದು ಒಡೆಯನ ನಿರ್ಣಯದ ವಿರುದ್ಧ ಸ್ವೀಕರಿಸಿದ ತಪ್ಪು ತೀರ್ಮಾನವೇ ಸರಿ. ಮುಂದೆ ತಾಯಿಗೆ ಮಾತು ಕೊಟ್ಟ ಮೇರೆಗೆ ರಣರಂಗದಲ್ಲಿ ನಾಲ್ಕು ಜನ ಏಕೆ ಐದೂ ಜನ ಪಾಂಡವರನ್ನು ರಕ್ಷಿಸುತ್ತ ಒಳಗೆ ಅಣಕು ಯುದ್ಧ ಮಾಡುತ್ತ ಮೇಲೆ ಸ್ವಾಮಿಭಕ್ತಿಯನ್ನು ಸಾರುವುದಕ್ಕೆ ಏನು ಅರ್ಥ? ಹೋರಾಡಿ ಸ್ವಾಮಿನಿಷ್ಠನೂ ಎನಿಸಿಕೊಳ್ಳಬೇಕು. ಮಾತ್ರ ವಚನಪಾಲಿಸಿ ‘ನನ್ನಿಕಾರ’ನೂ ಎನಿಸಿಕೊಳ್ಳಬೇಕು ಎಂಬ ಬಿರುಕು ಈ ಪಾತ್ರದಲ್ಲಿ ಕಂಡುಬರುವುದರಿಂದ “ನನ್ನಿಯೊಳಿನತನಯಂ” ಎಂಬ ಮಾತು ಅರ್ಥಕಳೆದುಕೊಳ್ಳುವುದೆಂದೇ ಹೇಳಬೇಕು.”[೨೩]

ಮೂಲತಃ ವೈಯಕ್ತಿಕವಾಗಿ ಅರ್ಜುನನೊಂದಿಗೆ ವಿದ್ಯಾವೈರಸಾಧಿಸುವುದು ಕರ್ಣನಿಗೆ ಬೇಕಾಗಿದ್ದಿತು, ಪಾಂಡವರೊಂದಿಗೆ ದಾಯಾದ ವೈರ ಸಾಧಿಸಿಕೊಳ್ಳುವುದು ದುರ್ಯೋಧನನಿಗೆ ಬೇಕಾಗಿದ್ದಿತು. ಆ ಮೇಲಿನ ಅವರ ಸ್ನೇಹದಿಂದ ಕರ್ಣನ ವೈರ ಸಾಧನೆಗೆ ದುರ್ಯೋಧನ ರಾಜಕೀಯ ವ್ಯವಸ್ಥೆಯನ್ನು ಒದಗಿಸಿಕೊಟ್ಟಂತಾಯಿತು, ದುರ್ಯೋಧನನ ವೈರ ಸಾಧನೆಗೆ ಕರ್ಣ ಊರುಗೋಲಾದಂತಾಯಿತು. ಹೀಗಾಗಿ ಒಡೆಯನ ಸ್ವಾಮಿಭಕ್ತಿಗಿಂತ ವೈಯಕ್ತಿಕ ವೈರವೇ ಕರ್ಣನನ್ನು ಕೊನೆಯವರೆಗೆ ಕೌರವ ಪಕ್ಷದಲ್ಲಿ ನಿಲ್ಲುವಂತೆ ಮಾಡಿರಲು ಸಾಧ್ಯವಿದ್ದು, ರಣರಂಗದಲ್ಲಿ ‘ಧರ್ಮ ಸೂಕ್ಷತೆ’ ಅಡ್ಡಬರಲು ಆ ವೈರವನ್ನೂ ಕೈಬಿಟ್ಟು ಇತ್ತ ತನ್ನ ವೈರವನ್ನೂ ಸಾಧಿಸಿಕೊಳ್ಳಲಿಲ್ಲ, ಅತ್ತ ಒಡೆಯನ ವೈರವನ್ನೂ ಸಾಧಿಸಿಕೊಡಲಿಲ್ಲ. ಇಷ್ಟೆಲ್ಲ ವೈಯಕ್ತಿಕ ದೌರ್ಬಲ್ಯ, ಪರಿಸರದ ಕೌಟಿಲ್ಯಗಳು ಒಳ ಹೊರಗೆ ಆವರಿಸಿದ್ದರೂ ಕರ್ಣ ಅವುಗಳನ್ನು

೨೧. ಪಂಭಾ ೧೨–೫೫ ೨೨. ಪಂಭಾ ೧೦–೨೨

೨೩. ಪಾಂಡವನನ್ನು ಕೊಲ್ಲುವುದಿಲ್ಲವೆಂಬ ನಿರ್ಧಾರಮಾಡಿದ ಕರ್ಣನು, ದ್ರೋಣರ ತರುವಾಯ ಸೇನಾಪತಿ ಪದವನ್ನಾದರೂ ಸ್ವೀಕರಿಸದೆ ಇದ್ದರೆ ಸರಿಯಾಗುತ್ತಿತ್ತು. ಅಶ್ವತ್ಥಾಮನನ್ನು ಹಿಂದಿಕ್ಕಿ ತಾನೇ ವೀರಪಟ್ಟವನ್ನು ಕಟ್ಟಿಸಿಕೊಂಡನು. ಪ್ರಾಮಾಣಿಕವಾಗಿ ಅರ್ಜುನಾದಿಗಳನ್ನು ಸಂಹರಿಸಿಯೇ ಬಿಡುವೆನೆಂದು ಸನ್ನದ್ಧನಾದ ಅಶ್ವತ್ಥಾಮನಿಗೇ ಸೇನಾಪತಿ ಪದವನ್ನು ಬಿಟ್ಟಿದ್ದರೆ ನಿಜವಾಗಿಯೂ ದುರ್ಯೋಧನನ ಕಲ್ಯಾಣಕರ್ತನೆಂದು ಹೇಳಬಹುದಾಗಿತ್ತು.— ತಾನು ಮೊದಲೆ (ಅನಿವಾರ್ಯನಾಗಿ ಪ್ರವಾಹಪತಿತನಾಗಿ) ವಚನದ ಕಟ್ಟಿನಲ್ಲಿ ಸಿಕ್ಕು ಬಿದ್ದುದರಿಂದ ಆ ಮಾತನ್ನು ದುರ್ಯೋಧನನಿಗೆ ತಿಳಿಸಿ, ಅಶ್ವತ್ಥಾಮನಿಗೇ ಸೇನಾಪತಿಯನ್ನು ಮಾಡಲು ತನ್ನ ಒಪ್ಪಿಗೆ ಕೊಟ್ಟಿದ್ದರೆ ಕರ್ಣನು ಪ್ರಾಮಾಣಿಕ ಸತ್ಯವಂತನೆಂಬ ಹೊಗಳಿಕೆಗೆ ತಕ್ಕವನಾಗುತ್ತಿದ್ದನು.
(ಶಂ. ಬಾ. ಜೋಶಿ : ಕರ್ಣನ ಮೂರು ಚಿತ್ರಗಳು, ಪು. ೩೨)

ಮೀರಿ 'ನನ್ನಿಕಾರ'ನಾಗಿ ಬೆಳೆದು 'ಪೂಜ್ಯ'ರ ಸಾಲಿನಲ್ಲಿ ನಿಲ್ಲುವನೆಂದು ಹೇಳಲಿಕ್ಕೆ ಪಂಪ ಭಾರತದಲ್ಲಿ ಮಾತ್ರ ತಕ್ಕ ಪುರಾವೆಗಳು ಅಷ್ಟಾಗಿ ಸಿಗುವುದಿಲ್ಲ. ಜಾತಿ ಹೀನತೆಯಿಂದಾಗಿ ತನಗೆ ಗೌರವ ಸಿಗದಿದ್ದುದಕ್ಕೆ ಅಧೀರತೆಯ-ಆಡಂಬರದ ವ್ಯಕ್ತಿಯಾಗಿ, ಜಾತಿವಂತನೆಂದು ಗೊತ್ತಾದ ಮೇಲೆ ಹತಾಶನಾಗಿ ಉದ್ದಕ್ಕೂ ಅತಿರೇಕ ಕ್ರಿಯೆ, ತಪ್ಪು ತೀರ್ಮಾನ, ಉದ್ರಿಕ್ತ ಮಾತುಗಳಿಂದ ಬೆಳೆದುನಿಂತ ಅವನ ತ್ಯಾಗ ಗುಣ ಅವನಿಗೆ ಉರುಲಾಗಿ.[೧೪] ಅವನ ಸ್ವಾಮಿನಿಷ್ಠೆ ಅವನ ಒಡೆಯನಿಗೆ ನಿಷ್ಪ್ರಯೋಜಕವಾಗಿ ಪರಿಣಮಿಸುತ್ತವೆ. ಆದುದರಿಂದ ಮೂಲಭಾರತದ ಹೊರ ಚೌಕಟ್ಟನ್ನು ಮುರಿಯದೆ, ಒಳಗಿನ ಕರ್ಣಪಾತ್ರವನ್ನು ಉದಾತ್ತೀಕರಿಸುವ ಪ್ರಯತ್ನದಲ್ಲಿ ಪಂಪ ವಿಫಲನಾಗಿರುವನೆಂದೂ, "ನನ್ನಿಯೊಳಿನತನಯಂ" ಎಂಬ ಮಾತನ್ನು ಸೀರಿಯಸ್ಸಾಗಿ ಹೇಳಿದ್ದರೆ ಪಂಪನ ತಪ್ಪು, ಸೀರಿಯಸ್ಸಾಗಿ ಭಾವಿಸಿದರೆ ನಮ್ಮ ತಪ್ಪು ಎಂದೂ ಹೇಳಬೇಕಾಗುತ್ತದೆ.[೧೫]

---

೧೪. "ಕರ್ಣನ ಚಾಗ" ಆದರ್ಶವೇ? 'ದೇಶಕಾಲ ಪಾತ್ರಗಳ ವಿವೇಕವಿಲ್ಲದೆ ಮನಬಂದಂತೆ ಕೊಡುವ ದಾನ ಹೀನದಾನ, ತಾಮಸದಾನ' (ಶಂ. ಬಾ. ಜೋಶಿ : ಕರ್ಣನ ಮೂರು ಚಿತ್ರಗಳು. ಪು. ೩೪)

೧೫. ಈ ಲೇಖನ ಬರೆದು ವಿಚಾರ ಸಂಕಿರಣದಲ್ಲಿ ಓದಿ ಮುಗಿಸಿದ ನಂತರ ಡಾ. ಶಂ. ಬಾ. ಜೋಶಿ ಅವರ "ಕರ್ಣನ ಮೂರು ಚಿತ್ರಗಳು" ಕೃತಿ ನನ್ನ ಗಮನಕ್ಕೆ ಬಂದಿತು. ಬಹಳಷ್ಟು ಕಡೆಗೆ ಅವರ-ನನ್ನ ಅಭಿಪ್ರಾಯಗಳು ಒಂದೇ ಬಗೆಯಾಗಿರುವುದರಿಂದ ಅವುಗಳನ್ನು ಅಲ್ಲಲ್ಲಿ ಅಡಿ ಟಿಪ್ಪಣಿ ಮೂಲಕ ಕೊಡಲಾಗಿದೆ.

ಗಂಡಿನೊಳ್ ಭೀಮಸೇನಂ

ಎಸ್. ಎಂ. ವೃಷಭೇಂದ್ರಸ್ವಾಮಿ

ವಿಶೇಷಾರ್ಥದಲ್ಲಿ ಸಾಹಿತ್ಯ ಸತ್ತವರ ಕಥೆ–ಅಂದರೆ ಮಾನವರ ಕಥೆ, ಮಾನವೀಯ 'ಕರ್ಮದ ಕತ್ತಲೆ'ಯಲ್ಲಿ ತೊಳಲಾಡುವವರ ಕಥೆ, ಮಾನವೀಯ ಸಂಘರ್ಷದ ಚಿತ್ರ, ತತ್ಕಾರಣವಾಗಿಯೇ ಎಲ್ಲ ಕಾಲದ ಮಾನವರಿಗೆ 'ಪ್ರಿಯ' ವಾಗುವ ಕಥೆ; ಅದು ಲೋಕ ಹಾಗೂ ಲೌಕಿಕದ ವ್ಯಾಖ್ಯಾನ ಹಾಗೂ ಆಖ್ಯಾನ. ಮಹಾಕವಿಗಳು ಈ ಲೋಕವ್ಯಾಪಾರದ— ಅಂದರೆ ಸಾವು–ಬದುಕು, ನೋವು–ನಲಿವು, ಸಾಧನೆ–ಸಿದ್ಧಿಗಳ ಮೂಲ–ಚೂಲಗಳ ಸಂಕೀರ್ಣತೆಯ ಅನ್ವೇಷಕರೂ, ಶಾಶ್ವತ "ಮೌಲ್ಯ"ಗಳ ಉನ್ಮೇಷಕರೂ ಆಗಿದ್ದಾರೆ. ಪಂಪ ಇಂಥ 'ಲೋಕ ಲೌಕಿಕ'ವನ್ನು ಚಿತ್ರಿಸಿದ– ಅಷ್ಟೇ ಅಲ್ಲ ಅದನ್ನು 'ಬೆಳಗಿದ' ಕವಿ, ಬೆಳೆಯಿಸಿದ ಕವಿ. ಆತನ 'ಭಾರತ' ಸಮಕಾಲೀನವಾದಂತೆ, ಸಾರ್ವಕಾಲೀನವೂ ಆದ ಕೃತಿ. 'ಮೂಲ ವ್ಯಾಸಭಾರತ'ಕ್ಕೆ ದೇಶೀಯ ಭಾಷೆಗಳ ಪ್ರಥಮ ವಿಮರ್ಶೆ, ವ್ಯಾಖ್ಯಾನವಂತೆ ಈ ಪಂಪನ 'ಭಾರತ'[೧]– ಅದು ಹತ್ತನೆಯ ಶತಮಾನದ ಕನ್ನಡ ಮನಸ್ಸಿನ ಪ್ರತಿಕ್ರಿಯೆ, ಪತಿಧ್ವನಿ, ಪ್ರತಿಸೃಷ್ಟಿ, ಕಥೆ–ಪಾತ್ರ–ಘಟನೆಗಳ 'ಸಂಗ್ರಹ'ದ ಪ್ರತಿಧ್ವನಿ, ಮಾನವೀಯತೆಯ ಔಚಿತ್ಯ–ಅನೌಚಿತ್ಯದ 'ಪ್ರತಿಕ್ರಿಯೆ'– ತತ್ಕಾರಣವಾಗಿ– ಮಾನವತೆಯ ಉತ್ಕರ್ಷದ 'ಪ್ರತಿಸೃಷ್ಟಿ'– ಅದೇ ಪಂಪ ಬೆಳಗಿದ 'ಲೌಕಿಕ' ಅದೇ ಅವನ 'ಜೀವನದರ್ಶನ'. 'ಮಾನವ್ಯ ಜೀವನದ 'ದರ್ಶನ'ವೂ ಅಹುದು, ಅಚ್ಚ–ಹಸಿ ಮಾನವನಾದ ಪಂಪನ ಜೀವನ ಧರ್ಶನದ 'ಪ್ರದರ್ಶನ'ವೂ ಅಹುದು;[೨] ಮಾನವ ಸಹಜ ಭಾವ–ಭಾವನೆಗಳ, ಕ್ರಿಯೆ–ಪ್ರತಿಕ್ರಿಯೆಗಳ, ಮಾನವ ಪ್ರಯತ್ನ – ವಿಧಿಯ ಪ್ರಭಾವ–ದೈವ

೧. 'ಪಂಪ, ವ್ಯಾಸ–ವಾಲ್ಮೀಕಿಗಳಾದ ನಂತರದ ಸಮರ್ಥಕವಿ'— (ಸುಜನಾ) ಪು. ೧೭೯

೨. ಪಂಪನ ವ್ಯಕ್ತಿತ್ವದಲ್ಲಿ ಲೌಕಿಕ–ಆಗಮಿಕ ಎಂಬ ಪ್ರತ್ಯೇಕತೆ ಇದೆ— ಅದರ ಸಮರಸ ದೃಷ್ಟಿಯಿಲ್ಲ. ಅದು Split Personality– ಕಾರಣ 'ಜೀವನ ಪ್ರಜ್ಞೆಯ ಅನಿಶ್ಚಿತ' ಅನುಭವ–ಅಭಿವ್ಯಕ್ತಿ 'ಇಡಿ'ಯಾಗಿಲ್ಲ ಎನ್ನುತ್ತಾರೆ ಶ್ರೀ ಜಿ. ಎಚ್. ನಾಯಕ (ಪು. ೨೧೩–೨೭೯). ವೈಚಾರಿಕವಾಗಿ ನಮ್ಮನ್ನು 'ನಂಬಿಸುವ' ಮಾತಾದರೂ–ಪಾಶ್ಚಾತ್ಯ ವಿಮರ್ಶೆಯ ದೃಷ್ಟಿಕೋನವಾದರೂ, ಈ 'ಆಗಮಿಕ' – 'ಲೌಕಿಕ'ಗಳನ್ನು ಒಂದರೊಡನೊಂದನ್ನು ಬೆರೆಯಿಸದೆ ಕಾವ್ಯ ನಿರ್ಮಿತಿ ಮಾಡಬಲ್ಲ 'ಕಲಾಪ್ರಜ್ಞೆ'ಯನ್ನು ಗುರುತಿಸಲಾರದಷ್ಟು 'ಪರಕೀಯ'ವೇ ಈ ನಾಯಕರ ವಿಮರ್ಶಾಪ್ರಜ್ಞೆ. ಪಂಪನ 'ಸಂಸ್ಕೃತಿ ದರ್ಶನ' ಕಾಣುವುದಿಲ್ಲವೇ ಇವರಿಗೆ ? 'ಆದಿಪುರಾಣ'ದಲ್ಲಿ 'ಜಿನಾಗಮ ಸಂಸ್ಕೃತಿ' ಭಾರತದಲ್ಲಿ 'ಕನ್ನಡ ಸಂಸ್ಕೃತಿ' ಚಿತ್ರವಿದೆ.

ಕೃಪೆಗಳ 'ಸಂಕೀರ್ಣ' ಬದುಕಿನ ನಿದರ್ಶನ ಈ ಪಂಪ ಭಾರತ. ಈ 'ದರ್ಶನ'ಕ್ಕೆ ಮಹಾಭಾರತದ ಕಥೆ ಸಮರ್ಥವಾದ 'ವಸ್ತು ಪ್ರತಿರೂಪ'- ಅರಿಕೇಸರಿಯ ಪರಾಕ್ರಮ- ವೈಭವಗಳ ಸಮಕಾಲೀನ ರಾಜಕೀಯ ಇತಿಹಾಸವೂ ಇಂಥ ಸಮರ್ಥ ವಸ್ತು ಪ್ರತಿರೂಪವಾಗಲಾರದು. ಕಾರಣ, ಪಂಪ ಅದನ್ನು ಸಮೀಕರಿಸಿದ್ದಾನೆ, ಪರ್ಯಾಯವಾಗಿ ಪ್ರಸ್ತಾಪಿಸಿದ್ದಾನೆ. ಪಂಪನ ಪರಿಸರದ ಬೇರುಗಳನ್ನು ಹುಡುಕಿ, ವ್ಯಕ್ತಿತ್ವದ ನಿಷ್ಠೆ- ನಂಬಿಕೆಗಳನ್ನು ಗುರುತಿಸಿ, ಪರಂಪರೆಯ ಪ್ರಭಾವ ಹಾಗೂ ಪರಂಪರೆಯ ನಿರ್ಮಾಣ ಶಕ್ತಿಯನ್ನು ಅರಿತು, ಕವಿಯ ಬಾಯಿಗೆ ಬಾಯಿ ಹಚ್ಚಿ, ಹೃದಯ ಮಿಡಿತಕ್ಕೆ ಕಿವಿಗೊಟ್ಟು, ಕಣ್ಣಲ್ಲಿ ಕಣ್ಣಿಟ್ಟು, ಸ್ಫೂರ್ತಿಯ 'ಮೂಲ ಸೆಲೆ'ಯ ನೆಲೆಯನ್ನರಿತು ಕೃತಿಯನ್ನು ವಿಮರ್ಶಿಸುವ ಸಹೃದಯ ವ್ಯಾಪಾರ, ಸಾರ್ಥಕ ಹಾಗೂ ಸ್ವಾಗತಾರ್ಹ 'ವಿಮರ್ಶೆ' ಎಂದಿದ್ದೇನೆ 'ಪ್ರಶಸ್ತಿ' ಎನ್ನುವುದಿಲ್ಲ. ಆ ದೃಷ್ಟಿಯಿಲ್ಲದ ಜಾಣತನದ ಪ್ರದರ್ಶನದ ವಿಮರ್ಶೆ-ಪಂಪನೆಂದಂತೆ ಕೈಗಳ ಕೇಡು – ಅರ್ಥದ ಕೇಡು- 'ಬೀಗಿ ಪೊಟ್ಟಳಿಸಿ ನೆಗಟ್ಟಿಗಾಟಿಸುವ ವ್ಯರ್ಥ ಪ್ರಯತ್ನ. ಪಂಪನನ್ನು ಕುರಿತ 'ಸಮಗ್ರ ವಿಮರ್ಶೆ'— ಮುಳಿಯ – ಡಿ. ಎಲ್. ಎನ್‌ರ ನಂತರ- ಮಾಡಬಲ್ಲ ಎದೆಗಾರರಿಗೆ ಆಹ್ವಾನ ತೆರೆದಿದೆ, ತೆರವಾಗಿದೆ. ವಿಮರ್ಶಕನ ಕೆಲಸ, ಸಾಹಿತ್ಯಕೃತಿಯ 'ಅನಾ- ವರಣ'- ಮೂಲೋತ್ಪಾಟನದ್ದಲ್ಲ, **un** ಆವರಣದ್ದಲ್ಲ.

ಪಂಪ ವಿಕ್ರಮಾರ್ಜುನ ವಿಜಯವನ್ನು ಮುಗಿಸಿ, ತನ್ನ ಸಾಧನೆಯ ಸಿಂಹಾವಲೋಕನ ಮಾಡಿದಾಗ, ಕವಿ ಪ್ರಜ್ಞೆಯಲ್ಲಿ ಸುಸ್ಥಾಪಿತವಾಗಿ ನಿಂತಿರುವ 'ಮಹಾಪಾತ್ರ' ಗಳನ್ನು ಎಣಿಸಿ-ಗುಣಿಸಿರಬೇಕು- ಕಾವ್ಯದುದ್ದಕ್ಕೂ ಜೀವಂತವಾಗಿದ್ದ 'ಪಕ್ಷಪಾತ' ಪ್ರಜ್ಞೆಯನ್ನು ಹಿಂದಿಟ್ಟು, ಸಹೃದಯ ಸ್ಫುರಣವನ್ನೇ ಮುಂದಿಟ್ಟು ಬರೆದಿರಬೇಕು- ಈ ಪಾತ್ರ ಪ್ರತಿಮಾಗೃಹ ಸೂತ್ರವನ್ನು.

ಚಲದೊಳ್ ದುರ್ಯೋಧನಂ, ನನ್ನಿಯೊಳಿನತನಯಂ, ಗಂಡಿನೊಳ್
ಭೀಮಸೇನಂ ।
ಬಲದೊಳ್ ಮದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಂ ಚಾಪ ವಿದ್ಯಾ ।
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ
ಧರ್ಮದೊಳ್ ನಿ ।
ರ್ಮಲ ಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕ ಪೂಜ್ಯಂ॥

ಪಂಪ ಈ ಹೇಳಿಕೆಯಲ್ಲಿ 'ಭಾರತವನ್ನು ಲೋಕಪೂಜ್ಯವಾಗಿಸಿದ ಎಲ್ಲ ಪಾತ್ರಗಳನ್ನೂ ನೆನೆಯುವುದಿಲ್ಲ,— ಕೃಷ್ಣನಿಲ್ಲದ, ದ್ರೌಪದಿಯಿಲ್ಲದ ಭಾರತವನ್ನು—ಪಂಪ ಭಾರತ ವನ್ನೂ ಕಲ್ಪಿಸಲು ಸಾಧ್ಯವಿಲ್ಲ. ಅಲ್ಲದೆ ಈ ಪಾತ್ರಗಳ ಪಟ್ಟಿಯಲ್ಲಿ ಕ್ರಮವಿಲ್ಲ- ಅನುಕ್ರಮವಿಲ್ಲ. ಅಂದರೆ **Ranking** ಇಲ್ಲವೇ ಇಲ್ಲ. 'ವಿಕ್ರಮಾರ್ಜುನ ವಿಜಯ'ದ ಸನ್ನಿವೇಶದಲ್ಲಿ ನಿಂತು ವಿಚಾರ ಮಾಡಿದರಂತೂ ಈ ಸ್ಥಾನ-ಮಾನಕ್ರಮ ಸಂಪೂರ್ಣ ಪರಕೀಯ, ಎಂಥ ಚಲಗಾರನಾದರೂ, ದುರ್ಯೋಧನನಿಗೆ ಪ್ರಥಮ **Rank** ಕಲ್ಪನಾ

ತೀತ—'ಕರ್ಣ' ನಾಗಿದ್ದರೆ, ಭೀಷ್ಮನಾಗಿದ್ದರೆ, ಧರ್ಮಜನೇ ಆಗಿದ್ದರೂ-ಆಗಬಹುದಿತ್ತು. ಅರ್ಜುನನ ಸಾಹಸದ ಮಹಿಮೆಯನ್ನು ಸರಿಸುಮಾರು ಕಡೆಗಳಿಕ್ಕೆ ತಳ್ಳಿದ್ದನ್ನು ಮೆಚ್ಚಿದರೂ- ಅದು ಒಟ್ಟು ಕಾವ್ಯಧೋರಣೆಗೆ ಪ್ರತಿರೋಧವನ್ನೊಡ್ಡಿದರೂ- ಪಂಪನ ಈ ಪಾತ್ರ ಸ್ಥಾನ-ಮಾನ ಸರಿಯೆಂದು ವಾದಿಸುವುದು 'ಸಾಹಸ'ದ ಮಾತೇ. ಆದರೆ, ಆಯಾ ಪಾತ್ರಗಳ ಗುಣ-ಶೀಲಗಳ ಸಂಕ್ಷಿಪ್ತ labeling ಮಾತ್ರ ಮೆಚ್ಚುವಂಥದು, ಪ್ರಶ್ನಾತೀತವಾದುದು. ಪಂಪನ ಸಂಗ್ರಹಶಕ್ತಿ, ಹಿತ-ಮಿತ ವ ತಿ ಈ ಪಾತ್ರಗಳನ್ನು ಇದಕ್ಕಿಂತಲೂ ಹೆಚ್ಚು ರಸಭಟ್ಟಿ (Concentration) ಇಳಿಸಲು ಸಾಧ್ಯವಲ್ಲ. ಅಷ್ಟೇ ಅಲ್ಲದೆ 'ಮಹಾಭಾರತವೆಂಬ ಮಾನವ ಸಂಘರ್ಷ'ದ ಮೂಲ ಕಾರಣಗಳಾದ —ಛಲ, ನನ್ನಿ, ಗಂಡು, ಬಲ, ಅತ್ಯುನ್ನತಿ. ವಿದ್ಯಾಬಲ, ಸಾಹಸ, ಧರ್ಮಗಳ ಪ್ರಾತಿನಿಧಿಕ ಪಟ್ಟಿಯೆಂದು ಗಮನಿಸಿದರೆ, ಪಂಪನ ಈ ಹೇಳಿಕೆಯನ್ನು— (ಅಲ್ಲಿಯೂ ಈ ಗುಣಗಳ ತಾರತಮ್ಯವನ್ನಲ್ಲ!) ಸಮರ್ಥಿಸಬಹುದು. ಇದು ಪಂಪ ಭಾರತದ ಮುಖ್ಯ ಪಾತ್ರಗಳ ಸಧ್ಯಃಸ್ಫೂರ್ತಿಯ ಕಲಾಪ್ರಜ್ಞೆಯ ಉದ್ಗಾರವೆಂದೂ ಅರ್ಥಮಾಡಬಹುದು.- ಇವುಗಳಿಗಿರುವ ಖಚಿತವಾದ 'ಅರ್ಥ' ಪಂಪನ ಪ್ರಯೋಗಗಳಲ್ಲಿಯೇ ಇದೆ.[೩] ಬೇರೊಂದು ಬಗೆಯ ಜಾಣತನದ ಅತ್ಯಾಧುನಿಕ ವ್ಯಾಖ್ಯಾನ ಅನೌಚಿತ್ಯವಷ್ಟೇ ಅಲ್ಲ, ಕಾವ್ಯವನ್ನು ಅರ್ಥೈಸುವಲ್ಲಿ 'ಅಪ್ರಾಕೃತ'. ಈ 'ಗುಣ'ಗಳು ಪಂಪನ ಕಾಲದ 'ಕ್ಷಾತ್ರಯುಗ'ದ ಒಪ್ಪಿತವಾದ ಮೌಲ್ಯಗಳು, ಪಂಪನಿಗೂ ಮೆಚ್ಚುಗೆಯಾದ ಮಾನವೀಯ ಆದರ್ಶಗಳು ಎಂಬುದನ್ನು ನೆನೆದರಂತೂ, ಸಹೃದಯ ರಸನೆಗೆ ಸೀರೂರುತ್ತದೆ, ಪಂಪ ಭಾರತದಲ್ಲಿಯಂತೂ ಇದು ವ್ಯಕ್ತವಾಗಿ-ಅವ್ಯಕ್ತವಾಗಿ ಚಿತ್ರಿತವಾಗಿದೆ. ಕಾವ್ಯದ ಕೊನೆಯಲ್ಲಿ ಪಂಪನೇ ಹೇಳುವ ತನ್ನ ಕಾವ್ಯ ಪ್ರಯೋಜನ, ಹಾಗೂ ಅಭ್ಯಾಸ ದೃಷ್ಟಿಯನ್ನು ಅಳಿಸುವ ಪದ್ಯದಲ್ಲಿ ಈ ಲೌಕಿಕ ಪ್ರಯೋಜನವೇ ಎದ್ದು ನಿಂತಿದೆ. ಈ ಕಾವ್ಯದಿಂದ "...ತನ್ನಿಷ್ಟಮಪ್ಪನ್ನಮುತ್ತರ ಮಕ್ಕುಂ ಧೃತಿ, ತುಷ್ಟಿ, ಪುಷ್ಟಿ, ವಿಭವಂ, ಸೌಭಾಗ್ಯ- ಇಷ್ಟಾಂಗನಾ ಸುರತಂ-[೪] ಕಾಂತಿ- ಶಾಂತಿ- ವಿಭವಂ-ಭದ್ರಂ-ಶುಭಂ- ಮಂಗಳಂ" "ಪಂಪನ ಹಿತ-ಮಿತ ವಾಗ್ವಿಲಾಸವನ್ನು ಗಮನಿಸಿ ಈ ಆಶಯದ ಅರ್ಥವನ್ನು ನಿರ್ಣಯಿಸಬೇಕು. ಪಂಪ ಇಲ್ಲಿಯೂ ಮಾನವೀಯತೆಯನ್ನೇ ವಿಜೃಂಭಿಸುತ್ತಾನೆ, ಮಾನವತ್ವವನ್ನು ವೈಭವೀಕರಿಸುತ್ತಾನೆ. ಪಂಪನ 'ಕಾವ್ಯಶಿಲ್ಪ'ದ ಸಮಗ್ರತೆಯನ್ನು — ಪಾಕ್ಷಿಕವಾಗಿಯಲ್ಲ,

---

೩ ಈ ಗುಣಗಳಿಗೆ ಪಂಪನೇ ಹೇಳುವ ಅರ್ಥವನ್ನು ಗಮನಿಸಿದರೂ. ಇವೆಲ್ಲ Mutually Exclusive ಅಲ್ಲ Over-lapping ಇದ್ದೇ ಇದೆ. ಕಾರಣವಿಷ್ಟೇ – ಮಾನವ ಹಲವು ಗುಣಗಳ ಸಂಗಮ. ಅವರಲ್ಲಿ ಎದ್ದು ಕಾಣುವುದು ಒಂದೋ-ಎರಡೋ ಮುಖ್ಯ ಗುಣಗಳು.

೪. 'ಇಷ್ಟಾಂಗನಾ ಸುರತಂ' ಈ ಮಾತನ್ನು, ಈ ಮೌಲ್ಯವನ್ನು ರಸಿಕನಾದ 'ಧಾತ್ರೀವಳಯ ನಿಳಿಂಪನಾದ, ಪಂಪನ ಸಂದರ್ಭದಲ್ಲಿ ಲೌಕಿಕ ಕಾವ್ಯ ಸಂದರ್ಭದಲ್ಲಿ Serious ಆಗಿ ಪರಿಭಾವಿಸಬೇಕು !

ಪಕ್ಷಪಾತಿಯಾಗಲ್ಲ,– ಕಟ್ಟಿ ಕಾಣಬೇಕು, ಬಿಚ್ಚಿ ಮನಗಾಣಬೇಕು. ಕವಿಯು ಕಣ್ಣು– ಸಹೃದಯನ ಕಣ್ಣೂ ಆಗಬೇಕು.

ಚಲದೊಳ್ ದುರ್ಯೋಧನಂ, ನನ್ನಿಯೊಳಿನತನಯಂ, ಗಂಡಿನೊಳ್ ಭೀಮಸೇನಂ ..'– ಇಷ್ಟಕ್ಕೆ ನಿಲ್ಲೋಣ. ಭೀಮನನ್ನು ಗಮನಿಸದೆ ಮುಂದುವರಿದರೆ, ಅವನ 'ಗದೆ' ನಮ್ಮೆದೆಗೆ ಸಿದ್ಧವಾಗಿಯೇ ಇರುತ್ತದೆ. ಕವಿಯೂ–ಕಲಿಯೂ ಆದ ಪಂಪ ಭಾರತವೀರರನ್ನೆಲ್ಲ – ಅವರ ಸಾಹಸಗಳನ್ನೆಲ್ಲ ಅನ್ಯಾದೃಶವೆಂಬಂತೆ ಚಿತ್ರಿಸಿದ್ದಾನೆ. ವಿಕ್ರಮಾರ್ಜುನನಿಗೇ ವಿಶೇಷ 'ಒಲವರ' ತೋರಿದ ಪಂಪ ಹಲವು ಅನೌಚಿತ್ಯಗಳಿಗೆಡೆ ಮಾಡಿದ್ದರೂ, ಮೂಲ ಭಾರತದ ಪಾತ್ರಗಳ ಮೂಲ ಆಶಯವನ್ನು ಬದಲಿಸಿಲ್ಲ, ಆದರೆ, ವಿವರಗಳನ್ನು ಸಂಕ್ಷಿಪ್ತಗೊಳಿಸುವಲ್ಲಿ, ಸ್ವಭಾವವನ್ನು ಸುಧಾರಿಸುವಲ್ಲಿ, ಅವರ ವರ್ತನೆಗಳನ್ನು ಕನ್ನಡ ಸಂಸ್ಕೃತಿಗೆ ಅಳವಡಿಸುವಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಾಧಿಸಿಯೂ – ಮೂಲದ ಚಿತ್ರಣವನ್ನು ಸಂಕ್ಷಿಪ್ತಗೊಳಿಸಿ ಹಲವು ರಸಸ್ಥಾನಗಳನ್ನು ಕಳೆದುಕೊಂಡಿದ್ದಾನೆ, ಅನೇಕ ನೂತನ ಸಾಧನೆಗಳನ್ನೂ ಮಾಡಿದ್ದಾನೆ. ಸಮಗ್ರವಾಗಿಯಲ್ಲದಿದ್ದರೂ, ಭೀಮನ ಪಾತ್ರಚಿತ್ರಣದಲ್ಲಿಯೇ ಇದನ್ನು ಕಾಣಬಹುದು. ಏಕ ಪ್ರವೃತ್ತಿಯ ಹಲವು ಪಾತ್ರಗಳು, ಹಲವು ಸ್ವಭಾವದ ಅನೇಕ ಪಾತ್ರಗಳು, ಹಲವಾರು ಸಂದರ್ಭ ಸನ್ನಿವೇಶಗಳ ವರ್ಣನೆ ಮುಂತಾದ ಅಂಶಗಳಲ್ಲಿ 'ಪಂಪ'ನ 'ಮನ ಮಾನಸೋತ್ತಂಸ ಹಂಸ' ತನವನ್ನೇ ಕಾಣುತ್ತೇವೆ. ಅವನ ದಾರಿ, ಮುಂದಿನವರಿಗೆ 'ಹೆದ್ದಾರಿ'ಯಾಯಿತು. ೫

ಭಾರತದ ಪಾತ್ರಗಳಲ್ಲೆಲ್ಲ ಹೆಚ್ಚು ಮಾನವೀಯ–ಕರ್ಣನ ನಂತರ–ಭೀಮನದೇ. ಭೀಮ ಅಸಹಾಯ ಶೂರನಾದುದು, ತನ್ನ ಸ್ವಸಹಾಯ ಶೂರತ್ವದಿಂದಲೇ. ಅವನು ಕ್ಷಾತ್ರಶಕ್ತಿಯ ವಿಶೇಷ ಪ್ರತಿನಿಧಿ, ಛಲದಂಕಮಲ್ಲ, ದುರ್ಯೋಧನನಂತೆ, ನನ್ನಿ – ಎಂದರೆ ಸ್ವಾಮಿಭಕ್ತಿ ಹಾಗೂ ನುಡಿದಂತೆ ನಡೆವ ಗುಣದಲ್ಲೂ ಕರ್ಣನಂತೆ, ಲೋಕಪೂಜ್ಯ ಪಾತ್ರ. ಮಾನವ ಸ್ವಭಾವದ ಹಸಿಸ್ವಭಾವ, ಪರಾಕ್ರಮದ ಕರ್ಕಶ ಪ್ರವೃತ್ತಿ, ಶೀಘ್ರಕೋಪ, ಶೀಘ್ರ ಪ್ರಲೋಭನೆಗೊಳಗಾಗಬಲ್ಲ ಸ್ವಭಾವ, ಅನ್ಯಾಯವನ್ನು – ವಿರೋಧಗಳ ಎದುರೂ –ಪ್ರತಿಭಟಿಸುವ ಧೀರ ಪಾತ್ರ ಭೀಮನದು. ಅರ್ಜುನನ ವೈಯಕ್ತಿಕ ಸಾಹಸ ಹಾಗೂ ಪಾಂಡವರಿಗೆ ಹೊರತಾದ ಕೆಲವು ಸನ್ನಿವೇಶ

---

೫. ಅರ್ಜುನ ಪಕ್ಷಪಾತಿ ಪಂಪಭಾರತದ ಮೊಟ್ಟಮೊದಲ ದಿಟ್ಟ ವಿಮರ್ಶೆ ರನ್ನನದು. ವಿಕ್ರಮಾರ್ಜುನ ವಿಜಯದಲ್ಲಿ ಭೀಮ–ದ್ರೌಪದಿಯರಿಗಾದ 'ಅನಾದರ'ದ ಅನೌಚಿತ್ಯವನ್ನು ಪ್ರಶ್ನಿಸಿ 'ಸಾಹಸಭೀಮ ವಿಜಯ'ವನ್ನಾಗಿಸಿದ. ಈ ನುಡಿಗಟ್ಟನ್ನೂ, ವಸ್ತು, ಭಾಷೆ, ವರ್ಣನೆಗಳನ್ನು ಪಂಪನಿಂದ ಅನಾಮತ್ತಾಗಿ ಎತ್ತಿಕೊಂಡು, ಕಾವ್ಯ ಬರೆದು, 'ಪರೀಕ್ಷಿಪ ಗೆಂಟಿರ್ದೆಯೇ' ಎಂದು 'ಬಳೆಗಾರ ಮರ್ಯಾದೆ' ಮಾಡಿಕೊಂಡಿದ್ದಾನೆ ರನ್ನ. ಆದರೂ, ಅಲ್ಲಿ ಭೀಮನ ನಾಯಕ ಪಟ್ಟಕ್ಕೆ ಚ್ಯುತಿಯಿಲ್ಲ, ದುರ್ಯೋಧನ ಪಾತ್ರ ಅನುಕಂಪವನ್ನುಕ್ಕಿಸಿದರೂ, ಸಾಹಸ ಭೀಮ–ಭೀಷ್ಮವಾಗಿಯೇ ನಮ್ಮಲ್ಲಿ ಉಳಿಯುತ್ತಾನೆ.

ಗಳಲ್ಲಿ ಬಿಟ್ಟರೆ, ಭಾರತ ಕಥೆಯ ಆಳ-ಅಗಲಕ್ಕೂ ಹರಿದಾಡುತ್ತಾನೆ ಭೀಮ. ತನ್ನ ಪರಾಕ್ರಮದಿಂದ, ಕಷ್ಟದಲ್ಲಿ ಸಿಲುಕಿದ ಪಾಂಡವರನ್ನು ರಕ್ಷಿಸುವಂತೆ, ಸಂಕಷ್ಟದಲ್ಲಿ ಸಿಲುಕಿದ ಬ್ರಾಹ್ಮಣರನ್ನೂ ರಕ್ಷಿಸುತ್ತಾನೆ. ಮಾನನಷ್ಟಕ್ಕೊಳಗಾದ 'ದ್ರೌಪದಿ'ಯನ್ನು ಅನೇಕ ಸಂದರ್ಭಗಳಲ್ಲಿ ರಕ್ಷಿಸಿ 'ಗಂಡುತನ'ವನ್ನೇ ಮೆರೆದಿದ್ದಾನೆ. ತನ್ನ ಗಂಡುತನದಿಂದ ಹಿಡಿಂಬನನ್ನು ಕೊಂದು,' ಗಂಡಗಾಡಿಗೆ ಹಿಡಿಂಬೆ ಮರುಳಾಗುವಂತಾಗಿ, ರಾಕ್ಷಸ–ಮಾನವವೀರ 'ಘಟೋತ್ಕಚನ' ಉದಯಕ್ಕೆ ಕಾರಣವಾಗುತ್ತಾನೆ. ಸ್ವಾರ್ಥಿಗಳಾದ, ಕುತಂತ್ರಿಗಳಾದ, ಅದಕ್ಕಿಂತ ಹೆಚ್ಚಾಗಿ 'ಅನಾಚಾರಿ'ಗಳಾದ ನೂರುಮಂದಿ ಕೌರವರನ್ನೆಲ್ಲ ಕೊಲ್ಲುವವನೇ ಭೀಮ. ಮಹಾಭಾರತ ಯುದ್ಧದಲ್ಲಿ ಅಸಹಾಯ ಶೂರನಂತೆ ತನ್ನ ಪರಾಕ್ರಮವನ್ನು ಮೆರೆದಿದ್ದಾನೆ. ದುಶ್ಶಾಸನನ ಕರುಳು ಕೀಳುವಲ್ಲಿ, ಕೌರವನ ತೊಡೆಮುರಿಯುವಲ್ಲಿ, ಪರಾಕ್ರಮ, ಸಾಹಸವಷ್ಟೇ ಅಲ್ಲ, 'ಗಂಡುತನ'ವನ್ನೇ ಮೆರೆದಿದ್ದಾನೆ, ಪ್ರಾಕೃತನಂತೆ ವರ್ತಿಸುತ್ತಾನೆ; ಅವನ 'ಪ್ರೀತಿ'ಯೂ ಅಷ್ಟೇ ನಿರ್ಭರ, ಭೀಮನ ವೈರವೂ ಅಷ್ಟೇ ಬರ್ಬರ – ಅಷ್ಟೇ ಭರ-ಭರಂ... ... ಮಹಾಭಾರತದ ಕಥೆಯನ್ನು ಯಾರೇ ಬರೆಯಲಿ ಇಷ್ಟು ಸಂಗತಿಗಳನ್ನು ಭೀಮನ ಬಗೆಗೆ ಬರೆಯಲೇ ಬೇಕು, ವರ್ಣಿಸಲೇ ಬೇಕು, ಮೂಲಭಾರತವೇ ಭೀಮನ ಪಾತ್ರಕ್ಕೆ ಈ 'ಚೌಕಟ್ಟ'ನ್ನು ಒದಗಿಸಿದೆ, ಈ 'ರೌದ್ರಭೀಕರತೆ'ಯನ್ನು ಸ್ಥಾಪಿಸಿದೆ. ಹಾಗಿದ್ದರೆ, ಹತ್ತನೆಯ ಶತಮಾನದ ವೀರಯುಗದ ಕನ್ನಡಿಗ ಪಂಪನ 'ಗೆಯ್ತ' ಏನು ? ಚಿತ್ರಣವೇನು ? ಪರೀಕ್ಷಿಸೋಣ.

ಭೀಮನ ವ್ಯಕ್ತಿತ್ವದ ಕೇಂದ್ರಬಿಂದು – 'ಗಂಡು'. ಪಂಪನ ಪರಿಸರದಲ್ಲಿ, ಕ್ಷಾತ್ರ ಜೀವನ ನೆಲೆಯಲ್ಲಿ ಈ ಮಾತಿನ ಅರ್ಥ ಪೌರುಷ – ಪರಾಕ್ರಮ ಅಷ್ಟೇ ಅಲ್ಲ ರನ್ನನ ಮಾತಿನಲ್ಲಿ 'ತುಱುಗೋಳೊಳ್, ಪೆಣ್ಬುಯ್ಯಲೊಳ್, ಎಱೆವೆಸದೊಳ್ ಗಂಡತನ ಮನೆ ನೆರಪದವಂ ಗಂಡನಲ್ಲಮೆಂತುಂ ಷಂಡಂ'. ಪಂಪ ಭಾರತದಲ್ಲಿಯೇ 'ಭೀಮಸೇನನವೋಲ್ ಪೂಣ್ದುದನೆಯ್ದೆ ಪೂಣ್ದ ಪಗೆಯಂ ಕೊಂಡಾಡದಂ ಗಂಡನೇ' (೧೩–೧೬೦) ಎಂದು ಜರಾಸಂಧಾರಿಯ 'ಗಂಡನಾತಂ' ಕೊಂಡಾಡುತ್ತಿದ್ದರು. 'ಪೊಗಳ್ದಿದಿನತನೂಜನ' 'ಗಂಡಂ' (೧೨–೨೧೬) 'ಪಾಂಚಾಳಿಯ ನೆಱೆವಟೇನಾದುದೋ 'ಗಂಡ ಪೇಟಿ' (೧೩–೭೭) 'ಗಂಡುಡಿಗೆ'– 'ಗಂಡಗರ್ವ' 'ಗಂಡನ ಗಂಡ' 'ಗಂಡುಗಾಡಿ' 'ಪಡೆಮೆಚ್ಚೆಗಂಡ' ಮುಂತಾದ ನೂರಾರು ಪ್ರಯೋಗಗಳಲ್ಲಿ 'ವೀರಯುಗದ ಆದರ್ಶ ಸಾಧನೆಯ ಪರಾಕ್ರಮ – ಸ್ವಾರ್ಥಸಾಧನೆಯ, ದಿಗ್ವಿಜಯ ಸಾಧನೆಯ ಪರಾಕ್ರಮವಲ್ಲ– ಹೆಣ್ಣಿಗೆ ಗಂಡಾಗುವ 'ಗಂಡುತನ'ವಲ್ಲ — ವಂಚನೆಯನ್ನು. ಸ್ವಾರ್ಥವನ್ನು ಲಾಲಸೆಯನ್ನು, ಅನೀತಿಯನ್ನು, ಅಹಂಕಾರದ ಕೋಡನ್ನು ಮುರಿವ 'ಧರ್ಮಯುದ್ಧ ಸಾಹಸ' ಪೂಣ್ಕೆಯನ್ನು ಪೂರೈಸುವ ಛಲ. ದುಷ್ಟರನ್ನು, ಲೋಕ ಕಂಟಕರನ್ನು 'ಕೊಂದು ಅಡಗಂ ತಿಂಬ' ಮಾನವೀಯ ಸಾಹಸವೇ 'ಗಂಡು'– ಅದೇ ಭೀಮಸೇನ 'ಗಂಡು'–ಗಂಡಗಾಡಿ–ಗಂಡ್‌ಗಂಡುತನ; ಮಹಾಭಾರತದಲ್ಲಿ

ವೀರರಿಗೇನೂ ಕೊರತೆಯಿಲ್ಲ, ಪಂಪನ ಅರ್ಜುನನ ಪರಾಕ್ರಮದೆದುರು ನಿಲ್ಲುವವರಾರು ? ಕರ್ಣ–ಭೀಷ್ಮ–ದ್ರೋಣರ ಪರಾಕ್ರಮ ಕಡಿಮೆಯದೆ ? ಅದನ್ನು 'ನನ್ನಿ'–ಉನ್ನತಿ–ಚಾಪವಿದ್ಯಾಬಲವೆಂದೂ, ಪಂಪ ಗುರುತಿಸಿದ್ದಾನೆ. ಪಂಪನ ದ್ರೋಣ–ಕೀಚಕವಧೆಯ ಸಾಹಸ ಕುರಿತು ತರ್ಕಿಸುವಾಗ

> ಇದು ದಲ್ ಚೋದ್ಯಂ, ಅತರ್ಕ್ಯಂ, ಅದ್ಭುತಂ, ಅಸಂಭಾವ್ಯಂ ವಿಚಾರಕ್ಕೆ
> ...ಸಂದ ಸಿಂಹಬಲನಂ ಕೊಲ್ವನ್ನರಾರ್ ಭೀಮನಲ್ಲವರ್' (೮–೮೪)

ಎಂದು ಹೇಳಿ, ಮಹಾಭಾರತ ಪ್ರಸಂಗದಲ್ಲಿ 'ಕೀಚಕ, ಭೀಮ, ಶಲ್ಯ, ಬಲದೇವರ್ಕಳ್ ತೋಳ್ವಲದೊಳ್ ಸಮಾನ'ರೆಂದು ಗುರುತಿಸಿದ್ದಾನೆ. ಅಲ್ಲದೆ, ಭೀಮನ ಈ ಗಂಡುತನವೇ ಪಾಂಡವರು ವಿರಾಟ ರಾಜ್ಯದಲ್ಲಿರುವ ಸುಳುವಿಗೆ ಮುಖ್ಯ ಕಾರಣವಾಗುತ್ತದೆ. ಈ ನಾಲ್ವರ ಸಾಧನೆಗಳನ್ನು ಕಂಡವೋಲಂತೂ, ಭೀಮನ ಗಂಡುತನ ಚೋದ್ಯಂ, ಅತರ್ಕ್ಯಂ, ಅದ್ಭುತಂ, ಅಲ್ಲದೆ '(ವಿರಾಟನ) ತುರುವಂ ಕೊಳ್ವಂ–ಅಂತು ತುಱುಗೊಂಡೊಡೆ ಪಾಂಡವರಿರ್ಪ ಗಂಡರೇ (೮–೮೯) ಎಂಬ ಕೌರವನ ಮಾತಿನಲ್ಲಿ ಪಾಂಡವರ 'ಗಂಡು'ತನವೂ ವ್ಯಕ್ತವಾಗಿದೆ. ಹೀಗೆ, ಪಂಪನ ಭೀಮ ಇಂಥ ಗಂಡು, ಕನ್ನಡ ಭೀಮ ಇಂಥ 'ಗಂಡು'.

ಧರ್ಮವೀರ, ದಯಾವೀರ, ದಾನವೀರ ಯುಗದ 'ಪ್ರತಿನಿಧಿ'ಯಾದ ಪಂಪ ಭೀಮಸೇನನ ಈ 'ಗಂಡ'ನ್ನು ಗಂಡುಮಾತುಗಳಿಂದಲೇ ಸಾದ್ಯಂತವಾಗಿ ಚಿತ್ರಿಸಿದ್ದಾನೆ. ಈ ಪಾತ್ರದ ಸಮಗ್ರ ವಿವೇಚನೆಗೆ ಕೈಹಾಕದೆ, (ಹೆದರಿ ಅಲ್ಲ, ನಿಮ್ಮ ಸಮಯಕ್ಕೆ ಬೆದರಿ) ಅದರ ಕೆಲವು ಮುಖಗಳನ್ನು ಮಾತ್ರ ವಿವೇಚಿಸುತ್ತಿದ್ದೇನೆ.

ಭಿಮನನ್ನು ಪಡೆಯಲು ಬಯಸಿದ ಕುಂತಿ, ವಾಯುದೇವನನ್ನು ಬೇಡಿಕೊಳ್ಳುತ್ತಾಳೆ 'ಕುಡು ರಿಪು ತಂತ್ರ ಕ್ಷಯಕರನೆನಗೆ ಹಿತನಂ, ಸುತನಂ' ಎಂದು. ಭೀಮನನ್ನು ಗರ್ಭದಲ್ಲಿ ಹೊತ್ತುನಡೆವಾಗ 'ಆ ಸುದತಿಯ ಮೃದು ಪದ ವಿನ್ಯಾಸಮುಂ ಶೇಷ ನಾನಲಾರದೆ ಸುಯ್ದಂ'— ಅಂಥ, ಶಿಶುವಿಗೆ 'ಭೀಮ'ನೆಂಬ ಪೆಸರನ್ವರ್ಥಂ'. ಬಾಲ್ಯದಲ್ಲಿಯೇ ಇವನು 'ಪ್ರಚಂಡಮಾರ್ತಾಂಡ ಸಾಹಸಭೀಮಂ'. ಅವನು ನಡೆವ ತಳರ್ನಡೆಗೆ ಪುಡಿಯಾದುವು ಶಿಲೆ– ಕರಿಗಳ್ ಭೀಮಂ ಪಿಡಿದಡರ್ದೊಡೆ ಬಾಯ್ವಿಟ್ಟೆಲ್ವಡಗಾದುವು'– ಸಿಂಹಗಳು 'ಮುಷ್ಟಿನೊಳ್ ಅತರ್ವ, ಗುರ್ದುವ, ಮನೆಗಳೆವನಿತರ್ಕಂ' ಸೋತುವೆಂದು ವರ್ಣಿಸಿದ್ದಾನೆ. ಭೀಮ 'ಗದೆ'ಯನ್ನೇ ತನ್ನ ಆಯುಧವನ್ನಾಗಿ ಆಯ್ದುಕೊಂಡ, ಸಮಾನ ಆಯುಧ ಪಡೆದ ದುರ್ಯೋಧನನ ಮೇಲೆ ಜಿದ್ದು ಸಿದ್ಧವಾಯಿತು. ಅಲ್ಲದೆ, 'ಭೀಮಸೇನಂ ವ್ಯಾಕರಣದೊಳಾರಿಂದ ಮುಗ್ಗಳಂ ಕುಶಲನಾದಂ' ಎಂದೂ ವರ್ಣಿಸಿ, ಭೀಮನ ಬಾಲಭಾವದಲ್ಲಿಯೇ ಕೌರವ ವೈರ ಸಹಜವಾಗಿ ಮೂಡಿ ಬಂದುದನ್ನು ಮೆರಗೆರಸಿ ಆಟದ ಕೌರವರು ಕಾಡಿದಾಗ ಭೀಮಸೇನಂ ಮರನಂ ಪಿಡಿದಲುಗಿ ಬೀಳಿಸಿದ.–ನೂರ್ವರುಂ ಗಂಟಲುಂಮೆಟ್ಟಿ, ಪಾವು

ಗಳಂ ಕೊಳಿಸಿ ಮಹಾಗಾವವನುರದಡಸಿ ಕಟ್ಟಿಕೊರಲೊಳ್ ಮಡುವಿನೊಳಳ್ದಿದರ್, ಆಗ ಭೀಮ 'ಗಂಗೆಯ ನೀರಂ ತೋಳೆರೋಳ್ ತುಳುಕಿ' ಎದ್ದು, ಗೆದ್ದು ಬಂದನಂತೆ. ವ್ಯಾಸರಲ್ಲಿಯೂ ಈ ಬಾಲಲೀಲೆಗಳ ಕಥೆಯಿದೆ. ಆದರೆ ಇಲ್ಲಿ ಪಂಪನ— ಧ್ವನಿ ರಮ್ಯವರ್ಣನೆ, ಮುಂದಿನ ಸಾಧನೆಗೆ ಮುನ್ನುಡಿಯುಲಿವ ಗುಣ– ಇಲ್ಲಿ ವ್ಯಕ್ತವಾಗಿದೆ. ಇಲ್ಲಿ ಭೀಮ ಗಂಡು ಬಾಲಕ. ಶಸ್ತ್ರ ಶಾಸ್ತ್ರವಿದ್ಯೆಯ 'ಅರಸು ಮಕ್ಕಳ ವಿದ್ಯಾ ಪ್ರದರ್ಶನದಲ್ಲಿ ಮೊದಲ ದೃಶ್ಯ 'ಬಾಲ ಭೀಮ–ಬಾಲ ದುರ್ಯೋಧನೀಯಂ—ಗದೆ-ಗದೆಗಳನ್ನು ಘಟ್ಟಿಸಿದುವು. ಆಜನ್ಮ ವೈರವೇ ಇರಬೇಕೆಂದು ಸೂಚಿಸುತ್ತಾನೆ ಪಂಪ. ಆಟ–ಕಾದಾಟವೇ ಆದಾಗ, ಅವರ ನಡುವೆ ಪ್ರವೇಶಿಸಲು ದ್ರೋಣ, ತನ್ನ ಮಗನನ್ನು ಕಳಿಸುತ್ತಾನೆ. ಆತ 'ಮಹಾಸಮುದ್ರಗಳೆರಡರ ನಡುವೆ ಕುಲಗಿರಿಯಿರ್ಪಂತೆ' ಇದ್ದ ನೆಂದು ವರ್ಣಿಸುತ್ತಾನೆ. ಭೀಮನೊಡನೆ ಆಟವಾಡಿಯೇ ದುರ್ಯೋಧನ ಗದಾ ವಿದ್ಯೆಯನ್ನು ಕಲಿತನಂತೆ. ಹೀಗೆ, ಭೀಮ ಪಾತ್ರದ ಬೇರು–ಚಿಗುರುಗಳನ್ನು ವರ್ಣಿ ಸಿದ್ದಾನೆ, ಪಂಪ. ಭೀಮ ಪಾತ್ರದ ಕನ್ನಡೀಕರಣ ಇಲ್ಲಿದೆ, ತತ್ಕಾರಣವಾಗಿ 'ಆತ್ಮೀಯ'ವಾಗುತ್ತದೆ.

ಪಂಪ ಕಂಡ, ತರುಣ ಭೀಮ ಹೀಗಿದ್ದಾನೆ.

'ಕುಳಗಿರಿಯಂ ಸರೋಜ ನಿಲಯಂ ಮನುಜಾಕೃತಿಯಾಗೆ ಮಾಡಿದಂ
ತೊಳವೆನಿಪಂತುಟಪ್ಪ ಪೊಸ ಬಣ್ಣದೊಳೊಂದಿದ ಪಾರಿಜಾತವ–।
ಗ್ಗಳ ಮೆಸೆದೊಪ್ಪುವಂತೆ ತಳಿರಿಂ, ಮುಗುಳಿಂ, ನವಯೌವನಂ
ಮನಂಗೊಳೆ ಕರಮೊಪ್ಪಿದಂ ದಶಸಹಸ್ರ ಮದೇಭ ಬಳಂ
ವೃಕೋದರಂ ॥ (೨–೩೮)

ಕುಲಗಿರಿಯಂಥ ಆಕಾರ, ಚಿಗುರು–ಮೊಗ್ಗೆ-ಹೂ ತುಂಬಿದ 'ಪಾರಿಜಾತ'ದಂಥ ರೂಪ-ಬಣ್ಣ,-ಜೊತೆಗೆ ದಶಸಹಸ್ರಮದೇಭ ಬಳಂ– ಅಷ್ಟೇ ಅಲ್ಲ 'ವೃಕೋದರ'– ತೋಳ ನಂಥ ಹೊಟ್ಟೆ... ಈ ತರುಣನನ್ನು ಕಂಡು, ತಿನ್ನಬೇಕೆಂದು ಬಂದ 'ಹಿಡಂಬೆ'ಯೇ 'ಮನ್ಮಥನಿಂದ ತಿನ್ನಲ್ಪಟ್ಟ'ಳಂತೆ. ಅರಗಿನ ಮನೆಯಿಂದ ಪಾಂಡವರನ್ನು ಪಾರು ಮಾಡುವ ಭೀಮನ ಸಾಹಸದಿಂದಾಗಿ ಬಂದ ಈ ಅರಣ್ಯವಾಸ ಕೊಟ್ಟ ಕೊಡುಗೆ ಮೂರು.–ಒಂದು ಹಿಡಿಂಬೆ ಪ್ರಣಯ, ಹಿಡಿಂಬಾಸುರ ಹನನ ಹಾಗೂ ಘಟೋ ತ್ಕಚ ಜನನ !!! ಈ ಪ್ರಸಂಗ ವರ್ಣನೆಯಲ್ಲಿ ಪಂಪನ ವಿಶ್ಲೇಷಣೆ, ಅಥವಾ ಮೂಲ ಭಾರತ ಪ್ರಸಂಗದ ವಿಮರ್ಶೆ ವ್ಯಕ್ತವಾಗಿದೆ. ಇಲ್ಲಿ ಕಾಣುವ ಭೀಮ – ಸುಸಂಸ್ಕೃತ ಮಾನವ ಭೀಮ— ಈ ಭೀಮನಿಗೂ ರಾಕ್ಷಸಿಗೂ ಎಲ್ಲಿಯ ಸಂಬಂಧ?– ಕನ್ನಡಿಗರ ಪ್ರಶ್ನೆ ಪಂಪ– ವ್ಯಾಖ್ಯಾನಿಸಿದ್ದಾನೆ. ಇಚ್ಛಾರೂಪಿಗಳಾದ ರಾಕ್ಷಸಿ— 'ದಿವ್ಯ ಕನ್ಯಕಾ ಸ್ವರೂಪ'ಳಾದಳು. ಮದನನ ಅಲರಂಬು ಒರ್ಪಂತೆ ಭೀಮನ ಕೆಲದೊಳ್‌ಕುಳ್ಳಿರೆ– ಭೀಮ ನಾಚದೆ–ಬೆದರದೆ– 'ನೀನಾರ್ಗೆ ...ಏನೆಂಬೆ' ಎಂದ. ಅವಳು 'ಭೀಮ ಸುಂದರ ತರುಣ ಭೀಮ'ನನ್ನು ಕಂಡು ಮರುಳಾಗುತ್ತಾಳೆ. ಮಲ

ಗಿದ ಇತರರನ್ನು ನನ್ನಣ್ಣ ಬಂದು ತಿನ್ನಲಿ 'ನೀನೆನ್ನಪೆಗಲನೇರು ಗಗನತಳಕ್ಕುಯ್ಪೆನೆನೆ'– ಭೀಮಸೇನನಾಮಾತಿಂಗೆ ಮುಗುಳ್ನಗೆ ನಕ್ಕು,– ಅವಳನ್ನು ಸದೆಬಡಿಯುಲ್ಲಿಲ್ಲ–ಹೇಗೂ ನೀನು ನಿಶಾಚರಿ 'ನಿನಗಪ್ಪುದಪ್ಪುದೀಯಬಿನುಡಿ' ಎನ್ನುತ್ತಾನೆ, ಮಾಯಾರೂಪೆಯನ್ನು ಮೆಚ್ಚಿದ ಭೀಮ. ಆದರೆ ಅಷ್ಟೇ... ಮುಂದಡಿಯಿಡ ಬೇಡ... ಬರಲಿ ನಿನ್ನಣ್ಣ– ನನ್ನಣ್ಣ ತಮ್ಮದಿರನ್ನು ಕೊಲ್ಲಲು, ತಿನ್ನಲಂ ಬರುವ ಅವನನ್ನು ಮುಗಿಸಿ ಬಿಡುವೆನೆಂದು ಕರ್ತವ್ಯ ಮರೆಯಲಿಲ್ಲ... 'ಕಣ್ಗಳಿಂ ಕೆಂಡದ ತಂಡಗಳು' ಉಕ್ಕುವ ರಾಕ್ಷಸಹಿಡಂಬನನ್ನು ಬೇರುಸಹಿತ ಕಿತ್ತ ಮರದಿಂದ ಬಡಿದು, 'ಮೃಣಾಳನಾಳಮನೆ ಸೀಳ್ವವೊಲ್ ಒರ್ವೆಯೆ ಸೀಳ್ದು ಬೀಸಿದಂ'. ಭೀಮನ ಸಾಹಸದ ಪ್ರಥಮ ಹೆಜ್ಜೆ 'ಅರಗಿನಮನೆ', ಪರಾಕ್ರಮದ ಪ್ರಥಮ ಸಾಧನೆ ಈ ಹಿಡಂಬ ಧ್ವಂಸ. ಹಿಂದೆ, ಕೌರವರು ಕುಳಿತ ಮರವನ್ನೇ ಅಲುಗಿಸಿದವನು, ಇಲ್ಲಿ ಮರವನ್ನೇ ಬೇರು ಕಿತ್ತು ಬಾರಿಸಿದ ! ಅದು ಅವನ ಗಂಡು. ಅಲ್ಲದೆ, ತಾಯಿ, ಅಣ್ಣ, ತಮ್ಮಂದಿರು ಒಪ್ಪಿದ ಹಿಡಿಂಬೆಯೊಡನೆ 'ಗಾಂಧರ್ವವಿಧಿ' ಯಿಂದ ಮದುವೆ ಮಾಡಿಕೊಂಡ ನಂತರವೇ 'ಹಿಡಿಂಬಾ ರಮಣ'ನಾದುದು. ಅವಳಾದರೋ 'ಎಲ್ಲೆಲ್ಲಿ ಕೊಳ, ಎಲ್ಲೆಲ್ಲಿ ಲತಾಭವನ . ಅಲ್ಲಿಯೆ ತೊಡರ್ದು, ಅಲ್ಲಿಯೆ ನಿಂದು ಅಲ್ಲಿಯೆ ರಮಿಸಿದಳಾಕೆ ಮರುದಾತ್ಮಜನೊಳ್' – ಈ ಭೀಮ ಸಂಸಾರ ವೃಕ್ಷದ ಪ್ರಥಮ ಫಲ ಘಟೋತ್ಕಚ. ಪಾಂಡವರು ಆಡವಿಯಲ್ಲಿದ್ದ ಮೂರು ವರ್ಷಗಳಿಗೇ ಈ ಘಟೋತ್ಕಚ ಹದಿನಾರರ ಹರೆಯದವನಾದುದು– ರಾಕ್ಷಸ ಲೋಕದಲ್ಲಿ ಮಾತ್ರ ಸಾಧ್ಯವೆಂದು ಪಂಪ ವ್ಯಾಖ್ಯಾನಿಸಿದ್ದಾನೆ. 'ಸದ್ಯೋಗರ್ಭ, ಸಧ್ಯಃ ಪ್ರಸೂತಿ, ಸದ್ಯೋ ಯೌವನ–ಶಕ್ತಿ ರಾಕ್ಷಸರಿಗಿದೆಯಂತೆ. ಈ ಪ್ರಸಂಗದಲ್ಲಿ ಭೀಮ 'ಗಂಡ'ನೂ ಆದ, ಗಂಡಸುತನವನ್ನೂ ತೋರಿದ. ಹೀಗೆಯೇ ಬಕಾಸುರನ ವಧಾ ಪ್ರಸಂಗದ ಅತ್ಯಂತ ಮಾನವೀಯವಾದ ಪಾರ್ವರ ಸಂಸಾರದ ಕಥೆಯನ್ನು ಪಂಪ ಸಂಕ್ಷಿಪ್ತಗೊಳಿಸಿ, ಅವಸರವಲ್ಲಿ ತೇಲಿಸಿರುವನೆಂದು ಟೀಕಿಸಿದ್ದಾರೆ ಸುಜನಾ. ಪಾರ್ವರ ಪಿಳ್ಳೆಯನ್ನು ರಕ್ಷಿಸಲು ಕುಂತಿ ಭೀಮನಿಗೆ ಸೂಚಿಸಿದಾಗ, ಮಾನವ ದ್ವೇಷಿ, ಮಹಾಸ್ವಾರ್ಥಿ ರಾಕ್ಷಸನನ್ನು ಕೊಲ್ಲುವ ಸುಯೋಗವನ್ನು ಆಹ್ವಾನಿಸಿ, ನಾಳಿನುಣಿಸನೆನಗೆ ದೂರೆಕೊಳಿಸಿ ಬಂದುದು ಕರವೊಳ್ಳಿತಾಯ್ತೆಂದು– ಮನಸ್ಸಿನಲ್ಲಿಯೇ ನಗುತ್ತಿದ್ದ ಭೀಮ. ಬಕನಿದ್ದ ಅಡವಿಗೆ ಖಂಡುಗದ ಅನ್ನ ತುಂಬಿದ ಗಾಡಿಯನ್ನು ಕೊಂಡೊಯ್ದ ಭೀಮ– ಹಲ್ಲು ಮೊರೆಯುತ್ತಿದ್ದ ರಾಕ್ಷಸನನ್ನು ಹೆದರಿಸಿದ. ಹೇಗೆ ಗೊತ್ತೆ. ಈ ವೃಕೋದರ ಆ ಖಂಡುಗ ಅನ್ನವನ್ನು ಪತ್ತೆಂಟು ತುತ್ತು ಮಾಡಿ ತಾನೇ ತಿಂದನಂತೆ ! ಆದನ್ನು ನೋಡಿದ ರಾಕ್ಷಸ, ತುಡುಕಿ ಬಂದ. ಭೀಮ 'ಅಸಗವೊಯ್ಲಿನಿಂದ ಅವನನ್ನು ಕೊಂದು, ದೇಹವನ್ನು ಊರಿನೊಳಕ್ಕೆ ಎಳೆತಂದ– 'ಸಾಹಸ ಭೀಮನ ಸಾಹಸ ಮನಳವಲ್ಲದೆ ಪೊಗಳಿ'ದರು. ಬಕಭೀತಿ ನಿವಾರಿತ ಏಕಚಕ್ರ ನಗರ ಜನ. ಭೀಮನ 'ಗಂಡು'ತನಕ್ಕಿನ್ನೊಂದು ದಾಖಲೆ,– ಇಲ್ಲಿ 'ಊರಳಿವಿನೊಳ್ ಗಂಡುತನವನ್ನು ನೆರಪಿದ ಈ ಭೀಮ.

ಮುಂದೆ, ದ್ರೌಪದೀ ಸ್ವಯಂವರದ ಕೊನೆಯಲ್ಲಿ ಎದ್ದ 'ಹತಾಶ ರಾಜ ಗಲಭೆ ಯಲ್ಲಿ ಅರ್ಜುನನೊಡನೆ, ಭೀಮನ ಸಾಹಸವೂ ವ್ಯಕ್ತವಾಯಿತು. ಲೋಕ ಪ್ರಸಿದ್ಧ ವಾಯಿತು. ದುರ್ಯೋಧನ ವೈರವನ್ನು ಕೆದಕಿತು. 'ರೌದ್ರಮುಖಿ' ಯೆಂಬ ಅನ್ವರ್ಥಕನಾಮದ 'ಭೀಮ ಗದೆಯು' ಶಕ್ತಿಪ್ರದರ್ಶನವೂ ಜನಜನಿತವಾಯಿತು. ರಾಜ ಸೂಯ ಯಜ್ಞದ ಸನ್ನಿವೇಶದಲ್ಲಿ ಪೂರ್ವ ದಿಗ್ದೇಶ ವಿಜಯ ಭೀಮನ ಕೊಡುಗೆ ಯಾಯಿತು. ವ್ಯಾಸ ಭಾರತದಲ್ಲಿ ಧರ್ಮರಾಯ ಪಗಡೆಯಲ್ಲಿ ರಾಜ್ಯವನ್ನೂ, ಪತ್ನಿ ಯನ್ನೂ ಸೋತಾಗ, 'ಬೆಂಕಿ ತಾ ಸಹದೇವ, ಸೋತ ಈ ಕೈಗಳಿಗೆ ಬೆಂಕಿ ಹಚ್ಚುವೆ' ಎಂದು ಕ್ರೋಧದಿಂದ ಒರಟು ನುಡಿಯುತ್ತಾನೆ. ಆದರೆ, ಪಂಪ ಈ 'ವರ್ತನೆ' ಯನ್ನು ಪರಿಷ್ಕರಿಸಿ, ಕೋಪ ತೋರಿದರೂ, ಕೌರವ ದ್ವೇಷ-ಮೋಸವನ್ನು ಎತ್ತಿ ಆಡುವಂತೆ ಮಾಡಿದ್ದಾನೆ. ದ್ರೌಪದಿಯ ಮಾನಭಂಗ ಪ್ರಸಂಗದಲ್ಲಿ ಭೀಮನ ಭೀಷ್ಮ ಪ್ರತಿಜ್ಞೆ-ಗಂಡುತನದ ಪ್ರತೀಕ. ತೊಡೆತೋರಿದ ದುರ್ಯೋಧನನ ತೊಡೆ ಮುರಿ ಯಲು ಪೂಣ್ಕೆಗೈಯುತ್ತಾನೆ. ಈ ಸನ್ನಿವೇಶದಲ್ಲಿ ಮೂಲ ಭಾರತ ಹೋಗುವಂತೆ, ಕರ್ಣ ಸಂತಸದಿಂದ ನಗುತ್ತಿದ್ದನೆಂಬುದನ್ನು ಸುಸಂಸ್ಕೃತ ಪಂಪ ಹಾರಿಸಿದ್ದಾನೆ. ಜಟಾಸುರನನ್ನು ಕೊಂದ ಪ್ರಸಂಗದಲ್ಲೂ ಭೀಮನ ಪರಾಕ್ರಮ ವ್ಯಕ್ತವಾಗಿದೆ. ಕೃಷ್ಣ ಸಂಧಿಗಾಗಿ ಹೊರಡುವ ಪ್ರಸಂಗದಲ್ಲಿ ಭೀಮ ಪ್ರತಿಭಟಿಸುತ್ತಾನೆ, ಆದರೆ, ಕೃಷ್ಣನ 'ಕಪಟರಾಜತಂತ್ರ'ಕ್ಕೆ ಒಪ್ಪಿ, ಶಾಂತನಾಗುತ್ತಾನೆ.

ಕೀಚಕವಧೆಯ ಪ್ರಸಂಗ, ಅಲ್ಲಿ ಭೀಮ ನಿರ್ವಹಿಸಿದ ಗಂಡುತನ-ಅದೂ ಮಾನವ ದೌರ್ಬಲ್ಯ, ಸಾಹಸಗಳನ್ನರಿತ ಪಂಪನ ಪರಿಣತ ಪ್ರಜ್ಞೆ-ಬಿಂಬಿಸಿದ ಗಂಡು ತನವನ್ನು-ಅದರ ಅನಿವಾರ್ಯತೆಯನ್ನು ಮೆಚ್ಚದವರಾರು. ಕೀಚಕನನ್ನು ಪರಿಪರಿ ಯಾಗಿ ಹಿಂಸಿಸಿ, ಕೊಂದ, ರಾಕ್ಷಸತನವನ್ನು ಕೆಲವು ವಿಮರ್ಶಕ ಗಂಡರು ಮೆಚ್ಚದಿರ ಬಹುದು. ಆದರೆ, ಭೀಮ ಹೆಣ್ಣಿನ ಹಾನಿ-ಹರಿಬಕ್ಕೆ ಮಿಡುಕುವ ಗಂಡನೆಂಬು ದನ್ನು ಪಂಪ ನೆನಪು ಮಾಡಿಕೊಡುತ್ತಾನೆ.

ಮಹಾಭಾರತ ಯುದ್ಧ- ಅದೂ ಕಲಿಯಾದ ಕವಿ ಪಂಪನ ವರ್ಣನೆಯನ್ನು ಮೆಚ್ಚದ ಕಲಿ ಯಾರು. ವಿಕ್ರಮಾರ್ಜುನನ ವಿಜಯ ದುಂದುಭಿಯನ್ನೇ ಬಾರಿಸ್ನಿ ದರೂ, ಭೀಮನ ಪರಾಕ್ರಮವನ್ನೂ ಸಮಸಮವಾಗಿ ಚಿತ್ರಿಸಿದ್ದಾನೆ. ತೌಲನಿಕವಾಗಿ ಪರಿಶೀಲಿಸಿದರೆ, ಇದರ ವಿಶೇಷ ಅರ್ಥವಾಗುತ್ತದೆ.

ಕೊನೆಯದಾಗಿ, ಅನೇಕ ವಿಮರ್ಶಕರು ಎತ್ತಿ ಆಡಿದ ಪ್ರಸಂಗ. 'ಭೀಮ-ದುರ್ಯೋಧನೀಯಂ'- ಪಂಪನ ಮಾತುಗಳನ್ನು ಸಂಗ್ರಹಿಸಲು ಸಾಧ್ಯವಿಲ್ಲ, ರನ್ನನೂ ಸೋತು ಹೋಗಿದ್ದಾನೆಂದು ತೋರುತ್ತದೆ. ಅಲ್ಲೆಲ್ಲ ಭೀಮನ ಪ್ರತೀಕಾರ, ಹಟ-ಛಲ-ಹಾಗೂ ರಾಕ್ಷಸೀಯ ವರ್ತನೆ- ಕಿರೀಟ ಒದೆಯುವ, ಸತ್ತ ಹಾವನ್ನೂ ಸುತ್ತಿ ಒತ್ತಿ ಸಾಯಿಸುವ ಪ್ರಸಂಗದಲ್ಲಿ ಭೀಮನ ವರ್ತನೆ-ಭೀಭತ್ಸಕ್ಕೆಡೆಗೊಟ್ಟರೂ ಅದು ಮಾನವ ಸಹಜ, ಮಾನವನಲ್ಲಿರುವ ರಾಕ್ಷಸ ಪ್ರವೃತ್ತಿ ಮೇಲೇಳುವ ಪ್ರಸಂಗ.

ಅಂಥದೇ ಇನ್ನೊಂದು ಪ್ರಸಂಗ ದುಶ್ಶಾಸನ ವಧೆ. ಇಬ್ಬರ ಸಮವೀರ ಯುದ್ಧವನ್ನು ಮೆಚ್ಚುವವರೂ, ಅವನ ರಕ್ತ ಕುಡಿದ, ಕರುಳು ಕಿತ್ತಾಡಿದ, ಓಡಿಂಬೆಯನ್ನು ಕರೆದು 'ಔತಣ' ಮಾಡಿದ ಪ್ರಸಂಗದ ದುರ್ಭರತೆಯನ್ನು ಟೀಕಿಸಿದವರಿದ್ದಾರೆ. ಪಾತ್ರದ ಕೇಂದ್ರಬಿಂದು, ಸುದೀರ್ಘ ಬೆಳವಣಿಗೆ, ಅಲ್ಲದೆ, ಪಂಪನ ಪರಿಣತ ಮನಸ್ಸನ್ನು ಅರ್ಥಮಾಡಿಕೊಳ್ಳಲಾರದ 'ಜಿಪುಣ' ವೃತ್ತಿ ಅವರದು.

ಒಟ್ಟಿನಲ್ಲಿ 'ಗಂಡಿನೊಳ್ ಭೀಮಸೇನಂ' ಎಂಬ ಪಂಪನ ನುಡಿಯಲ್ಲಿ. –ಈ ಎಲ್ಲ ಅರ್ಥಗಳ 'ಗಂಡು' ಇದೆ. ಅದು ಕನ್ನಡದ ಕೆಚ್ಚಿನ ಗಂಡು. ವಿಕ್ರಮಾರ್ಜುನ ವಿಜಯದಲ್ಲಿ ಮೂಡಿದೆ ಮಾನವೀಯ ಭೀಮ ವಿಜಯ. ಇಲ್ಲಿ ಈ ಭೀಮ 'ಗಂಡ'ನೇ. ಷಂಡನೆಂದೂ ಅಲ್ಲಲ್ಲ, ವಲಲನಾದಾಗಲೂ 'ಭೀಮಪಾಕ' ವನ್ನೇ ಮಾಡಿದವನು. ಪ್ರಚಂಡನಾದಾಗಲಂತೂ 'ರಕ್ತಪಾಕ' ಮಾಡಿದವನು. ಭೀಮನೂ ಸತ್ತ, ಪಂಪನೂ ಸತ್ತ– ಅವರ ಕಥೆ-ಕೃತಿ ಸಾಯುವ ನಮಗೂ ಪ್ರಿಯ, ಮಾನವರಾಗಿದ್ದರೆ ಮಾತ್ರ, ಮಾನವೀಯತೆ ಜೀವಂತವಾಗಿದ್ದರೆ ಮಾತ್ರ.

'.... ಬಲದೊಳ್ ಮದ್ರೇಶಂ'

ಸೋಮಶೇಖರ ಇಮ್ರಾಪೂರ

'ಮಿಗಿಲಿವರ್ಗಳಿಂ ಭಾರತಂ ಲೋಕಪೂಜ್ಯಂ' ಎಂದು ತಾನು ಮನಸಾರೆ ಮೆಚ್ಚಿದ ಪಾತ್ರಗಳಿಗೆ ಅವರವರ ಗುಣಾಧಿಖ್ಯ ವಿಶೇಷತೆಗಳನ್ನು ಹೆಸರಿಸಿದ ಮಹಾಕವಿ ಪಂಪ, ಮದ್ರೇಶನಾದ ಶಲ್ಯನ ಬಗ್ಗೆ ಬಹಳೇ ಉದಾರಿಯಾದಂತೆ ತೋರುತ್ತದೆ. ಶಲ್ಯನು ಒಟ್ಟಂದದ ಮಹಾಭಾರತದ ದೃಷ್ಟಿಯಿಂದ ಮಹತ್ವದ ವ್ಯಕ್ತಿಯೆಂಬುದರ ಹಿನ್ನೆಲೆಯಲ್ಲಿಯೇ ಪಂಪನು ತನ್ನ ಭಾರತದ (ನೆನಿಕೆಯ ನುಡಿಯಲ್ಲಿ) ಪ್ರಸಿದ್ಧರ ಸಾಲಿನಲ್ಲಿ ಶಲ್ಯನನ್ನು ಸೇರಿಸಿದಂತಿದೆ. ತಾನೇ ಕರಾರುವಾಕ್ಕಾಗಿ ಸ್ಪಷ್ಟೀಕರಿಸುವಂತೆ ದುರ್ಯೋಧನನ ಛಲ, ಕರ್ಣನ ನನ್ನಿ, ಭೀಮನ ಗಂಡುತನ (ಪೌರುಷ), ಭೀಷ್ಮನ ಅತ್ಯುನ್ನತಿ, ದ್ರೋಣನ ಚಾಪವಿದ್ಯೆ, ಅರ್ಜುನನ ಸಾಹಸ, ಧರ್ಮಪುತ್ರನ ಧರ್ಮ ಈ ವಿಶಿಷ್ಟ ಗುಣಗಳು ಹೇಗೆ ತನ್ನ ಮಹಾಭಾರತದುದ್ದಕ್ಕೂ ಸಹಚಲನಗೊಂಡು ಆಯಾ ಪಾತ್ರಗಳ ವಿಶೇಷತೆಯನ್ನು ಚೇತೋಹಾರಿಗೊಳಿಸಿವೆಯೋ ಹಾಗೆ; ಬಲದಲ್ಲಿ ಅಂದರೆ ಶಕ್ತಿಯಲ್ಲಿ ಅಂಥ ಯಾವ ಪ್ರಗಲ್ಭ ಪರಾಕ್ರಮವನ್ನೂ ಮರೆಯದ ಶಲ್ಯನನ್ನು ಲೋಕಪೂಜ್ಯರ ಪಂಕ್ತಿಯಲ್ಲಿ ಸೇರಿಸಿರುವುದರ ಔಚಿತ್ಯ ಪ್ರಶ್ನಿಸುವಂಥದು. ಮಹಾಭಾರತಕ್ಕೇ ಹೂರಣರಾದ ಕೃಷ್ಣ, ದ್ರೌಪತಿಯಂಥವರನ್ನು ನೆನೆಯದ ಅನೌಚಿತ್ಯವೂ ವಿಚಾರಾರ್ಹವಾದುದು.

ಶಲ್ಯ ಸಾಮಾನ್ಯನಲ್ಲ. ಗದಾಯುದ್ಧದಲ್ಲಿ ನಿಪುಣ. ಕೃಷ್ಣನಿಗೆ ಸರಿಸಾಟಿಯಾಗಿ ಸಾರಥ್ಯನಡೆಸಬಲ್ಲ ಚಾಣಾಕ್ಷ. ಕೀಚಕನನ್ನು ವಧಿಸಿದ ಭೀಮ ಹಾಗೂ ಛಲದಂಕಮಲ್ಲ ದುರ್ಯೋಧನನಷ್ಟೇ ಪರಾಕ್ರಮಿ, ಬಲರಾಮನಿಗೆ ಸಮನಾದವ, ಈ ಅನುಪಮ ಪರಾಕ್ರಮವನ್ನು ಬಹುವಾಗಿ ಮೆಚ್ಚಿದ ಪಂಪನಿಗೆ ವ್ಯಾಸ-ಕುಮಾರವ್ಯಾಸರಂತೆ ಒಂದು ಪರ್ವವನ್ನೇ ಮೀಸಲಾಗಿರಿಸುವ ಅವಕಾಶವಿಲ್ಲ. ಮೂಲತಃ ಕೌರವ-ಪಾಂಡವರ ದಾಯಾದಿ ಮತ್ಸರ್ಯವೆನಿಸಿದ ಭಾರತದಲ್ಲಿ ಅನ್ಯರ ಪರಾಕ್ರಮವನ್ನೇ ಕಾವ್ಯದಲ್ಲಿ ತುಂಬುವ ವಿಚಾರವೂ ಅವನಿಗಿಲ್ಲ. ಆದರೂ ತನ್ನ ಭಾರತದ ಯಥೋಚಿತ ಸಂದರ್ಭಗಳಲ್ಲೆಲ್ಲ ಸಿಕ್ಕ ಅವಕಾಶಗಳಲ್ಲಿಯೇ ಪ್ರಮುಖರಾದ ಪರಾಕ್ರಮಿಗಳಿಗೆ ಪಿರೋಚಿತ ಪಟ್ಟಗಟ್ಟಿದ್ದಾನೆ. ಪಂಪಭಾರತದಲ್ಲಿ ಮೂಡಿಬಂದ ಶಲ್ಯ ಇಂಥವನು, ಪ್ರಲ್ಹಾದನ ತಮ್ಮನಾದ ಸಂಹ್ಲಾದನೇ ಶಲ್ಯನಾಗಿ ಹುಟ್ಟಿದನಂತೆ. ಇಡೀ ಮಹಾಭಾರತದುದ್ದಕ್ಕೂ ಭೀಷ್ಮ, ದ್ರೋಣ, ಕೃಪಾಚಾರ್ಯ, ಇತ್ಯಾದಿ

ಪ್ರಸಿದ್ಧ ಹೆಸರುಗಳೊಂದಿಗೆ ಕೇಳಿಬರುವ ಶಲ್ಯ ಮದ್ರದೇಶದ ಒಬ್ಬ ಉಚ್ಚಕುಲದ ದೊರೆ. ಪಾಂಡುವಿನ ೨ನೇ ಹೆಂಡತಿಯಾದ ಮಾದ್ರಿಯ ಸಹೋದರ, ನಕುಲ ಸಹ-ದೇವರ ಸೋದರಮಾವ, ಹಾಗೆಯೇ ಒಟ್ಟಿನಲ್ಲಿ ಕೌರವ ಪಾಂಡವರ ನಚ್ಚಿನ ಮಾವ, ಮಹಾಭಾರತದ ರಾಜಕೀಯ ಚಟುವಟಿಕೆಗಳ ಪರೋಕ್ಷ ಕೇಂದ್ರವ್ಯಕ್ತಿಯಾಗಿರುವ ಈತ ಪಂಪಭಾರತದಲ್ಲಿ ಮುಖಾಮುಖೀಸ ಪ್ರಕಟಗೊಳ್ಳುವುದು ೩–೪ ಸಂದರ್ಭಗಳಲ್ಲಿ ಮಾತ್ರ. ಈ ಅಲ್ಪ ಅವಕಾಶಗಳಲ್ಲಿಯೇ ಪಂಪನು, ಶಲ್ಯನ ಬಲ ಪರಾಕ್ರಮ, ವಿವೇಕ, ನಿಷ್ಠೆ, ಸ್ವಾಭಿಮಾನ, ಹಟ ಮುಂತಾದವುಗಳ ಪ್ರಖರತೆಯನ್ನು ಪ್ರಕಟಿಸುವಲ್ಲಿ ಸಾಫಲ್ಯ ಪಡೆದಿದ್ದಾನೆ.

ತತ್ವತಃ ಪಾಂಡವರೊಂದಿಗೇನೇ ತನ್ನ ಬಂಧುತ್ವವನ್ನು ಇಟ್ಟುಕೊಳ್ಳಬೇಕಾದ ಶಲ್ಯ, ದುರ್ಯೋಧನನ ಚಾತುರ್ಯದ ಪ್ರೀತಿ ಅಯಸ್ಕಾಂತದ ಹಂಗಿನೊಳಗಾಗಿ ಕೌರವರ ಪಕ್ಷವಹಿಸಿ, ಪಾಂಡವರೊಂದಿಗೆ ಕಾದಾಡಲು ಒಪ್ಪುತ್ತಾನೆ. ಆದರೂ 'ಊಟ ಕೌರವನಲ್ಲಿ ಮನಸ್ಸು ಪಾಂಡವರಲ್ಲಿ' ಎಂಬ ಮಾತಿಗುತ್ತರರಾದ ಭೀಷ್ಮ, ಕೃಪ, ಕರ್ಣರ ಗುಂಪಿಗೆ ಶಲ್ಯನೂ ಸೇರುತ್ತಾನೆ. ಆದ್ದರಿಂದ ಶಲ್ಯನು ಪಾಂಡವರೊಂದಿಗೆ ನಡೆಸಿದ ಯುದ್ಧ ಕೇವಲ ಅರೆಮನಸ್ಸಿನದು. ನಟನೆಯದು. ಈ ಸಂಗತಿಯನ್ನು ಸ್ಪಷ್ಟಗೊಳಿಸಲೆಂದೇ ಪಂಪನು ದುರ್ಯೋಧನನಿಂದ "ಯುದ್ಧ ಮಾಡುವ ಮಾಳ್ಕೆಯಲ್ಲಿದು ಕೆಮ್ಮನೆ ಮೇಳಗಾಳೆಗಂ" ಎಂದು ಶಲ್ಯನ ಸಾರಥ್ಯ ಪ್ರಸಂಗದಲ್ಲಿಯೇ ಹೇಳಿಸಿರುವುದು ಔಚಿತ್ಯಪೂರ್ಣವಾಗಿದೆ. ದ್ರೌಪತಿ ಸ್ವಯಂವರದ ಸಂದರ್ಭದಲ್ಲಿ ಭೀಮನಿಂದ ಹೊಡೆತ ತಿಂದ ನೆನಪೂ ಶಲ್ಯನ ಮನದಲ್ಲಿ ನಟ್ಟಿರಬೇಕು. ಅದೇನೇ ಇದ್ದರೂ ಎರಡೂ ಪಂಗಡಗಳಿಗೂ ಬೇಕಾದವನಾದ ಶಲ್ಯನ ಶೌರ್ಯ ಸಾಹಸ ಸಾರ-ಥ್ಯದ ಬಗ್ಗೆ ಯಾರಿಗೂ ಸಂಕೋಚವಿಲ್ಲ. ಪಾಂಡವರು ಹಾಗೂ ಕೌರವರು ಇಬ್ಬರಿಗೂ ಆತ ಹಿರಿಯನೆಂಬ ಬಗ್ಗೆ ಭಕ್ತಿ ಇದೆ. ಆತನ ಪರಾಕ್ರಮದ ಬಗ್ಗೆ ಭಯವಿದೆ. ಅಂತೆಯೇ ಕೌರವ ಆತನನ್ನು ತನ್ನೊಡನೆ ಒಲಿಸಿಕೊಂಡ. ಧರ್ಮರಾಯನು ಯುದ್ಧ ಮುಖದಲ್ಲೂ ಸ್ವತಃ ಹೋಗಿ ಶಲ್ಯನನ್ನು ನಮಸ್ಕರಿಸಿ ಜಯಕ್ಕಾಗಿ ಆಶೀರ್ವದಿಸಿಕೊಂಡ.

ಇನ್ನೇನು ಕುರುಕ್ಷೇತ್ರ ಯುದ್ಧ ಪ್ರಾರಂಭ, ಶಲ್ಯನಿಗೆ ಧರ್ಮರಾಯನೇ ಎದುರಾಗಿ ಕಾದಾಡುವುದು ಮಹಾಭಾರತದ ಸಹಜ ಪ್ರಸಂಗ. ಧರ್ಮರಾಯನ ಪರಾಕ್ರಮ ಹೊಡೆತಕ್ಕೆ ಮಾಪನಾದ ಶಲ್ಯನ ರಥ, ಸೂತ, ಕೇತನಗಳೆಲ್ಲವೂ ನುಚ್ಚುನೂರು. ಆಗ ಅಳಿಯನ ಪರಾಕ್ರಮವನ್ನು ತಿರಸ್ಕರಿಸಿದ ಶಲ್ಯನು ಬೇರೆ ರಥ ತರಿಸಿ ಧರ್ಮರಾಯನೊಡನೆ ಯುದ್ಧಮಾಡಿದ ಸನ್ನಿವೇಶವನ್ನು ಕವಿ ಪಂಪನು ತನ್ನ ಸ್ವಭಾವಜನ್ಯವಾದ ನುಡಿಗಡಣದಲ್ಲಿ ಕೊಂಡಿದ್ದಾನೆ.

"ಮುರಿದುಂ ರಥಮುಂ ರಥಾಶ್ವಮು
ನುರುದೆರಡು ಶರದೆ ನಾಲ್ಕರಿಂ ಸೂತನನೊಂ !

ದರಿಕೆಯಂ ಸರಲೊಳ್ ಮಾಣದೆ
ತಱಿದಂ ಪಟಿವಿಗೆಯುನೇಂ ಕೃತಾಸ್ತ್ರನೋ ಶಲ್ಯಂ ॥
(ದಶಮಾಶ್ವಾಸಂ, । ಪ. ೧೦೮)

ಹೀಗೆ ಅಸ್ತ್ರವಿದ್ಯಾಪಾರಂಗತನಾದ ಶಲ್ಯನು ಧರ್ಮರಾಯನ ರಥವನ್ನೂ, ರಥದ ಕುದುರೆಯನ್ನೂ (ಎರಡೇ ಬಾಣಗಳಿಂದ) ಕೆಡವಿ, (ನಾಲ್ಕು ಬಾಣಗಳಿಂದ) ಬಾವುಟವನ್ನು, ಸೂತನನ್ನು ಒಂದು ಪ್ರಸಿದ್ಧವಾದ ಬಾಣದಿಂದ ಕತ್ತರಿಸಿ ಆತನನ್ನು ಹಿಡಿಯು ಹೋಗುತ್ತಲೇ–ಧರ್ಮರಾಯನ ವರೂಥರಕ್ಷಕನಾದ ನೀಳನು ಶಲ್ಯನಿಗೆ ಎದುರಾಗುತ್ತಾನೆ. ಶಲ್ಯನ ಅಚ್ಚ ಪರಾಕ್ರಮ ಗೊತ್ತಾಗುವುದು ಪಂಪಭಾರತದ ಈ ಸಂದರ್ಭದಲ್ಲಿ ಮಾತ್ರ. "ಮೃಗರಾಜನಖರ ಬಾಣಾಳಿಗಳಿಂದ ನೀಳನ ಆನೆಯನ್ನೂ ನೀಳನ ತಲೆಯನ್ನೂ ಕತ್ತರಿಸುತ್ತಲೇ–ಉತ್ತರ ಎದುರಾಗುತ್ತಾನೆ. ಹಾಗೆಯೇ "ಉತ್ತರ ನಂಜವಂಗೆ ಪೊಸತಿಕ್ಕುವಂತಿಕ್ಕಿ" ಶಲ್ಯ ಬಸವಳಿಯುತ್ತಾನೆ. ಇಲ್ಲಿ ಬಸವಳಿಯುವುದು ಶಲ್ಯನ ಪರಾಕ್ರಮಕ್ಕೆ ಪೋಷಕವಾಗಿಲ್ಲ. ತನ್ನ ತಮ್ಮ ಸತ್ತ ಸುದ್ದಿ ಕೇಳಿದ ಸೇನಾನಾಯಕ ಶ್ವೇತನು ಬಸವಳಿದ ಶಲ್ಯನನ್ನೇ ತಾಕಿ ಭಯಂಕರ ಯುದ್ಧವೆಸಗುತ್ತಿರುವಾಗ, ದುರ್ಯೋಧನ ಹಾಗೂ ಭೀಷ್ಮರು ಬಂದು ಶ್ವೇತನಿಗೆ ಎದುರಾಗಿ ಶಲ್ಯನನ್ನು ಸುಮ್ಮನಿರಿಸುವುದೂ (**Rest** ಕೊಡುವುದೂ) ಅಷ್ಟು ಸಮಂಜಸವಲ್ಲ. ಮುಳಿಸಿನಿಂದ ಪುನಃ ಶಲ್ಯನನ್ನೇ ಬೆನ್ನಟ್ಟಿ ಎದುರಾದ ಶ್ವೇತನ ಪರಾಕ್ರಮ ಆರ್ಭಟಗಳೆದುರು ಶಲ್ಯ ನಿಸ್ತೇಜನಾಗುತ್ತಾನೆ. ಆಗ ಭೀಷ್ಮರೇ ಮತ್ತೆ ಶಲ್ಯನನ್ನು ಹಿಂದಿಟ್ಟು ಶ್ವೇತನೊಡನೆ ಕಾದುವ ಪ್ರಸಂಗವೂ ಅಂಥದೇ. ಪಂಪಭಾರತದ ದಶಮಾಶ್ವಾಸದ ಈ ಸಂದರ್ಭವು ಶಲ್ಯನ ಯುದ್ಧ ಪರಾಕ್ರಮಕ್ಕೆ ನಾಂದಿಯಾದರೂ, ಆತನ ಪರಾಕ್ರಮದ ಪರಾಕಾಷ್ಠತೆಗೆ ಕುಂದು ತರುವಂಥದು.

ಶಲ್ಯನ ವಿವೇಕ, ಸ್ವಾಭಿಮಾನ, ಪರಾಕ್ರಮಗಳಿಗೆ ನಿದರ್ಶನವಾದ ಮತ್ತು ಅರ್ಥಪೂರ್ಣವಾದ ಇನ್ನೊಂದು ಸನ್ನಿವೇಶವೆಂದರೆ — ಶಲ್ಯನು ಕರ್ಣನಿಗೆ ಸಾರಥಿಯಾದುದು. ಪಂಪ ಭಾರತದ ಪ್ರಸಿದ್ಧವೆನ್ನಬಹುದಾದ ಉಜ್ವಲ ಕಾವ್ಯಾಭಿವ್ಯಕ್ತಿಯ ಉದಾಹರಣೆಗಳಲ್ಲಿ ಇದೂ ಒಂದು. ಶಲ್ಯನ ಇಡೀ ವ್ಯಕ್ತಿತ್ವವನ್ನು ಗುರುತಿಸಬಹುದಾದ ಈ ಸನ್ನಿವೇಶವು ನಾಟಕೀಯತೆಗೆ ಕಲಸಪ್ರಾಯವಾದುದು. ದುರ್ಯೋಧನನ ವ್ಯವಹಾರ ಕುಶಲತೆ, ಪ್ರಸಂಗಾವಧಾನ ಚತುರತೆ, ಶಲ್ಯನ ಬಗೆಗೆ ತಾಳಿದ ಭಯ, ಗೌರವಾದರ ದೈನ್ಯತೆಗಳಿಗೂ: ಪ್ರತಿಯಾಗಿ ಶಲ್ಯನು ತನ್ನ ರಾಜಾಧಿರಾಜನ ಬಗ್ಗೆ ಇರಿಸಿಕೊಂಡ ಗೌರವಾದರಗಳು, ಅಳಿಯನ ಬಗ್ಗೆ ತಾಳಿದ ಆತ್ಮೀಯತೆ, ಪ್ರೀತಿಗೂ ನಿದರ್ಶನಪ್ರಾಯವಾದುದು.

ದ್ರೋಣನ ಅವಸಾನದ ನಂತರ ದುರ್ಯೋಧನನಿಂದ 'ಕೈಯಾರೆ ಸೇನಾಪತಿ ಪಟ್ಟ ಕಟ್ಟಿಸಿಕೊಂಡ ಕಲಿಕರ್ಣನು, ವಿಧೇಯನಾಗಿ ಪೂಜ್ಯಭಾವದಿಂದ ಶರಶಯ್ಯೆ

ಯೊಳಿದ್ದ ಭೀಷ್ಮರನ್ನು ಕಂಡು ಆಶೀರ್ವಾದಪಡೆಯಲು ಹೋದಾಗ – ಭೀಷ್ಮರು ಕರ್ಣನ ವೀರಗಲಿತನವನ್ನು ಹೊಗಳುತ್ತಾ —

"ನಿನ್ನನೆ ನಚ್ಚಿದಂ ಕುರು ಮಹೀಪತಿ, ನಿನ್ನ ಶರಾಳಿಗಳ್ ಮು ।
ನ್ನನ್ನಡುಗಾತ್ತ ವಿಪ್ರ್ಗದರಿ ಸಾಧನ ಸಂಪದಮಂತೆ ಶಸ್ತ್ರ ಸಂ ॥
ಪನ್ನನೆ ಆಗಿ ಶಲ್ಯನನೆ ಸಾರಥಿಯಾಗಿರೆ ಮಾಡಿ ಕಾದು ನೀಂ ।
ನಿನ್ನಯ ಬಲ್ಲ ಮಾಟ್ಕೆಯೊಳಿದಂ ನುಡಿದೆಂ ನಿನಗಂಗವಲ್ಲಭಾ ॥

(ಆಶ್ವಾಸ ೧೨, ಪದ್ಯ ೫೭)

ಎಂದು ಹೇಳಿ—

"ಈತಂ ಕುಲಹೀನನಲ್ಲನು ಭಯ ಕುಲಶುದ್ಧನಾಗಲಿವೇಟ್ಕುಮೆಂದು ನಿಶ್ಚೈಸಿ-ಶಲ್ಯನನೆ ಸಾರಥಿಮಾಡಿ ಕಾದುವುದೆಂದು ಹರಸಿ ಕಳಿಸುತ್ತಾರೆ. ಅಂದಿನ ಯುದ್ಧ ಮುಗಿದಾಗ ಕರ್ಣನು ಈ ಸಂಗತಿಯನ್ನು ದುರ್ಯೋಧನನಿಗೆ ತಿಳಿಸಿದಾಗ ಆತ ಗಾಂಗೇಯರ ನುಡಿಯನ್ನು ತನ್ನೊಡಲೊಂದೆಯಾದ ಕರ್ಣನ ಅಭೀಪ್ಸೆಯನ್ನೂ ಮನ್ನಿಸಿ—

"ತ್ರಿಣೇತ್ರನೊಳ್ ಕಲ್ಮಶ್ವಹೃದಯದೊಳಂ ರಥಕಲ್ಪದೊಳಂ ಶಲ್ಯಂ
ಮುರಾಂತಕಂಗಂ ಪ್ರವೀಣನಪ್ಪುದರಿಂದಾತನ ಎಂತಾನುಮೊಡಂಬಡೆ
ನುಡಿದು ನಿನಗೆ ಸಾರಥಿ ಮಾಡುವೆನೆಂದು" ಅಭಯ ನೀಡಿದ.

ಅಂದೇ ರಾತ್ರಿ ಕೆಲವು ಮಾನಿಸರೊಂದಿಗೆ ಮಾವನಾದ ಶಲ್ಯನ ಮನೆಗೆ ಧಾವಿಸಿದ. ದುರ್ಯೋಧನನು ಬರುಬರುತ್ತಿದ್ದಂತೆ ಆತನನ್ನು ಅತ್ಯಂತ ಸಂಭ್ರಮದಿಂದ ಇದಿರುಗೊಳ್ಳಲೇಳುವ ಶಲ್ಯ, ಹಾಗೆಯೇ ಅದಕ್ಕೆ ಪ್ರತಿಯಾಗಿ "ಅಂತೆ ಕುಳ್ಳಿರಿರಪ್ಪೊಡಿಂ ನಿಮಗಾಣೆ" ಎಂದು ಮಾವನ ತೊಡೆಸೋಂಕಿ ಕುಳಿತುಕೊಳ್ಳುವ ದೈನ್ಯಭಾವದ ದುರ್ಯೋಧನರ ಒಂದು ಕ್ಷಣದ ಜೀವಂತ ಸನ್ನಿವೇಶ. ವಾಸ್ತವತೆಯಿಂದ ಹೊಡಕರಿಸುತ್ತದೆ. ಸಂಸ್ಕಾರಯುಕ್ತ ಭಾವನೆಗಳಿಂದ ಪಂಪನ ಲೌಕಿಕ ಪರಿಜ್ಞಾನಕ್ಕೆ ಸಾಕ್ಷಿನುಡಿಯುತ್ತದೆ. ಪ್ರತಿಯೊಂದು ಹಾವಭಾವವೂ, ಅಲ್ಲಿ ಅರ್ಥಪೂರ್ಣ.

ತೊಡೆಸೋಂಕಿ ಸಲುಗೆಯಿಂದಲೇ ಕುಳಿತ ಅಳಿಯನನ್ನು ಕುರಿತು.
"ಬಾಟ್ತಿಯುಳ್ಳೆಡೆ ನೀನೆ ಬ
ರ್ಪಂತುಟಾದುದೆ ಪೇಟ್ ನೀಂ ಬಟಿಯಟ್ಟಲಾಗದೆ ಕೆಮ್ಮನಿ ।
ನ್ನೆಂತುಮೇಂ ಪನಿಪಾಟ್ತಿಯಿಂ ಬೆಸಸಲ್ಕೆ ಬಂದೆಯೊ ಭೂಭುಜಾಧಿಪಾ ॥

ಎಂದು ಆತ್ಮೀಯತೆಯಿಂದಲೇ ಕೇಳಿದ ಶಲ್ಯನಿಗೆ-ದುರ್ಯೋಧನನು ಅಳುಕುತ್ತ ಅಂಜುತ್ತ ಕೇಳಲು ಶಂಕಿಸುವ, ಅದಕ್ಕೆ ಶಲ್ಯನು ಹೇಳು ಹೇಳೆಂದು ತವಕಿಸುವ ಸಂದರ್ಭ ಅನುಪಮ ನಾಟಕೀಯ ಗುಣದ್ದು.

"ಬೆಸಸೆನೆಯುಂ ನುಡಿಯಲ್ ಶಂ।
ಕಿಸಿದವೆ, ನಾನೆಂದಡೇಕೆ ಶಂಕಿಸುವೈ ನೀಂ।
ಬೆಸವೇಳಿ್ನೆ, ಜಯವಧು ಕೂ।
ರ್ತ್ಮೊಸೆದಿರ್ಕುಂ ಮಾವ ನಿಮ್ಮ ದಯೆಯಿಂದೆಮ್ಮಂ॥

ಎಂದು ಕೊನೆಗೆ ದೈನ್ಯನಾಗಿ ತನ್ನ ಅಭಿಮತವನ್ನು ತಿಳಿಸಿ—

"ಪುಸಿಯೆನೆ ರಥಮಂ ಹರಿ ಚೋ
ದಿಸುವಂತೆವೊಲಿರ್ದದೆಂತು ನರನಂ ಗೆಲಿಪಂ।
ವಿಸಸನದೊಳಂತೆ ನೀಮುಂ।
ವೆಸರಂ ಕರ್ಣಂಗೆ ಮಾಡಿ ಗೆಲ್ಲಂ ಗೊಳ್ಳಿಂ।

ಎನ್ನುತ್ತಲೇ —ಶಲ್ಯ ಕಿಡಿಕಿಡಿಯಾಗಿ ಉರಿದೇಳುತ್ತಾನೆ. ಅತಿ ಶ್ರೇಷ್ಠಕುಲದ ರಾಜವಂಶದಲ್ಲಿ ಬಂದ ತನ್ನಂಥವ ಸೂತಕುಲಾಧಮ ಕರ್ಣನಿಗೆ ಸಾರಥಿಯಾಗುವುದೆಂದರೇನು ? ಅವನಿಗೆ ಇದು ಆಚಂದ್ರಾರ್ಕ ಅಪಮಾನ. ದುರ್ಯೋಧನನು ಹೀಗೆ ಕೇಳಿದ್ದಕ್ಕೆ ಶಲ್ಯನಿಗಾದ ಸಿಟ್ಟಿನ ಪರಾಕಾಷ್ಠತೆಯನ್ನು ಪಂಪ, ಧ್ವನಿಪೂರ್ಣವಾಗಿ ಪ್ರಕಟಿಸಿದ್ದಾನೆ. "ಮದ್ರರಾಜನುಮ್ಮಚ್ಚರದೊಳುಮ್ಮನೆ ಬೆಮರ್ತುಕಿನಿಸಿ ಕಿಂಕರಿವೋಗಿ–

ಕಲಿಯುನೆ ಪಂದೆ ಮಾಳ್ಪ, ಕಡುವಂದೆಯುನೊಳ್ಗಲಿ ಮಾಳ್ಪತಕ್ಕನಂ।
ಪೊಲೆಯುನೆ ಮಾಳ್ಪ ಮುಂ ಪೊಲೆಯುನಂ ನೆರೆ ತಕ್ಕನೆ ಮಾಳ್ಪ ತಮ್ಮೊಳ
ಗಲ್ಲಿಸಿ ಪೊದ್ದ ಪರ್ದಿದವಿವೇಕತೆಯಿಂ ನೃಪಚಿತ್ತವೃತ್ತಿ ಸಂ।
ಚಲಮದರಿಂದ ವೋಲಗಿಸಿ ಬಾಳ್ವುದೇ ಕಷ್ಟಮಿಳಾಧಿನಾಥರಂ॥

ಎಂದು ರಾಜರಾದವರ ಅವಿವೇಕವನ್ನೇ ಬಯಲಿಗಿಟ್ಟ ಶಲ್ಯ, ತನ್ನ ಸ್ವಾಭಿಮಾನ ನಿಷ್ಠೆಯಿಂದ ಮಿಗಿಲೆನಿಸುತ್ತಾನೆ. ರಾಜನಾದವನು ಏನು ಮಾಡಲಿಕ್ಕೂ ಹಿಂಜರಿಯನು. ಹೇಡಿಯನ್ನು ವೀರನನ್ನಾಗಿ, ವೀರನನ್ನು ಹೇಡಿಯನ್ನಾಗಿ ಮಾಡುತ್ತಾನೆ. ಯೋಗ್ಯನಾದವನನ್ನು ಹೊಲೆಯನನ್ನಾಗಿ ಮತ್ತೆ ಹುಟ್ಟಾ ಹೊಲೆಯನಾದವನನ್ನು ಯೋಗ್ಯನನ್ನಾಗಿ ಮಾಡುವ ಇಂಥ ಸಂಚಲಿತ ಮನಸ್ಸುಳ್ಳ ರಾಜರನ್ನು ಓಲಗಿಸಿ ಬಾಳುವುದೇ ಕಷ್ಟವೆಂದು ನೊಂದುಕೊಳ್ಳುತ್ತಾನೆ. ಅದಲ್ಲದೆ— "ಅನುಪಮವಾದ ಪರಾಕ್ರಮದ ರೀತಿ, ವಿಶಾಲವಾದ ತ್ಯಾಗದ ಗುಣ, ಋತುವಾಕ್ಯ ಸತ್ಯ, ಇವೇ ಮೂರ್ನಾಲ್ಕು ರಾಜರಿಗೆ ಹಿರಿದಾದ ಗುಣಗಳು. ಅತ್ತ ಇನ್ನೊಂದೆಡೆ— ಅರಸ ಕುಲದಲ್ಲಿ ಹುಟ್ಟಿದ ಗುಣ, ಮದ, ಮದಹೊಂದಿದ ಅವಿವೇಕತನ ಹಾಗೂ ತೊತ್ತಿನ ವೊಲೆವಾಲಗುಂಡ ಗುಣಗಳೇ ರಾಜರಿಗೆ ಗುಣಗಳಲ್ಲವೆ ? ಅವುಗಳನ್ನು ಯಾರು ಹೊಗಲಾಡಿಸುವರ್" ಎಂದು ಮುಂದುವರೆದು ರಾಜರ ಗುಣಾವಗುಣಗಳನ್ನು ಹಂಗಿಸುತ್ತಾನೆ.

"ಪಿಂದೆ ಕಡಂಗಿ ತೇರನೆಸಗೆಂಬವನಂಬಿಗನಾಜಿರಂಗದೊಳ್
ಮುಂದೆ ಸಮಾನನಾಗಿ ಬೆಸದಿರ್ಪವನುಂ ತುಱುಕಾರನಾಗೆ ಮ ।
ತ್ಸ್ಯಂದನ ಚೋದನಕ್ರಮಮದಂ ಪೊಲೆಯುಂಗಮರ್ದಿರ್ಕುಮಂತುಟಂ ।
ನೀ ದಯೆಗೆಯ್ದು ಪೇೞ್ದಿಯಿದನಾರ್ ಪಡೆವರ್ ಫಣಿರಾಜಕೇತನಾ ॥

'ಇಂಥವನಿಗೆ ಸಾರಥಿಯಾಗುವ ಸೌಭಾಗ್ಯವನ್ನು ಯಾರು ಪಡೆಯುತ್ತಾರೆ' ಎಂದು ದುರ್ಯೋಧನನಿಗೆ ಕೊಂಕಿಸಿ ಹೇಳುವ ಶಲ್ಯನ ಮಾತಿಗೆ ದುರ್ಯೋಧನನಿಗೆ ಬಾಯೇಳದು. ಪುನಃ ಶಲ್ಯನೆ ಎಷ್ಟು ಮನಸಿಲ್ಲದಿದ್ದರೂ ಸಜ್ಜನರು, ಸ್ವಾಮಿಗೆ ಹಿತರಾದವರು ತಿಳಿಯಬೇಕು. ನೀನು ಪ್ರೀತಿಸದಿದ್ದರೂ ನಿನ್ನ ಮಾತನ್ನು ಯುದ್ಧ ರಂಗದಲ್ಲಿ ಮೀರುವನೇ ? ಎಂದು ತನ್ನ ಅಸಹಾಯಕತೆಯನ್ನು ಪ್ರಕಟಪಡಿಸುತ್ತಾನೆ.

ಹೀಗೆ ಅತ್ಯಂತ ಮನನೊಂದು ನುಡಿದ ಶಲ್ಯನ ಮಾತಿಗೆ ಅಷ್ಟೇ ವಿನೀತನಾದ ದುರ್ಯೋಧನ '–ನೀಮೆನಗಿನಿತಂ ಕೆಮ್ಮನೆಲೆ ಮಾವ ಮನಂ ನೊಂದು ಬೆಸಸಿದಿರ್' ನನ್ನ ಬಿನ್ನಪವನ್ನು ಅವಧರಿಸಬೇಕು, ಅಂಗಮಹೀಶನು ಸಾಮಾನ್ಯನಲ್ಲ, ಆತ ಕುಲಹೀನನಾದೊಡೆ ಪರಶುರಾಮನು ಆತನಿಗೆ ದಿವ್ಯ ಬಾಣಾವಳಿಯನ್ನು ಕೊಡುತ್ತಿದ್ದನೆ ? ಕಲಿತನಕ್ಕೆ, ತ್ಯಾಗ, ವೀರಕ್ಕೆ ಆತ ಹರಿಗೆ ಕವಚಕೊಟ್ಟದ್ದೇ ಸಾಕ್ಷಿಯಲ್ಲವೆ? ಎಂದು ಶಲ್ಯನ ಹೃದಯದ ನೋವು ಕರಗುವ ಹಾಗೆ ನಿವೇದಿಸಿಕೊಂಡು ಅಂತೂ ಎಂತಾನುಂ ಕರ್ಣನಿಗೆ ಸಾರಥಿಯಾಗುವಂತೆ ಒಪ್ಪಿಸುತ್ತಾನೆ. ಆದರೆ ಶಲ್ಯ ಒಪ್ಪಿದರೂ ಒಂದು ಕರಾರಿನಿಂದ–"ಹರಿಯು ಹೇಳಿದಂತೆ ಅರ್ಜುನನು ಹೇಗೆ ಬಾಣಪ್ರಯೋಗ ಮಾಡುವನೋ ಹಾಗೆ ನಾನು ಹೇಳಿದಂತೆ ಕರ್ಣನು ಬಾಣಪ್ರಯೋಗಿಸಬೇಕು. ಇದಕ್ಕೆ ತಪ್ಪಿದರೆ 'ಆಂ ಸ್ಯಂದನದಿಂದಿಳಿದು ಪೋಪೆಂ ಎಸಗೆಂ ತೇರಂ' ಎಂದು ತನ್ನ ನಿರ್ಧಾರ ತಿಳಿಸುತ್ತಾನೆ. ಆಗ ತಕ್ಷಣವೇ ಕರ್ಣನನ್ನು ಕರೆಸಿದ ದುರ್ಯೋಧನ "ಮಹಾಜಿಯಲ್ಲಿ ಮಾವತಾನೇನಂಬಸದನಂತೆ ಮೀರದೊಡಂಬಡಲು" ಕರ್ಣನಲ್ಲಿ ಪ್ರಾರ್ಥಿಸಿ, ಅವರೀರ್ವರನ್ನು ಒಡಬಂಡಿಸಿ ತನ್ನ ಬಿಡಾರಕ್ಕೆ ಮರಳುತ್ತಾನೆ.

ಇತ್ತ ಪಾಂಡವರಿಗೆ ಈ ಸುದ್ದಿ ತಿಳಿಯುತ್ತಲೇ ಧರ್ಮರಾಯನು ಎಂದಿನಂತೆ ಕೃಷ್ಣನನ್ನು ಮೊರೆಹೋಗುತ್ತಾನೆ. ಆಗ ಕೃಷ್ಣನೂ ಶಲ್ಯನ ಪರಾಕ್ರಮವನ್ನು ಹೊಗಳುತ್ತಾನೆ. ರಥಕಲ್ಪ (ಶಾಸ್ತ್ರ)ವೆಂಬುದು ಶಲ್ಯನೊಡನೆಯೇ ಹುಟ್ಟಿದ್ದು ನಿಜ. ಆದರೆ ಶಲ್ಯ–ಕರ್ಣ ಇಬ್ಬರಿಗೂ ಹೊಂದಾಣಿಕೆ ಅಸಾಧ್ಯವೆಂಬುದನ್ನು ತಿಳಿಸಿ ಮುಂದಾಗ ಬಹುದಾದ ಕೌರವರ ಅಸಿಷ್ಟವನ್ನು ಧ್ವನಿಸುತ್ತಾನೆ.

ಇನ್ನು ಶಲ್ಯ ಸಾರಥ್ಯದಲ್ಲಿ ಕುರುಕ್ಷೇತ್ರ ಯುದ್ಧಪ್ರಾರಂಭ. ಅರ್ಜುನ, ಕರ್ಣರಿಗೆ ಕೃಷ್ಣ ಹಾಗೂ ಶಲ್ಯ ಸಾರಥ್ಯವಹಿಸಿದ ಅಭೂತಪೂರ್ವ ಪ್ರಸಂಗ.

"ಆದಿತ್ಯನ ಸಾರಥಿ ಬೆರ
ಗಾದಂ ಮಾತಾಳಿ ಮಾತಂಗೆಟ್ಟಂ ಧುರದೊಳ್

ಚೋದಿಸೆ ಹರಿಯುಂ ಶಲ್ಯನುಂ
ಮಾದರದಿಂ ನರನ ದಿನಪ ತನಯುನ ರಥಮಂ" ॥

ಎಂದು ಪಂಪನು ಆ ಘಟನೆಯನ್ನು ಇನ್ನೂ ಅದ್ಭುತರವನ್ನಾಗೊಳಿಸುತ್ತಾನೆ. ಕರ್ಣಾರ್ಜುನರ ಕಾಳಗ ನೋಡಲು ದೇವದೇವತೆಗಳೆಲ್ಲರೂ ಕಿಕ್ಕಿರಿದು ಕೂಡಿದ ಬ್ರಹ್ಮಾಂಡವೇ ನಡುಂಗುವಂಥ ಯುದ್ಧದ ಭೀಕರ ಪ್ರಸಂಗ–ಕೊನೆಗೆ ಕರ್ಣನು ರೌದ್ರಶರವನ್ನು ತೊಡುವಾಗ, ಶಲ್ಯನು ಕರ್ಣನನ್ನು 'ಆ ಭೀಕರವಾದ ಬಾಣವನ್ನು (ವಿವೇಕದಿಂದ) ಎದೆಗೆ ಗುರಿಯಿಟ್ಟು ಹೊಡೆಯದೆ, ತಲೆಗೆ ಏಕೆ ಗುರಿಯಿಡುವೆ ? ಎಂದು ಎಚ್ಚರಿಸುತ್ತಾನೆ. ಅಲ್ಲದೆ :

ಉರದೆಡೆಗೆ ತಂಡೆ ಜಯಶ್ರೀ
ಗಿರಿಲೆಡೆ ನಿನಗಪ್ಪುದಾ ಸುಯೋಧನನೊಳ್ ಶ್ರೀ
ಗಿರಲೆಡೆಯಪ್ಪುದು ವೇಣ್ ದಿನ ।
ಕರ ಸುತ ತೊದಳುಂಟೆ ಬಗೆಯೆ ಸಂದೇಹಮುಂಟೇ.

ಎಂದು ಪುನಃ ಎಚ್ಚರಿಸುತ್ತಾನೆ. ಆದರೆ ಅದೊಂದು ಫಲಕಾರಿಯಾಗಲಿಲ್ಲ. ಶಲ್ಯನ ಮಾತಿನಲ್ಲಿ ಸತ್ಯವನ್ನೇ ಕಂಡ ಕರ್ಣನೇ ತಪ್ಪಿದ. ಸಹೋದರ ಸಂಬಂಧದಲ್ಲಿ ಶಲ್ಯನ ಮಾತು ನಾಟದೇಹೋಯ್ತು. ಬಾಣ ಅರ್ಜುನನ್ನು ಕೊಲ್ಲದೇ ಆತನ ಕಿರೀಟವನ್ನು ಹಾರಿಸಿಕೊಂಡು ನಭಕ್ಕೆಗರಿತು. ಇದನ್ನು ಕಂಡ ಶಲ್ಯಂ ಕಿನಿಸಿ ಮುಳಿಸಿನೊಳ್ "ಕಣ್ಣಾಣದಿಂತಪ್ಪೇಕಗ್ರಾಹಿಗಂ ರಥಮನೆಸಗೆನೆಂದು" ಎಂದು ತನ್ನ ರಥವಿಳಿದು ಹೊರಟೇ ಬಿಡುತ್ತಾನೆ. ಇಲ್ಲಿ ಶಲ್ಯನು, ತನ್ನ ಸೋದರ ಅಳಿಯಂದಿರಾದ ನಕುಲ–ಸಹದೇವರನ್ನು ಕೊಲ್ಲಲು ಆಕ್ಷೇಪಿಸುವದು, ಮತ್ತು ಅಳಿಯನೇ ಆದ ಅರ್ಜುನನ್ನು ಕೊಲ್ಲು ಎಂದು ಆಜ್ಞಾಪಿಸುವುದು ಈ ಆತನ ಯುದ್ಧನೀತಿ ಮೆಚ್ಚುಗೆಗೆ ಪಾತ್ರವಾದುದಲ್ಲ.

ಇನ್ನು ನಾವು ಪಂಪಭಾರತದಲ್ಲಿ ಶಲ್ಯನನ್ನು ಕಾಣುವುದು ಆತ ಸೇನಾಪತಿಯಾದಾಗ. ಅಲ್ಲಿಯೂ ಕೈಯಲ್ಲಿ ಇಚ್ಛಾಮರಣಿಯಾಗುವುದೇ ಆತನ ಪರಮ ಸಾಧನೆಯಾದಂತಾಗಿದೆ. ಕೌರವನ ಸೇನೆ ಆತನ ಸೇನಾದಿ ಪಟ್ಟದಲ್ಲಿ ಯುದ್ಧ ಮಾಡಿದ್ದು ಕೇವಲ ಅರ್ಧದಿನ ಮಾತ್ರ. ಕರ್ಣ ವೀರಮರಣ ಪಡೆದನಂತರವೂ ಆಟಾಟೋಪ ಮಾಡಿದ ಅಶ್ವತ್ಥಾಮನಿಗ ಸೇನಾನಿಪಟ್ಟ ದೊರೆಯಲಿಲ್ಲ. ಅದು ಸಹಜವಾಗಿ ಶಲ್ಯನಿಗೆ ಸಂದಿತು.

"ಮುಂಟ್ಟುಗಿಡೆ ತಾನೆ ತನ್ನಂ
ಕಟ್ಟಿಸಿಕೊಳ್ವಂತೆ ಬೀರವಟ್ಟಮನಾಗಳ್
ಕಟ್ಟಿಸಿಕೊಂಡಂ ಶಲ್ಯಂ
ಕಟ್ಟಿದುದಂ ಕಳೆಯಲಾಗಮೇಂ ತೀರ್ದಪ್ಪುದೇ ?

(ತ್ರಯೋದಶಾಶ್ವಾಸಂ ಪ. ೩೦)

ಎಂದು ಪಂಪನು ಇಡೀ ಭಾರತದಲ್ಲಿಯ ವಿಧಿಯ ಕೈವಾಡವನ್ನು ಧ್ವನಿಸಿರುವುದು ಗಮನಾರ್ಹ. 'ಆಯುಧಗಳೆಲ್ಲ ನಾಶವಾಗಲು ತಾನೇ ತನ್ನನ್ನು ಕಟ್ಟಿಕೊಳ್ಳುವಂತೆ ಶಲ್ಯನು ವೀರಪಟ್ಟವನ್ನು ಕಟ್ಟಿಕೊಂಡನಂತೆ. ಹೀಗೆ ಕಟ್ಟಿಕೊಂಡದ್ದನ್ನು ಬಿಡಿಸಲು ಯಾರಿಗಾದರೂ ಸಾಧ್ಯವೆ ?' ಎಂದು ವಿಧಿಯ ಮಹತ್ವವನ್ನು ಮತ್ತೆ ಎತ್ತಿ ಪ್ರಕಟಿಸುತ್ತಾನೆ.

ಇತ್ತ ಶಲ್ಯನಿಗೆ ವಿರುದ್ಧವಾಗಿ ಅತ್ತ ಪಾಂಡವರಲ್ಲಿ ಧರ್ಮರಾಯನೇ ಸೇನಾಧಿಪತ್ಯ ವಹಿಸುತ್ತಾನೆ. ಎದುರಾಗಿ ಬಂದು ಮುತ್ತಿದ ತನ್ನ ಅಳಿಯರಾದ ನಕುಳ, ಸಹದೇವರನ್ನು ಶಲ್ಯನು ವಿರಥಮಾಡಿ ಹಿಡಿದುಕೊಂಡು ಪುಲ್ಲಸೂಡನೀಡಾಡುವಂತೆ ಅತ್ತಿತ್ತ ತೂರಾಡುತ್ತಾನೆ. ಭೀಮನನ್ನು 'ಪೊಣರ್ದುನೆಲಕ್ಕಿಕ್ಕಿಬೆನ್ನಂ ಮೆಟ್ಟಿ; ದಾಂಟುವ ಮದಗಜದಂತೆ 'ಕೊಲ್ಲಲೊಲ್ಲದೆ' ದಾಂಟುತ್ತಾನೆ. ಕೊನೆಗೆ ಒಬ್ಬರನ್ನು ಕೊಲ್ಲಲಿಲ್ಲ. ಆಗ ಇದನ್ನೆಲ್ಲ ಅಂದರೆ ಕೈಗೆ ಸಿಕ್ಕ ವೈರಿಗಳನ್ನು ಕೊಲ್ಲಲೊಲ್ಲದ ಇವರನ್ನು ಕಂಡು ದುರ್ಯೋಧನನು ಕೆಡುಕೆನಿಸಿಕೊಂಡು– ಅಶ್ವತ್ಥಾಮ, ಶಲ್ಯ, ಕೃಪ, ಕೃತವರ್ಮರನ್ನು ಕುರಿತು ಮಹಾರಥಿಕರೆ, ನಿಮ್ಮ ಕುಲಕ್ಕೆ ತಕ್ಕುದಾದ ವರ್ತನೆ ನಿಮಗಿದೆ. ಕ್ಷತ್ರಿಯ ರಾಜರ ಮಕ್ಕಳಾಗಿದ್ದೀರಿ ಎಂದು ನಂಬಿದ್ದೆ. ಆದರೆ ನೀವು ವೈರಿಗಳಲ್ಲಿ ಬಾಂಧವ್ಯವನ್ನೇ ಇಟ್ಟಿರುವಿರೆಂಬುದನ್ನೀಗ ಅರಿತೆ. ಇನ್ನು ಈ ಯುದ್ಧ ಭೂಮಿಯಲ್ಲಿ ನೀವೆಲ್ಲ ನನಗೆ ಸಂಬಂಧಿಸಿದವರೆಂದು ಹೇಳಿದರೆ– ನಾನು ಫಣಿಧ್ವಜನೆ ? ಎಂದು ಉಗ್ಘಡಿಸುತ್ತಾನೆ.

"ಕಾದುವ ಮಾಟಕ್ಕೆಯಿಲ್ಲವಿದು ಕೆಮ್ಮನೆ ನಣ್ಪಿನ ಮೇಳಗಾಳಗಂ
ಗಾದುವ ಮಾಳ್ಕೆ ಸಿಂಧು ಘಟ ಸೂತ ಸುತರ್ಕಳಿನಾಗದೊಂದು ರಾ ।
ಜ್ಯೋದಯಮಮ್ಮ ನಿಮ್ಮ ಬಲದಿಂದೆನಗಪ್ಪುದೆ ಮದ್ವಿರೋಧಿಯಂ
ಭೇದಿಸಲಾನೆ ಸಾಲ್ವೆಸಿರಿಮನ್ನೆಗಮೀ ರಣರಂಗ ಭೂಮಿಯೊಳ್ ॥

ದುರ್ಯೋಧನನ ಈ ಮರ್ಮಭೇದಕ ಮೂದಲಿಕೆಯ ನುಡಿ ನೇರವಾಗಿ ಶಲ್ಯನನ್ನು ರೇಗಿಸಿತು. ಅಂತೆಯೇ ಆತನೆಸಗಿದ ಬಾಣಾವಳಿಗಳ ಸುರಿಮಳೆ ದಿಕ್‌ದಿಗಂತವನ್ನು ವ್ಯಾಪಿಸಿತು. ಧರ್ಮರಾಯ–ಶಲ್ಯ ಎದುರಾದರು. ಶಲ್ಯನ ಹೊಡೆತಕ್ಕೆ ಪೆರ್ಮರದಂತೆ ಬಿದ್ದ ಧರ್ಮರಾಯನನ್ನು ಕಂಡು ಶಲ್ಯನು

"ಮುಳಿಯಿಸದನ್ನಮೀ ನೃಪನಿನಾಗದು ಸಾವೆನಗೆಂತುಮೀತನಂ ।
ಮುಳಿಯಿಪೆನೆಂದುರಃಸ್ಥಳಮನಂತೊದೆದಾಗಡೆ ಕಂತುಗೀಶ್ವರಂ ।
ಮುಳಿದಮೊಲಾ ನೃಪಂ ಮುಳಿದು ನೋಡೆ ವಿಲೋಚನ ಪಾವಕಂ ತಗು
ಳ್ದಳುರ್ದೊಡೆ ಬೂದಿಯಾದುದೊಡಲಾಗಳೆ ಮದ್ರಮಹಾಮಹೀಶನಾ'

ಅಂದರೆ— ಧರ್ಮರಾಯನನ್ನು ಸಿಟ್ಟಿಗೇಳಿಸದೇ ಈತನಿಂದ ತನ್ನ ಮರಣ ಸಾಧ್ಯವಿಲ್ಲವೆಂದು ಬಗೆದು, ಆತನ ಉರಸ್ಥಳಕ್ಕೆ ಒದೆಯುತ್ತಾನೆ. ಆಗ ಶಿವನು ಸಿಟ್ಟಿಗೆದ್ದ

ತೆರದಲ್ಲಿ ಕೋಪಿಸಿಕೊಂಡ ಧರ್ಮರಾಯನು ಉರಿಗಣ್ಣಿನಿಂದ ನೋಡಲು ನೇತ್ರಾಗ್ನಿಯಿಂದ ಶಲ್ಯನ ದೇಹವು ಬೂದಿಯಾಯಿತಂತೆ. ಲೌಕಿಕವನ್ನೇ ಮೆರೆವ ಪಂಪನಂಥ ಕವಿಗೆ ಈ ಪ್ರಸಂಗ ಹೇಗೆ ವಾಸ್ತವಿಕವೆನಿಸಿತೋ ತಿಳಿಯದು. ವ್ಯಾಸ ಭಾರತದಲ್ಲಿ ಧರ್ಮರಾಜನು ಶಕ್ತ್ಯಾಯುಧವನ್ನು ಪ್ರಯೋಗಿಸಿ ಶಲ್ಯನ ಎದೆಯನ್ನು ಸೀಳಿದ ಸಂಗತಿಯೇ ಪಂಪನಿಗಿಂತ ಹೆಚ್ಚು ವಾಸ್ತವಿಕವಾದುದೆನಿಸುತ್ತದೆ. ಕುಮಾರವ್ಯಾಸನೂ ವ್ಯಾಸನನ್ನೇ ಅನುಕರಿಸಿರುವುದು ಗಮನಾರ್ಹ. "ಪಂಪನಿಗೆ ಈ ಸಂಗತಿಗೆ ಪ್ರಚೋದನೆ ಕೊಟ್ಟದ್ದು ವ್ಯಾಸ ಭಾರತವೇ" ಎಂದು ವಿದ್ವಾಂಸರು ಭಾವಿಸುತ್ತಾರೆ. "ಪೂತಾತ್ಮನೂ ಕಲ್ಮಷರಹಿತನೂ ಆಗಿದ್ದ ಧರ್ಮರಾಜನ ದೃಷ್ಟಿಪಾತದಿಂದ ಮದ್ರರಾಜನು ಏಕೆ ಭಸ್ಮವಾಗಲಿಲ್ಲ ಎಂಬುದೇ ನನಗೆ ಅದ್ಭುತವಾಗಿ ತೋರುತ್ತದೆ" ಎಂಬ ಸಂಜಯನ ಈ ಮಾತನ್ನೇ ಪರಿಭಾವಿಸಿ ಪಂಪನು ಹೀಗೆ ಶಲ್ಯ ಬೂದಿಯಾಗುವಂತೆ ಮಾಡಿರಬೇಕು.

ಒಟ್ಟಾರೆ ಕೃಷ್ಣನಿಗೆ ಸಮಾನವಾದ ಶಲ್ಯನ ಅಮೋಘ ಸಾರಥ್ಯ ಪರಾಕ್ರಮ್ಮವನ್ನೇ 'ಬಲ'ವೆಂದು ಪಂಪನು ಪರಿಗಣಿಸಿರಬೇಕು. ಕರ್ಣನಿಗೆ ಹೀಗೆ ಬಾಣ ಎಸಗೆಂದು ಸೂಚಿಸಿರುವುದರಲ್ಲೂ ಶಲ್ಯನ ಕುಶಾಗ್ರಬುದ್ಧಿಯು ಮೇಲ್ಮೆ ಎದ್ದು ಕಾಣುತ್ತದೆ.

ಹೀಗೆ ಶಲ್ಯನು ಮಹಾಭಾರತದ ದೊಡ್ಡ ವ್ಯಕ್ತಿಯಾದರೂ, ಪಂಪ ಭಾರತದಲ್ಲಿ ಆತನ ವ್ಯಕ್ತಿತ್ವ, ಪರಾಕ್ರಮ ಶಕ್ತಿಯೆಲ್ಲಾ ಉಕ್ತವಾದದ್ದೂ ಕಡಿಮೆ. ಹಿರಿಯ ರಾಜಕಾರಣಿಯಾಗಿ, ಕರ್ಣನ ಸಾರಥಿಯಾಗಿ, ಕೌರವನ ಕೊನೆಯ ಸೇನಾಪತಿಯಾಗಿ ಬರುವ ಶಲ್ಯ. ಕೊನೆಗೆ ಧರ್ಮರಾಯನ ಕೈಯಲ್ಲಿ ಸಾಯುವುದಕ್ಕಾಗಿಯೇ ಸೇನಾಪತಿ ಪಟ್ಟವನ್ನು ಕಟ್ಟಿಸಿಕೊಂಡ. ದುರ್ಯೋಧನನಿಗೆ ಕೇಡು ಬಗೆದವರ ಸಾಲಿನಲ್ಲಿಯೇ ನಿಂತರೆ ಅಚ್ಚರಿಯಿಲ್ಲ. ಮೂಲತಃ ದೈವವನ್ನೇ ನಂಬಿ ದಿವ್ಯ ಪರಾಕ್ರಮ ಮೆರೆದ ಪಾಂಡವರ ಮೇಲಿನ ಪ್ರೀತಿಗಾಗಿ ಅವರೆಲ್ಲರೂ ಸ್ವಬಲಪರಾಕಾಷ್ಠೆ ಮೆರೆದ ಕೌರವನ ಗಂಟಲ ಗಾಳವಾದರು. ಉಂಡಮನೆ ಗಳ ಎಣಿಸಿದರು. ನಂಬಿನಚ್ಚಿದ ಛಲದಂಕಮಲ್ಲನಿಗೆ ಕೊನೆಗೂ ಜಯವಧು ದಕ್ಕದಂತೆ ಸರಿಯಾಗಿ ನೋಡಿಕೊಂಡರು. ಅಂಥ ಸ್ಥಿತಿ ಅವರೆಲ್ಲರಿಗೂ ಒದಗಿದ್ದು ಅವರವರ ದೌರ್ಬಲ್ಯ ಹಾಗೂ ನಿರ್ಭಾಗ್ಯ, ಅದೇ ಕೌರವೇಶ್ವರನ ದೌರ್ಭಾಗ್ಯ.

ಚಾಪವಿದ್ಯಾಬಲದೊಳ್ ಕುಂಭೋದ್ಭವಂ

ಬಿ. ವ್ಹಿ. ಮಲ್ಲಾಪೂರ

ಚಾಪವಿದ್ಯಾಬಲ ಎರಡು ವಿಧದಲ್ಲಿ ಪ್ರಕಟಗೊಳ್ಳುವ ಸಾಧ್ಯತೆಯಿದೆ. ಭಕ್ತಿ, ಪರಿಶ್ರಮ ಸತತಾಭ್ಯಾಸಗಳಿಂದ ತಾನು ಕಲಿತು ಅರಗಿಸಿಕೊಂಡ ವಿದ್ಯೆಯನ್ನು, ಗುರುವಾಗಿ ತನ್ನ ಯೋಗ್ಯ ಶಿಷ್ಯರಿಗೆ ಕರಗತವಾಗುವಂತೆ ಅವರ ಮೈಯ್ಯಲ್ಲಿ ಅದು ಇಳಿದು ಬರುವಂತೆ ಮಾಡುವ ವಿಧಾನ ಒಂದು, ತನ್ನ ವಿದ್ಯೆಯನ್ನು ಯುದ್ಧರಂಗದಲ್ಲಿ ಪ್ರತ್ಯಕ್ಷ ಕಾರ್ಯರೂಪಕ್ಕಿಳಿಸಿ ಮೆರೆಯುವದು ಇನ್ನೊಂದು. ಚಾಪವಿದ್ಯೆಯ ಬಲವನ್ನು ಈ ಎರಡೂ ವಿಧಾನದ ಮೂಲಕ ಪ್ರದರ್ಶಿಸಿದ ಪಾತ್ರಗಳು ಮಹಾಭಾರತದಲ್ಲಿ ದ್ರೋಣನೊಬ್ಬನನ್ನು ಬಿಟ್ಟರೆ ಮತ್ತಾರೂ ಇಲ್ಲ. ಆದುದರಿಂದಲೆ ಪಂಪ "ಚಾಪವಿದ್ಯಾಬಲದೊಳ್ ಕುಂಭೋದ್ಭವಂ" ಎಂದು ಹೇಳಿದಂತೆ ತೋರುತ್ತದೆ.

ಭರದ್ವಾಜ ಬ್ರಹ್ಮರ್ಷಿಯ ಮಗನಾದ ದ್ರೋಣ, ಪರಂಪರಾಗತವಾದ ವೈದಿಕ ವಿದ್ಯೆಯನ್ನು ಬಿಟ್ಟು ಚಾಪವಿದ್ಯೆಯನ್ನು ತನ್ನ ಜೀವನವೃತ್ತಿಯಾಗಿ ಆರಿಸಿಕೊಂಡುದು ಕೇವಲ ಒಂದು ಆಕಸ್ಮಿಕವೆ? ಅಥವಾ ಪರಿಸ್ಥಿತಿಯ ಒತ್ತಡಕ್ಕೆ ಒಳಗಾಗಿ ಹಾಗೆ ಮಾಡಬೇಕಾಯಿತೆ? ವಿಚಾರಣೀಯ. ದ್ರೋಣನ ಜನನ ಪ್ರಸಂಗವೂ ಇದಕ್ಕೆ ಒಂದು ಕಾರಣವಾಗಿರಬೇಕೆಂದು ಊಹಿಸಬಹುದು. ನಿಯಮನಿಧಾನನಾದ ಭರದ್ವಾಜ ಬ್ರಹ್ಮರ್ಷಿ, ಸುರತನಿಧಾನಿಯಾದ ಅಮೃತಾಬ್ಧಿಯೆಂಬ ಅಮರೇಂದ್ರಗಣಿಕೆಯನ್ನು ಕಲಶಕರನಾಗಿ ಗಂಗಾಸ್ನಾನಕ್ಕೆ ಹೋಗುತ್ತಿರುವಾಗ ಕಾಣುತ್ತಾನೆ. ಎಲರ ಸೋಂಕಿನಿಂದ ತೆರಪಾದ ಅವಳ ಪೊಳೆವ ಬೆಳ್ದೊಡೆಗಳು ಮದನನ ಮಸೆದ ಬಾಣದಂತೆ, ಭರದ್ವಾಜನ ತೆರಪಾದ ಎದೆಯನ್ನು ನಡುತ್ತವೆ. ಕಂತುಪರವಶನಾದ ಮುನಿಯಲ್ಲಿ ಧೈರ್ಯಕ್ಷರಣೆ ಇಂದ್ರಿಯಕ್ಷರಣೆಗಳೆರಡೂ ಏಕಕಾಲಕ್ಕೆ ಸಂಭವಿಸುತ್ತವೆ. ಸೋರ್ವ ಇಂದ್ರಿಯವನ್ನು ದ್ರೋಣದಲ್ಲಾಂತಾಗ ಅಲ್ಲಿ ಶಿಸುವೊಂದು ಕಂಡುಬರುತ್ತದೆ. ದ್ರೋಣದಲ್ಲಿ ಹುಟ್ಟಿದ ಆ ಶಿಶುವಿಗೆ ದ್ರೋಣನೆಂಬ ಹೆಸರಿಟ್ಟು ಕಾಪಾಡುತ್ತಾನೆ. ಇಂಥ ಮಗನಿಗೆ ವೈದಿಕವಿದ್ಯಾಭ್ಯಾಸ ಮಾಡಿಸಿದರೆ, ಅವನಿಗೆ ಮನ್ನಣೆ ಸಿಗಬಹುದೆ? ಎಂಬ ಪ್ರಶ್ನೆ ಭರದ್ವಾಜನನ್ನು ಕಾಡಿರಬೇಕು, ಆದುದರಿಂದಲೇ ಅವನು ತನ್ನ ಮಗನನ್ನು ತನ್ನ ಗೆಳೆಯನಾದ ಪಾಂಚಾಲದೇಶದ ದೊರೆ ಪೃಷತನ ಪುತ್ರ ದ್ರುಪದ ರಾಜಕುಮಾರನ ಜೊತೆ ಬಿಲ್ವಿದ್ಯೆಯನ್ನು ಅಭ್ಯಸಿಸಲು ಯಜ್ಞಸೇನನೆಂಬವನ ಬಳಿ

ಬಿಡುತ್ತಾನೆ.[೧] ಆ ಬಿಲ್ವಿದ್ಯೆಯ ಬಲದಿಂದಾದರೂ ತನ್ನ ಮಗ ಸುಖಜೀವನ ಸಾಗಿಸ ಲೆಂಬ ಬಯಕೆ ಭರದ್ವಾಜನದಾಗಿರಬೇಕು. ಅಥವಾ ಬಾಲಕನಾದ ದ್ರೋಣನ ಆಸಕ್ತಿ ಸ್ವಭಾವತಃ ಚಾಪವಿದ್ಯೆಯಲ್ಲಿದ್ದಿರಬಹುದೆ ? ಏನಿದ್ದರೂ ಬಿಲ್ವಿದ್ಯೆಯೇ ದ್ರೋಣನ ಪಾಲಿಗೆ ಬಂತು. ಅದರಲ್ಲಿ ಅವನು ಪಾರಂಗತನೂ ಆದ.

ದ್ರೋಣನ ವಿವಾಹವೂ ಭರದ್ವಾಜನಿಗೆ ಒಂದು ಸಮಸ್ಯೆಯಾಗಿರಬೇಕು. ಕೊನೆಗೆ ಅವನು ಶಾರದ್ವತೆ (ಕೃಪೆ)ಯೊಡನೆ ದ್ರೋಣನ ವಿವಾಹ ನೆರವೇರಿಸುತ್ತಾನೆ. ಶಾರದ್ವತೆ(ಕೃಪೆ)ಯ ಜನನವೂ ದ್ರೋಣನ ಜನನದಂತೆಯೆ ವಿಚಿತ್ರ. ಶರದ್ವತನೆಂಬ ತಪಸ್ವಿ, ಜಲಕ್ರೀಡಾ ನಿಮಿತ್ತ ಬಂದ ಜಲಚರೆಯೆಂಬ ಅಪ್ಸರಸಿಯನ್ನು ಕಂಡು ಕಾಮಾಸಕ್ತಚಿತ್ತನಾಗಿ ಅವಳನ್ನು ಕೂಡುತ್ತಾನೆ. ಆಗ ಉಂಟಾದ ಮನೋಜರಾಗರಸ ಅಲ್ಲಿ ಬೆಳೆದಿದ್ದ ನೊಸೆಯ ಹುಲ್ಲಿನ ಹೊದರಿನಲ್ಲಿ ಚೆಲ್ಲುತ್ತದೆ. ಶರದ್ವತ ನಾಚಿ ಬಿಲ್ಲು ಬಾಣ ಬಿಸುಟು ಅಲ್ಲಿಂದ ಹೊರಟುಹೋಗುತ್ತಾನೆ. ತಪಸ್ವಿಯ ವೀರ್ಯದಿಂದ ಒಂದು ಹೆಣ್ಣು ಒಂದು ಗಂಡು ಕೂಸು ಹುಟ್ಟುತ್ತವೆ. ಶಂತನುವಿನ ಕಡೆಯವರು ಆ ಕೂಸು ಗಳನ್ನುಒಯ್ದು ಶಂತನುವಿಗೆ ಒಪ್ಪಿಸುತ್ತಾರೆ. ಅದಕ್ಕೆ ಕೃಪ, ಕೃಪೆ ಹೆಸರಿಟ್ಟು ಶಂತನು ಸಾಕುತ್ತಾನೆ. ಆ ಕೃಪೆಯೇ ದ್ರೋಣನ ಹೆಂಡತಿಯಾದವಳು. ಇದನ್ನು ನೋಡಿದರೆ ಭರದ್ವಾಜನಿಗೆ ತನ್ನ ಮಗ ವೈದಿಕಪರಂಪರೆಯಲ್ಲಿ ಮನ್ನಣೆ ಪಡೆಯಲಾರನೆಂಬ ಭೀತಿ ಇದ್ದಿರಬಹುದೆಂದು ಊಹಿಸಬಹುದಾಗಿದೆ. ಭರದ್ವಾಜನ ಮರಣಾನಂತರ ದ್ರೋಣ, ವೈದಿಕಪರಂಪರೆ ಅನುಸರಿಸುವಂತಿರಲಿಲ್ಲ, ಬಿಲ್ವಿದ್ಯೆ ಹೇಳಿಕೊಡಲು ಶಿಷ್ಯರಿರಲಿಲ್ಲ. ಆದುದರಿಂದಲೆ ಕಡುಬಡತನ ಅವನನ್ನು ಕಾಡಿರಬೇಕು. ತನ್ನ ಮಗನಾದ ಅಶ್ವತ್ಥಾಮನಿಗೆ ಹಾಲು ಪೂರೈಸದಷ್ಟು ಬಡತನದ ಬವಣೆ ಅವನದು !

ಹೀಗೆ ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ದ್ರೋಣ ತನ್ನ ಮಗ ಅಶ್ವತ್ಥಾಮನೊಡಗೂಡಿ ನಾಡುನಾಡುಂ ತೊಳಲ್ದು, ಪರಶುರಾಮನಲ್ಲಿಗೆ ದಾನಾರ್ಥಿ ಯಾಗಿ ಬರುತ್ತಾನೆ, ಆದರೆ ಆ ಹೊತ್ತಿಗಾಗಲೆ ಪರಶುರಾಮ, ಕಶ್ಯಪ ಪ್ರಜಾಪತಿಗೆ ತನ್ನ ರಾಜ್ಯವೆಲ್ಲವನ್ನಿತ್ತು ತಪೋವನಕ್ಕೆ ನಡೆದಿರುತ್ತಾನೆ. ಅರ್ಘ್ಯವೀಯಲು ಅವನ ಬಳಿ ಕನಕಪಾತ್ರೆಕೂಡ ಇರುವುದಿಲ್ಲ. ಆದುದರಿಂದ ಮೃತ್ಪಾತ್ರೆಯಲ್ಲೇ ದ್ರೋಣ ನಿಗೆ ಅರ್ಘ್ಯವಿತ್ತು, ಕೈಯೊಳ್ ಒಂದಡಕೆಯುಂ ಇಲ್ಲದ ಅವನು ದಾನಾರ್ಥಿಯಾಗಿ ಬಂದ ದ್ರೋಣನಿಗೆ "ಎನ್ನ ಇದೊಂದು ಧನುವಿರ್ದುದು ದಿವ್ಯಶರಾಳಿ ಇರ್ದುದು ಇಲ್ಲ ಒಡಮೆ, ಇವರೊಳ್ ಆವುದಂ ಈವುದೊ ಪೇಳ್" ಎಂದು ಕೇಳುತ್ತಾನೆ. ಇಲ್ಲಿಯೂ ದ್ರೋಣನ ಪಾಲಿಗೆ ಬಂದುದು ಬಿಲ್ಲುಬಾಣಗಳೇ. ಧನ, ಭೂಮಿ

೧. ಮೂಲಭಾರತದಲ್ಲಿ ಒಂದೆಡೆ (ವಚನಭಾರತ ಪುಟ-೧೭. ೧೯೬೧) ಅಗ್ನಿವೇಶ್ಯಮಹರ್ಷಿಯಲ್ಲಿ ದ್ರೋಣ ಜಟಾಧಾರಿಯಾಗಿ ಅನೇಕ ವರ್ಷ ಅಸ್ತ್ರವಿದ್ಯೆಕಲಿತನೆಂದು ಬರೆದಿದ್ದಾರೆ. ಮತ್ತೊಂದೆಡೆ ಭರದ್ವಾಜನಲ್ಲೇ ವೇದಾಧ್ಯಯನ ಮಾಡಿದಂತೆ ಹೇಳಿದೆ (ಅದೇ ಪು. ೪೭). ಆದುದರಿಂದ ದ್ರೋಣ ಅಸ್ತ್ರವಿದ್ಯೆ, ವೇದವಿದ್ಯೆಗಳನ್ನು ಬೇರೆಬೇರೆಯವರಿಂದ ಕಲಿತಿದ್ದಾನೆ.

ದಾನವಾಗಿ ದೊರೆಯುದುದಕ್ಕೆ ದ್ರೋಣನಿಗೆ ನಿರಾಶೆಯಾಗಿರಬಹುದು. ಅದನ್ನು ಹತ್ತಿಕ್ಕಿ "ಎನಗೆ ವಿದ್ಯಾಧನಮೆ ಧನಮಪ್ಪುದರಿಂ ದಿವ್ಯಾಸ್ತ್ರಂಗಳಂ ದಯಗೆಯ್ವುದು" ಎಂದು ಕೇಳಿಕೊಂಡು, ಪರಶುರಾಮ ಸಂತೋಷದಿಂದಿತ್ತ ವಾರುಣ, ವಾಯವ್ಯ, ಆಗ್ನೇಯ, ಪೌರಂದರಾದಿ ಪ್ರಧಾನಾಸ್ತ್ರಗಳನ್ನು ಪಡೆಯುತ್ತಾನೆ. ಇದರಿಂದ ಅವನ ಚಾಪವಿದ್ಯೆಗೆ ಕೋಡುಮೂಡಿದಂತಾಗುತ್ತದೆ. ಚಾಪವಿದ್ಯೆ, ಅಪ್ರತಿಮ ಅಸ್ತ್ರಗಳ ಸಂಪಾದನೆಯಿಂದ ದ್ರೋಣ ನಿಜವಾದ ಅರ್ಥದಲ್ಲಿ ಕೋಲಗುರುವಾಗುತ್ತಾನೆ. ಆದರೆ ಬಡತನ ಮಾತ್ರ ಹಾಗೇ ಉಳಿಯುತ್ತದೆ.

ತನ್ನ ಸಹಪಾಠಿ ಮತ್ತು ಗೆಳೆಯನಾದ ದ್ರುಪದ ದೊರೆಯಾಗಿರುವದನ್ನು ತಿಳಿದು ಅಲ್ಲಿಗೆ ಹೋದರೆ ತನ್ನ ಬಡತನ ನೀಗಬಹುದೆಂಬ ಆಸೆಯಿಂದ ಅವನ ರಾಜಧಾನಿ ಛತ್ರಾವತಿಗೆ ಹೋಗುತ್ತಾನೆ[೨]. ತಾನು ಬಂದುದನ್ನು ದ್ರುಪದನಿಗೆ ತಿಳಿಸುವಂತೆ ಪಡಿಯರನಿಗೆ ಹೇಳಿ ಕಳಿಸಿದಾಗ, ರಾಜ್ಯಮದಿರಾ ಮದೋನ್ಮತ್ತನೂ, ಗರ್ವಗ್ರಹವ್ಯಗ್ರ ಚಿತ್ತನೂ ಆದ ದ್ರುಪದನಿಂದ "ಆತನೆಂಬಂ ಆರ್ಗೆ ? ದ್ರೋಣನೆಂಬನೇಂ ಪಾರ್ವನೆ ? ಎಂತೆನಗೆ ಕೆಳೆಯಂ ? ನೂಂಕಂತಪ್ಪನಂ ಅರಿಯೆಂ" ಎಂಬ ಆಜ್ಞೆಹೊರಡುತ್ತದೆ. ಇಲ್ಲಿ "ದ್ರೋಣನೆಂಬನೇಂ ಪಾರ್ವನೆ ?" ಎಂಬ ಮಾತಿನಲ್ಲಿರುವ ಕಾಕು ಪರಿಶೀಲನಾರ್ಹ. ದ್ರೋಣ ಒತ್ತಂಬದಿಂ ಒಳಪೊಕ್ಕು, ಸಮಾಧಾನದಿಂದಲೇ "ಅಣ್ಣ, ಅರಿಯಿರೆ ? ನೀಮುಂ ನಾಮುಂ ಒಡನೋದಿದೆವೆಂಬುದಂ" ಎಂದು ಕೇಳಲು ದ್ರುಪದ "ನಿನ್ನಂ ಆಂ ಅರಿಯೆಂ ಅದೆಲ್ಲಿ ಕಂಡೆಯೊ? ಮಹೀಪತಿಗಂ ದ್ವಿಜವಂಶಜಂಗಂ ಏತಱ ಕೆಳೆ ? ಮಹಾನಸರ್ ಇಂತು ನಾಣಿಲಿಗಳಪ್ಪರೆ?" ಎಂದು ಕೆಡೆ ನುಡಿದು ಅಷ್ಟಕ್ಕೆ ನಿಲ್ಲದೆ "ಈ ನಾಣಿಲಿ ಪಾರ್ವನಂ ಎಟಿದು ಕಳೆಯಿಂ" ಎಂದು ಸೇವಕರಿಗೆ ಅಜ್ಞಾಪಿಸುತ್ತಾನೆ. ಆತ್ಮಾಭಿಮಾನ ಕೆರಳಿದ ದ್ರೋಣ, "ಈಗಳ್ ಜಲಕ್ಕನೆ ಅರಿದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ" ಎಂದು ಉದ್ಗರಿಸಿ ಸಿಡಿದು ನಿಂತು "ನಿನ್ನ ಆದೊಂದು ಅಳವು ಆಂಬರಂ ಉಂಟೆ ? ಒಡನೋದಿದ ಒಂದು ಬೆರಗಿಂಗೆ ನಿನ್ನಂ ಕೊಲಲ್ಕೆನಗಾಗದು, ಈ ಸಭಾವಳಯದೊಳ್ ಎನ್ನಂ ಏಳಿಸಿದ ನಿನ್ನಂ ಎನ್ನ ಚಟ್ಟರಿಂ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆ ಪೊತ್ತೆನೆ ?" ಎಂದು ಸಿಡಿಲಂತೆ ಆರ್ಭಟಿಸಿ ಹೊರಟು ಹೋಗುತ್ತಾನೆ.[೩] ಇಲ್ಲಿ

೨. ಸಹಪಾಠಿಯಾಗಿದ್ದ ದ್ರುಪದ (ಯಜ್ಞಸೇನ), ತಾನು ರಾಜನಾದ ಮೇಲೆ, ರಾಜ್ಯವನ್ನೂ, ಅದರ ಸಮಸ್ತಭೋಗಭಾಗ್ಯಗಳನ್ನೂ ಮಿತ್ರನಾದ ನಿನ್ನೊಡನೆ ಹಂಚಿಕೊಂಡು ಅನುಭವಿಸುತ್ತೇನೆಂದು ವಚನಕೊಟ್ಟಿರುತ್ತಾನೆ. ಅದನ್ನು ನೆನೆದು ತನ್ನ ಬಡತನ ನೀಗುವುದಕ್ಕಾಗಿ ದ್ರೋಣ, ಅವನ ರಾಜಧಾನಿಯಾದ ಛತ್ರಾವತಿಗೆ ಹೋದಂತೆ ಮೂಲಭಾರತದಲ್ಲಿ ಹೇಳಿದೆ. (ವಚನಭಾರತ A. R. ಕೃ. ೧೯೭೧. ಪು – ೧೭).

೩. ಮೂಲ ಭಾರತದಲ್ಲಿ, ಈ ಬಗೆಯ ಪ್ರತಿಜ್ಞೆಯ ಉಲ್ಲೇಖವಿಲ್ಲ. ದ್ರುಪದನ ಮಾತನ್ನು ಕೇಳಿ ದುಃಖಿತನಾದ ದ್ರೋಣ ಯಾರಾದರೂ ಯೋಗ್ಯ ಶಿಷ್ಯರು ದೊರೆತಾರೊ ? ಎಂದು ವಿಚಾರಿಸುತ್ತ ಕುರು ದೇಶಕ್ಕೆ ಹೋದನೆಂದು ಹೇಳಿದೆ. (ಪಂ. ಭಾ. ಪು. ೧೮) ಅಲ್ಲೂ ದ್ರೋಣ ಮಾಡಿಕೊಂಡಿರಬಹುದಾದ ನಿರ್ಧಾರದ ಧ್ವನಿಯಿದೆ. ಆಗ ಬಾಯಿಬಿಟ್ಟು ಹೇಳಿಲ್ಲ.

ದ್ರೋಣನ ಆತ್ಮಾಭಿಮಾನದ ಜೊತೆಗೆ "ಎನ್ನ ಚಟ್ಟರಿಂ ಕಟ್ಟಿಸುವೆಂ" ಎಂಬ ಮಾತಿನಲ್ಲಿ ಅವನ ಚಾಪವಿದ್ಯಾಗುರುತ್ವದ ಸತ್ವ ಧ್ವನಿಸುತ್ತಿರುವುದನ್ನು ಕಾಣುತ್ತೇವೆ. ಈಗ ದ್ರೋಣನ ಮನದಲ್ಲಿ ದ್ರುಪದನ ಮೇಲಿನ ಸೇಡಿನ ಬೀಜಾರೋಪಣವಾಯಿತು. ಅದು ಮುಂದೆ ಮರವಾಗಿ ಬೆಳೆವ ಘಟನೆಗಳು ನಡೆಯುತ್ತವೆ.

ದ್ರೋಣನ ಬಡತನ ಹಿಂಗಲು, ಅವನ ಚಾಪವಿದ್ಯಾಬಲವೇ ಸಹಾಯಕವಾಗುವ ಸಂಗತಿಯೊಂದು ನಡೆಯುತ್ತದೆ, ಛತ್ರಾವತಿಯಿಂದ, ಹಸ್ತಿನಾಪುರಕ್ಕೆ ಬಂದು ತನ್ನ ಭಾವ ಕೃಪನ ಮನೆಯಲ್ಲುಳಿದ ದ್ರೋಣ, ಒಂದು ದಿನ ಊರ ಹೊರಗೆ ವಿಹರಿಸುತ್ತಿರುವಾಗ, ಬಾಲಕರಾದ ಕೌರವ ಪಾಂಡವರು ಬಾಣಪ್ರಯೋಗ ಮಾಡಿ ಆಡುತ್ತಿದ್ದ 'ತೊಲ್ಪುಲ್ಲೆ' ಹಾಳುಭಾವಿಯಲ್ಲಿ ಬೀಳುವುದನ್ನು, ಅದನ್ನು ಹೊರದೆಗೆವ ಬಗೆ ಬಾಲಕರಿಗೆ ಹೊಳೆಯದೆ ಅವರು ಸುಮ್ಮನಿರುವುದನ್ನು ಕಾಣುತ್ತಾನೆ. ಕೂಡಲೇ ತನ್ನಮಗ ಅಶ್ವತ್ಥಾಮನಿಗೆ ಅದನ್ನು ಹೊರದೆಗೆಯಲು ಸೂಚಿಸುತ್ತಾನೆ. ಅಶ್ವತ್ಥಾಮ ಅದನ್ನು ನೈಷ್ಠಿಕಮೆಂಬ ಮುಷ್ಟಿಯಿಂದ ಪುಂಖಾನುಪುಂಖವೆಂಬ ಶರಸಂಧಾನದಿಂದ ಹೊರದೆಗೆಯುತ್ತಾನೆ.[೪] ಮಕ್ಕಳಿಂದ ಆ ಸುದ್ದಿ ತಿಳಿದ ಭೀಷ್ಮ, ದ್ರೋಣನನ್ನು ಕರೆಯಿಸಿ, ಸತ್ಕರಿಸಿ ಕುಲವಿದ್ಯಾ ವೃತ್ತಿಗಳೆಲ್ಲವನ್ನು ಕೇಳಿ, "ತಣಿದೆಂ ಪೋ ಸಾಲ್ಗುಂ" ಎಂಬನ್ನೆಗಂ ದ್ರೋಣನಿಗೆ ಆನೆ, ಕುದುರೆ, ಅಗ್ಗದ ಬಾಡು ಇತ್ಯಾದಿಗಳನ್ನಿತ್ತು ನೂರರುವರು ಮಕ್ಕಳಂ ಮುಂದಿಟ್ಟು "ಈ ಕೂಸುಗಳ್ ಯೋಗ್ಯರಪ್ಪುದ ನಿನ್ನೊಲ್ವೊಡೆ ಶಸ್ತ್ರವಿದ್ಯೆಗೆ ಒವಜಂ ನೀನಾಗು ಕುಂಭೋದ್ಭವಾ" ಎಂದು ಕೇಳಿಕೊಳ್ಳುತ್ತಾನೆ. ದ್ರೋಣನಿಗೆ ಆಗ ಆಗಿರಬಹುದಾದ ಸಂತೋಷ ಊಹೆಗೆ ಮಾತ್ರ ಸಾಧ್ಯ. ಅದರಲ್ಲೂ ಅವನ ಬಡತನವನ್ನು ನೆನೆದಾಗ, ದ್ರೋಣನ ಸಂತಸದ ಆಧಿಕ್ಯವನ್ನು ನಾವು ಸರಿಯಾಗಿ ಊಹಿಸಬಹುದಾಗಿದೆ. ದ್ರೋಣ ತಕ್ಷಣ ಆ ಕಾರ್ಯಕ್ಕೆ ಒಪ್ಪಿ, ತನ್ನ ಮುಂದೆ ನಿಂತಿದ್ದ ಕುಮಾರಕರನ್ನು ಉದ್ದೇಶಿಸಿ "ಈ ನೆರೆದನಿಬರೂ ಆಂ ಎಂದುದಂ ಏಂ ಈವಿರೆ ?" ಎಂದು ಕೇಳುತ್ತಾನೆ. ಗುಣಾರ್ಣವನೊಬ್ಬ ಮಾತ್ರ "ಆನೀವೆಂ" ಎನ್ನುತ್ತಾನೆ. ಕೂಡಲೆ ಅವನನ್ನು ದ್ರೋಣ ಎತ್ತಿ ಮುದ್ದಾಡಿ "ಧನುರಾಗಮದಲ್ಲಿ ಇವನೊಬ್ಬನೆ ಕುಶಲನಕ್ಕುಂ, ಅದಕೇಂ ಕಿ ನಿಸದಿರಿಂ ಮುನ್ನರಿಪಿದೆಂ" ಎಂದು ಭೀಷ್ಮಂಗೆ ಹೇಳುತ್ತಾನೆ. ಅರ್ಜುನನ ಬಗೆಗಿನ ವಾತ್ಸಲ್ಯಕ್ಕೆ ಇಲ್ಲಿ ಶ್ರೀಕಾರ ಬೀಳುತ್ತದೆ.

ಈಗ ದ್ರೋಣ, ದ್ರೋಣಾಚಾರ್ಯ. ಕೌರವ ಪಾಂಡವರ ಕೋಲಗುರು, ತನ್ನ ಚಾಪವಿದ್ಯಾಬಲದ ಒಂದು ಮುಖವನ್ನು ಪ್ರದರ್ಶಿಸುವ ಸದವಕಾಶ ಅವನಿಗೆ ದೊರೆತಿದೆ. ಅದನ್ನವನು ಕಳೆದುಕೊಳ್ಳುವನಲ್ಲ. ಚತುರಂಗ ಧನುರ್ವೇದ,

೪. ಮೂಲ ಭಾರತದಲ್ಲಿ ಬಾಲಕರು ಚೆಣ್ಣೆಯಾಟವಾಡುತ್ತಿದ್ದಂತೆಯೂ, ಅದು ಬಾವಿಯಲ್ಲಿ ಬಿದ್ದಾಗ ಸ್ವತಃ ದ್ರೋಣನೇ ದರ್ಭೆಯನ್ನು ಮಂತ್ರಿಸಿ ಬಾವಿಯಲ್ಲಿ ಬಿಟ್ಟು ಚೆಣ್ಣೆಯನ್ನು ತೆಗೆದಂತೆಯೂ ಹೇಳಿದೆ (ಪಂ. ಭಾ. ಪು. ೧೮).

ದಿವ್ಯಾಸ್ತ್ರ, ದಿವ್ಯಾಯುಧ, ಗಜತುರಗ ರಥಪದಾತಿಯುದ್ಧ-ಹೀಗೆ ವ್ಯಾಪಕವಾಗಿ ಅಧ್ಯಾಪನ ಮುಂದುವರಿಯುತ್ತದೆ. ಅವನ ಚಾಪವಿದ್ಯಾಬಲಪ್ರಸಿದ್ಧಿ ಎಲ್ಲೆಡೆ ಹಬ್ಬಿ, "ಇಪ್ಪುವಿದ್ಯೆಗೆ ದ್ರೋಣಂ ಜಾಣಂ" ಎಂಬುದು ಪಡೆಮಾತಾಗುತ್ತದೆ. ಯಾದವವಂಶಜರು, ನಾನಾದೇಶದ ನರೇಂದ್ರರು, ದ್ರೋಣನನ್ನರಸಿಕೊಂಡು ಬರುತ್ತಾರೆ. ಕರ್ಣನೂ ಬರುತ್ತಾನೆ.[೫] "ವಿದ್ಯಾಪ್ರಭಾವಂ ಆ ದೊರೆತೆ ವಲಂ" ಎಂದು ಪಂಪ ಇಲ್ಲಿ ಉದ್ಗಾರವೆತ್ತಿರುವುದು, ದ್ರೋಣನ ಚಾಪವಿದ್ಯಾಬಲವನ್ನು ಸಹೃದಯರಲ್ಲಿ ಬಿಂಬಿಸುವುದಕ್ಕಾಗಿಯೆ.

ನಿಲ್ಲುವ ಭಂಗಿ, ಬಿಲ್ಲನ್ನು ಹಿಡಿವರೀತಿ, ಗುರಿಯಿಡುವ ವಿಧಾನ, ಬಾಣ ಪ್ರಯೋಗದ ಬಗೆ ಇತ್ಯಾದಿಗಳನ್ನು ಸ್ವತಃ ಶಿಷ್ಯರಿಗೆ ತೋರಿಸಿಕೊಟ್ಟ ಮಾತ್ರಕ್ಕೆ ಚಾಪ ವಿದ್ಯಾಗುರುವಿನಕಾರ್ಯ ಮುಗಿಯುವುದಿಲ್ಲ. ಅವರನ್ನು ಮತ್ತೆ ಮತ್ತೆ ಪರೀಕ್ಷೆಗೆ ಗುರಿಪಡಿಸಲೂ ಬೇಕಾಗುತ್ತದೆ. ಅದರಲ್ಲೂ ಜಾಣ ವಿದ್ಯಾರ್ಥಿಗಳಿದ್ದರಂತೂ, ಪರೀಕ್ಷೆ ಬಹಳ ತೀಕ್ಷ್ಣವಾಗಿರುತ್ತದೆ. ಅರ್ಜುನನ ವಿಷಯದಲ್ಲಿ ದ್ರೋಣರು ನಡೆದುಕೊಂಡುದು ಹೀಗೆಯೇ. ತನ್ನ ಪ್ರಿಯಶಿಷ್ಯನ ಶರಪರಿಣತಿಯನ್ನು ಆರಯ್ಯಲು, ಒಮ್ಮೆ ಛಾಯಾಲಕ್ಷ್ಯವನ್ನು ಒಡ್ಡಿ, ಆಳವಾದ ನೀರೊಳಗೆ ತನ್ನನ್ನು ಹಿಡಿದ ನೆಗಟಂ ಇಸುವಂತೆ ಅರ್ಜುನನಿಗೆ ಹೇಳುತ್ತಾನೆ. ಅದರಲ್ಲಿ ಅವನು ಯಶಸ್ವಿಯಾಗಲು ದ್ರೋಣನಿಗೆ ಸಂತಸವೇ ಸಂತಸ.[೬] "ಎನ್ನ ಚಟ್ಟರೊಳಗೀತನೆ ಜಟ್ಟಿಗಂ" ಎಂದು ಉದ್ಗರಿಸಿ ಅವನ ಗುಣಕೆ ಅಱುಗೊಂಡು ಅಣುಗಿನೊಳ್ ಇನ್ನೂ ಹೆಚ್ಚಿನ ಆಸಕ್ತಿಯಿಂದ ವಿದ್ಯೆ ಹೇಳಿಕೊಡುತ್ತಾನೆ. ಇದನ್ನು ಪಕ್ಷಪಾತವೆನ್ನುವುದಕ್ಕಿಂತ ಜಾಣ ವಿದ್ಯಾರ್ಥಿಯ ಬಗೆಗೆ ಗುರು ತೋರುವ ವಾತ್ಸಲ್ಯವೆನ್ನುವದು ಇಲ್ಲಿ ಹೆಚ್ಚು ಸಮಂಜಸ. ತನ್ನ ಪ್ರತಿಜ್ಞೆಯನ್ನು ಅರ್ಜುನನೇ ಪೂರೈಸಲು ಸಮರ್ಥನೆಂಬ ಭಾವನೆಯೂ ಇಲ್ಲಿ ಕ್ರಿಯಾಶೀಲವಾಗಿರುವುದೂ ಸ್ಪಷ್ಟ.

ಒಂದು ದಿನ ದ್ರೋಣ ಅರ್ಜುನನನ್ನು ಕರೆದು "ಆ ದ್ರುಪದನಂ ಕೋಡಗಗಟ್ಟುಗಟ್ಟಿತಂದು ಒಪ್ಪಿಸು, ಅದೇ ನೀನೆನಗೆ ಈವ ದಕ್ಷಿಣೆ" ಎಂದು ಹೇಳುತ್ತಾನೆ.

೫. ಮೂಲ ಭಾರತದಲ್ಲಿ, ದ್ರುಪದಪುತ್ರನಾದ ಧೃಷ್ಟದ್ಯುಮ್ನನೂ ದ್ರೋಣರ ಬಳಿ ವಿದ್ಯಾಭ್ಯಾಸಕ್ಕೆ ಬಂದಂತೆಯೂ, ಅವನಿಗೂ ದ್ರೋಣ ವಿದ್ಯಾಭ್ಯಾಸ ಮಾಡಿಸಿದಂತೆಯೂ ಹೇಳಿದೆ (ವ. ಭಾ. ಪು. ೪೮). ವ್ಯಾಧನಾದ ಏಕಲವ್ಯನು ದ್ರೋಣರ ಬಳಿ ವಿದ್ಯಾ ಕಾಂಕ್ಷೆಯಿಂದ ಬಂದುದನ್ನು (ವ. ಭಾ. ಪು. ೧೯). ಅವನನ್ನು ದ್ರೋಣ ಕೆಲ ಕಾರಣಗಳಿಂದಾಗಿ ಶಿಷ್ಯನಾಗಿ ಸ್ವೀಕರಿಸಲಿಲ್ಲವೆಂಬುದನ್ನೂ ಪಂಪ ಸಂಪೂರ್ಣ ಬಿಟ್ಟಿದ್ದಾನೆ.

೬. ಮೂಲ ಭಾರತದಲ್ಲಿ, ಅರ್ಜುನನ ಗುರಿಪರಿಣತಿಯನ್ನು ಪ್ರದರ್ಶಿಸುವ ಒಂದು ಸನ್ನಿವೇಶ (ವ. ಭಾ. ಪು. ೨೦). ಸಮರ್ಪಕವಾಗಿದೆ. ಪಂಪ ಅದನ್ನು ಬಿಟ್ಟಿದ್ದಾನೆ. ಕತ್ತಲಲ್ಲಿ ತುತ್ತು ಬಾಯಿಗೆ ಹೋಗುವುದಕ್ಕೆ ಅಭ್ಯಾಸಬಲವೇ ಕಾರಣವೆಂಬಂತೆ ಅರ್ಜುನ ಕತ್ತಲಲ್ಲೇ ಬಾಣ ಪ್ರಯೋಗದ ಅಭ್ಯಾಸ ಮಾಡುವನ್ನು ದ್ರೋಣ ಕಂಡು, ಅದರ ಬಗ್ಗೆ ಹೆಚ್ಚು ಆಸಕ್ತಿವಹಿಸಿದ ಮೂಲ ಭಾರತದ ಭಾಗವನ್ನು ಪಂಪ ಕೈ ಬಿಟ್ಟಿದ್ದಾನೆ.

ಅರ್ಜುನ ಹಾಗೇ ಮಾಡುತ್ತಾನೆ. ತನ್ನ ಮಂಚದ ಕಾಲಿಗೆ ಕಟ್ಟುವಡೆದು ಬಿದ್ದ ದ್ರುಪದನ ತಲೆಯ ಮೇಲೆ ದ್ರೋಣ ತನ್ನ ಕಾಲಿಟ್ಟು "ನೆರವಿಯೊಳ್ ಒರ್ವರ್ಕಂಡರಂ ಅರಿಯಲ್ಕೆ ಅರಿದು, ಎಮ್ಮಂ ಬಡಪಾರ್ವರಂ ಅರಸರೆ ನೀಂ ಈಗಳ್ ಅರಿವಿರೊ ? ಅರಿಯಿರೊ ? ಆದಿ ಕ್ಷತ್ರಿಯರೆ ನೀಂ ಆದಿತ್ಯನನಿಳಿಪ ತೇಜರಿರ್, ಪಾರ್ವನ ಕಾಲ್ ಮೋದೆ ನಿಮ್ಮ ನಡು ತಲೆಯಲಿರ್ದಪುದುಂ ಆದುದು ನಿಮಗೆ" ಎಂದು ಒದೆದು ನಿನ್ನನಿನಿತು ಪರಿಭವಂ ಬಡಿಸಿದುದು ಸಾಲ್ಗುಂ ನಿನ್ನಂ ಕೊಲಲಾಗದು, ಕೊಂದಡೆ ಮೇಲಪ್ಪ ಪಗೆಗಂಜಿ ಕೊಂದಂತಾಗಿರ್ಕುಂ" ಎಂದು ಸಾಯನುಡಿದು, ಅವನ ಕಟ್ಟನ್ನು ತಾನೇ ಬಿಚ್ಚಿ ಕಳುಹುತ್ತಾನೆ.[೭] ಇದು ದ್ರೋಣನ ಚಾಪವಿದ್ಯಾಬಲಕ್ಕೆ ಒಪ್ಪುತ್ತದೆಯೆ ? ತನ್ನ ಚಟ್ಟರಿಂದ, ದ್ರುಪದನನ್ನು ಕಟ್ಟಿಸಿದಲ್ಲಿಗೆ ಪ್ರತಿಜ್ಞೆ ಮುಗಿಯಿತು. ಬದ್ಧನಾದವನನ್ನು ಒದೆಯುವುದು ದ್ರೋಣನಂಥವನಿಗೆ ಸರಿಯೆ ? ಇದು ಪ್ರತೀಕಾರ ಮನೋಭಾವನೆಯ ಅತಿಶಯವೆಂದು ಹೇಳದೆ ಗತಿಯಿಲ್ಲ.

ತನ್ನ ಶಿಷ್ಯರ ವಿದ್ಯಾಪ್ರದರ್ಶನವೇರ್ಪಡಿಸುವುದೂ, ಚಾಪವಿದ್ಯಾಬಲದ ಗುರುವಿನ ಕರ್ತವ್ಯ. "ಧನುರ್ವಿದ್ಯೆಯೆ ಕಣ್ತೆರೆವಿನೆಗಂ" ಕಲ್ತ ತನ್ನ ಶಿಷ್ಯರ ಮೈಯಲ್ಲಿ ಆ ವಿದ್ಯೆ ಹೇಗೆ ಮೆರೆಯುತ್ತಿದೆ ಎಂಬುದನ್ನು ಹಿರಿಯರಿಗೆ ತೋರಿಸುವ ಉದ್ದೇಶದಿಂದ ಪ್ರದರ್ಶನವೇರ್ಪಡಿಸುತ್ತಾನೆ ದ್ರೋಣ. ಎಲ್ಲ ಶಿಷ್ಯರೂ ತಮ್ಮ ತಮ್ಮ ವಿದ್ಯಾಬಲ ಪ್ರದರ್ಶಿಸುತ್ತಾರೆ. ಯಾವ ಶಿಷ್ಯನನ್ನೂ ನೆರೆದ ನೆರವಿಗೆ ಪರಿಚಯಿಸಿಕೊಡದ ದ್ರೋಣ, ಅರ್ಜುನನನ್ನು ರಂಗಸ್ಥಳಕ್ಕೆ ಬರುವಂತೆ ಕರೆಯುತ್ತ "ಈತಂ ಗುಣಾರ್ಣವಂ ವಿಖ್ಯಾತಯಶಂ... ಈತನ ಸಾಹಸಂ ಉಪಮಾತೀತಂ ಇದಂ ನೋಡಿಂ" ಎಂದು ಹೊಗಳುತ್ತಾನೆ. ತನ್ನ ಪ್ರತಿಜ್ಞೆಯನ್ನು ಪೂರೈಸಿದ ಅರ್ಜುನನ ಬಗೆಗಿನ ಹೆಮ್ಮೆಯೇ ಇಂಥ ಮಾತನ್ನು ದ್ರೋಣನಿಂದ ಆಡಿಸಿದೆಯೆಂಬುದು ನಿಜವಾದರೂ, ಅರ್ಜುನನ ಬಗೆಗಿನ ಶಿಷ್ಯವಾತ್ಸಲ್ಯ ಅತಿಯಾಗಿ ಪಕ್ಷಪಾತಕ್ಕೆ ತಿರುಗುತ್ತಿರುವುದನ್ನು ನಾವಿಲ್ಲಿ ಕಾಣಬಹುದು. ಕರ್ಣನು, ಸಭಾಸದರನ್ನು ಲಕ್ಷಿಸದೆ ಪ್ರದರ್ಶನರಂಗವನ್ನು

೭. ಮೂಲ ಭಾರತದಲ್ಲಿ ಹೀಗಿಲ್ಲ. ಅಲ್ಲದೆ ಈ ಪ್ರಸಂಗ ವಿದ್ಯಾಪ್ರದರ್ಶನದ ಅನಂತರ ನಡೆಯುತ್ತದೆ. ಅಲ್ಲದೆ ದ್ರೋಣ ಅರ್ಜುನನೊಬ್ಬನಿಗೇ ದ್ರುಪದನನ್ನು ಹಿಡಿದು ತರುವಂತೆ ಹೇಳದೆ, ಎಲ್ಲರಿಗೂ ಹೇಳುತ್ತಾನೆ. ಅವರೊಡನೆ ದ್ರೋಣನೂ ಹೋಗಿರುತ್ತಾನೆ. ಶಿಷ್ಯರು ದ್ರುಪದನನ್ನು ದ್ರೋಣರಿಗೆ ಅರ್ಪಿಸಿದ ಮೇಲೆ, ಅವನನ್ನು ಅವರ ಮಂಚದ ಕಾಲಿಗೆ ಕಟ್ಟುವ, ದ್ರೋಣರು ಅವನನ್ನು ಒದೆಯುವ ಪ್ರಸಂಗಗಳೂ ಇಲ್ಲ. ದ್ರೋಣ ದ್ರುಪದನನ್ನು ದ್ದೇಶಿಸಿ ಎಲೈ ಅರಸನೇ ಒಂದು ಗಳಿಗೆಯಲ್ಲಿ ನಿನ್ನ ದೇಶಕೋಶಗಳನ್ನು ವಶಪಡಿಸಿಕೊಂಡಿದ್ದೇನೆ... ರಾಜನಲ್ಲದವನು ರಾಜನಾದ ನಮಗೆ ಸ್ನೇಹಿತನು ಹೇಗಾದಾನು ? ಎಂದಿದ್ದೆಯಲ್ಲವೆ, ಅದಕ್ಕಾಗಿ ನಾನು ಗೆದ್ದ ರಾಜ್ಯದಲ್ಲಿ ನಿನಗೆ ಅರ್ಧರಾಜ್ಯ ಕೊಡುತ್ತೇನೆ. ನಿನಗೆ ಒಪ್ಪಿತವಾದಲ್ಲಿ ನನ್ನನ್ನು ಸ್ನೇಹಿತನೆಂದು ಭಾವಿಸು, ನಿನ್ನ ಪ್ರಾಣಕ್ಕೆ ಭಯವಿಲ್ಲ. ನಾವು ಕ್ಷಮಾಶೀಲರಾದ ಬ್ರಾಹ್ಮಣರು. ಸ್ನೇಹವನ್ನೇ ನಿನ್ನಲ್ಲಿ ಕೇಳುತ್ತೇನೆ. ಅರ್ಧರಾಜ್ಯವನ್ನು ತೆಗೆದುಕೊ" ಎಂದು ನುಡಿದು ಅರ್ಧರಾಜ್ಯ ಕೊಟ್ಟು ಕಳಿಸಿದಂತೆ ಬರುತ್ತದೆ. (ವಚನಭಾರತ ೧೯೭೧ ಪು. ೨೬).

ಪ್ರವೇಶಿಸಲಿಕ್ಕೆ ದ್ರೋಣನ ಈ ಪಕ್ಷಪಾತವೂ ಕಾರಣವಾಗಿರುವ ಸಾಧ್ಯತೆಯಿದೆ. ಅತಿ ಸರ್ವತ್ರವರ್ಜಯೇತ್ ಎನ್ನುವುದು ಇದಕ್ಕೇ. ಮುಂದೆ ಕರ್ಣ, "ಈ ರಂಗಮೆ ರಣರಂಗಮಾಗೆ ಕಾದುವಂ" ಎಂದು ಆಹ್ವಾನಿಸಿದಾಗ, ಕೃಪನ ಜೊತೆ ದ್ರೋಣನೂ ಸೇರಿ ಕರ್ಣನಿಗೆ "ನೀಂ ನಿನ್ನ ತಾಯ ತಂದೆಯ ದೆಸೆಯುಂ ಭಾವಿಸದೆ ನುಡಿವುದೆ ? ನಿನಗಂ ಅರಿಕೇಸರಿಗಂ ಆವುದು ಸಮಕಟ್ಟು ?" ಎಂದು ನುಡಿಯುವುದು ದ್ರೋಣನಂತಹನಿಗೆ ಶೋಭಿಸುವುದಿಲ್ಲ. ಮೂಲ ಭಾರತದಲ್ಲಿ, ದ್ರೋಣ ಕರ್ಣಾರ್ಜುನರ ಯುದ್ಧಕ್ಕೆ ಸಮ್ಮತಿಸುತ್ತಾನೆ. ಇಬ್ಬರೂ ಕಣಕ್ಕಿಳಿಯುತ್ತಾರೆ. ಆಗ ದ್ವಂದ್ವಯುದ್ಧದ ಸಂಪ್ರದಾಯವನ್ನು ಬಲ್ಲ ಕೃಪಾಚಾರ್ಯ ಮುಂದೆ ಬಂದು ಅರ್ಜುನನ ಪ್ರವರವೆಲ್ಲವನ್ನು ಹೇಳಿ "ನೀನು ಯಾರು ? ನಿನ್ನ ವಂಶವಾವುದು, ತಾಯಿ ತಂದೆಗಳಾರು ? ತಿಳಿಸು, ಆಮೇಲೆ ಅರ್ಜುನ ನಿನ್ನೊಡನೆ ಯುದ್ಧಮಾಡಬೇಕೊ ? ಬೇಡವೋ ? ಎಂಬುದನ್ನು ನಿರ್ಧರಿಸುತ್ತಾನೆ" ಎಂದು ನುಡಿಯುತ್ತಾನೆ. ಕರ್ಣನ ಮುಖ ನಾಚಿಕೆಯಿಂದ ಬಾಗುತ್ತದೆ. ದ್ರೋಣ ಈ ಸಂದರ್ಭದಲ್ಲಿ ಒಂದೂ ಮಾತಾಡಿಲ್ಲ (ವ. ಭಾ. p–೨೪) ಪಂಪ ಹಾಗೆ ಮಾಡಿಲ್ಲ. ಆದ್ದರಿಂದ ದ್ರೋಣ ಪಾತ್ರಕ್ಕೆ ಕುಂದು ಬಂದಿದೆ. ಪುನಃ ಅರ್ಜುನ ಪಕ್ಷಪಾತವೆ ಇದಕ್ಕೆ ಕಾರಣವೆನ್ನಬಹುದು. ಹೀಗೆ ದ್ರೋಣರ ಅರ್ಜುನ ಪಕ್ಷಪಾತ, ಪಾಂಡವ ಕೌರವರಲ್ಲಿಯ ಬಿರುಕು ಇನ್ನಷ್ಟು ಹೆಚ್ಚಲು ಕಾರಣವಾಗಿದೆ.

ಮುಂದೆ ರಾಜ್ಯವನ್ನು ಪಾಲುಮಾಡಿಕೊಂಡು, ಪಾಂಡವರು ಇಂದ್ರಪ್ರಸ್ಥಕ್ಕೆ ಹೋಗುವಾಗ, ಪಾಂಡವರ ಬಗೆಗೆ ಹೆಚ್ಚು ಒಲವರವುಳ್ಳ ದ್ರೋಣ, ಅವರ ಜೊತೆ ಇಂದ್ರಪ್ರಸ್ಥಕ್ಕೆ ಹೋಗುವುದಿಲ್ಲ. ಭೀಷ್ಮ ತನಗೆ ಮಾಡಿದ ಉಪಕಾರವನ್ನು ಸ್ಮರಿಸಿ, ಅವನ ಜೊತೆಯಲ್ಲೇ ತಾನೂ ಇರುವುದು ಲೇಸೆಂದು ದ್ರೋಣ ಭಾವಿಸಿರಬೇಕು. ತತ್ಫಲವಾಗಿ ,ಭೀಷ್ಮನು, ದುರ್ಯೋಧನನ ಜೋಳದ ಪಾಳಿಗೆ ಒಳಗಾದಂತೆ ದ್ರೋಣನೂ ಒಳಗಾದ. ದ್ರೌಪದೀ ಕೇಶಾಪಕರ್ಷಣ ಪ್ರಸಂಗದಲ್ಲಿ, ಭೀಷ್ಮ ಧೃತರಾಷ್ಟ್ರನಿಗೆ "ಮಗನಿಗೆ ಬುದ್ಧಿ ಹೇಳು" ಎಂದಾಗ, ದ್ರೋಣಾಚಾರ್ಯ "ನೀಮೆ ನಿತು ನುಡಿದೊಡಂ ಆನೆಯ ಕೋಡು ಬಾಗದೆಂಬಂತೆ ದುರ್ಯೋಧನನ ಉದ್ವೃತ್ತತೆಯುಂ ಆರ್ಗಂ ಬಾರಿಸಲ್ ಬಾರದು, ಕೈಗಳಿಂದ ಮನೆವಾಟ್ಟಿಗೆ ಬುದ್ಧಿವೇಳಲೆಡೆಯಿಲ್ಲ ತಾಮುಂ ತಾವುಂ ಅರಿವರ್ ಬನ್ನಿಂ" ಎಂದು ನಿಜನಿವಾಸಕ್ಕೆ ಹೋಗುವುದು ಅವನ ಅಸಹಾಯಕತೆಯನ್ನು ಸೂಚಿಸುತ್ತದೆ.

ಇನ್ನು ಚಾಪವಿದ್ಯಾಬಲವನ್ನು ದ್ರೋಣ, ಯುದ್ಧರಂಗದಲ್ಲಿ ಪ್ರಯೋಗಿಸಿ ತೋರುವಲ್ಲಿ ಯಶಸ್ವಿಯಾಗಿದ್ದಾನೆಯೆ ? ಪರಿಶೀಲಿಸಬೇಕು. ಮನಃಪೂರ್ವಕ ಯುದ್ಧದಲ್ಲಿ ಭಾಗವಹಿಸಿದ ವೀರ ತನ್ನ ಚಾಪವಿದ್ಯಾಬಲವನ್ನು ಪ್ರದರ್ಶಿಸುವ ಸಾಧ್ಯತೆ ಹೆಚ್ಚು. ದ್ರೋಣ ಮನಸ್ಸಿಲ್ಲದ ಮನಸ್ಸಿನಿಂದ, ದುರ್ಯೋಧನನ ಪಂಗಿಗೆ ಒಳಗಾಗಿ ಯುದ್ಧದಲ್ಲಿ ಭಾಗವಹಿಸಿದವ. ಪಾಂಡವರ ಬಗೆಗೆ ಅದರಲ್ಲೂ, ಅರ್ಜುನನ ಬಗೆಗೆ ಅವನ ಪಕ್ಷಪಾತ ಎಲ್ಲರಿಗೂ ವೇದ್ಯವೇ. ಆದುದರಿಂದ ಅವರೊಡನೆ ಯುದ್ಧಮಾಡು

ವಾಗ ದ್ರೋಣನ ಚಾಪವಿದ್ಯಾಬಲಪ್ರದರ್ಶನಕ್ಕೆ ಅವಕಾಶ ಕಡಿಮೆ. ಆದರೆ ಪಾಂಡವರ ಪಕ್ಷದ ಇತರರೊಡನೆ ಯುದ್ಧಮಾಡುವಲ್ಲಿ, ವಿವಿಧ ಬಗೆಯ ಸೈನಿಕವ್ಯೂಹಗಳನ್ನು ರಚಿಸುವಲ್ಲಿ ಅಪ್ರತಿಮ ಚಾಪವಿದ್ಯಾ ಬಲಶಾಲಿಯಾಗಿ ದ್ರೋಣ ವಿಜೃಂಭಿಸಿದ್ದಾನೆ.

ಕುರುಕ್ಷೇತ್ರಯುದ್ಧ ಆರಂಭವಾಗುವ ಪೂರ್ವದಲ್ಲೂ ಕೆಲವು ಯುದ್ಧಗಳು ನಡೆದಿವೆ. ಅಲ್ಲೇನೂ ದ್ರೋಣನ ಚಾಪವಿದ್ಯಾಬಲ ಪ್ರದರ್ಶನಗೊಂಡಿಲ್ಲ. ಚಿತ್ರಾಂಗದನೆಂಬ ಗಂಧರ್ವ ದುರ್ಯೋಧನನನ್ನು ಒಯ್ದಾಗ ಉಳಿದವರ ಜೊತೆ ದ್ರೋಣನೂ ಬಡವರ ಪಿತರರಂತೆ ಮಿಳ್ಮಿಳನೆ ನೋಡುತ್ತಿರುತ್ತಾನೆ. ಉತ್ತರ ಗೋಗ್ರಹಣ ಪ್ರಸಂಗದಲ್ಲಿಯೂ ದ್ರೋಣ, ಯಾವ ಶೌರ್ಯವನ್ನೂ ಮೆರೆದಿಲ್ಲ.

ಭಾರತ ಯುದ್ಧ ಆರಂಭವಾದ ಮೇಲೂ, ದ್ರೋಣನ ಪಾಂಡವಪಕ್ಷಪಾತವನ್ನು ಸೂಚಿಸುವ, ದುರ್ಯೋಧನನ ಮುಂದೆ ಅವರ ಪ್ರತಾಪವನ್ನು ಹೊಗಳುವ ಹಲವಾರು ಸನ್ನಿವೇಶಗಳು ಬರುತ್ತವೆ. ಯುದ್ಧಕ್ಕೆ ಸನ್ನದ್ಧರಾಗಿ ಬಂದ ಪಾಂಡವ ವೀರರನ್ನು ದುರ್ಯೋಧನ ಕಿರಿದುಮಾಡಿನುಡಿದಾಗ ದ್ರೋಣ "ಪಾಂಡವರ್ ಬಳಸಂಪನ್ನರ್ ಉದಗ್ರದೈವಬಳಸಂಪನ್ನರ್ ಮರುಳ್ಮಾತನಿನ್ನುಳಿ" ಎಂದು ಪಾಂಡವರನ್ನುಹೊಗಳಿ, ದುರ್ಯೋಧನನನ್ನು ತೆಗಳುತ್ತಾನೆ. ಅರ್ಜುನ ಭಗದತ್ತನನ್ನು ಕೊಲ್ಲುವಾಗ ದ್ರೋಣರು ಅದನ್ನು ಉಪೇಕ್ಷಿಸಿ ನೋಡುತ್ತನಿಂದುದನ್ನು ದುರ್ಯೋಧನ ಎತ್ತಿತೋರಿದಾಗ ಅವರು "ಎನಗಲ್ತು ಆರ್ಗಂ ಅಸಾಧ್ಯನಲ್ತೆ ವಿಜಯಂ, ಆತನಂ ಗೆಲ್ವಮಾತಂ ನೀಂ ಅಮೋಘಂ ಬಿಸುಡು. ನಾಳೆ ವಿಜಯಂ ಮಾರ್ಕೊಳ್ಳದಂದು, ಉರ್ಕಿಪೊಕ್ಕನಂ ಅಂತು ಒರ್ವನನ್ ಇಕ್ಕುವೆಂ ಕದನದೊಳ್ ಮೇಣ್‌ಕಟ್ಟುವೆಂ ಧರ್ಮನಂದನನಂ ನೀನಿದನಿಂತುನಂಬು" ಎಂದು ಅರ್ಜುನನ ಪರಾಕ್ರಮವನ್ನೇ ಹೊಗಳಿ, ಧರ್ಮಜನನ್ನು ಸೆರೆಹಿಡಿಯುವ ಮಾತು ಕೊಟ್ಟರೂ ಅದನ್ನೂ ಪೂರ್ಣಮಾಡುವುದಿಲ್ಲ. ಸಿಂಧುರಾಜ ಸಂಹಾರಕ್ಕೆ ಹೊರಟ ಅರ್ಜುನ, ಕೌರವ ಪಡೆಯನ್ನು ಧಾಳಾಧೂಳಿ ಮಾಡುತ್ತಿರುವಾಗ ದುರ್ಯೋಧನ ಮತ್ತೊಮ್ಮೆ ದ್ರೋಣರ ಬಳಿ ಬಂದು ಅವನನ್ನು ಎದುರಿಸುವಂತೆ ಪ್ರಾರ್ಥಿಸಿದಾಗ, ಅಪಹಾಸ್ಯದ ತಲೆದೂಗುವನು. "ವಿಕ್ರಮಾರ್ಜುನನನಿಳಿಸಿ ನುಡಿವ ನಿನ್ನ ಎಣಗೋಣಂಗಳುಂ ಎಕ್ಕಸಕ್ಕತನಂಗಳುಂ ಎತ್ತಪೋದವು? ನಿನ್ನ ಬೀರರ ಬೀರದ ಅಳುರ್ಕೆ ಅರ್ಜುನನೊಳ್ ಏಕೆ ಸಲ್ಲವು ? ಎನಗೆ ಆತಂ ಅಸಾಧ್ಯಂ ಅವಧ್ಯಂ" ಎಂದು ಮುಖಕ್ಕೆ ಹೊಡೆದಂತೆ ಹೇಳಿ, ತನ್ನ ರಥ ಸೂತಕೇತನ ಕವಚಗಳನ್ನು ಕಳಿಸುತ್ತಾನೆಯೆ ವಿನಾ ತಾನು ಹೋಗುವುದಿಲ್ಲ. ಅಣ್ಣನ ಅಪ್ಪಣೆಯ ಮೇರೆಗೆ, ಅರ್ಜುನನಿಗೆ ಸಹಾಯಮಾಡಲು ಹೊರಟ ಭೀಮನನ್ನು, ದ್ರೋಣ ತಡೆಯುತ್ತಾನೇನೊ ನಿಜ, ಆದರೆ ಅವನು "ಗುರುಗೆ ಗುರುದಕ್ಷಿಣೆಗೊಡುವಂತೆ" ದ್ರೋಣನ ರಥವನ್ನು ಶತ ಚೂರ್ಣವಾಗಿ ಮಾಡಿ ಮುಂದುವರಿದಾಗ, ಸುಮ್ಮನೆ ನಿಂತುಕೊಳ್ಳುತ್ತಾರೆ. ಭೀಮನ ಮೇಲೆ ಕೈಮಾಡಲು ಕೂಡ ದ್ರೋಣರಿಗೆ ಮನಸ್ಸಿಲ್ಲ. ಯುದ್ಧಾರಂಭದಲ್ಲಿ

ಧರ್ಮಜ ದ್ರೋಣರ ಬಳಿ ಬಂದು ನಮಸ್ಕರಿಸಿದಾಗ "ನಿನ್ನ ಬರವಿಂದಂ ಎಮ್ಮ ಮನಂ ಎರಗಿದುದು, ನಿನಗೆ ಜಯಮಕ್ಕುಂ ಸಾರ್ಗೆ" ಎಂದು ಹರಸುತ್ತಾನೆ. ಸಿಂಧುರಾಜನ ಬಗೆಗೆ ದ್ರೋಣರು ಇತ್ತ ಆಶ್ವಾಸನೆಯನ್ನು ಕೇಳಿ, ಧರ್ಮಜ ಅವನ ಬಳಿಬಂದು "ನಾವು ನಿಮ್ಮ ಧರ್ಮದ ಮಕ್ಕಳು ನಮ್ಮನ್ನು ಕಡೆಗಣಿಸಿ ಹೀಗೆ ಮಾಡುವುದು ಸರಿಯೆ ?" ಎಂದು ಕೇಳಿದಾಗ, ದ್ರೋಣ ಅನುಕಂಪಿತನಾಗಿ "ನಿನಗೆ ಜಯಮಕ್ಕುಂ ಅನಂತನ ಪೇಳ್ದ ತೆರದೆ ನೆಗಳ್" ಎಂದು ಹೇಳಿ ಕಳಿಸುತ್ತಾನೆ. ಚಕ್ರವ್ಯೂಹದ ಬಾಗಿಲಲ್ಲಿ ನಿಂದ ದ್ರೋಣರಿಗೆ ವಿನಯಾಸ್ತ್ರವನ್ನೆಚ್ಚು ಅರ್ಜುನ ಹೋಗುತ್ತಿರುವಾಗ, "ಸಮರ ಕ್ಕೆನ್ನೊಡನಂಜಿ ಪೋದೆಯಾ ?" ಎಂದು ದ್ರೋಣರು ಕೇಳಿದರೂ, ಅದಕ್ಕವನು ಕೊಟ್ಟ ಉತ್ತರಕ್ಕೆ ಮೆಚ್ಚಿ ಅನೇಕ ಆಶೀರ್ವಚನಗಳಿಂದ ಅವನನ್ನು ಹರಸುತ್ತಾರೆ. ಇಲ್ಲೆಲ್ಲ ದ್ರೋಣನ ಹೃದಯ ಸುಸ್ಪಷ್ಟ. ಹೀಗಿದ್ದಾಗ ಚಾಪವಿದ್ಯಾಬಲಪ್ರದರ್ಶನ ಹೇಗ ಸಾಧ್ಯ ? ಇಂಥವರನ್ನು ನಂಬಿ ಪಾಂಡವರೊಡನೆ ಯುದ್ಧಕ್ಕೆ ಇಳಿದ ದುರ್ಯೋಧನ ಒಬ್ಬ ಎಗ್ಗ.

ಇದರರ್ಥ ದ್ರೋಣರು ಯುದ್ಧರಂಗದಲ್ಲಿ ಚಾಪವಿದ್ಯಾಬಲವನ್ನೇ ಮೆರೆಯ ಲಿಲ್ಲವೆಂದಲ್ಲ. ಮೊದಲು ಹೇಳಿದಂತೆ ಪಾಂಡವ ಪಕ್ಷದಲ್ಲಿದ್ದ ಇತರರೊಡನೆ ಹೋರಾಡುವಾಗ ಅಭೇದ್ಯ ಸೈನಿಕವ್ಯೂಹಗಳನ್ನು ಒಡ್ಡಿ ನಿಲ್ಲುವಾಗ ಅವರು ತೋರಿದ ಚಾಪವಿದ್ಯಾಬಲ ಬೆರಗುಗೊಳಿಸುವಂತಹದು. ವಿರಾಟ ದ್ರುಪದಾದಿಗಳೊಡನೆ ಹೋರಾಡುವಾಗಿನ ಅವರ ಪರಾಕ್ರಮ ಕಣ್ಣುಕುಕ್ಕಿಸುವಂತಹುದು. ಅಂಥಲ್ಲೆಲ್ಲ ದ್ರೋಣಾಚಾರ್ಯ ತಾನೇತಾನಾಗಿ ವಿಜೃಂಭಿಸಿದ್ದಾನೆ. ಪಾಂಡವರಿಗೂ, ಪಾಂಡವ ಬಲಕ್ಕೂ ದಿಗ್ಭ್ರಮೆಯುಂಟುಮಾಡಿ, ಕೃಷ್ಣನ ಸಲಹೆಯ ವಿನಾ ಅನ್ಯಥಾ ಶರಣಂ-ನಾಸ್ತಿ ಎನ್ನುವಂತೆ ಮಾಡಿದ್ದಾನೆ.

ಭೀಷ್ಮರ ಅನಂತರ ದ್ರೋಣ, ವೀರಪಟ್ಟ ಕಟ್ಟಿಸಿಕೊಂಡು, ಪಾಂಡವಸೇನಾ ನಾಯಕ ಧೃಷ್ಟದ್ಯುಮ್ನನೊಡ್ಡಿದ ವಜ್ರವ್ಯೂಹಕ್ಕೆ ಪ್ರತಿಯಾಗಿ ಪದ್ಮವ್ಯೂಹವೊಡ್ಡಿ, ರಜತರಥವೇರಿ "ಎನ್ನೀ ಬಾಣಾವಾಸಕ್ಕೆ ಮಾರೊಡ್ಡು ಸಾಲದು" ಎಂದು ಅಳವಂ ಬೀರುತ್ತ ಕೂರಂಬನೊಂದಂ ತಿರುಪುತ್ತ ನಿಂದ ಶಬ್ದ ಚಿತ್ರಣ ಪಂಪನಲ್ಲಿ ಬಹಳ ಅರ್ಥ ಪೂರ್ಣವಾಗಿ ಬಂದಿದೆ. ಅವನು ಬಾಣ ತಿರುಪುತ್ತ ನಿಂತಿರುವುದು, ಅವನ ಆತ್ಮವಿಶ್ವಾಸ ಮತ್ತು ನಿರ್ಭೀತ ಮನೋಭಾವನೆಗೆ ಎತ್ತಿದ ಪ್ರತಿಮೆಯಂತಿದೆ. ಅಂದಿನ ಯುದ್ಧದಲ್ಲಿ ದ್ರೋಣ, ಧೃಷ್ಟದ್ಯುಮ್ನನನ್ನು ಬಾಣಗಳಂ ಹೂಳಿ, ಧ್ವಜ ವನ್ನು ಖಂಡಿಸಿ, ಶಿಖಂಡಿಯನ್ನು ತೂಳ್ದಟ್ಟಿ, ದ್ರುಪದನ ಮೇಲೆ ಬಾಣಗಳ ಮಳೆ ಕರೆದು, ಅವನ ಹನ್ನೊಂದುಜನ ಕಿರಿಯ ಸೋದರರನ್ನೂ, ವಿರಾಟನ ಮಗನಾದ ಶಂಕನನ್ನೂ ಒಂದೇ ಬಾಣದಿಂದ ಕೊಲ್ಲುತ್ತಾನೆ. ಸಾಲ್ವದೇಶದ ದೊರೆ ಚೇಕಿತ್ಸ ಅಪಾರಗಜಸೈನ್ಯದೊಡನೆ ದ್ರೋಣನನ್ನು ತಾಗಿದಾಗ, ಅವನ ಗಜಸೈನ್ಯವನ್ನು ನುಚ್ಚುನೂರು ಮಾಡಿ ಚೇಕಿತ್ಸನ ತಲೆಯನ್ನು ಕತ್ತರಿಸುತ್ತಾನೆ. ಹೀಗೆ ಪಾಂಡವ

ಸೈನ್ಯವನ್ನು ಅಲ್ಲೋಲಕಲ್ಲೋಲಗೊಳಿಸಿ ಧರ್ಮಜನನ್ನು ಹಿಡಿಯಲು ಮುಂದುವರಿದಾಗ, ಅರ್ಜುನ ಅಡ್ಡ ಬಂದು ಅವರ ಪ್ರಯತ್ನ ವಿಫಲಗೊಳಿಸುತ್ತಾನೆ.

ಭಗದತ್ತನ ಮರಣಾನಂತರ, 'ಪಾಂಡವ ಬಲದಲ್ಲಿ ಒಬ್ಬನಂ ಇಕ್ಕುವೆಂ' ಎಂದು ದುರ್ಯೋಧನನಿಗೆ ಮಾತುಕೊಟ್ಟು, ಗುರುಭಾರ್ಗವರು ತಿಳಿಸಿಕೊಟ್ಟ ಚಕ್ರವ್ಯೂಹವನ್ನು ಒಡ್ಡಿ ಪಾಂಡವಸೇನೆಯನ್ನು ಚಕಿತಗೊಳಿಸುತ್ತಾನೆ. ಆ ವ್ಯೂಹದ ಮಧ್ಯೆ ಕಳಿಂಗರಾಜನ ಕರಿಘಟೆ, ಕರ್ಣ ಶಕುನಿ ಶಲ್ಯ ಕೃಪ ಅಶ್ವತ್ಥಾಮ ದುರ್ಯೋಧನಾದಿಗಳನ್ನು ಎಡೆಯರಿದು ನಿಲ್ಲಿಸುವ ದ್ರೋಣನ ವಿಧಾನ ಅವನ ಚಾಪವಿದ್ಯಾಬಲಕ್ಕೆ ಸಾಕ್ಷಿನುಡಿಯುತ್ತದೆ. ಅವರ ಸುತ್ತು ಗಜಘಟೆ ಸಮೇತ ಕಾಂಬೋಜಾದಿ ನಾಯಕರನ್ನೂ ಅವರ ಪಕ್ಕದಲ್ಲಿ ಬಕಾಸುರ ಜಟಾಸುರರ ಮಕ್ಕಳನ್ನೂ ನಿಲ್ಲಿಸಿ ತಾನು ಸಿಂಧುರಾಜನೊಡನೆ ಗುಹೆಯ ಬಾಗಿಲಲ್ಲಿ ಸಿಂಹ ನಿಲ್ಲುವಂತೆ, ವ್ಯೂಹದ ಮುಖದಲ್ಲಿ ನಿಲ್ಲುತ್ತಾನೆ. ಗಳೆವಳಿಯ ಪಾವಿನಂತೆ, ಅಭಿಮನ್ಯುವನ್ನು ಹಿಂಬಾಲಿಸಿ ಚಕ್ರವ್ಯೂಹವನ್ನು ಹೊಗಬಯಸಿದ, ದ್ರುಪದ ವಿರಾಟ ಧೃಷ್ಟದ್ಯುಮ್ನ ಭೀಮಸೇನ ಸಹದೇವ ನಕುಲ ಯುಧಿಷ್ಠಿರ ಘಟೋತ್ಕಚಾದಿಗಳೊಡನೆ ಮಲ್ಲಾಮಲ್ಲಿಯಾಗಿ ದ್ರೋಣನೊಬ್ಬನೇ ಯುದ್ಧಮಾಡುತ್ತಾನೆ. ಅಭಿಮನ್ಯುವಿನ ಹೊಡೆತಕ್ಕೆ ತನ್ನ ಸೈನ್ಯ ತತ್ತರಿಸಿ, ಅಳಿಯುತ್ತಿರುವುದನ್ನು ಕಂಡ ದುರ್ಯೋಧನ, ದ್ರೋಣರ ಬಳಿ ಬಂದು ಬೇಡಿಕೊಂಡಾಗ, ಸಿಂಧುರಾಜನನ್ನು ವ್ಯೂಹಮುಖದಲ್ಲಿ ನಿಲ್ಲಿಸಿ ದ್ರೋಣ, ದುರ್ಯೋಧನನೊಡನೆ ಒಳಕ್ಕೆ ಹೋಗಿ, ಎಲ್ಲರೂ ಒಟ್ಟಾಗಿ ಅಭಿಮನ್ಯುವಿನ ಮೇಲೆ ಬಿದ್ದು, ಧರ್ಮಯುದ್ಧಮೀರಿ ಅವನನ್ನು ಕೊಲ್ಲುತ್ತಾರೆ.

ನಾಳೆ ಸೂರ್ಯಾಸ್ತದೊಳಗಾಗಿ, ಸೈಂಧವನ ವಧೆ ಮಾಡುವ ಅರ್ಜುನ ಪ್ರತಿಜ್ಞೆಯನ್ನು ಕೇಳಿ ಬೆದರಿದ ದುಶ್ಶಳೆ, ತನ್ನ ಅಣ್ಣನಾದ ದುರ್ಯೋಧನನ ಬಳಿಬಂದಾಗ ದುರ್ಯೋಧನ ದ್ರೋಣರ ಬಳಿ ಕರೆತಂದು "ಕಾವುದು ಆತ್ಮಾನುಜೆಯ ಕಡಗಮಂ ನೀಮೆ ಮಾರ್ಕೊಳ್ವರೆ ಆರ್ ಮುಟ್ಟಲ್ ಸಮರ್ಥರ್ ಜಯದ್ರಥನಂ" ಎಂದು ಬೇಡಿಕೊಳ್ಳುತ್ತಾನೆ. ದ್ರೋಣನ ಚಾಪವಿದ್ಯಾಬಲದ ಅರಿವು ದುರ್ಯೋಧನನಿಗೆ ಚೆನ್ನಾಗಿತ್ತೆಂಬುದು ಇಲ್ಲಿ ಸುವ್ಯಕ್ತ. ಆಗ ದ್ರೋಣ "ಗೆಲ್ವ ಆಸೆ ಅಂತರ್ಕೆ ಸಿಂಧುಕ್ಷಿತಪಂ ತಾಂ ರಣದೊಳ್ ಏನಾದಂ ಅದನೆ ಆನುಂ ಅಪ್ಪೆಂ ಪೋ" ಎಂದು ಆಶ್ವಾಸನೆ ಈಯುತ್ತಾನೆ.

ಮರುದಿನ ದ್ರೋಣ ಮತ್ತೆ ತನ್ನ ವ್ಯೂಹರಚನಾಕೌಶಲವನ್ನು ಮೆರೆಯುತ್ತಾನೆ. ಮೊದಲು ಚಕ್ರವ್ಯೂಹವನ್ನು ರಚಿಸಿ ಸಕಲಸಾಮಂತರನ್ನು ಅಲ್ಲಿರಿಸಿ, ಅಲ್ಲಿಂದ ನಾಲ್ಕುಯೋಜನದ ಪದ್ಮವ್ಯೂಹರಚಿಸಿ ಅದರಲ್ಲಿ ಕರ್ಣ ಶಲ್ಯ ವೃಷಸೇನ ಕೃತವರ್ಮ ಅಶ್ವತ್ಥಾಮಾದಿಗಳನ್ನು ದುರ್ಯೋಧನನ ಜೊತೆಗಿರಿಸಿ, ಮತ್ತೆ ನಾಲ್ಕುಯೋಜನದ ಶಕಟವ್ಯೂಹರಚಿಸಿ ಅದರ ಬಾಗಿಲಲ್ಲಿ ಬಾಹ್ಲೀಕ ಸೋಮದತ್ತ ಸಂಸಪ್ತಕರನ್ನು ನಿಲ್ಲಿಸಿ, ಅದರ ಪೆರೆಗೆ ನಾಲ್ಕುಯೋಜನದೊಳ್ ಅರ್ಧಚಂದ್ರವ್ಯೂಹವನ್ನು ಒಡ್ಡಿ ಅದರಲ್ಲಿ

ಅಧಿಕಬಲಯುತರಾದ ಸೌಬಲ ದುಶ್ಶಾಸನಾದಿವೀರಭಟಕೋಟಿಯು ನಡುವೆ ಸಿಂಧುರಾಜನನ್ನಿರಿಸುತ್ತಾನೆ. ತಾನು ಮೊದಲಚಕ್ರವ್ಯೂಹದ ಬಾಗಿಲಲ್ಲಿ ನಿಲ್ಲುತ್ತಾನೆ. ಇಂತಹ ವ್ಯೂಹರಚನಾ ಸಾಮರ್ಥ್ಯ ಭಾರತದ ಯಾವ ವೀರನಲ್ಲೂ ಕಾಣಸಿಗದು. ಅದೇ ದ್ರೋಣನಲ್ಲಿದ್ದ ಚಾಪವಿದ್ಯಾಬಲದ ಒಂದು ಮುಖ. ಆದರೂ ಜಯದ್ರಥ ವಧೆ ನಡೆದು ಹೋಗುತ್ತದೆ.

ಸೈಂಧವ ವಧಾನಂತರ, "ದುರ್ಯೋಧನ ನನ್ನನ್ನೇ ನಂಬಿ ಸೈಂಧವನನ್ನು ನನಗೆ ಒಪ್ಪಿಸಿದ. ಅವನಾದುದನ್ನೇ ನಾನಾಗುವೆನೆಂದು ಮಾತುಕೊಟ್ಟೆ. ಸೈಂಧವ ಮುಂಬಯಣಂ ಪೋದಂ, ನನಗೆ ಸುಮ್ಮನಿರುವದು ಸರಿಯೆ? ಯುದ್ಧದಲ್ಲಿ ಒವಜು ಗೆಯ್ಯಲು ಇವನೇನು ಬಲ್ಲ? ಬೇರೆಯವರಿಗೆ ಹೇಳಬಲ್ಲನೆ ವಿನಾ ತಾನು ಮಾಡಲರಿಯ, ಎಂಬ ನುಡಿ ತಪ್ಪದು. ಬಿಲ್ಲೊವಜಂ ಕಮ್ಮರಿಯೊವಜಂ ಎಂಬುದಂ ಮಾಡುವೆನೆ? ಎನ್ನ ನುಡಿಯುಂ ಎನ್ನೆಚ್ಚ ಅಂಬುಂ ಎಂತುಂ ತಪ್ಪದು" ಎಂದು ಕುಂಭಸಂಭವನು ವಿಚಾರಿಸಿ ಜಲನಿಧಿಯನ್ನು ಕುಡಿದ ಕುಂಭಸಂಭವನಂತೆ ಪಾಂಡವ ಜಲನಿಧಿಯನ್ನು ಅಳುರಲು ಬಗೆದು, ಇರುಳಾದರೂ ಪಾಂಡವರನ್ನು ಗೆಲ್ಲಲು ಚತುರ್ಬಲವನ್ನು ಒಂದುಗೂಡಿಸುತ್ತಾನೆ. ಇದನ್ನು ತಿಳಿದ ಪಾಂಡವಸೇನೆ ತತ್ತರಿಸುತ್ತದೆ. ಕೃಷ್ಣ, ರಾತ್ರಿಯುದ್ಧದಲ್ಲಿ ನಿಪುಣರಾದ ಘಟೋತ್ಕಚಾದಿಗಳನ್ನು ಹುರಿದುಂಬಿಸುತ್ತಾನೆ. ಆಗ ನಡೆದ ಭೀಕರ ಯುದ್ಧದಲ್ಲಿ ಕರ್ಣನ ಶಕ್ತ್ಯಾಯುಧದಿಂದ ಘಟೋತ್ಕಚ ಮರಣಿಸುತ್ತಾನೆ.

ಮುಂಜಾನೆ ಶೃಂಗಾಟಕ ವ್ಯೂಹವೊಡ್ಡಿ ದ್ರೋಣ, ಧೃಷ್ಟದ್ಯುಮ್ನನನ್ನು ಎದುರಿಸುತ್ತಾನೆ. ಪಾಂಡವ ಸೈನ್ಯ ಪಟಪಟನೆ ಬಿದ್ದು ರಕ್ತದ ತೊರೆ ಹರಿಯುತ್ತದೆ. ಚತುರಂಗಬಲ ಹಿಂದಿರುಗುತ್ತದೆ. ಆಗ ವಿರಾಟರಾಜ ದ್ರೋಣನನ್ನು ಎದುರಿಸುತ್ತಾನೆ. ದ್ರೋಣನ ಒಂದೇ ಒಂದು ಕೆಲ್ಲಂಬಿನಿಂದ ವಿರಾಟನ ತಲೆ ಕತ್ತರಿಸಿ ಸಿಡಿದು ಬೀಳುತ್ತದೆ. ತದನಂತರ ಅರಿನೃಪಕೋಟಿಯುಂ ಆಟರ (ಮೇಲೆ ಬೀಳು) ಲೆಂದು ಆಸ್ಫೋಟಿಸಿ ನಿಶಿತಶಿರಕೋಟಿಯುಲ್ಲಿ ತಳಿಗೋಂಟೆ (=ಬೇಲಿ) ಯನಿಕ್ಕಿ ದ್ರೋಣ 'ವೀರರಸನಿಕೇತನ' ನಾಗುತ್ತಾನೆ. ದ್ರುಪದ ಅದನ್ನು ಸೈರಿಸದೆ ಅಕ್ಷೋಹಿಣಿ ಬಲಂ ಬೆರಸು ಅವನನ್ನು ತಾಗುತ್ತಾನೆ. ದುರ್ಯೋಧನ ದುಃಶ್ಶಾಸನಾದಿಗಳು ದ್ರೋಣನ ರಕ್ಷಣೆಗೆ ಬರುತ್ತಾರೆ. ದ್ರೋಣನು ಬಿಟ್ಟ ಬಿಡುತ್ತಿರುವ ಬೆಳೆಯುತ್ತಿರುವ ಅಂಬಿನ ಬೆಳ್ಸರಿ, ದ್ರುಪದನ ಸೈನ್ಯಸಮುದ್ರವನ್ನು ಬಡಬಾಗ್ನಿಯಂತೆ ಅಗುರ್ವಿಸಿ ಪರಿಯುತ್ತದೆ. ದ್ರುಪದನ ರಥ ಆನೆ ಕುದುರೆಗಳೆಲ್ಲ ದ್ರೋಣನ ಬಾಣಗಳ ಬಲ್ಸರಿಯಲ್ಲಿ ಹೂತು ಹೋಗುತ್ತವೆ. ತ್ರಿಪುರಗಳನ್ನೆಚ್ಚ ರುದ್ರನ ರೌದ್ರತೆಯನ್ನು ಮೀರಿ, ತನ್ನ ಸೈನ್ಯವನ್ನು ಜವನಂತೆ ಒಕ್ಕಲಿಕ್ಕಿ ಕೊಲ್ವ ದ್ರೋಣನ ಮೇಲೆ ದ್ರುಪದ ಕೆಲ್ಲಂಬಿನ ಪಾರೆಯಂಬಿನ ಮಳೆಗರೆಯುತ್ತಾನೆ. ಅವೆಲ್ಲವನ್ನು ದ್ರೋಣ ಕತ್ತರಿಸಿ ಹಾಕಿದಾಗ

ದ್ರುಪದ ಹಿಂಜರಿಯದೆ "ನಿಲ್ಲದಿರ್ ಇದಿರೊಳ್ ಓಡು ಸತ್ತಪೆ" ಎನ್ನುತ್ತ ವಿಚಿತ್ರ ರೀತಿಯಲ್ಲಿ ಬಾಣ ಪ್ರಯೋಗ ಮಾಡುತ್ತಾನೆ. ಆಗ ದ್ರೋಣ "ಎನ್ನೊಳೆ ಮುನ್ನ ಮಚ್ಚರಿಪನೆ, ಒಡನೋದಿದೆವೆಂಬ ಮೇಳದಿಂ ಎನ್ನನೆ ಮೆಚ್ಚನೆ, ಎನ್ನೊಳಿವಂ ಸಮನೆ ಎಚ್ಚಪಂ, ಆದೊಡೇಂ ಇನ್ನಿವನಂ ಪಡಲ್ವಡಿಪೆಂ" ಎಂದು ನಿರ್ಧರಿಸಿ ಭಾರ್ಗವಾಸ್ತ್ರ ವನ್ನು ಪ್ರಯೋಗಿಸಿ ದ್ರುಪದನ ತಲೆಯನ್ನು ಕತ್ತರಿಸಿ ಬಿಡುತ್ತಾನೆ. ಅದನ್ನು ಕಂಡ ದ್ರುಪದನ ಸೋದರರು ಕುಪಿತರಾಗಿ, ಐದು ಜನ ಕೈಕೆಯರನ್ನೂ ಕುಂತಿಭೋಜನನ್ನೂ ಕೂಡಿಕೊಂಡು ೧೪ ಸಾವಿರ ರಥಿಕರೊಡನೆ ದ್ರೋಣನ ಮೇಲೆ ಮುಕುರುತ್ತಾರೆ. ದ್ರೋಣ ಬೆಚ್ಚದೆ ತನ್ನ ಉಗ್ರ ಬಾಣಗಳಿಂದ ಅವರನ್ನು ಇಸಲು ಅವರ ಮೆಯ್ ಮೆಯ್ಯೊಳ್ ಅಂಟಿಕೊಳ್ಳುತ್ತದೆ. ಆ ಮೇಲೆ ಆಂತ ನಾಯಕರನ್ನು ಸುಂಟಗೆಯಾರಿ ದಂತೆ ರಥದೊಳ್ ಜೋಲ್ವನ್ನೆಗಂ ಕೋದು ತನ್ನ ಚಾಪಕಲಾ ಕೌಶಲವನ್ನು ಜಗತ್ತಿಗೆ ಮೆರೆಯುತ್ತಾನೆ. ಹೀಗೆ ಆಂತ ಎಲ್ಲರನ್ನೂ ಇಕ್ಕಿ, ಗೆಲ್ದು ಮಲ್ಲನಂತೆ ನಿಂತ ದ್ರೋಣನ ಮುಂದಿನ ರಣರಂಗವನ್ನು ಪಂಪಕವಿ "ವೈರಿ ನರೇಂದ್ರರ ಕಿರೀಟಗಳಿಂದ ಉರುಳ್ದು ಬಿದ್ದ ರತ್ನಗಳ ಕಾಂತಿಯಿಂದ ರಣರಂಗವೆಲ್ಲ ಬೆಳಗಲು, ಅದನ್ನು ಕಾಳ್ಗಿಚ್ಚೆಂದು ಬಗೆದು, ಭೂತಾಂಗನಾನಿಕರಂ ಕುಡಿದ ರಕ್ತವನ್ನು ಅಗುರ್ವಪ್ಪನ್ನೆಗಂ ಸೂಸೆ, ನೋಡುವವರಿಗೆ ಅದು ಸಂಜೆಗವಿದಂತೆ ಕಾಣಿಸಿತು" ಎಂದು ಧ್ವನಿಪೂರ್ಣವಾಗಿ ಬಣ್ಣಿ ಸಿದ್ದಾನೆ. ಈ ವರ್ಣನೆ, ದ್ರೋಣನ ಚಾಪವಿದ್ಯಾ ಬಲಕ್ಕೆ ಕವಿ ಒಡ್ಡಿದ ಅರ್ಥ ಪೂರ್ಣ ಪ್ರತಿಮೆಯಾಗಿದೆ.

ಕಿಂಕರ್ತವ್ಯ ಮೂಢನಾದ ಧರ್ಮರಾಜ ಕೃಷ್ಣನ ಕಪಟೋಪದೇಶದಂತೆ, ಪಾಂಡ್ಯನ ಗಜಘಟೆಗಳನ್ನು ದ್ರೋಣನ ಮುಂದೆ ತಂದೊಡ್ಡುತ್ತಾನೆ. ಸಿಡಿಲು ಗಿರಿ ಕುಲವನ್ನು ಅಪ್ಪಳಿಸುವಂತೆ ದ್ರೋಣ ತನ್ನ ನಿಶಿತ ಬಾಣಗಳಿಂದ ಸಹಸ್ರ ಸಂಖ್ಯೆಯಲ್ಲಿ ಮದದಾನೆಗಳನ್ನು ಕತ್ತರಿಸಿ ಬಿಡುತ್ತಾನೆ. ಹಾಗೆ ಸತ್ತ ಆನೆಗಳಲ್ಲಿ ಅಶ್ವತ್ಥಾಮ ಹೆಸರಿನ ಆನೆಯೂ ಒಂದು. ಧರ್ಮರಾಜ ಕೂಡಲೆ "ಹತೋಶ್ವತ್ಥಾಮಾ" ಎಂದು ಕೂಗುತ್ತಾನೆ. ಅದು ಆನೆಯ ಹೆಸರೆಂದು ಭಾವಿಸದೆ ತನ್ನ ಮಗನೇ ಸತ್ತನೆಂದು ಭಾವಿಸಿ, ಸುತಶೋಕವು ಆವಗೆಯಂತೆ ತನ್ನ ಅಂತರಂಗವನ್ನು ಆವರಿಸಲು 'ಹಾ ಮಗನೇ' ಎನ್ನುತ್ತ, ಅಶ್ರುಜಲಾರ್ದ್ರನಾದ ಆ ಗಂಡ, ತನ್ನ ಗಂಡಿನೊಡನೆ ಬಿಲ್ಲನ್ನೂ ಬಿಸುಡುತ್ತಾನೆ. ಹೀಗೆ ವಿಚ್ಛಿನ್ನ ವೀರರಸನೂ ಉತ್ಪನ್ನ ಶೋಕರಸನೂ ಆದ ದ್ರೋಣ ತನ್ನ ರಥವನ್ನು ಧರ್ಮಜನ ಬಳಿತಂದು ತನ್ನ ಮಗನ ಸಮಾಚಾರವನ್ನು ಕೇಳುತ್ತಾನೆ ಧರ್ಮಜ, ಅಶ್ವತ್ಥಾಮವೆಂಬ ಆನೆ ಸತ್ತಿತೆಂದು ನಿಜವನ್ನು ಹೇಳಿ ದಾಗ "ಮೊದಲೆ ರಣರಂಗದಲ್ಲಿ ಬಿಲ್ಲನ್ನು ಬಿಸುಟಿದ್ದೇನೆ ಇನ್ನು ಅದನ್ನು ಹೇಗೆ ಹಿಡಿ ಯಲಿ ?" ಎಂದು ವಿಚಾರಿಸಿ, ಆತ್ಮಯೋಗಿಯಾದ ಬಿಲ್ಗೊವಜ ಉದಾತ್ತಯೋಗ ದಿಂದ ರಣರಂಗದಲ್ಲೇ ಅಸುನೀಗಿ ಪರಮಾತ್ಮನಲ್ಲಿ ಕೂಡುತ್ತಾನೆ. ಆಮೇಲೆ ಧೃಷ್ಟ ದ್ಯುಮ್ನ, ಪೆಣನನಿರಿದು ಪಗೆಗೊಂಡರೆಂಬ ಸಾಣ್ಣುಡಿಯನ್ನು ನನ್ನಿಮಾಡುವಂತೆ

ಧರ್ಮಜ ಬೇಡ ಬೇಡವೆಂದರೂ ಕೇಳದೆ ಆಚಾರ್ಯನ ಜುಟ್ಟುವನ್ನು ಹಿಡಿದು, ತನ್ನ ಖಡ್ಗವನ್ನು ಬೀಸಿ ಕತ್ತು ಕತ್ತರಿಸಿ, ದೇಹವನ್ನು ತುಂಡು ತುಂಡುಮಾಡಿ ಹಾಕುತ್ತಾನೆ. ಹೀಗೆ ದ್ರೋಣನ ಸಾವು ಎಳೆಗೋಣ ಸಾವಾದುದು ವಿಧಿಯ ವೈಚಿತ್ರ್ಯವೆನ್ನುವುದಕ್ಕಿಂತ ಅಂಥ ಸಾವನ್ನು ತಾನಾಗಿ ತಂದುಕೊಂಡನೆಂದು ಹೇಳುವುದು ಹೆಚ್ಚು ಉಚಿತ.

ಈ ಸಂಚಿಕೆಯ ಲೇಖಕರು

೧. ಡಾ. ಬಿ. ಎಸ್. ಕುಲಕರ್ಣಿ
ನಿರ್ದೇಶಕರು
ಕನ್ನಡ ಸಂಶೋಧನ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨. ಶ್ರೀಮತಿ ಕಮಲಾ ಹಂಪನಾ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

೩. ಪ್ರೊ. ಎಸ್. ಪಿ. ಪಾಟೀಲ
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ಪ್ರೊ. ಬಿ. ಬಿ. ಮಹೀಶವಾಡಿ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಡಾ. ಬಿ. ವ್ಹಿ. ಶಿರೂರ
ಕನ್ನಡ ಅಧ್ಯಾಪಕರು
ಅನ್ನದಾನೇಶ್ವರ ಮಹಾವಿದ್ಯಾಲಯ, ನರೇಗಲ್

೬. ಶ್ರೀ ಎಚ್. ಬಾಲರಾಜು
ಕನ್ನಡ ಅಧ್ಯಯನಪೀಠದ ವಿದ್ಯಾರ್ಥಿ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭. ಶ್ರೀ ಪಂಚಾಕ್ಷರಿ ಗ. ಹಿರೇಮಠ
ಕನ್ನಡ ಅಧ್ಯಯನಪೀಠದ ವಿದ್ಯಾರ್ಥಿ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮. ಶ್ರೀ ಸದಾನಂದ ಸಿ. ಪಾಟೀಲ
ಕನ್ನಡ ಅಧ್ಯಯನಪೀಠದ ವಿದ್ಯಾರ್ಥಿ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೯. ಡಾ. ಸೋಮಶೇಖರ ಇಮ್ರಾಪೂರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೦. ಡಾ. ಬುದ್ದಣ್ಣ ಹಿಂಗಮಿರೆ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧. ಶ್ರೀ ರಾಜೇಂದ್ರ ಅಣ್ಣಾನವರ
ಕನ್ನಡ ಅಧ್ಯಯನ ಪೀಠದ ವಿದ್ಯಾರ್ಥಿ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೨. ಶ್ರೀ ಶ್ರೀಪಾದ ಹೆಗಡೆ, ಕಣ್ಣಿ
ಕನ್ನಡ ಅಧ್ಯಯನ ಪೀಠದ ವಿದ್ಯಾರ್ಥಿ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೩. ಡಾ. ಎಂ. ಎಂ. ಕಲಬುರ್ಗಿ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೪. ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೫. ಡಾ. ಬಿ. ವ್ಹಿ. ಮಲ್ಲಾಪೂರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ: ಯಾವುದೇ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳು ರೂ. ೧೦೦-೦೦(ಒಂದು ನೂರು ರೂಪಾಯಿಗಳು) ಕಳಿಸಿ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ"ಯ ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೫೮೦ ೦೦೩